ಶನಿವಾರ, ಜನವರಿ 1, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹೊಸ ವರ್ಷದ ಹರ್ಷ
ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಶುಕ್ರವಾರ ಯುವತಿಯರು ಮುಖಕ್ಕೆ ಬಣ್ಣಹಚ್ಚಿಕೊಂಡು ಹೊಸ ವರ್ಷದ ಶುಭಾಶಯ ಕೋರಿದರು



ಕೋವಿಡೇತರರಿಗೆ ಚಿಕಿತ್ಸೆ ಸ್ಥಗಿತ • ಸುತ್ತೋಲೆ ಹೊರಡಿಸಿದ ಆರೋಗ್ಯ ಇಲಾಖೆ

ಸಿ.ವಿ.ರಾಮನ್ ಆಸ್ಪತ್ರೆ ಕೋವಿಡ್ ಚಿಕಿತ್ಸೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಇಂದಿರಾನಗರದ ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯನ್ನು ಕೋವಿಡ್ ಚಿಕಿತ್ಸೆಗೆ ಮತ್ತೆ ಮೀಸಲಿಡಲಾಗಿದೆ. ಈ ಬಗ್ಗೆ ಆರೋಗ್ಯ ಇಲಾಖೆಯ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ.

‘2020ರಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿದ್ದಂತೆಯೇ ಈ ಆಸ್ಪತ್ರೆಯ ಎಲ್ಲ ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ಮೀಸಲಿಡಲಾಗಿತ್ತು. 2021ರಲ್ಲಿ ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ಕೋವಿಡೇತರ ರೋಗಿಗಳಿಗೂ ಚಿಕಿತ್ಸೆ ಪ್ರಾರಂಭಿಸಲಾಗಿತ್ತು. ಈಗ ಮತ್ತೆ ಪ್ರಕರಣಗಳು ಹೆಚ್ಚಳವಾಗುತ್ತಿರುವುದರಿಂದ ಕೋವಿಡೇತರ ಚಿಕಿತ್ಸೆಗಳನ್ನು ಸ್ಥಗಿತ ಮಾಡಲಾಗುತ್ತಿದೆ. ಕೊರೊನಾ ಸೋಂಕಿತರಿಗೆ ಮಾತ್ರ ಚಿಕಿತ್ಸೆ ಒದಗಿಸಲಾಗುತ್ತದೆ’ ಎಂದು ಆಯುಕ್ತರು ತಿಳಿಸಿದ್ದಾರೆ.



ಸರ್ ಸಿ.ವಿ. ರಾಮನ್ ಜನರಲ್ ಆಸ್ಪತ್ರೆ – ಪ್ರಜಾವಾಣಿ ಚಿತ್ರ

ನಗರದಲ್ಲಿ ವಿಕ್ಟೋರಿಯಾ ಸೇರಿದಂತೆ ವಿವಿಧ ಆಸ್ಪತ್ರೆಗಳಲ್ಲಿಯೂ ಕೋವಿಡ್ ಚಿಕಿತ್ಸೆಗೆ ಹಾಸಿಗೆಗಳನ್ನು ಮೀಸಲಿಡಲಾಗಿದೆ. ಸಿ.ವಿ.ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಾಸಿಗೆಗಳು ಭರ್ತಿಯಾದ ಬಳಿಕ ಉಳಿದ ಆಸ್ಪತ್ರೆಗಳಲ್ಲಿ ಕೋವಿಡ್ ಸೋಂಕಿತರನ್ನು ದಾಖಲಿಸಿಕೊಳ್ಳುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

ಹಾಸಿಗೆಗಳು ಲಭ್ಯ: ಕೋವಿಡ್ ಚಿಕಿತ್ಸೆಗೆ ಮೀಸಲಿಟ್ಟ 1,849 ಹಾಸಿಗೆಗಳಲ್ಲಿ ಸದ್ಯ 1,813 ಹಾಸಿಗೆಗಳು ಖಾಲಿ ಇವೆ. ಕೋವಿಡ್‌ನ ಸಂಭಾವ್ಯ ಮೂರನೇ ಅಲೆ ನಿಭಾಯಿಸಲು ಮುನ್ನೆಚ್ಚರಿಕೆಯಾಗಿ ಇವುಗಳನ್ನು ಹಾಗೇ ಉಳಿಸಿಕೊಳ್ಳಲಾಗಿದೆ.

ಕೋವಿಡ್ ಎರಡನೇ ಅಲೆಯಲ್ಲಿ ಪ್ರಕರಣಗಳ ಸಂಖ್ಯೆ ಮಾರ್ಚ್ ಎರಡನೇ ವಾರದ ಬಳಿಕ ಏರಿಕೆ ಕಂಡಿತ್ತು. ಆಗ ಸರ್ಕಾರ ಖಾಸಗಿ ಆಸ್ಪತ್ರೆಗಳ ಸಹಯೋಗದಲ್ಲಿ ಸೋಂಕಿತರಿಗೆ ಚಿಕಿತ್ಸೆ ಒದಗಿಸುವ ವ್ಯವಸ್ಥೆ ರೂಪಿಸಿತ್ತು. ಸರ್ಕಾರಿ ಕೋಟಾ ಅಡಿ ಶಿಫಾರಸು ಆಧಾರದಲ್ಲಿ ಚಿಕಿತ್ಸೆ ನೀಡಲು ಶೇ 50 ರಷ್ಟು ಹಾಸಿಗೆಗಳನ್ನು ಮೀಸಲಿಡಲು ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿ, ಆದೇಶ ಹೊರಡಿಸಿತ್ತು. ಇದರಿಂದಾಗಿ ಕೋವಿಡ್ ಸೋಂಕಿತರ ಚಿಕಿತ್ಸೆಗೆ ನಗರದಲ್ಲಿ 5 ಸಾವಿರಕ್ಕೂ ಅಧಿಕ ಹಾಸಿಗೆಗಳು ಲಭಿಸಿದ್ದವು. ಸೋಂಕು ದೃಢ ಪ್ರಮಾಣವು ಶೇ 2ಕ್ಕಿಂತ ಕಡಿಮೆ ಪ್ರಮಾಣಕ್ಕೆ ಇಳಿಕೆಯಾದ ಬಳಿಕ, ಸರ್ಕಾರದ ಶಿಫಾರಸ್ಸಿನ ಮೇಲೆ ಚಿಕಿತ್ಸೆ ಪಡೆಯುವ ಸೋಂಕಿತರಿಗೆ ಕೇವಲ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಸದ್ಯ ವಿಕ್ಟೋರಿಯಾದಲ್ಲಿ 416 ಎಚ್‌ಡಿಯು ಹಾಸಿಗೆಗಳು, 30 ಐಸಿಯು ಹಾಗೂ 54 ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳು ಕೋವಿಡ್ ಚಿಕಿತ್ಸೆಗೆ ಲಭ್ಯವಿದ್ದು, ಎಲ್ಲವೂ ಖಾಲಿ ಇವೆ.

ಜಯನಗರ ಸಾರ್ವಜನಿಕ ಆಸ್ಪತ್ರೆ, ಇಂದಿರಾನಗರದ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಸೇರಿದಂತೆ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಕೋವಿಡ್ ಚಿಕಿತ್ಸೆಗೆ ಕೆಲವಷ್ಟು ಹಾಸಿಗೆಗಳನ್ನು ಮೀಸಲಿಡಲಾಗಿದೆ. ಬೌರಿಂಗ್ ಆಸ್ಪತ್ರೆಯಲ್ಲಿ ಓಮೈಕ್ರಾನ್ ಸೋಂಕಿತರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಸೋಂಕು ದೃಢ ಪ್ರಮಾಣ ಏರಿಕೆ

ನಗರದಲ್ಲಿ ಸದ್ಯ 7 ಸಾವಿರಕ್ಕೂ ಅಧಿಕ ಕೋವಿಡ್ ಸಕ್ರಿಯ ಪ್ರಕರಣಗಳಿವೆ. ಕೋವಿಡ್ ಪರೀಕ್ಷೆಗೆ ಒಳಗಾದವರಲ್ಲಿ ಸೋಂಕು ದೃಢಪಡುವ ಪ್ರಮಾಣವೂ ಏರಿಕೆಯಾಗಿದೆ. ಡಿ.15ರ ವೇಳೆಗೆ ಶೇ 0.42ರಷ್ಟಿದ್ದ ಸೋಂಕು ದೃಢ ಪ್ರಮಾಣ, ಈಗ ಶೇ 0.88ಕ್ಕೆ ಏರಿಕೆಯಾಗಿದೆ. ಸೋಂಕಿತರಲ್ಲಿ ಸದ್ಯ 36 ಮಂದಿ ಮಾತ್ರ ವಿವಿಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್‌ಗೆ ಮೀಸಲಿಟ್ಟ ಹಾಸಿಗೆಗಳ ವಿವರ

ವಿಧ	ಮೀಸಲು	ಖಾಲಿ
ಸಾಮಾನ್ಯ ಹಾಸಿಗೆ	693	688
ಐಸಿಯು ಹಾಸಿಗೆ	120	115
ಎಚ್‌ಡಿಯು ಹಾಸಿಗೆ	831	810
ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ	205	200

21 ಮಂದಿಗೆ ಓಮೈಕ್ರಾನ್ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾವೈರಾಣುವಿನ ರೂಪಾಂತರಿ ಓಮೈಕ್ರಾನ್ ಸೋಂಕು ನಗರದಲ್ಲಿ ಶುಕ್ರವಾರ ಒಂದೇ ದಿನ 21 ಮಂದಿಯಲ್ಲಿ ದೃಢಪಟ್ಟಿದೆ. ಹೊಸ ತಳಿಯ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 51ಕ್ಕೆ ಏರಿಕೆಯಾಗಿದೆ.

ಅಮೆರಿಕದಿಂದ 2021ರ ಡಿ. 24ರಂದು ಮರಳಿದ 15 ವರ್ಷದ ಬಾಲಕನಿಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆಸಲಾದ ಆರ್‌ಟಿ-ಪಿಸಿಆರ್ ಪರೀಕ್ಷೆಯಲ್ಲಿ ಕೊರೊನಾ ಸೋಂಕು ದೃಢಪಟ್ಟಿತ್ತು. ಅವರ ಗಂಟಲ ದ್ರವದ ಮಾದರಿಯನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಗಾಗಿ (ಜೀನೋಮ್ ಸೀಕ್ವೆನ್ಸಿಂಗ್) ಕಳುಹಿಸಲಾಗಿತ್ತು. ಬಾಲಕನಿಗೆ ಚಿಕಿತ್ಸೆ ಕೊಡಲಾಗುತ್ತಿದೆ.

ನೈಜೀರಿಯದಿಂದ ಬಂದಿದ್ದ 47 ವರ್ಷದ ವ್ಯಕ್ತಿಗೆ ಸೋಂಕು ದೃಢಪಟ್ಟಿದೆ. ಅವರ ಜೊತೆ ನೇರ ಸಂಪರ್ಕಕ್ಕೆ ಬಂದಿದ್ದ 18 ಮಂದಿಯಲ್ಲಿ ಇಬ್ಬರು ಕೋವಿಡ್ ಪೀಡಿತರಾಗಿದ್ದಾರೆ. ಇವರಲ್ಲಿ 12 ವರ್ಷದ ಬಾಲಕಿಗೆ ಓಮೈಕ್ರಾನ್ ಸೋಂಕು ಹೊಂದಿರುವುದು ಖಚಿತಪಟ್ಟಿದೆ.

ಡೆನ್ಮಾರ್ಕ್‌ನಿಂದ ಇಲ್ಲಿಗೆ ಬಂದಿದ್ದ ಆಂಧ್ರಪ್ರದೇಶದ 33 ವರ್ಷದ ವ್ಯಕ್ತಿಗೆ ಓಮೈಕ್ರಾನ್ ಖಚಿತಪಟ್ಟಿದೆ. ಸದ್ಯ ಬೆಂಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ವಿದೇಶ ಪ್ರಯಾಣ ಮಾಡದ ಇಲ್ಲಿನ 45 ವರ್ಷದ ಮಹಿಳೆ, ಆಂಧ್ರ ಪ್ರದೇಶದ 28 ವರ್ಷದ ಯುವಕ ಹಾಗೂ ಬಿಹಾರದ 25 ವರ್ಷದ ಯುವಕರು ನಗರದಲ್ಲಿ ಕೋವಿಡ್ ಪರೀಕ್ಷೆಗೆ ಒಳಗಾಗಿದ್ದು, ಅವರಿಗೆ ಓಮೈಕ್ರಾನ್ ದೃಢಪಟ್ಟಿದೆ. . ಯುವಕರು ಪ್ರಸ್ತುತ ತಮ್ಮ ರಾಜ್ಯದಲ್ಲಿಯೇ ಆಸ್ಪತ್ರೆಯಲ್ಲಿ ಪ್ರತ್ಯೇಕವಾಸಕ್ಕೆ ಒಳಗಾಗಿದ್ದಾರೆ.

ಯುಎಇಯಿಂದ ಮರಳಿದ 42 ವರ್ಷದ ಮಹಿಳೆ, ಬ್ರಿಟನ್‌ನಿಂದ ಬಂದ 18 ವರ್ಷದ ವ್ಯಕ್ತಿ, ದುಬೈನಿಂದ ವಾಪಸ್ ಆದ 22 ವರ್ಷದ ಯುವಕ, 19 ವರ್ಷದ ವ್ಯಕ್ತಿ, ಕಾಂಗೊದಿಂದ ಬಂದ 49 ವರ್ಷದ ವ್ಯಕ್ತಿ, ದಕ್ಷಿಣ ಆಫ್ರಿಕಾದಿಂದ ಬಂದ 12 ವರ್ಷದ ಬಾಲಕಿ, ಅಮೆರಿಕದಿಂದ ಮರಳಿದ 25 ವರ್ಷದ ಯುವತಿ, 29 ವರ್ಷದ ಯುವಕ, 45 ವರ್ಷದ ಮಹಿಳೆ, 25 ವರ್ಷದ ಯುವಕ ಹಾಗೂ 33 ವರ್ಷದ ಪುರುಷನಿಗೆ ಓಮೈಕ್ರಾನ್ ಖಚಿತಪಟ್ಟಿದೆ.

ಬೆಂಗಳೂರು ನಗರ ಜಿಲ್ಲಾ

ಕೋವಿಡ್ ಅಂಕಿ–ಅಂಶ

12,63,618 ▲ ಒಟ್ಟು ಸೋಂಕಿತರು

7,286 ▲	12,39,931 ▲	822 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	656 ▲
ಗುಣಮುಖ	211 ▲
ಸಾವು	5 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

2 ವರ್ಷದ ಮಗುವಿಗೂ ಓಮೈಕ್ರಾನ್

ತಾಂಜಾನಿಯಾದಿಂದ ಡಿ.19ರಂದು ಬಂದಿದ್ದ 2 ವರ್ಷದ ಮಗುವಿಗೆ ಸೋಂಕು ದೃಢಪಟ್ಟಿದೆ. ಡಿ.23ರಂದು ಖಾಸಗಿ ಪ್ರಯೋಗಾಲಯದಲ್ಲಿ ಮಗುವನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಅದೇ ದೇಶದಿಂದ ಮರಳಿದ್ದ 33 ವರ್ಷದ ಮಹಿಳೆ, 10 ವರ್ಷದ ಬಾಲಕಿಗೂ ಸೋಂಕು ತಗುಲಿದೆ.

ಲಸಿಕೆ ವಿತರಣೆಗೆ ಮಾರ್ಗಸೂಚಿ

ಬೆಂಗಳೂರು: ರಾಜ್ಯದಲ್ಲಿನ 15ರಿಂದ 18 ವರ್ಷದವರಿಗೆ ‘ಕೋವ್ಯಾಕ್ಸಿನ್’ ಲಸಿಕೆಯ ವಿತರಣೆ 2022ರ ಜ.3ರಿಂದ ಪ್ರಾರಂಭವಾಗಲಿದೆ.

ಶಾಲಾ – ಕಾಲೇಜುಗಳಲ್ಲಿ ಲಸಿಕೆ ನೀಡಲು ಕೆಲವು ನಿಬಂಧನೆಗಳನ್ನು ವಿಧಿಸಿ ಮಾರ್ಗಸೂಚಿ ಹೊರಡಿಸಲಾಗಿದೆ.

ಲಸಿಕೆ ವಿತರಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಸೂಚಿಸಿದ್ದಾರೆ.

3ನೇ ಡೋಸ್‌ಗೆ ಸಂದೇಶ

ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ ಅಸ್ವಸ್ಥತೆ ಹೊಂದಿದ 60 ವರ್ಷ ಮೇಲ್ಪಟ್ಟವರು ಈಗಾಗಲೇ ಅಸ್ತಿತ್ವದಲ್ಲಿ ಇರುವ ತಮ್ಮ ಕೋವಿನ್ ಅಕೌಂಟ್ ಮೂಲಕ ಲಸಿಕೆ ಪಡೆಯಬಹುದು. ಮತ್ತೊಂದು ಡೋಸ್ ಪಡೆಯಲು ಅರ್ಹರಾದವರಿಗೆ ಕೋವಿನ್ ಪೋರ್ಟಲ್ ಮೂಲಕ ಸಂದೇಶ ರವಾನೆಯಾಗುತ್ತದೆ. ಹೆಸರು ಮತ್ತು ಸಮಯವನ್ನು ಆನ್‌ಲೈನ್ ಅಥವಾ ಸ್ಥಳದಲ್ಲಿ ನೋಂದಾಯಿಸಲು ಅವಕಾಶ ಇರಲಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ನಿಬಂಧನೆಗಳು

- 2007 ಹಾಗೂ ಅದಕ್ಕೂ ಮೊದಲು ಜನಿಸಿದವರು ಲಸಿಕೆ ಪಡೆಯಲು ಅರ್ಹರು.
- ಲಸಿಕೆ ನೀಡುವ ಆಂದೋಲನಕ್ಕೆ ಮುನ್ನ ಮಕ್ಕಳ ಪೋಷಕರಿಗೆ ಲಸಿಕೆಯ ಮಹತ್ವ ತಿಳಿಸಿ, ಗೊಂದಲ ನಿವಾರಿಸಬೇಕು.
- ಫಲಾನುಭವಿಗಳು ಸ್ವಂತ ದೂರವಾಣಿ ಸಂಖ್ಯೆ ಬಳಸಿ ಅಥವಾ ತಂದೆ–ತಾಯಿಯ ಅಕೌಂಟ್ ಮೂಲಕ ಲಸಿಕೆ ಪಡೆಯಬಹುದು. ಶಾಲೆಯ ಮುಖ್ಯೋಪಾಧ್ಯಾಯರ ದೂರವಾಣಿ ಸಂಖ್ಯೆ ಮೂಲಕವೂ ನೋಂದಣಿ ಮಾಡಿಕೊಳ್ಳಬಹುದು.
- ಶಾಲೆಯ ಗುರುತಿನ ಚೀಟಿ ಅಥವಾ ಆಧಾರ್ ಗುರುತಿನ ಚೀಟಿ ಹಾಜರುಪಡಿಸಬೇಕು.
- ಅಸ್ವಸ್ಥತೆ ಹೊಂದಿರುವ ಮಕ್ಕಳಿಗೆ ಲಸಿಕೆ ನೀಡಲು ಪೋಷಕರ ಸಹಮತ ಅಗತ್ಯ.
- ಟಿಡಿ ಅಥವಾ ಇನ್ನಾವುದೇ ಲಸಿಕೆ ಪಡೆದಿದ್ದವರಿಗೆ 15 ದಿನಗಳ ನಂತರ ಕೋವ್ಯಾಕ್ಸಿನ್ ಲಸಿಕೆ ನೀಡಬೇಕು.



ಬೆಂಗಳೂರಿನ ಎಂ.ಜಿ ರಸ್ತೆ ಶುಕ್ರವಾರ ರಾತ್ರಿ ಕರ್ಫ್ಯೂವಿನಿಂದ ಬಿಕೋ ಎನ್ನುತಿತ್ತು ಪ್ರಜಾವಾಣಿ ಚಿತ್ರ/ ರಂಜು ಪಿ

ಹೊಸ ವರ್ಷ: ಕಾಣದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಬಾರಿಯೂ ಹೊಸ ವರ್ಷವನ್ನು ಬರಮಾಡಿಕೊಳ್ಳುವ ಸಂದರ್ಭದಲ್ಲಿ ಬೆಳಕಿನ ಚಿತ್ತಾರ ಹಾಗೂ ಸಂಗೀತದ ಅಬ್ಬರಕ್ಕೆ ಸಾಕ್ಷಿಯಾಗುತ್ತಿದ್ದ ನಗರದ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಕೋರಮಂಗಲ, ಇಂದಿರಾನಗರದ ಪ್ರಮುಖ ರಸ್ತೆಗಳು ಶುಕ್ರವಾರ ಬಿಕೋ ಎನ್ನುತ್ತಿದ್ದವು. ಡಿ.ಜೆ. ಸದ್ದಿಗೆ ಮೈ ಕುಣಿಸಿ ನಲಿಯುತ್ತಿದ್ದ ಯುವಕ, ಯುವತಿಯರು ಕತ್ತಲೆ ಕವಿಯುತ್ತಲೇ ಒಲ್ಲದ ಮನಸ್ಸಿನಿಂದ ಮನೆಗಳತ್ತ ಹೆಜ್ಜೆ ಹಾಕಿದರು.


ಬೆಂಗಳೂರಿನ ರೆಸಿಡೆನ್ಸಿ ರಸ್ತೆಯ ಪಬ್ ಒಂದರಲ್ಲಿ ಶುಕ್ರವಾರ ಹೊಸವರ್ಷದ ಸಂಭ್ರಮದಲ್ಲಿ ತೊಡಗಿದ್ದ ಕುಟುಂಬ ಪ್ರಜಾವಾಣಿ ಚಿತ್ರ/ ರಂಜು ಪಿ

ಕೊರೊನಾ ರೂಪಾಂತರಿ ತಳಿ ಓಮೈಕ್ರಾನ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಸಾರ್ವಜನಿಕ ಸ್ಥಳಗಳಲ್ಲಿ ಹೊಸ ವರ್ಷಾಚರಣೆಗೆ ರಾಜ್ಯ ಸರ್ಕಾರ ನಿರ್ಬಂಧ ವಿಧಿಸಿತ್ತು. ಡಿಸೆಂಬರ್ 28ರಿಂದಲೇ ರಾತ್ರಿ ಕರ್ಫ್ಯೂ ಜಾರಿಗೊಳಿಸಿದ್ದ ನಗರ ಪೊಲೀಸರು, ಇದನ್ನು ಮತ್ತಷ್ಟು ಬಿಗಿಗೊಳಿಸಿದ್ದರು. ಜನಸಂದಣಿ ನಿಯಂತ್ರಿಸುವ ಸಲುವಾಗಿ ಶುಕ್ರವಾರ ಸಂಜೆ 6 ಗಂಟೆಯಿಂದಲೇ ನಿಷೇದಾಜ್ಞೆ ಜಾರಿಗೊಳಿಸಿದ್ದರು.

ಹೀಗಾಗಿ ಮಧ್ಯಾಹ್ನದಿಂದಲೇ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್‌ಸ್ಟ್ರೀಟ್, ಇಂದಿರಾನಗರ, ಕೋರಮಂಗಲದತ್ತ ಮುಖ ಮಾಡಿದ್ದ ಯುವಕ, ಯುವತಿಯರು ಪಬ್ ಹಾಗೂ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿ ಒಂದಷ್ಟು ಸಮಯ ಕಳೆದು ಎಂಟು ಗಂಟೆ ಹೊತ್ತಿಗೆ ಮನೆಗಳತ್ತ ಹೆಜ್ಜೆ ಹಾಕುತ್ತಿದ್ದುದು ಕಂಡುಬಂತು.

ಹೊಸ ವರ್ಷಾಚರಣೆಯ ಹೊತ್ತಿನಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಿದ್ದ ಪೊಲೀಸರು, ಬ್ರಿಗೇಡ್ ರಸ್ತೆ ಸುತ್ತ ಹದ್ದಿನ ಕಣ್ಣು ನೆಟ್ಟಿದ್ದರು. ರಸ್ತೆಯಲ್ಲಿ ಓಡಾಡುವವರ ಮೇಲೆ ಸಿಸಿಟಿವಿ ಕಣ್ಗಾವಲು ಇಡಲಾಗಿತ್ತು.

‘ಪ್ರತಿ ವರ್ಷ ರಾತ್ರಿ 9 ಗಂಟೆಗೆ ಚರ್ಚ್‌ಸ್ಟ್ರೀಟ್‌ಗೆ ಬಂದು ಮುಂಜಾನೆಯವರೆಗೂ ಪಬ್‌ಗಳಲ್ಲಿ ಮೋಜು ಮಸ್ತಿ ಮಾಡುತ್ತಿದ್ದೆವು. ರಾತ್ರಿ ಕರ್ಫ್ಯೂ ನಮ್ಮೆಲ್ಲಾ ಸಂಭ್ರಮ ಕಸಿದುಕೊಂಡಿದೆ. ಈ ಬಾರಿ ಮಧ್ಯಾಹ್ನ 3ಕ್ಕೆ ಚರ್ಚ್‌ಸ್ಟ್ರೀಟ್‌ಗೆ ಬಂದಿದ್ದೇವೆ. ರಾತ್ರಿ 9ರವರೆಗೂ ಇದ್ದು ಮನೆಗೆ ಹೋಗುತ್ತೇವೆ’ ಎಂದು ಯುವತಿಯೊಬ್ಬರು ತಿಳಿಸಿದರು.

ಎಂ.ಜಿ.ರಸ್ತೆ ಸೇರಿ ನಗರದ ಕೇಂದ್ರ ವಾಣಿಜ್ಯ ಪ್ರದೇಶಗಳಲ್ಲಿರುವ (ಸಿಬಿಡಿ) ಹೋಟೆಲ್, ಪಬ್ ಹಾಗೂ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿ ಪಾರ್ಟಿ ಮಾಡಲು ಸಾಮರ್ಥ್ಯದ ಶೇ 50 ರಷ್ಟು ಅತಿಥಿಗಳಿಗೆ ಅವಕಾಶ ನೀಡಲಾಗಿತ್ತು. ಹೀಗಾಗಿ ಕೆಲ ಪಬ್ ಹಾಗೂ ರೆಸ್ಟೋರೆಂಟ್‌ಗಳು ವಿದ್ಯುತ್ ದೀಪಗಳಿಂದ ಝಗಮಗಿಸುತ್ತಿದ್ದವು. ಒಳಾಂಗಣವನ್ನು ಸಿಂಗರಿಸಲಾಗಿತ್ತು.

ಯುವಕರ ವಾಗ್ವಾದ: ಪಾನಮತ್ತರಾಗಿದ್ದ ಯುವಕರು ಬ್ರಿಗೇಡ್ ರಸ್ತೆಯಲ್ಲಿ ವಾಗ್ವಾದ ನಡೆಸುತ್ತಿದ್ದರು.

ಬ್ಯಾರಿಕೇಡ್ ಹಾಕಿ ರಸ್ತೆ ಬಂದ್

ಮಹಾತ್ಮಗಾಂಧಿ ರಸ್ತೆ, ಬ್ರಿಗೇಡ್ ರಸ್ತೆ, ಕೋರಮಂಗಲ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಹೆಚ್ಚು ಜನ ಸೇರುತ್ತಾರೆ ಎಂಬುದನ್ನು ಅರಿತಿದ್ದ ಪೊಲೀಸರು ಸಂಜೆಯ ವೇಳೆಗೆ ಈ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳನ್ನು ಬ್ಯಾರಿಕೇಡ್ ಹಾಕಿ ಬಂದ್ ಮಾಡಿದರು. ಹೀಗಾಗಿ ಈ ರಸ್ತೆಗಳೆಲ್ಲಾ ಬಣಗುಡುತ್ತಿದ್ದವು.

ಸಚಿವರಿಂದ ಭದ್ರತೆ ಪರಿಶೀಲನೆ: ರಾತ್ರಿ 10 ಗಂಟೆ ನಂತರ ಬ್ರಿಗೇಡ್ ರಸ್ತೆಗೆ ಭೇಟಿ ನೀಡಿದ್ದ ಗೃಹ ಸಚಿವ ಆರಗ ಜ್ಞಾನೇಂದ್ರ ಭದ್ರತೆಯನ್ನು ಪರಿಶೀಲಿಸಿದರು.

ಸಂಭ್ರಮ ಸಪ್ಪೆಯಾಗಿಸಿದ ಮಳೆ

ನಗರದ ಹಲವೆಡೆ ಶುಕ್ರವಾರ ಜೋರು ಮಳೆಯಾಯಿತು. ಹೀಗಾಗಿ ಹೊಸ ವರ್ಷಾಚರಣೆ ಮತ್ತಷ್ಟು ಸಪ್ಪೆಯಾಯಿತು.

ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನದ ವೇಳೆಗೆ ಕೆಲವೆಡೆ ತುಂತುರು ಮಳೆಯಾಯಿತು.

ಸಂಜೆಯಾಗುತ್ತಲೇ 'ವರುಣನ ಆಟ' ಜೋರಾಯಿತು. ಕೆಲವೆಡೆ ರಸ್ತೆಯಲ್ಲಿ ಮಳೆ ನೀರು ಹರಿಯಿತು. ದಿಢೀರ್ ಸುರಿದ ಮಳೆಯಲ್ಲೇ ಪಾದಚಾರಿಗಳು ಹೆಜ್ಜೆಹಾಕುತ್ತಿದ್ದ ದೃಶ್ಯಗಳೂ ಕಂಡುಬಂದವು.

ಶನಿವಾರ, ಜನವರಿ 1, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 1 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಕೆಲವು ಪುಟ್ಟ ಪುಟ್ಟ ನಡೆಗಳಿಂದ ನಮ್ಮೊಳಗಿನ ಸಮಾಧಾನವೊಂದು, ಸಂಭ್ರಮವಾಗಿ ಬದಲಾಗುತ್ತದೆ. ಹೊಸ ವರ್ಷದ ಆರಂಭದಿಂದಲೇ ಈ ಸಂಭ್ರಮದ ಬದಲಾವಣೆಯ ಹಾದಿಯಲ್ಲಿ ಹೆಜ್ಜೆ ಹಾಕೋಣ.

2022

ಹೊಸ ವರ್ಷದ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,253	17,354	₹49,600 (ಬೆಂಗಳೂರು)	₹63,600 (ಬೆಂಗಳೂರು)	74.29

ಹೊಸವರ್ಷ: ಪಾದರಕ್ಷೆ, ಕೆಲ ಸೇವೆ ದುಬಾರಿ, ಎಟಿಎಂ ಸೇವಾ ಶುಲ್ಕ ಹೆಚ್ಚಳ

ಬೆಲೆ ಏರಿಕೆಯ ಹೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪ್ರಮಾಣದಲ್ಲಿ ಹೆಚ್ಚಳ, ಕಚ್ಚಾ ವಸ್ತುಗಳ ಬೆಲೆ ಹೆಚ್ಚಳದ ಕಾರಣಗಳಿಂದಾಗಿ ಹೊಸ ವರ್ಷದ ಮೊದಲ ದಿನದಿಂದ ಅನ್ವಯವಾಗುವಂತೆ ಕೆಲವು ಸೇವೆಗಳು ಮತ್ತು ಉತ್ಪನ್ನಗಳು ದುಬಾರಿ ಆಗಲಿವೆ. ವೈಯಕ್ತಿಕ ಹಣಕಾಸಿಗೆ ಸಂಬಂಧಿಸಿದ ಒಂದೆರಡು ನಿಯಮಗಳಲ್ಲಿ ಬದಲಾವಣೆ ಆಗಿದ್ದು, ಇದರಿಂದ ಜನಸಾಮಾನ್ಯರಿಗೆ ಅನುಕೂಲ ಆಗುವ ನಿರೀಕ್ಷೆ ಇದೆ.

ಜನವರಿ 1ರಿಂದ ಅನ್ವಯ ಆಗುವಂತೆ, ಓಲಾ ಅಥವಾ ಉಬರ್‌ನಂತಹ ಇ-ವಾಣಿಜ್ಯ ವೇದಿಕೆಗಳ ಮೂಲಕ ಆಟೊ ರಿಕ್ಷಾ ಸೇವೆಗಳನ್ನು ಪಡೆಯುವವರು ಶೇಕಡ 5ರಷ್ಟು ಜಿಎಸ್‌ಟಿ ಪಾವತಿಸಬೇಕಿದೆ. ಆಟೊ ಚಾಲಕರನ್ನು ನೇರವಾಗಿ ಸಂಪರ್ಕಿಸಿ, ಆಟೊ ರಿಕ್ಷಾ ಸೇವೆ ಪಡೆದಲ್ಲಿ ಈ ತೆರಿಗೆ ಅನ್ವಯ ಆಗುವುದಿಲ್ಲ.

ಎಟಿಎಂ ಕಾರ್ಡ್ ಬಳಸಿ ಖಾತೆಯಿಂದ ಹಣ ಹಿಂದಕ್ಕೆ ಪಡೆಯುವವರು ಜ. 1ರಿಂದ ತುಸು ಹೆಚ್ಚಿನ ಶುಲ್ಕ ತೆರಬೇಕಿದೆ. ಉಚಿತ ವಹಿವಾಟಿನ ಮಿತಿ ದಾಟಿದ ನಂತರ, ಪ್ರತಿ ವಹಿವಾಟಿಗೆ ₹ 20ರಷ್ಟು ಶುಲ್ಕ ಕೊಡಬೇಕಿತ್ತು. ಇದನ್ನು ₹ 21ಕ್ಕೆ ಹೆಚ್ಚಳ ಮಾಡಲು ಬ್ಯಾಂಕ್‌ಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅನುಮತಿ ನೀಡಿದೆ.

12ನೇ ಪುಟ ನೋಡಿ

ಬಟ್ಟೆಗೆ ಜಿಎಸ್‌ಟಿ ಹೆಚ್ಚಳ ಸದ್ಯಕ್ಕಿಲ್ಲ

ನವದೆಹಲಿ (ಪಿಟಿಐ): ಹಲವು ರಾಜ್ಯಗಳ ಬೇಡಿಕೆಗಳಿಗೆ ಮಣಿದಿರುವ ಜಿಎಸ್‌ಟಿ ಮಂಡಳಿಯು, ₹ 1,000 ವರೆಗಿನ ಬಟ್ಟೆಗಳಿಗೆ ಜಿಎಸ್‌ಟಿಯನ್ನು ಶೇ 12ಕ್ಕೆ ಹೆಚ್ಚಿಸುವ ತೀರ್ಮಾನವನ್ನು ತಡೆಹಿಡಿಯಲು ನಿರ್ಧರಿಸಿದೆ. ಈ ವಿಚಾರದ ಬಗ್ಗೆ ಚರ್ಚಿಸಿ ತೀರ್ಮಾನಿಸುವ ಹೊಣೆಯನ್ನು ರಾಜ್ಯಗಳ ಹಣಕಾಸು ಸಚಿವರ ಸಮಿತಿಗೆ ವರ್ಗಾಯಿಸಿದೆ. ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಸಮಿತಿಯ ಮುಖ್ಯಸ್ಥ. ಸಮಿತಿಯು ಫೆಬ್ರುವರಿಗೆ ಮೊದಲು ವರದಿ ನೀಡಬೇಕಿದೆ. ತೆರಿಗೆ ಹೆಚ್ಚಳವು ಜ. 1ರಿಂದ ಜಾರಿಗೆ ಬರಬೇಕಿತ್ತು. 'ಬಟ್ಟೆಗಳ ಮೇಲಿನ ತೆರಿಗೆಯನ್ನು ಈಗ ಹೆಚ್ಚಿಸದೆ ಇರಲು ಮಂಡಳಿಯ ತುರ್ತುಸಭೆಯಲ್ಲಿ ನಿರ್ಧರಿಸಲಾಗಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಕಿಸೆಗೆ ಭಾರ

ಜಿಎಸ್‌ಟಿ ಪ್ರಮಾಣದಲ್ಲಿ ಹೆಚ್ಚಳ, ಕಚ್ಚಾ ವಸ್ತುಗಳ ಬೆಲೆಯಲ್ಲಿ ಏರಿಕೆಯ ಪರಿಣಾಮವಾಗಿ ಕೆಲವು ಸೇವೆಗಳ ಹಾಗೂ ಉತ್ಪನ್ನಗಳ ಬೆಲೆ ಜನವರಿ 1ರಿಂದ ಜಾಸ್ತಿ ಆಗಲಿದೆ. ದಿನನಿತ್ಯದ ಬದುಕಿನ ಮೇಲೆ ಪರಿಣಾಮ ಉಂಟುಮಾಡುವ ಸಾಧ್ಯತೆ ಇರುವ ಕೆಲವು ಸೇವೆಗಳು, ಉತ್ಪನ್ನಗಳ ಬೆಲೆ ಏರಿಕೆ ಕುರಿತ ವಿವರ ಇಲ್ಲಿದೆ.

5% ಇ-ವಾಣಿಜ್ಯ ವೇದಿಕೆ (ಆ್ಯಪ್) ಮೂಲಕ ಆಟೊ ಸೇವೆ ಪಡೆದರೆ ಪಾವತಿಸಬೇಕಾದ ಜಿಎಸ್‌ಟಿ. ಈ ಮೊದಲು ಇದಕ್ಕೆ ಜಿಎಸ್‌ಟಿ ಇರಲಿಲ್ಲ. ಆಫ್‌ಲೈನ್ ಮೂಲಕ ಪಡೆಯುವ ಆಟೊ ಸೇವೆಗೆ ತೆರಿಗೆ ಇರುವುದಿಲ್ಲ.

12% ₹ 1,000ವರೆಗಿನ ಪಾದರಕ್ಷೆಗಳ ಮೇಲಿನ ಜಿಎಸ್‌ಟಿ ಪ್ರಮಾಣ ಈ ಮಟ್ಟಕ್ಕೆ ಬರಲಿದೆ. ಇದಕ್ಕೂ ಮೊದಲು ಇದು ಶೇ 5ರಷ್ಟಾಗಿತ್ತು.

5% ಸ್ವಿಗ್ಗಿ, ಜೊಮ್ಯಾಟೊದಂತಹ ಕಂಪನಿಗಳು ತಮ್ಮ ಸೇವೆಗೆ ಪಾವತಿಸಬೇಕಿರುವ ಜಿಎಸ್‌ಟಿ. ಸದ್ಯ ರೆಸ್ಟೋರೆಂಟ್‌ಗಳೇ ಈ ತೆರಿಗೆ ಪಾವತಿಸುತ್ತಿವೆ. ಈ ಹೊರೆಯು ಗ್ರಾಹಕರಿಗೆ ವರ್ಗಾವಣೆ ಆಗದು.

ಕಾರುಗಳ ಬೆಲೆ ಹೆಚ್ಚಿಸುವುದಾಗಿ ಪ್ರಮುಖ ಕಂಪನಿಗಳು ಪ್ರಕಟಿಸಿವೆ. ಬೆಲೆ ಹೆಚ್ಚಳವು ಕಂಪನಿಯಿಂದ ಕಂಪನಿಗೆ, ಮಾದರಿಯಿಂದ ಮಾದರಿಗೆ ವ್ಯತ್ಯಾಸ ಆಗಬಹುದು.

ಎಟಿಎಂಗಳಲ್ಲಿ ಡೆಬಿಟ್ ಕಾರ್ಡ್ ಬಳಸಿ ನಡೆಸುವ ವಹಿವಾಟುಗಳಿಗೆ ಬ್ಯಾಂಕುಗಳು ವಿಧಿಸುವ ಶುಲ್ಕದಲ್ಲಿ ಏರಿಕೆ ಆಗಲಿದೆ.

ಒಂದಿಷ್ಟು ಬದಲಾವಣೆ
- ಜಿಎಸ್‌ಟಿ ಮರುಪಾವತಿಗೆ ಆಧಾರ್ ದೃಢೀಕರಣ ಕಡ್ಡಾಯ
- ಹಿಂದಿನ ಒಂದು ತಿಂಗಳ ಜಿಎಸ್‌ಟಿಆರ್–3ಬಿ ಸಲ್ಲಿಸದೇ ಇದ್ದರೆ ಜಿಎಸ್‌ಟಿಆರ್–1 ಸಲ್ಲಿಕೆಗೆ ತಡೆ
- ತೆರಿಗೆ ಬಾಕಿ ವಸೂಲಿಗೆ ಶೋಕಾಸ್ ನೋಟಿಸ್ ನೀಡದೆಯೂ ತೆರಿಗೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಬಹುದು



ಪ್ರಿಯ ಓದುಗರೇ



ಇಂದಿನ ಸಂಚಿಕೆ ಜೊತೆಗೆ ಹೊಸ ವರ್ಷಕ್ಕೆ 'ಪ್ರಜಾವಾಣಿ' ಆಕರ್ಷಕ ಕ್ಯಾಲೆಂಡರ್ ಕೊಡಲಾಗಿದೆ.. 14

ವಿವಿಧ ಕ್ಷೇತ್ರಗಳ ಪ್ರಸಿದ್ಧ ವ್ಯಕ್ತಿಗಳ ಸ್ಫೂರ್ತಿದಾಯಕ ಸಂದೇಶಗಳು 07

ವಿವಿಧ ಕ್ಷೇತ್ರಗಳಿಂದ ಆಯ್ಕೆಯಾದ 'ಪ್ರಜಾವಾಣಿ ಸಾಧಕ'ರ ಪರಿಚಯವೂ ಇದೆ

–ಸಂ

ಮತಾಂತರ ನಿಷೇಧಕ್ಕೆ ಸುಗ್ರೀವಾಜ್ಞೆ: ಜ್ಞಾನೇಂದ್ರ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ರಾಜ್ಯದಲ್ಲಿ ಮತಾಂತರ ನಿಷೇಧಿಸುವ ಉದ್ದೇಶದಿಂದ ಸಿದ್ಧಪಡಿಸಿರುವ ಕರ್ನಾಟಕ ಧಾರ್ಮಿಕ ಹಕ್ಕುಗಳ ಸಂರಕ್ಷಣಾ ಮಸೂದೆಯನ್ನು ಸುಗ್ರೀವಾಜ್ಞೆ ಮೂಲಕ ಕಾಯ್ದೆಯಾಗಿ ಜಾರಿಗೊಳಿಸಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

'ಪ್ರಜಾವಾಣಿ' ಜತೆ ಶುಕ್ರವಾರ ಮಾತನಾಡಿದ ಅವರು, 'ರಾಜ್ಯದಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಮತಾಂತರವನ್ನು ನಿಗ್ರಹಿಸುವ ದೃಷ್ಟಿಯಿಂದ ತರಲಾಗಿರುವ ಮಸೂದೆಯನ್ನು ಬೆಳಗಾವಿಯಲ್ಲಿ ನಡೆದ ಅಧಿವೇಶನದ ವೇಳೆ ವಿಧಾನಸಭೆಯಲ್ಲಿ ಮಂಡಿಸಿ ಅಂಗೀಕಾರ ಪಡೆಯಲಾಗಿದೆ. ಕಾರಣಾಂತರದಿಂದ ವಿಧಾನಪರಿಷತ್ತಿನಲ್ಲಿ ಮಂಡಿಸಲು ಸಾಧ್ಯವಾಗಿಲ್ಲ. ವಿಳಂಬವಾಗಬಾರದು ಎಂಬ ಕಾರಣಕ್ಕೆ ಸುಗ್ರೀವಾಜ್ಞೆ ಹೊರಡಿಸಲು ನಿರ್ಧರಿಸಲಾಗಿದೆ. ಮುಂದಿನ ದಿನಗಳಲ್ಲಿ ನಡೆಯಲಿರುವ ಸಚಿವ ಸಂಪುಟದಲ್ಲಿ ಈ ಬಗ್ಗೆ ತೀರ್ಮಾನ ಕೈಗೊಂಡು ಅನುಮೋದನೆಗಾಗಿ ರಾಜ್ಯಪಾಲರಿಗೆ ಕಳಿಸಲಾಗುವುದು. ಅವರ ಒಪ್ಪಿಗೆ ಪಡೆದು ಕಾಯ್ದೆ ಜಾರಿ ಮಾಡುವ ಉದ್ದೇಶ ಇದೆ' ಎಂದು ಅವರು ವಿವರಿಸಿದರು.

'ಮುಂದೆ ನಡೆಯಲಿರುವ ವಿಧಾನಮಂಡಲ ಜಂಟಿ ಅಧಿವೇಶನದಲ್ಲಿ ವಿಧಾನಪರಿಷತ್ತಿನಲ್ಲಿ ಈ ಬಗ್ಗೆ ಚರ್ಚೆ ನಡೆಸಿ ಅನುಮೋದನೆ ಪಡೆಯಲಾಗುವುದು' ಎಂದರು.

'ಯಾವುದೋ ಸಮುದಾಯವನ್ನು ಉದ್ದೇಶಿಸಿ ಮಸೂದೆ ತರುತ್ತಿಲ್ಲ. ಮತಾಂತರ ತಡೆಯಬೇಕೆಂಬ ಆಶಯವಷ್ಟೇ ನಮ್ಮ ಮುಂದಿರುವುದು. ಈ ವಿಷಯದಲ್ಲಿ ನಮ್ಮ ಬದ್ಧತೆ ಪ್ರದರ್ಶಿಸುತ್ತೇವೆ' ಎಂದೂ ಅವರು ತಿಳಿಸಿದರು.

19 ವರ್ಷದೊಳಗಿನವರ ಏಷ್ಯಾಕಪ್: ಭಾರತಕ್ಕೆ ಪ್ರಶಸ್ತಿ

ದುಬೈ: ಭಾರತ ತಂಡ 19 ವರ್ಷದೊಳಗಿನವರ ಏಷ್ಯಾಕಪ್ ಏಕದಿನ ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡಿತು. ಶುಕ್ರವಾರ ನಡೆದ ಫೈನಲ್ ಪಂದ್ಯದಲ್ಲಿ ಶ್ರೀಲಂಕಾವನ್ನು ಭಾರತ 9 ವಿಕೆಟ್‌ಗಳಿಂದ ಮಣಿಸಿತು. 13

ಏಕದಿನ ತಂಡಕ್ಕೆ ರಾಹುಲ್ ನಾಯಕ



ನವದೆಹಲಿ (ಪಿಟಿಐ): ಭಾರತ ಏಕದಿನ ಕ್ರಿಕೆಟ್ ತಂಡದ ನಾಯಕನನ್ನಾಗಿ ಕೆ.ಎಲ್.ರಾಹುಲ್ ಅವರನ್ನು ನೇಮಕ ಮಾಡಲಾಗಿದೆ. ಜಸ್‌ಪ್ರೀತ್ ಬೂಮ್ರಾ ಉಪನಾಯಕನಾಗಿರುವರು. ರೋಹಿತ್ ಶರ್ಮಾ ಅವರು ಮಂಡಿರಜ್ಜು ಗಾಯದಿಂದ ಬಳಲುತ್ತಿದ್ದಾರೆ. 13

ಚರ್ಚೆ
ಪದವಿಪೂರ್ವ ಕಾಲೇಜುಗಳಲ್ಲಿ ಸೂರ್ಯ ನಮಸ್ಕಾರ ಆಚರಣೆ ಸರಿಯಾದ ನಿರ್ಧಾರವೇ? 11

ಚಿನಕುರಳಿ
ಪ್ರಕಾಶ್ ಶೆಟ್ಟಿ



ಜ್ವರಕ್ಕೆ ಕಾರಣ ದೃಢಪಡದಿದ್ದರೆ ಅನ್ವಯ: ಕೇಂದ್ರ ಸೂಚನೆ

ಎಲ್ಲರಿಗೂ ಆ್ಯಂಟಿಜೆನ್ ಪರೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಜ್ವರದಿಂದ ಬಳಲುತ್ತಿರುವ ವ್ಯಕ್ತಿಗಳಲ್ಲಿ ಜ್ವರಕ್ಕೆ ಬೇರೆ ಕಾರಣಗಳು ದೃಢಪಡದೇ ಇದ್ದರೆ, ಅಂತಹವರನ್ನು ಶಂಕಿತ ಕೋವಿಡ್ ರೋಗಿಗಳು ಎಂದು ಪರಿಗಣಿಸಿ. ಎಲ್ಲರನ್ನೂ ಆ್ಯಂಟಿಜೆನ್ ಪರೀಕ್ಷೆಗೆ ಒಳಪಡಿಸಿ' ಎಂದು ಕೇಂದ್ರ ಆರೋಗ್ಯ ಸಚಿವಾಲಯವು ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿದೆ.

ಆರೋಗ್ಯ ಸಚಿವಾಲಯ ಮತ್ತು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ಜಂಟಿಯಾಗಿ ರಾಜ್ಯಗಳಿಗೆ ಕಳುಹಿಸಿರುವ ಸುತ್ತೋಲೆಯಲ್ಲಿ ಹೀಗೆ ಸೂಚಿಸಲಾಗಿದೆ. 'ಜ್ವರದ ಜತೆಗೆ ಕೆಮ್ಮು, ಗಂಟಲು ನೋವು, ತಲೆ ನೋವು, ಬೆನ್ನು ನೋವು, ಮೈಕೈ ನೋವು, ಉಸಿರಾಟದ ತೊಂದರೆ, ರುಚಿ ಮತ್ತು ವಾಸನೆ ಗ್ರಹಣ ಶಕ್ತಿ ಕುಂದುವಂತಹ ಲಕ್ಷಣಗಳು ಕಂಡುಬಂದರೆ, ಅವಕ್ಕೆ ಕಾರಣ ಏನು ಎಂಬುದನ್ನು ದೃಢಪಡಿಸಿಕೊಳ್ಳಬೇಕು. ಕಾರಣವು ದೃಢಪಡದೇ ಇದ್ದರೆ ಅದನ್ನು ಶಂಕಿತ ಕೋವಿಡ್ ಪ್ರಕರಣ ಎಂದು ಪರಿಗಣಿಸಬೇಕು' ಎಂದು ಸೂಚಿಸಲಾಗಿದೆ.



ಜ್ವರದ ಜತೆಯಲ್ಲಿ ಈ ಲಕ್ಷಣಗಳು ಇಲ್ಲದೇ ಇದ್ದರೂ ಇದೇ ವಿಧಾನವನ್ನು ಅನುಸರಿಸಬೇಕು ಎಂದು ಸೂಚಿಸಲಾಗಿದೆ.

(ಆರ್‌ಎಟಿ) ಹೆಚ್ಚಳಕ್ಕೆ ಸೂಚನೆ: 'ಎಲ್ಲಾ ರಾಜ್ಯಗಳು ತ್ವರಿತ ಆ್ಯಂಟಿಜೆನ್ ಪರೀಕ್ಷೆಗಳನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಬೇಕು. ರಾಜ್ಯದ ಎಲ್ಲೆಡೆ ಆರ್‌ಎಟಿ ಕಿಟ್‌ಗಳುಲಭ್ಯವಿರಲುಕ್ರಮತೆಗೆದುಕೊಳ್ಳಬೇಕು. ಆರ್‌ಎಟಿ ಕಿಟ್‌ಗಳ ಮೂಲಕ ಪರೀಕ್ಷೆ ನಡೆಸುವ ಘಟಕಗಳ ಆರಂಭಕ್ಕೆ ಯಾವುದೇ ತಡೆ ಇರಬಾರದು' ಎಂದು ಸಚಿವಾಲಯವು ಸೂಚಿಸಿದೆ.

ದೇಶದಲ್ಲಿ ಕೋವಿಡ್‌ನ ಎರಡನೇ ಅಲೆಯ ವೇಳೆ ಪ್ರತಿದಿನ 35–40 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು. ಆದರೆ ಈಗ ಪರೀಕ್ಷೆಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. ಡಿಸೆಂಬರ್ ತಿಂಗಳ ಹಲವು ದಿನಗಳಲ್ಲಿ 10 ಲಕ್ಷಕ್ಕಿಂತಲೂ ಕಡಿಮೆ ಪರೀಕ್ಷೆಗಳನ್ನು ನಡೆಸಲಾಗಿದೆ. ಡಿಸೆಂಬರ್ 30ರಂದು 12.50 ಲಕ್ಷ ಪರೀಕ್ಷೆಗಳನ್ನು ನಡೆಸಿದ್ದೇ ತಿಂಗಳ ಗರಿಷ್ಠ ಸಂಖ್ಯೆಯಾಗಿದೆ.

ಇನ್ನಷ್ಟು ಸುದ್ದಿಗಳು 8

18.9 ಲಕ್ಷ ಪ್ರಕರಣ

ವಿಶ್ವದಾದ್ಯಂತ ಗುರುವಾರ ಒಂದೇ ದಿನ ಕೋವಿಡ್‌ನ 18.91 ಲಕ್ಷ ಹೊಸ ಪ್ರಕರಣಗಳು ಪತ್ತೆಯಾಗಿವೆ. ಇದು ಕೋವಿಡ್ ಪತ್ತೆಯಾದಾಗಿನಿಂದ ಈವರೆಗೆ ಒಂದೇ ದಿನದಲ್ಲಿ ದೃಢಪಟ್ಟ ಗರಿಷ್ಠ ಸಂಖ್ಯೆಯಾಗಿದೆ.

ನವೆಂಬರ್ ಅಂತ್ಯದ ವೇಳೆಗೆ ಓಮೈಕ್ರಾನ್ ಪ್ರಕರಣಗಳು ಪತ್ತೆಯಾದ ನಂತರ ವಿಶ್ವದಾದ್ಯಂತ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಗುರುವಾರ ಅಮೆರಿಕದಲ್ಲಿ 5.72 ಲಕ್ಷ, ಬ್ರಿಟನ್‌ನಲ್ಲಿ 1.89 ಲಕ್ಷ, ಫ್ರಾನ್ಸ್‌ನಲ್ಲಿ 2.06 ಲಕ್ಷ ಮತ್ತು ಸ್ಪೇನ್‌ನಲ್ಲಿ 1.61 ಲಕ್ಷ ಪ್ರಕರಣಗಳು ಪತ್ತೆಯಾಗಿವೆ.

ಓಮೈಕ್ರಾನ್: ಒಂದೇ ದಿನ 23 ಪ್ರಕರಣ ಪತ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಜೊತೆಗೆ ಓಮೈಕ್ರಾನ್ ಪ್ರಕರಣಗಳೂ ಹೆಚ್ಚಳವಾಗಿವೆ. ಶುಕ್ರವಾರ ಒಂದೇ ದಿನ 23 ಮಂದಿಯಲ್ಲಿ ಕೊರೊನಾ ವೈರಾಣುವಿನ ರೂಪಾಂತರಿ ದೃಢಪಟ್ಟಿದೆ. ಸೋಂಕಿತರಲ್ಲಿ 19 ಮಂದಿ ವಿದೇಶದಿಂದ ಮರಳಿದವರಾಗಿದ್ದಾರೆ.

ಬೆಂಗಳೂರಿನಲ್ಲಿ ಹೊಸದಾಗಿ 21 ಪ್ರಕರಣಗಳು ದೃಢಪಟ್ಟರೆ, ಎರಡು ಪ್ರಕರಣಗಳು ಮಂಗಳೂರಿನಲ್ಲಿ ಪತ್ತೆಯಾಗಿವೆ. ಇದರಿಂದಾಗಿ ರಾಜ್ಯದಲ್ಲಿ ಓಮೈಕ್ರಾನ್ ಒಟ್ಟು ಪ್ರಕರಣಗಳ ಸಂಖ್ಯೆ 66ಕ್ಕೆ ಏರಿಕೆಯಾಗಿದೆ.


ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಶುಕ್ರವಾರ ಬೆಂಗಳೂರಿನಲ್ಲಿ 656 ಸೇರಿದಂತೆ ರಾಜ್ಯದಲ್ಲಿ 832 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ. ಮೂರೂವರೆ ತಿಂಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ. ರಾಜ್ಯದ 22 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೊಸದಾಗಿ ಪತ್ತೆಯಾಗಿವೆ. ಒಂದು ದಿನದ ಅವಧಿಯಲ್ಲಿ 1.17 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.70ರಷ್ಟು ದೃಢಪಟ್ಟಿದೆ. ಐದು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 16 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 8 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿಲ್ಲ.



ಅತಿಥಿ ಉಪನ್ಯಾಸಕರ ವಿರುದ್ಧ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಗರಂ

'ಇಷ್ಟವಿದ್ರೆ ಕೆಲಸ ಮಾಡಿ; ಇಲ್ಲ ಬೇರೆ ನೋಡಿಕೊಳ್ಳಿ'

ಪ್ರಜಾವಾಣಿ ವಾರ್ತೆ


ಬಿ.ಸಿ. ನಾಗೇಶ್

ಕೋಲಾರ: ಸೇವಾ ಭದ್ರತೆ ಒದಗಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಇಲ್ಲಿ ಶುಕ್ರವಾರ ಮನವಿ ಸಲ್ಲಿಸಲು ಮುಂದಾದ ಅತಿಥಿ ಉಪನ್ಯಾಸಕರ ವಿರುದ್ಧ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಗರಂ ಆದರು.

ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಲ್ಲಿ ಡಿವಿಜಿ ಶಾಲಾ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿ ಬೆಂಗಳೂರಿಗೆ ಹಿಂದಿರುಗುತ್ತಿದ್ದ ಸಚಿವರನ್ನು ಮಾರ್ಗ ಮಧ್ಯೆ ಭೇಟಿಯಾದ ಜಿಲ್ಲಾ ಅತಿಥಿ ಉಪನ್ಯಾಸಕರ ಸಂಘದ ಸದಸ್ಯರು, 'ನಾವು ಶೋಷಣೆಗೆ ಒಳಗಾಗಿದ್ದೇವೆ. ದಯವಿಟ್ಟು ನಮಗೆ ಸೇವಾ ಭದ್ರತೆ ಕಲ್ಪಿಸಿ, ವೇತನ ಹೆಚ್ಚಳ ಮಾಡಬೇಕು' ಎಂದು ಒತ್ತಾಯಿಸಿದರು.

ಸಂಘದ ಸದಸ್ಯರು ಶೋಷಣೆ ಪದ ಬಳಸಿದ್ದರಿಂದ ಅಸಮಾಧಾನಗೊಂಡ ಸಚಿವರು, 'ನಿಮಗೆ ಶೋಷಣೆ ಪದದ ಅರ್ಥ ಗೊತ್ತೇನ್ರಿ, ನಾವು ನಿಮ್ಮ ಮನೆ ಬಾಗಿಲಿಗೆ ಬಂದು ಬಲವಂತವಾಗಿ ಈ ಕೆಲಸ ಮಾಡಿ ಎಂದು ಕೇಳಿದ್ದೇವಾ, ನೀವು ಕೇಳುವುದನ್ನೆಲ್ಲಾ ಮಾಡುವುದಕ್ಕೆ ಆಗೋದಿಲ್ಲ. ಇಷ್ಟವಿದ್ದರೆ ಕೆಲಸ ಮಾಡಿ, ಇಲ್ಲ ಎಂದರೆ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಬೇರೆ ದಾರಿ ನೋಡಿಕೊಳ್ಳಿ' ಎಂದು ಹರಿಹಾಯ್ದರು.

'ಶೋಷಣೆ ಪದದ ಅರ್ಥ ಗೊತ್ತಿರಬೇಕು. ನಿಮ್ಮನ್ನು ಯಾರಾದರೂ ಎಳೆದುಕೊಂಡು ಬಂದು ಕೈಕಾಲು ಕಟ್ಟಿ ಕೆಲಸ ಮಾಡಿಸಿದರೆ ಅದು ಶೋಷಣೆ. ಆದರೆ, ನೀವೇ ಸ್ವತಂತ್ರವಾಗಿ ಆರಿಸಿಕೊಂಡಿರುವ ಕೆಲಸವಿದು. ಪ್ರತಿ ವರ್ಷ ನಿಮಗೆ ಸ್ವಾತಂತ್ರ್ಯವಿತ್ತು. ಬೇಕಾದರೆ ಕೆಲಸಕ್ಕೆ ಸೇರಬಹುದಿತ್ತು, ಇಲ್ಲವೇ ಬಿಡಬಹುದಿತ್ತು. ಯಾರೂ ನಿಮ್ಮನ್ನು ಶೋಷಿಸಿಲ್ಲ. ಪದ ಬಳಕೆ ಮಾಡುವಾಗ ಎಚ್ಚರಿಕೆ ಇರಬೇಕು' ಎಂದು ಹೇಳಿದ ಸಚಿವರು ಕಾರು ಹತ್ತಿ ನಿರ್ಗಮಿಸಿದರು.

ಕೊರಗರದ್ದು 'ಜೈ ಭೀಮ್' ಕಥೆ ಆಗದಿರಲಿ: ಮಹದೇವಪ್ಪ

ಬೆಂಗಳೂರು: ಉಡುಪಿ ಜಿಲ್ಲೆಯ ಕೋಟದಲ್ಲಿ ಕೊರಗ ಸಮುದಾಯದವರ ಮೇಲೆ ಪೊಲೀಸರು ನಡೆಸಿದ ದೌರ್ಜನ್ಯ ಮತ್ತೊಂದು 'ಜೈ ಭೀಮ್' ಕಥೆ ಆಗದಿರಲಿ ಎಂದು ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ ಹೇಳಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಅವರು, ಮದುವೆ ಸಮಾರಂಭದಲ್ಲಿ ಡಿಜೆ ಸೌಂಡ್ ಬಳಸಿದ್ದಕ್ಕೆ ಕೊರಗ ಸಮುದಾಯದವರ ಮೇಲೆ ದೌರ್ಜನ್ಯ ನಡೆಸಿದ್ದ ಪೊಲೀಸರು ಮೇಲೆ ಕ್ರಮ ಕೈಗೊಳ್ಳುವುದಾಗಿ ಸಚಿವ ಕೋಟ ಶ್ರೀನಿವಾಸ್ ಪೂಜಾರಿ ಹೇಳಿದ್ದರು. ವಿಚಿತ್ರ ಎಂದರೆ, ಹಲ್ಲೆಗೊಳಗಾದ ಕೊರಗರ ಮೇಲೆಯೇ ಪೊಲೀಸರು ಜಾಮೀನು ರಹಿತ ಪ್ರಕರಣ ದಾಖಲಿಸಿದ್ದಾರೆ. ಪೊಲೀಸರ ಮೇಲೆಯೇ ಹಲ್ಲೆ ನಡೆಸಿದ್ದು ನಿಜವಾಗಿದ್ದಲ್ಲಿ ಅಂದೇ ಏಕೆ ಪ್ರಕರಣ ದಾಖಲಿಸಲಿಲ್ಲ. ವಿಷಯ ಗಂಭೀರ ತಿರುವು ಪಡೆಯುತ್ತಿದ್ದಂತೆ ಪ್ರಕರಣ ದಾಖಲಿಸಿರುವುದನ್ನು ನೋಡಿದರೆ ಪೊಲೀಸರು ಹೇಳುತ್ತಿರುವುದು ಸುಳ್ಳೆಂದು ತೋರುತ್ತದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ನಗರದಲ್ಲಿ ಇಂದು

ವ್ಯಂಗ್ಯಚಿತ್ರ ಉತ್ಸವ-2022: ವ್ಯಂಗ್ಯ ಭಾವಚಿತ್ರಗಳ ಪ್ರದರ್ಶನ ಮತ್ತು ವ್ಯಂಗ್ಯಚಿತ್ರಕಾರರಿಗೆ ಜೀವಮಾನ ಪ್ರಶಸ್ತಿ ಪ್ರದಾನ, ಬೆಳಿಗ್ಗೆ 11ಕ್ಕೆ ಉದ್ಘಾಟನೆ-'ಕಾರ್ಟೂನ್ ವಾಚ್' ಪತ್ರಿಕೆಯ ಸಂಪಾದಕ ತ್ರಯಂಬಕ ಶರ್ಮಾ, ಜೀವಮಾನ ಪ್ರಶಸ್ತಿ ಪುರಸ್ಕೃತರು-ವ್ಯಂಗ್ಯಚಿತ್ರಕಾರರಾದ ಕೆ.ಆರ್.ಸ್ವಾಮಿ, ವಿ.ಜಿ.ನರೇಂದ್ರ, ಬಿ.ಜಿ. ಗುಜ್ಜಾರಪ್ಪ (ಗುಜ್ಜಾರ್) ಹಾಗೂ ಜಿ.ಎಸ್. ನಾಗನಾಥ್, ಆಯೋಜನೆ-ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಸ್ಥಳ-ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ಟ್ರಿನಿಟಿ ವೃತ್ತ (ಜ.22ರವರೆಗೆ ಪ್ರದರ್ಶನ ಇರಲಿದೆ)

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಕೋವಿಡ್ ಲಸಿಕಾಕರಣ ಕೇಂದ್ರದ ಉದ್ಘಾಟನೆ: ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಸ್ಥಳಗಳು-ಸುಬ್ರಹ್ಮಣ್ಯ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರ (ಬೆಳಿಗ್ಗೆ 10), ಕೆ.ಸಿ. ಜನರಲ್ ಆಸ್ಪತ್ರೆ ಎದುರಿನ ಸರ್ಕಾರಿ ಶಾಲೆ ಆವರಣದಲ್ಲಿರುವ ಕೋವಿಡ್ ಲಸಿಕಾಕರಣ ಕೇಂದ್ರ (11 ಗಂಟೆ), ವೈಯಾಲಿಕಾವಲ್ 13ನೇ ಕ್ರಾಸ್ ಬಳಿ ಪ್ರಾಥಮಿಕ ಆರೋಗ್ಯ ಕೇಂದ್ರ (ಮಧ್ಯಾಹ್ನ 12 ಗಂಟೆ)

'ದಿ ಕಲರ್ಸ್ ವೈಬ್'-ಬಣ್ಣಗಳ ಕಂಪನ: ಗಂಗು ಗೌಡ ಅವರ ಚಿತ್ರಕಲಾ ಪ್ರದರ್ಶನ:ಉದ್ಘಾಟನೆ-ಬಾಬು ಜತ್ಕರ್, ಅತಿಥಿಗಳು-ಕೆ.ತಿರುನಾವು, ಗಣೇಶ್ ದೊಡ್ಡಮನಿ, ಸ್ಥಳ-ಪಾಶ್ ವೇವ್ಸ್ ಆರ್ಟ್ ಗ್ಯಾಲರಿ, ರಾಮಮಂದಿರ ಹತ್ತಿರ, ರಾಜಾಜಿನಗರ, ಸಂಜೆ 4.30 (ಜ.3ರವರೆಗೆ ಪ್ರದರ್ಶನ ಇರಲಿದೆ)

'ಬೀಚಿ ಹೌಸ್' ಮತ್ತು 'ಬೀಚಿ ರಸಾಯನ' ನಾಟಕಗಳ ಪ್ರದರ್ಶನ:ಆಯೋಜನೆ-ಡ್ರಾಮಾಟ್ರಿಕ್ಸ್, ಸ್ಥಳ-ಅಶ್ವಥ್ ಕಲಾ ಭವನ, ಎನ್.ಆರ್.ಕಾಲೊನಿ, ಸಂಜೆ 4.30 ಮತ್ತು ಸಂಜೆ 7

2022ರ ಕ್ಯಾಲೆಂಡರ್ ಬಿಡುಗಡೆ:ಅಬಕಾರಿ ಸಚಿವ ಕೆ.ಗೋಪಾಲಯ್ಯ, ಅತಿಥಿ-ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಭಾಷಣ-ರಾಧಾಕೃಷ್ಣ ಹೊಳ್ಳ, ಆಯೋಜನೆ-ಕಲ್ಲಹಳ್ಳಿ ಶ್ರೀನಿವಾಸಸ್ವಾಮಿ ಸೇವಾ ಸಮಿತಿ, ಸ್ಥಳ-ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ ಪೊಲೀಸ್ ಠಾಣೆ ಹತ್ತಿರ, ಸಂಜೆ 5

ರಂಗ ಹಬ್ಬ-'ಮೈಸೂರು ಮಲ್ಲಿಗೆ' ನಾಟಕ ಪ್ರದರ್ಶನ:ರಂಗರೂಪ-ರಾಜೇಂದ್ರ ಕಾರಂತ, ಆಯೋಜನೆ-ಕಲಾಗಂಗೋತ್ರಿ, ಸ್ಥಳ-ರಂಗಶಂಕರ, ಜೆ.ಪಿ.ನಗರ, ಸಂಜೆ 7.30









'ಹಿಂದೂ ಧರ್ಮ ಜೀವನ ಪದ್ಧತಿ'

ಕೆ.ಆರ್.ಪುರ: 'ಹಿಂದೂ ಧರ್ಮ ಎನ್ನುವುದು ಆಚರಣೆಗೆ ಸೀಮಿತವಾಗದೆ, ಅದೊಂದು ಜೀವನ ಪದ್ಧತಿಯಾಗಿದೆ' ಎಂದು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

ನಾಗವಾರದಲ್ಲಿ ಶ್ರೀನಾಗಲಿಂಗ ಗಣಪತಿ ದೇವಸ್ಥಾನ ಸಮಿತಿ ಏರ್ಪಡಿಸಿದ್ದ, 32 ಅಡಿಯ ಏಕಶಿಲಾ ಗಣೇಶ ವಿಗ್ರಹ ಸ್ಥಾಪನೆಯ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶ್ರೀನಾಗಲಿಂಗ ಗಣಪತಿ ದೇವಸ್ಥಾನದ ಅಧ್ಯಕ್ಷ ಬಿ.ಗೋವಿಂದರಾಜು, 'ವಿಗ್ರಹವು 32 ಅಡಿ ಎತ್ತರ ಇರಲಿದೆ. ವರ್ಷದೊಳಗೆ ಗಣೇಶ ವಿಗ್ರಹ ಉದ್ಘಾಟನೆಗೊಂಡು, ಭಕ್ತರಿಗೆ ದರ್ಶನ ಸಿಗಲಿದೆ' ಎಂದು ಹೇಳಿದರು.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ, ಸಂಸದ ಪಿ.ಸಿ.ಮೋಹನ್, ರಾಜ್ಯಸಭೆ ಸದಸ್ಯ ಕೆ.ಸಿ.ರಾಮಮೂರ್ತಿ, ಡಿ.ಎಸ್.ಮ್ಯಾಕ್ಸ್ ನಿರ್ದೇಶಕ ಎಸ್.ಪಿ.ದಯಾನಂದ ಇತರರು ಭಾಗವಹಿಸಿದ್ದರು.



ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು!




ಬನಶಂಕರಿ ಬ್ಲಾಕ್ ಕಾಂಗ್ರೆಸ್: ಅಯೂಬ್ ಅಧ್ಯಕ್ಷ


ಮಹಮ್ಮದ್ ಅಯೂಬ್

ಬೆಂಗಳೂರು: ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಬನಶಂಕರಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಎಸ್.ಮಹಮ್ಮದ್ ಅಯೂಬ್ ನೇಮಕಗೊಂಡಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಈ ನೇಮಕ ಮಾಡಿದ್ದಾರೆ.

ಶ್ರೀನಿವಾಸಮೂರ್ತಿಗೆ 'ವರ್ಷದ ಸಂಶೋಧಕ ಪ್ರಶಸ್ತಿ'



ಯಲಹಂಕ: ಸಹಕಾರನಗರದ ಲೈಫ್‌ಕೇರ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಮಧುಮೇಹ ತಜ್ಞ ಡಾ.ಎಲ್.ಶ್ರೀನಿವಾಸಮೂರ್ತಿ ಅವರಿಗೆ ಅಮೆರಿಕನ್ ಕಾಲೇಜ್ ಆಫ್ ಫಿಸಿಸಿಯನ್ಸ್ (ಭಾರತ ಘಟಕ) ಸಂಸ್ಥೆಯು 'ವರ್ಷದ ಸಂಶೋಧಕ ಪ್ರಶಸ್ತಿ' ನೀಡಿ ಗೌರವಿಸಿದೆ.

ಸಂಶೋಧನಾ ಕ್ಷೇತ್ರಕ್ಕೆ ನೀಡಿದ ಕೊಡುಗೆ ಹಾಗೂ ಕ್ಲಿನಿಕಲ್ ಸಂಶೋಧನೆಯಲ್ಲಿ ಅಳವಡಿಸಿರುವ ನೂತನ ಮಾನದಂಡಗಳನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ಬಿಜೆಪಿ, ಜೆಡಿಎಸ್ ನಾಯಕರು ಕಾಂಗ್ರೆಸ್‌ಗೆ'

ಬೆಳಗಾವಿ: 'ಮುಂಬರುವ ದಿನಗಳಲ್ಲಿ ಬಿಜೆಪಿ ಮತ್ತು ಜೆಡಿಎಸ್‌ನ ಪ್ರಭಾವಿ ನಾಯಕರು ಕಾಂಗ್ರೆಸ್ ಸೇರಲಿದ್ದಾರೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಹೇಳಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ಫಲಿತಾಂಶವು ರಾಜ್ಯದ ಜನತೆ ಕಾಂಗ್ರೆಸ್‌ನತ್ತ ವಾಲುತ್ತಿರುವುದಕ್ಕೆ ಸಾಕ್ಷಿಯಾಗಿದೆ' ಎಂದರು.



ಪ್ರಜಾವಾಣಿ

ಪ್ರಜಾವಾಣಿ ಸಾಧಕರು 2022



ಸಮಾಜಸೇವೆಯಲ್ಲಿ ತೊಡಗಿ ಬದುಕಿನ ಗುರಿ, ಕನಸು ಸಾಕಾರಗೊಳಿಸಿಕೊಂಡ 22 ಸಾಧಕರನ್ನು 2022ರ ವರ್ಷಾರಂಭದ ಈ ಹೊತ್ತಿನಲ್ಲಿ 'ಪ್ರಜಾವಾಣಿ' ಪರಿಚಯಿಸುತ್ತಿದೆ. ಸಾಧನೆಗೆ ಬೇಕಿರುವುದು ಸ್ಪಷ್ಟ ಗುರಿ ಅದನ್ನು ಮುಟ್ಟುವ ಸಂಕಲ್ಪಕ್ಕೆ ಈ ಸಾಧಕರು ನಿದರ್ಶನ.

ಸ್ತನ ಕ್ಯಾನ್ಸರ್ ಪತ್ತೆ ಮನೆಯಲ್ಲಿಯೇ ಸಾಕಾರ

- ಹೆಸರು: ಗೀತಾ ಮಂಜುನಾಥ್
- ವೃತ್ತಿ: ನವೋದ್ಯಮಿ ('ನಿರಾಮಯಿ' ಸಂಸ್ಥೆ ಸಿಇಒ)
- ಸಾಧನೆ: ಸ್ತನ ಕ್ಯಾನ್ಸರ್ ಪತ್ತೆಗೆ ಸಾಧನ ಆವಿಷ್ಕಾರ

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಪ್ರತಿ 12 ಮಹಿಳೆಯರಲ್ಲಿ ಒಬ್ಬರಿಗೆ ಸ್ತನ ಕ್ಯಾನ್ಸರ್‌ನ ಅಪಾಯವಿದೆ. ಸ್ತನ ಕ್ಯಾನ್ಸರ್ ಪತ್ತೆಗೆ ನಡೆಸುವ ಮ್ಯಾಮೋಗ್ರಫಿ ದುಬಾರಿ ಆಗಿರುವುದರಿಂದ ಬಹುತೇಕ ಮಹಿಳೆಯರು ಪರೀಕ್ಷೆಗೆ ಹಿಂದೇಟು ಹಾಕುತ್ತಾರೆ. ಮ್ಯಾಮೋಗ್ರಫಿ ಪರೀಕ್ಷೆ ಮಾಡದೆಯೇ ಕೇವಲ ಐದು ನಿಮಿಷದಲ್ಲಿಯೇ ಸ್ತನ ಕ್ಯಾನ್ಸರ್ ಪರೀಕ್ಷೆ ಮಾಡುವ ನೂತನ ವಿಧಾನವನ್ನು 'ನಿರಾಮಯಿ' ಸಂಸ್ಥೆಯ ಮೂಲಕ ಗೀತಾ ಮಂಜುನಾಥ್ ಆವಿಷ್ಕಾರ ಮಾಡಿದ್ದಾರೆ. ಇದಕ್ಕಾಗಿ ಪ್ರತ್ಯೇಕ ತಂತ್ರಾಂಶ ಹಾಗೂ ಸಾಧನವನ್ನು ಇವರ ನೇತೃತ್ವದ ತಂಡ ಅಭಿವೃದ್ಧಿಪಡಿಸಿದೆ.

ಥರ್ಮಲ್ ಇಮೇಜ್ ಮೂಲಕ 0.5 ಸೆಂ.ಮೀ. ಗಾತ್ರದ ಕ್ಯಾನ್ಸರ್ ಗಡ್ಡೆಯನ್ನೂ ಪತ್ತೆ ಮಾಡಲಾಗುತ್ತಿದೆ. ಈ ಪರೀಕ್ಷಾ ವಿಧಾನದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಲಾಗಿದೆ. ವ್ಯಕ್ತಿಯ ದೇಹದಲ್ಲಿನ 4 ಲಕ್ಷ ಉಷ್ಣದ ಅಣುವನ್ನು ಸಾಧನ ಗ್ರಹಿಸಲಿದ್ದು, ಇದನ್ನು ನಿರಾಮಯಿ ತಂತ್ರಾಂಶ ವಿಶ್ಲೇಷಣೆಗೆ ಒಳಪಡಿಸಲಿದೆ. ಈ ಎಲ್ಲ ಪ್ರಕ್ರಿಯೆ ನಡೆದು, ವರದಿ ನೀಡಲು 15 ನಿಮಿಷ ಸಾಕು.



ಈ ಪರೀಕ್ಷೆಯನ್ನು ರಾಜ್ಯದ ವಿವಿಧ ಆಸ್ಪತ್ರೆಗಳು ಹಾಗೂ ನರ್ಸಿಂಗ್ ಹೋಂಗಳಲ್ಲಿ ಪರಿಚಯಿಸಲಾಗಿದೆ. ಇದಕ್ಕೆ ಕೇಂದ್ರ ಆರೋಗ್ಯ ಸಚಿವಾಲಯದಿಂದ ಅನುಮೋದನೆ ದೊರೆತಿದೆ. ಈ ಆವಿಷ್ಕಾರದ ನೆರವಿನಿಂದ ಗ್ರಾಮೀಣ ಪ್ರದೇಶದಲ್ಲಿ ಸಾವಿರಾರು ಮಹಿಳೆಯರಿಗೆ ಉಚಿತವಾಗಿ ತಪಾಸಣೆ ನಡೆಸಿದ್ದಾರೆ. ಕೋವಿಡ್ ಕಾಣಿಸಿಕೊಂಡ ಬಳಿಕ ಮನೆಗಳಲ್ಲಿಯೇ ಸ್ತನ ಕ್ಯಾನ್ಸರ್ ತಪಾಸಣೆ ಮಾಡುವ ವ್ಯವಸ್ಥೆ ರೂಪಿಸಿದ್ದಾರೆ.

ಈ ಆವಿಷ್ಕಾರಕ್ಕೆ ಕೇಂದ್ರ ಸರ್ಕಾರದ 'ರಾಷ್ಟ್ರೀಯ ನವೋದ್ಯಮ ಪ್ರಶಸ್ತಿ', 'ಸ್ಟಾರ್ಟ್‌ಅಪ್ ಇಂಡಿಯಾ', ರಾಜ್ಯ ಸರ್ಕಾರದ ಐಟಿ–ಬಿಟಿ ಇಲಾಖೆಯ 'ಎಲಿವೇಟ್100' ಸೇರಿದಂತೆ ವಿವಿಧ ಪುರಸ್ಕಾರಗಳು ಸಂದಿವೆ. ❖

ನೊಂದವರಿಗೆ ನೆರವಾಗುವ ದಶ್ಮಿ

- ಹೆಸರು: ದಶ್ಮಿ ರಾಣಿ
- ವೃತ್ತಿ: ವಿಜ್ಞಾನ ಶಿಕ್ಷಕಿ
- ಸಾಧನೆ: ಸಮಾಜ ಸೇವೆ ಬಡ ಕುಟುಂಬಗಳಿಗೆ ನೆರವು

ಕೋವಿಡ್ ಕಾಲದಲ್ಲಿ ನೊಂದವರ ನೋವಿಗೆ ಮಿಡಿದವರು ದಶ್ಮಿ. ವೃತ್ತಿಯಲ್ಲಿ ವಿಜ್ಞಾನ ಶಿಕ್ಷಕಿಯಾಗಿರುವ ಅವರಿಗೆ ಬೈಕ್ ಓಡಿಸುವುದೆಂದರೆ ಬಲು ಪ್ರೀತಿ.

ರಾಯಲ್ ಎನ್‌ಫೀಲ್ಡ್ ಇಂಟರ್‌ಸೆಪ್ಟರ್ 650 ಸಿಸಿ ಬೈಕ್‌ನಲ್ಲಿ ನೂರಾರು ಕಿ.ಮೀ. ಸಂಚರಿಸಿ ಕೋವಿಡ್‌ಯೇತರ ರೋಗಿಗಳಿಗೆ ಔಷಧವನ್ನು ಒದಗಿಸಿದ್ದ ಅವರು, ಮನೆ ಆರೈಕೆಯಲ್ಲಿರುವ ಬೆಂಗಳೂರಿನ ನಿವಾಸಿಗಳಿಗೆ ಆಹಾರದ ಪೊಟ್ಟಣಗಳನ್ನೂ ಪೂರೈಸಿದ್ದರು. ಕುಗ್ರಾಮಗಳಲ್ಲಿ ನೆಲೆಸಿರುವ ವೃದ್ಧರು ಹಾಗೂ 50 ಬಡ ಕುಟುಂಬಗಳಿಗೆ ಅಗತ್ಯ ಔಷಧ ತಲುಪಿಸಿದ್ದಲ್ಲದೆ, ಸಾವಿರ ಮಂದಿಗೆ ಸ್ಯಾನಿಟರಿ ಪ್ಯಾಡ್ ಹಾಗೂ 50 ಕುಟುಂಬಗಳಿಗೆ ದಿನಸಿ ಕಿಟ್ ಅನ್ನು ವಿತರಿಸಿದ್ದರು.

ಕೋವಿಡ್ ಸಂದಿಗ್ಧ ಪರಿಸ್ಥಿತಿಯಲ್ಲಿ ಪತಿ ಹಾಗೂ ಮಕ್ಕಳ ಜೊತೆ ಮನೆಯಲ್ಲಿಯೇ ಉಳಿಯದ ದಶ್ಮಿ, ವಿಶೇಷ ಕಾರ್ಯದಲ್ಲಿ ತೊಡಗಿಕೊಳ್ಳಲು ತೀರ್ಮಾನಿಸಿದ್ದರು. ಕೊರೊನಾ ಮೊದಲ ಅಲೆಯ ವೇಳೆ ಕೋವಿಡ್ ಸೇನಾನಿಯಾಗಿ ಕೆಲಸ ಮಾಡಿದ್ದ ಅವರು ಎರಡನೇ ಅಲೆ ವೇಳೆಯೂ ಕೆಲ ಸ್ವಯಂ ಸೇವಾ ಸಂಸ್ಥೆಗಳು ತಿಳಿಸಿದ ವಿಳಾಸಕ್ಕೆ ಬೈಕ್‌ನಲ್ಲೇ ಹೋಗಿ ಮನೆ ಆರೈಕೆಯಲ್ಲಿದ್ದವರಿಗೆ ಔಷಧ ಪೂರೈಸಿದ್ದರು.

ಬಿಡದಿಯ ಮಹಿಳೆಯೊಬ್ಬರು ಎಚ್‌ಐವಿಯಿಂದ ಬಳಲುತ್ತಿದ್ದರು. ಅವರಿಗೆ ತುರ್ತಾಗಿ ಅಗತ್ಯವಿದ್ದ ಔಷಧವನ್ನು ರಾಮನಗರದಿಂದ ತಂದು ಕೊಟ್ಟಿದ್ದರು. ಒಮ್ಮೆ ತುಮಕೂರಿನ ಕುಣಿಗಲ್ ರಸ್ತೆಯಲ್ಲಿರುವ ಗೂಳೂರಿಗೂ ಹೋಗಿ ವ್ಯಕ್ತಿಯೊಬ್ಬರಿಗೆ ಔಷಧ ತಲುಪಿಸಿದ್ದರು. ❖

'ಹಾಫ್ ಟೀ' ನವೋದ್ಯಮದಿಂದ 'ಹನುಮಂತ'ನ ಉದ್ಯೋಗ ಸೃಷ್ಟಿ

ಟೀ ಪ್ರಿಯರಿಗೆ 200ಕ್ಕೂ ಹೆಚ್ಚು ವಿಧದ ಟೀ ರುಚಿ ನೀಡುವ ಉದ್ದೇಶಕ್ಕೆ ನವೋದ್ಯಮದ ರೂಪ ನೀಡಿರುವ ಹಾವೇರಿಯ ಯುವಕ ಜಿ.ಸಿ. ಹನುಮಂತ್ ಬೆಂಗಳೂರಿನಲ್ಲಿ 'ಹಾಫ್ ಟೀ' ಹೆಸರಿನ ಕೆಫೆ ಲೋಕ ಸೃಷ್ಟಿಸಿದ್ದಾರೆ. ಎಂಜಿನಿಯರ್ ಪದವೀಧರರಾದ ಹನುಮಂತ್, ತಂದೆ ನಡೆಸುತ್ತಿದ್ದ ಟೀ ಅಂಗಡಿಯನ್ನೇ ಪ್ರೇರಣೆಯಾಗಿಟ್ಟುಕೊಂಡು ಈ ನವೋದ್ಯಮ ಆರಂಭಿಸಿದರು.

- ಹೆಸರು: ಜಿ.ಸಿ.ಹನುಮಂತ್
- ವೃತ್ತಿ: ನವೋದ್ಯಮ ('ಹಾಫ್ ಟೀ' ಕೆಫೆ ಸಂಸ್ಥೆ ಸ್ಥಾಪಕ)
- ಸಾಧನೆ: ಟೀ ಮಾರಾಟಕ್ಕೆ ಹೊಸ ರೂಪ, 200ಕ್ಕೂ ಅಧಿಕ ಸ್ವಾದ ಪರಿಚಯ

ಸ್ನೇಹಿತರಾದ ಚಂದನ್ ಪಟೇಲ್ ಹಾಗೂ ಸುರೇಶ್ ಕುಮಾರ್ ಜತೆಗೂಡಿ ಬೆಂಗಳೂರಿನ ಮಲ್ಲೇಶ್ವರ, ಜಾಲಹಳ್ಳಿ ಕ್ರಾಸ್ ಹಾಗೂ ದಾವಣಗೆರೆಯಲ್ಲೂ ಕೆಫೆ ಆರಂಭಿಸಿದ್ದಾರೆ. ಇವರ ಹಾಫ್ ಟೀ ಕೆಫೆಯಿಂದ 10ಕ್ಕೂ ಹೆಚ್ಚು ಮಂದಿಗೆ ಉದ್ಯೋಗ ಸಿಕ್ಕಿದೆ.



ಈಗ 'ಹಾಫ್ ಟೀ ಸಾರಥಿ' ಎನ್ನುವ ಸಂಚಾರಿ ಕೆಫೆಯನ್ನೂ ಆರಂಭಿಸಿದ್ದಾರೆ. ಸಂಚಾರಿ ಕೆಫೆಯಲ್ಲಿ 30ಕ್ಕೂ ಹೆಚ್ಚು ಸ್ವಾದದ ಟೀ ಲಭ್ಯ. ಹೆಚ್ಚು ಜನ ಸೇರುವ ಸ್ಥಳಕ್ಕೆ ತೆರಳಿ ಬಗೆ ಬಗೆಯಾದ ಟೀ ರುಚಿ ಉಣಬಡಿಸಲಾಗುತ್ತಿದೆ.

ಕನ್ನಡ ನೆಲೆಯಲ್ಲಿ ಅನ್ಯಭಾಷಿಕರು ಸುಲಭವಾಗಿ ನವೋದ್ಯಮಗಳಲ್ಲಿ ಯಶಸ್ಸು ಕಾಣುತ್ತಿದ್ದಾರೆ. ಆದರೆ, ಸ್ಥಳೀಯರಿಗೆ ಮಾರ್ಗದರ್ಶನದ ಕೊರತೆ ಇದೆ ಎಂಬುದನ್ನು ಮನಗಂಡು, ನವೋದ್ಯಮ ಆರಂಭಿಸುವ ಕನ್ನಡಿಗರಿಗೂ ದಾರಿ ತೋರುವ 'ಕಥೆ ಹೊಡಿಬೇಡ ಗುರು' ಎನ್ನುವ ಪುಸ್ತಕವನ್ನೂ ಹನುಮಂತ್ ಬರೆದಿದ್ದಾರೆ. ಇದರಲ್ಲಿ 22ಕ್ಕೂ ಹೆಚ್ಚು ಯಶಸ್ವಿ ನವೋದ್ಯಮಗಳನ್ನು ಉಲ್ಲೇಖಿಸಲಾಗಿದ್ದು, ಮತ್ತಷ್ಟು ಮಂದಿಗೆ ಉದ್ಯೋಗ ಸೃಷ್ಟಿಸುವ ಕನಸು ಹೊತ್ತಿದ್ದಾರೆ. ❖



ಅಡಿಕೆಯಿಂದ ತರಹೇವಾರಿ ಉತ್ಪನ್ನ ಸಂಶೋಧನೆ

ಕ್ರೈಸ್ಟ್ ವಿಶ್ವವಿದ್ಯಾಲಯದ ಸುಧಾರಿತ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ (ಸಿಎಆರ್‌ಡಿ) ನಿರ್ದೇಶಕ, ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿರುವ ಡಾ.ಗುರುಮೂರ್ತಿ ಹೆಗಡೆ ಅವರು ನ್ಯಾನೊ ತಂತ್ರಜ್ಞಾನದ ಮೂಲಕ ಯೋಧರು, ಸಶಸ್ತ್ರ ಪಡೆಗಳ ಸಿಬ್ಬಂದಿ ಬಳಸಬಹುದಾದಷ್ಟು ಸಾಮರ್ಥ್ಯ ಇರುವ ಬುಲೆಟ್ ಪ್ರೂಫ್ ಜಾಕೆಟ್‌ಗಳನ್ನು ಅಡಿಕೆಯಿಂದ ತಯಾರಿಸುವ ಸಂಶೋಧನೆಯಲ್ಲಿ ಯಶಸ್ಸು ಕಂಡಿದ್ದಾರೆ.

ಅಡಿಕೆಯ ನ್ಯಾನೊ ಪಾರ್ಟಿಕಲ್‌ನಿಂದ (ಕಣ) ಎಪಾಕ್ಸಿ ಫೈಬರ್ ಗಾಜು, ನೀರಿನ ಪೈಪ್, ಬ್ಯಾಟರಿ, ನೀರು ಶುದ್ಧಿಕಾರಕ ಪರಿಕರ, ಫಿನಾಯಿಲ್ ಸೇರಿದಂತೆ ವಿವಿಧ ವಸ್ತುಗಳನ್ನು ಸಿದ್ಧಗೊಳಿಸಿದ್ದಾರೆ. ಈ ಸಂಶೋಧನೆಗಳಿಗೆ ಹಕ್ಕುಸ್ವಾಮ್ಯ (ಪೇಟೆಂಟ್) ಪಡೆದುಕೊಂಡಿದ್ದಾರೆ. ನ್ಯಾನೊ ಪಾರ್ಟಿಕಲ್ ನೆರವಿನಿಂದ ಮದ್ದು ಗುಂಡು, ಮೊಬೈಲ್ ಪರದೆ, ನೀರಿನ ಬಾಟಲಿ ಸೇರಿದಂತೆ ವಿವಿಧ ವಸ್ತುಗಳ ಸಂಶೋಧನೆಯಲ್ಲೂ ನಿರತರಾಗಿದ್ದಾರೆ.

- ಹೆಸರು: ಡಾ.ಗುರುಮೂರ್ತಿ ಹೆಗಡೆ
- ವೃತ್ತಿ: ನವೋದ್ಯಮಿ
- ಸಾಧನೆ: ಅಡಿಕೆಯ ನ್ಯಾನೊ ಪಾರ್ಟಿಕಲ್‌ನಿಂದ ವಿವಿಧ ಉತ್ಪನ್ನ ಅನ್ವೇಷಣೆ

ಡಿಆರ್‌ಡಿಒ ಪ್ರಯೋಗಾಲಯದ ಸಹಯೋಗದಲ್ಲಿ ಬುಲೆಟ್ ಪ್ರೂಫ್ ಜಾಕೆಟ್‌ಗಳನ್ನು ಸಿದ್ಧಪಡಿಸಲು ತಯಾರಿ ನಡೆಸುತ್ತಿದ್ದಾರೆ.

ರಕ್ಷಣಾ ಕ್ಷೇತ್ರಕ್ಕೆ ಬಲ ನೀಡಲು ಮಾನವರಹಿತ ವಾಹನಗಳನ್ನು ಅಡಿಕೆಯ ನ್ಯಾನೊ ಕಣ ಬಳಸಿ ತಯಾರಿಸಲು ಸಂಶೋಧನೆ ನಡೆಯುತ್ತಿದ್ದು, ಇವರಿಗೆ ಕರ್ನಾಟಕ ಸರ್ಕಾರದ 'ಸರ್ ಸಿ.ವಿ. ರಾಮನ್ ಯುವ ವಿಜ್ಞಾನಿ ಪ್ರಶಸ್ತಿ' ಲಭಿಸಿದೆ.

ಈ ಹಿಂದೆ ಬಸವನಗುಡಿಯ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ ನ್ಯಾನೊ ಮೆಟಿರಿಯಲ್ಸ್ ಆ್ಯಂಡ್ ಡಿಸ್‌ಪ್ಲೇಸ್ ಕೇಂದ್ರದ ಮುಖ್ಯಸ್ಥರಾಗಿದ್ದರು. ಅಲ್ಲಿಯೂ ಇವರ ನೇತೃತ್ವದಲ್ಲಿ ಅಡಿಕೆ ಸೇರಿ ವಿವಿಧ ಕೃಷಿ ಉತ್ಪನ್ನಗಳ ಮೇಲೆ ಪ್ರಯೋಗಗಳು ನಡೆದಿದ್ದವು. ❖

ಮಕ್ಕಳಲ್ಲಿ ಸೃಜನಶೀಲತೆ ಅರಳಿಸುವ ಕಲಾಧರ್

- ಹೆಸರು: ಎಸ್. ಕಲಾಧರ್
- ವೃತ್ತಿ: ಶಿಕ್ಷಕರು
- ಸಾಧನೆ: ಸೃಜನಾತ್ಮಕ ಸೇವೆ, ಮಕ್ಕಳ ಸೃಜನಶೀಲತೆ, ವ್ಯಕ್ತಿತ್ವ ವಿಕಸನಕ್ಕೆ ನೆರವು

ಎಸ್.ಕಲಾಧರ್ ಅವರು ವೃತ್ತಿಯಿಂದ ಶಿಕ್ಷಕರು. ಸದ್ಯ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ತಾತಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಲ್ಲಿ ಸೃಜನಶೀಲ ವ್ಯಕ್ತಿತ್ವವನ್ನು ರೂಪಿಸುವಲ್ಲಿ ನಿರತರಾಗಿದ್ದಾರೆ.

ಕನ್ನಮಂಗಲ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾಗ ಮಕ್ಕಳಿಂದ ಚಿತ್ರ, ಕಥೆ, ಕವನ ಬರೆಸಿ ಅವರ ಜೀವನಾನುಭವಗಳನ್ನು ಕ್ರೋಡೀಕರಿಸಿದ್ದು ಅವರ ಹಿರಿಮೆ. ಎಂಟು ವರ್ಷದಿಂದ ಈ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ 'ಶಾಮಂತಿ' ಸರಣಿಯಲ್ಲಿ ಪ್ರಕಟವಾಗಿರುವ 8 ಪುಸ್ತಕಗಳೇ ನಿದರ್ಶನ.

ಅಂಗನವಾಡಿ ಮಕ್ಕಳು ಕನ್ನಡ ಮತ್ತು ಇಂಗ್ಲಿಷ್ ಕಲಿಕೆಗೆ ಅನುಕೂಲವಾಗುವಂತೆ ಜಿಲ್ಲಾಡಳಿತ 'ಚಿನ್ನಾರಿ ಚಾಂಪ್ಸ್' ಪುಸ್ತಕ ರೂಪಿಸಿತ್ತು. ಈ ಪುಸ್ತಕವನ್ನು ರೂಪಿಸುವ ಹೊಣೆಗಾರಿಕೆ ಹೊತ್ತಿದ್ದು ಕಲಾಧರ್ ಅವರೇ. ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿಯೂ ತೊಡಗಿಸಿಕೊಂಡಿದ್ದಾರೆ.

ಕಲಾಧರ್ ತಾವು ಕೆಲಸ ಮಾಡಿದ ಸ್ಥಳಗಳಲ್ಲೆಲ್ಲ ವಿದ್ಯಾರ್ಥಿಗಳು ಮತ್ತು ಪೋಷಕರಿಂದ 'ಅತ್ಯುತ್ತಮ ಶಿಕ್ಷಕ' ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಪಾಠದ ನಡುವೆಯೇ ಮಕ್ಕಳಿಗೆ ಮಾತನಾಡಲು ಅವಕಾಶ ನೀಡುತ್ತಾರೆ. ಆ ಪಾಠಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಅನುಭವವನ್ನು ಆ ಕ್ಷಣದಲ್ಲಿಯೇ ಹೆಕ್ಕಿ ತೆಗೆಯುವ ಕಲೆ ಅವರಿಗೆ ಸಿದ್ಧಿಸಿದೆ.

ಶಾಲೆಯನ್ನು ಕಟ್ಟುವ ಮತ್ತು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಬೆಳೆಸಲು ಅವರು ಸಮುದಾಯದ ಸಹಕಾರವನ್ನೂ ಪಡೆಯುತ್ತಾರೆ. 'ಮಕ್ಕಳಲ್ಲಿರುವ ಸೃಜನಶೀಲತೆಯನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ಇದು ಅವರ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿ ಯಾಗುತ್ತದೆ. ಪೋಷಕರು ಕೂಡಾ ಇದರ ಜವಾಬ್ದಾರಿ ಹೊರಬೇಕು' ಎನ್ನುವುದು ಅವರ ಸಲಹೆ. ❖



ಅನಾಥ ಶವ ಸಂಸ್ಕಾರ ಕಾಯಕದಲ್ಲೇ ಸಂತೃಪ್ತಿ

- ಹೆಸರು: ಆಶಾ
- ವೃತ್ತಿ: ಸಮಾಜಸೇವೆ ('ಜೀವ ರಕ್ಷಾ ಚಾರಿಟಬಲ್ ಟ್ರಸ್ಟ್ ಸ್ಥಾಪಕರಲ್ಲಿ ಒಬ್ಬರು)
- ಸಾಧನೆ: ಅನಾಥ ಶವಗಳ ಸಂಸ್ಕಾರ

ಆಶಾ ಅವರದು ರಾಮನಗರ ಜಿಲ್ಲೆಯ ಚನ್ನಪಟ್ಟಣ. ಅನಾಥ ಶವಗಳಿಗೆ ಅಂತ್ಯಸಂಸ್ಕಾರ ಮಾಡುವುದು ನಿತ್ಯದ ಕಾಯಕ. ಈ ಸೇವೆಯಲ್ಲಿಯೇ ಭಗವಂತನನ್ನು ಕಾಣುತ್ತಿರುವ ತೃಪ್ತಿ ಅವರಲ್ಲಿದೆ.

ಜಿಲ್ಲೆಯಲ್ಲಿ ಎಲ್ಲಿಯೇ ಅನಾಥ, ವಾರಸುದಾರರು ಇಲ್ಲದ ಶವ ಸಿಕ್ಕರೂ ಪೊಲೀಸರಿಂದ ಅವರಿಗೆ ದೂರವಾಣಿ ಕರೆ ಹೋಗುತ್ತದೆ. ಮಂಡ್ಯದಿಂದ ಕೆಂಗೇರಿಯವರೆಗೆ ರೈಲ್ವೆ ಹಳಿಗಳ ಮೇಲೆ ಛಿದ್ರವಾಗಿದ್ದ ಅದೆಷ್ಟೋ ಶವಗಳ ಸಂಸ್ಕಾರ ನೆರವೇರಿಸಿದ್ದಾರೆ. ಜೀವ ರಕ್ಷಾ ಚಾರಿಟಬಲ್ ಟ್ರಸ್ಟ್ ಮೂಲಕ ಸಮಾನ ಮನಸ್ಕರ ಜೊತೆಗೂಡಿ ಸಮಾಜ ಸೇವೆಯಲ್ಲಿ ಕಾರ್ಯತತ್ಪರರಾಗಿದ್ದಾರೆ.

ಕೋವಿಡ್ ಎರಡನೇ ಅಲೆಯಲ್ಲಿ ಅನಾಥ ಶವಗಳ ಸಂಸ್ಕಾರ ಮಾಡಿದ್ದು ಅವರ ಹೆಗ್ಗಳಿಕೆ. ಸೋಂಕಿನಿಂದ ಮೃತಪಟ್ಟವರ ಅಂತ್ಯಕ್ರಿಯೆಗೆ ಸ್ವತಃ ರಕ್ತ ಸಂಬಂಧಿಕರೂ ಮುಂದೆ ಬರುತ್ತಿರಲಿಲ್ಲ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ತಾವೇ ಪಿಪಿಇ ಕಿಟ್ ಧರಿಸಿ ಸಾಕಷ್ಟು ಸೋಂಕಿತರ ಅಂತ್ಯಸಂಸ್ಕಾರ ಮಾಡಿದ್ದೂ ಉಂಟು.

ಆಸ್ಪತ್ರೆಗಳಿಂದ ಕರೆ ಬಂದ ತಕ್ಷಣವೇ ತಾವೇ ಹೋಗಿ ಸೋಂಕಿತರ ಅಂತ್ಯಸಂಸ್ಕಾರ ನೆರವೇರಿಸಿ ಜನರ ಮೆಚ್ಚುಗೆಗೆ ಪಾತ್ರರಾದರು.

ಸಂಸ್ಥೆಯೊಂದು ಇವರ ಸೇವೆ ಮೆಚ್ಚಿ ಆಂಬುಲೆನ್ಸ್ ಅನ್ನು ಕೊಡುಗೆ ನೀಡಿದೆ. ಸಂಘ–ಸಂಸ್ಥೆಗಳುಅವರ ಸಮಾಜಮುಖಿ ಸೇವೆಯನ್ನು ಗೌರವಿಸಿವೆ. ಅನೇಕ ಅಶಕ್ತ ಕುಟುಂಬಗಳಿಗೆ ನೆರವಾಗಿರುವ ಸಂತೃಪ್ತಿಯೂ ಅವರಿಗಿದೆ. ಅನಾಥರಿಗೆ ರಾಮನಗರದ ಬಿಳಗುಂಬ ಬಳಿ ತೆರೆದಿರುವ 'ಪ್ರಕೃತಿ ಮಡಿಲು' ಹೆಸರಿನ ಆಶ್ರಮದ ಸಂಸ್ಥಾಪಕಿಯೂ ಹೌದು. ❖





ಅಂಧರ ಪಾಲಿಗೆ ಗಾಯಿತ್ರಿ ಬೆಳಕು

ಗಾಯಿತ್ರಿ ನಾರಾಯಣ್ ತುಮಕೂರು ಜಿಲ್ಲೆಯ ಮಧುಗಿರಿ ಪಟ್ಟಣದವರು. ನೂರಾರು ಅಂಧರ ಬಾಳಿಗೆ ಬೆಳಕಾಗಿರುವುದು ಅವರ ಹಿರಿಮೆ. ಅವರ ಈ ಸೇವೆಗೆ ಈಗ ರಜತ ವರ್ಷದ ಸಂಭ್ರಮ.

ನೇತ್ರದಾನ, ಅಂಗಾಂಗಗಳ ದಾನದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಮೃತದೇಹಗಳಿಂದ 700ಕ್ಕೂ ಹೆಚ್ಚು ನೇತ್ರಗಳನ್ನು ಸಂಗ್ರಹಿಸಿ ವಿವಿಧ ನೇತ್ರ ಕೇಂದ್ರಗಳಿಗೆ ಕಳುಹಿಸಿಕೊಟ್ಟ ತೃಪ್ತಿಯೂ ಅವರಲ್ಲಿದೆ. ವೈದ್ಯರಲ್ಲದಿದ್ದರೂ ಕಣ್ಣು ಬೇರ್ಪಡಿಸುವುದರಲ್ಲಿ ಪರಿಣತಿ ಪಡೆದಿದ್ದಾರೆ. ಕಣ್ಣು ಬೇರ್ಪಡಿಸುವ ತರಬೇತಿ ಪಡೆದ ನಂತರ 200ಕ್ಕೂ ಹೆಚ್ಚು ಮೃತದೇಹಗಳಿಂದ ಕಣ್ಣುಗಳನ್ನು ಹೊರತೆಗೆದು ನೇತ್ರ ಕೇಂದ್ರಗಳಿಗೆ ನೀಡಿದ್ದಾರೆ.

- ಹೆಸರು: ಗಾಯಿತ್ರಿ ನಾರಾಯಣ್
- ವೃತ್ತಿ: ಸಮಾಜಸೇವೆ
- ಸಾಧನೆ:ನೇತ್ರ, ಅಂಗಾಂಗಗಳ ದಾನ ಕುರಿತು ಜಾಗೃತಿ

ವರದಾಯಿನಿ ಸೇವಾ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆಯೂ ಹೌದು. ಪ್ರಚಾರ, ಪ್ರಶಸ್ತಿಗಳಿಂದ ಅವರು ಬಹುದೂರ. ಟ್ರಸ್ಟ್ ಮೂಲಕ ಸರ್ಕಾರಿ ಆಸ್ಪತ್ರೆಗಳಿಗೆ ಯಂತ್ರೋಪಕರಣ, ಬಡ ಹೆಣ್ಣುಮಕ್ಕಳಿಗೆ ಹೊಲಿಗೆ ಯಂತ್ರ ಕೊಡಿಸಿದ್ದಾರೆ.

ಓದಿರುವುದು ಎಸ್ಸೆಸ್ಸೆಲ್ಸಿವರೆಗಷ್ಟೇ. ಸಾಧನೆಯಲ್ಲಿ ಅವರದು ಎತ್ತರದ ಸ್ಥಾನ. ಶಾಲಾ, ಕಾಲೇಜುಗಳಿಗೆ ಭೇಟಿ ನೀಡಿ ನೇತ್ರದಾನದ ಮಹತ್ವ ಕುರಿತು ಅರಿವು ಮೂಡಿಸುತ್ತಿದ್ದಾರೆ. ಜಿಲ್ಲೆಯಲ್ಲಷ್ಟೇ ಅಲ್ಲದೆ ಆಂಧ್ರಪ್ರದೇಶದ ಅನಂತಪುರ, ಹಿಂದೂಪುರ, ಮಡಕಶಿರಾ ಭಾಗದಲ್ಲೂ ಮೃತರ ಕಣ್ಣುಗಳನ್ನು ಹೊರತೆಗೆದು ನೇತ್ರ ಕೇಂದ್ರಗಳಿಗೆ ರವಾನಿಸಿದ್ದಾರೆ.

ಮಧುಗಿರಿಯ ಏಕಶಿಲಾ ಬೆಟ್ಟಕ್ಕೆ ರೋಪ್ ವೇ ಅಳವಡಿಸುವಂತೆ ಒತ್ತಾಯಿಸಿ 35 ಸಾವಿರ ಜನರ ಸಹಿ ಸಂಗ್ರಹ ಮಾಡಿ ರಾಜ್ಯಪಾಲರಿಗೆ ಮನವಿ ಕೂಡ ಸಲ್ಲಿಸಿದ್ದಾರೆ. ❖

ತೈವಾನ್ ಸೀಬೆ ತಂದ ಸಂಭ್ರಮ

- ಹೆಸರು: ಸಂತೋಷ್
- ವೃತ್ತಿ: ಎಂಜಿನಿಯರಿಂಗ್
- ಸಾಧನೆ: ತೋಟಗಾರಿಕೆ ಕ್ಷೇತ್ರ, ತೈವಾನ್ ಸೀಬೆ ಕೃಷಿಯಲ್ಲಿ ಗಣನೀಯ ಸಾಧನೆ

ಸಂತೋಷ್ ಹುಟ್ಟಿದ್ದು ರೈತ ಕುಟುಂಬದಲ್ಲಿಯೇ. ಓದಿದ್ದು ಮೆಕ್ಯಾನಿಕಲ್ ಎಂಜಿನಿಯರಿಂಗ್. ತನ್ನಲ್ಲಿದ್ದ ಪ್ರತಿಭೆಗೆ ಕೈತುಂಬ ಸಂಬಳ ನೀಡುವ ಖಾಸಗಿ ಕಂಪನಿಯಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಲು ಅವರಿಗೇನು ಕಷ್ಟವಾಗಲಿಲ್ಲ.

ಪದವಿಯಲ್ಲಿ ಇರುವಾಗಲೇ ಕನಸು ಕಂಡಿದ್ದ ಕೆಲಸಕ್ಕೆ ಸೇರಿದ್ದೂ ಆಯಿತು. ಆದರೆ, ಅಲ್ಲಿನ ಯಂತ್ರಗಳ ಚಲನೆಗೆ ತಕ್ಕಂತೆ ಅವರ ಮನಸ್ಸು ಮಾತ್ರ ಚಲಿಸಲಿಲ್ಲ. ತಾಂತ್ರಿಕ ನೈಪುಣ್ಯ ಸಾಧಿಸಿದ್ದ ಅವರು ಕೊನೆಗೆ ಮೇಟಿ ವಿದ್ಯೆಯೇ ಲೇಸೆಂದು ಕೃಷಿಯತ್ತ ಹೊರಳಿದಾಗ ಕುಟುಂಬಕ್ಕೂ ಅಚ್ಚರಿ ಕಾದಿತ್ತು.

ದೇವನಹಳ್ಳಿ ತಾಲ್ಲೂಕಿನ ನೀರಿನ ಕೊರತೆಯಿದೆ. ಮತ್ತೊಂದೆಡೆ ಮಾರ್ಗದರ್ಶನದ ಕೊರತೆಯಿಂದ ಕೃಷಿ ಕ್ಷೇತ್ರ ತ್ಯಜಿಸಿ ನಗರ ಪ್ರದೇಶಗಳತ್ತ ಯುವಜನರು ಗುಳೆ ಹೊರಟಿರುವುದು ಗುಟ್ಟೇನಲ್ಲ. ಸಂತೋಷ್ ಇದಕ್ಕೆ ಅಪವಾದ. ಹಳ್ಳಿಗೆ ಬಂದು ತೋಟಗಾರಿಕೆಯಲ್ಲಿ ತೊಡಗಿಸಿಕೊಂಡು ಉತ್ತಮ ಆದಾಯಗಳಿಸುವ ಮೂಲಕ ಎಲ್ಲರಿಗೂ ಮಾದರಿಯಾಗಿದ್ದಾರೆ. ಅವರ ಪರಿಶ್ರಮಕ್ಕೆ ಜಮೀನಿನಲ್ಲಿ ಈಗ ತೈವಾನ್ ಸೀಬೆ ಗಿಡಗಳು ಸಮೃದ್ಧವಾಗಿ ಬೆಳೆದು ನಿಂತಿವೆ.

ಬಯಲುಸೀಮೆಯಲ್ಲಿ ಅಪರೂಪವಾಗಿರುವ ಬೆಳೆ ಬೆಳೆಯುವುದರಲ್ಲಿ ಅವರಿಗೆ ವಿಶೇಷ ಆಸಕ್ತಿ. ಕಲಬುರಗಿ, ಹಗರಿಬೊಮ್ಮನಹಳ್ಳಿ ಮುಂತಾದೆಡೆ ತರಬೇತಿ ಪಡೆದು ಪ್ರಾಯೋಗಿಕವಾಗಿ 24 ಗುಂಟೆ ಜಮೀನಿನಲ್ಲಿ ತೈವಾನ್ ಸೀಬೆ ಸಸಿಗಳನ್ನು ನೆಟ್ಟರು. ಬಳಿಕ ಕೋಲ್ಕತ್ತದಿಂದ ಸಸಿಗಳನ್ನು ತಂದು ಇನ್ನೂ ಒಂದು ಎಕರೆಗೆ ಕೃಷಿ ವಿಸ್ತರಿಸಿದರು. ಇದಕ್ಕಾಗಿ ವ್ಯಯಿಸಿದ ಬಂಡವಾಳ ಕೇವಲ 1.5 ಲಕ್ಷ. ಲಾಕ್‌ಡೌನ್ ಸಮಯದಲ್ಲೂ ₹ 26 ಲಕ್ಷಕ್ಕೂ ಹೆಚ್ಚು ಆದಾಯಗಳಿಸಿದ ಖುಷಿ ಅವರದು. ಕೃಷಿ ಎಂದಾಕ್ಷಣ ಮೂಗು ಮುರಿಯುವ ಯುವಜನರಿಗೆ ಅವರ ಬದುಕು ಮಾದರಿ ಎಂದರೆ ಅತಿಶಯೋಕ್ತಿಯಲ್ಲ. ❖



ಹಾನಬಾಳ್ ಚಿಕ್ಕಿಗೆ ಬ್ರಾಂಡ್ ರೂಪ, 32 ಸ್ವಾದ

ಬೆಂಗಳೂರಿನ ಕಾರ್ಪೊರೇಟ್ ಕಂಪನಿಗಳಲ್ಲಿ ದೊಡ್ಡ ಉದ್ಯೋಗದಲ್ಲಿದ್ದ ಸಕಲೇಶಪುರ ತಾಲ್ಲೂಕಿನ ಹಾನಬಾಳ್ ಗ್ರಾಮದ ರವಿತೇಜ ಈಗ 25 ತಮ್ಮ ಹುಟ್ಟೂರಿನಲ್ಲಿ 'ಹಾನಬಾಳ್ ಚಿಕ್ಕಿ' ಎಂಬ ಕೈಗಾರಿಕೆ ತೆರೆದು ಉದ್ಯಮಿಯಾಗಿದ್ದಾರೆ.



ಎಲೆಕ್ಟ್ರಾನಿಕ್ ಆ್ಯಂಡ್ ಕಮ್ಯುನಿಕೇಷನ್‌ನಲ್ಲಿ ಡಿಪ್ಲೊಮಾ ಮುಗಿಸಿದ ರವಿತೇಜ, ಬೆಂಗಳೂರಿನತ್ತ ಮುಖ ಮಾಡಿದರು. ವಿದ್ಯಾಭ್ಯಾಸ ಮುಂದುವರಿಸುವ ಜೊತೆಗೆ ಹಂತ–ಹಂತವಾಗಿ ವೃತ್ತಿಯಲ್ಲಿ ಮೇಲೆ ಬಂದರು. ಬಾಷ್ ಕಂಪನಿಯಲ್ಲಿ ವ್ಯವಸ್ಥಾಪಕರಾಗುವ ಮಟ್ಟಕ್ಕೆ ಬೆಳೆದರು. ವಿ ಗಾರ್ಡ್ ಇಂಡಸ್ಟ್ರೀಸ್‌ನಲ್ಲೂ ರಾಜ್ಯಮುಖ್ಯಸ್ಥರಾಗಿ ಕೆಲಸ ಮಾಡಿದ್ದಾರೆ.

- ಹೆಸರು: ರವಿತೇಜ
- ವೃತ್ತಿ: ನವೋದ್ಯಮಿ (ಹಾನಬಾಳ್ ಚಿಕ್ಕಿ ಕಂಪನಿ)
- ಸಾಧನೆ: ಹಾನಬಾಳ್ ಚಿಕ್ಕಿಗೆ ಬ್ರ್ಯಾಂಡ್ ರೂಪು ನೀಡಿ ಉದ್ಯಮಿಯಾದರು

ಸ್ವಂತ ಕಂಪನಿ ತೆರೆಯಬೇಕೆಂದು ಮನದೊಳಗೆ ಮೊಳೆತಿದ್ದ ಕನಸನ್ನು ಕಡ್ಲೆ ಮಿಠಾಯಿ (ಚಿಕ್ಕಿ) ತಯಾರಿಸುವ ಕೈಗಾರಿಕೆಯನ್ನು ತೆರೆಯುವ ಮೂಲಕ ಸಾಕಾರಗೊಳಿಸಿದರು.

90ರ ದಶಕದ ಮಕ್ಕಳಿಗೆ ಬಲು ಇಷ್ಟದ ತಿನಿಸಾಗಿದ್ದ ಚಿಕ್ಕಿಯನ್ನು ಇಂದಿನ ಜಮಾನಕ್ಕೂ ವಿಭಿನ್ನವಾಗಿ ಪರಿಚಯಿಸುವ ಪ್ರಯತ್ನವನ್ನು ರವಿತೇಜ ಮಾಡಿದ್ದಾರೆ. ಕಡ್ಲೆ (ಶೇಂಗಾ) ಮತ್ತು ಬೆಲ್ಲ ಬಳಸಿ ತಯಾರಿಸುವ ಚಿಕ್ಕಿಗೆ ಮಾವು, ಹಲಸು, ಕಾಫಿ ಸೇರಿ 32 ರೀತಿಯ ರುಚಿ ನೀಡಿದ್ದಾರೆ.

'ಶೇಂಗಾ ಮತ್ತು ಬೆಲ್ಲ ಬಳಸಿ ತಯಾರಿಸುವ ಚಿಕ್ಕಿ ಆರೋಗ್ಯಕರ ತಿನಿಸು. ಅದಕ್ಕೆ ಬ್ರ್ಯಾಂಡ್ ರೂಪ ನೀಡಿದ್ದರಿಂದ ಸಾಕಷ್ಟು ಬೇಡಿಕೆ ಬಂದಿದೆ. ಈ ಕಾರ್ಖಾನೆ ಜೊತೆಗೆ ಕೃಷಿಯಲ್ಲೂ ತೊಡಗಿಕೊಂಡಿದ್ದೇನೆ. ನೇರವಾಗಿ 25 ಜನರಿಗೆ ಉದ್ಯೋಗ ನೀಡಲು ಸಾಧ್ಯವಾಗಿದೆ. ಪರೋಕ್ಷವಾಗಿ ಹಲವರಿಗೆ ಉದ್ಯೋಗ ಸಿಕ್ಕಿದೆ. ವರ್ಷಕ್ಕೆ ₹1 ಕೋಟಿಗೂ ಹೆಚ್ಚು ವಹಿವಾಟು ನಡೆಸುತ್ತಿದ್ದು, ಅದರಲ್ಲಿ ಶೇ 10ರಿಂದ ಶೇ 15ರಷ್ಟು ಲಾಭ ಸಿಗುತ್ತಿದೆ' ಎಂದು ರವಿತೇಜ ಹೇಳುತ್ತಾರೆ. ❖

ಗ್ರಾಮೀಣ ಮಕ್ಕಳ ಪಾಲಿನ ಅನ್ನದಾತ



- ಹೆಸರು: ವೆಂಕಟೇಶ್
- ವೃತ್ತಿ: ಹೋಟೆಲ್ ಮಾಲೀಕ
- ಸಾಧನೆ: ಹಳ್ಳಿ ಮಕ್ಕಳಿಗೆ ಕಡಿಮೆ ದರಕ್ಕೆ ಉಪಾಹಾರ ನೆರವು

'**ಕೆರೆಯ** ನೀರನ್ನು ಕೆರೆಗೆ ಚೆಲ್ಲಿ' ಎಂಬ ಮಾತಿನಲ್ಲಿ ನಂಬಿಕೆ ಇಟ್ಟವರು ವೆಂಕಟೇಶ್. ಪ್ರಸ್ತುತ ಅವರು ತುಮಕೂರು ಜಿಲ್ಲೆಯ ತಿಪಟೂರು ನಿವಾಸಿ. ಅಲ್ಲಿಯೇ ಅವರದ್ದು ಸಣ್ಣ ಹೋಟೆಲ್ ಇದೆ. ಈ ಕಾಯಕದ ಜತೆಗೆ ಕೈಲಾದ ಮಟ್ಟಿಗೆ ಮತ್ತೊಬ್ಬರಿಗೆ ನೆರವಾಗಬೇಕು ಎಂಬುದು ಅವರ ಹಂಬಲ. ಅಕ್ಷರಶಃ ಅವರು ಗ್ರಾಮೀಣ ವಿದ್ಯಾರ್ಥಿಗಳ ಪಾಲಿನ ಅನ್ನದಾತ. ಓದಲು ನಗರಕ್ಕೆ ಬರುವ ಹಳ್ಳಿಯ ಮಕ್ಕಳಿಗೆ ₹ 10ಕ್ಕೆ ಉಪಾಹಾರ ನೀಡುತ್ತಿದ್ದಾರೆ. ಕಾರ್ತಿಕ್ ಟಿಫನ್ ಸೆಂಟರ್‌ನಲ್ಲಿ ನಿತ್ಯವೂ ನೂರಾರು ವಿದ್ಯಾರ್ಥಿಗಳು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. 12 ವರ್ಷಗಳಿಂದಲೂ ಅವರ ಈ ಸೇವೆಯು ವ್ಯತ್ಯಯಗೊಂಡಿಲ್ಲ.

ಅವರ ಹುಟ್ಟೂರು ಗುಬ್ಬಿ ತಾಲ್ಲೂಕಿನ ಗೋಳೇನಹಳ್ಳಿ. ಕುಟುಂಬದ ಆರ್ಥಿಕ ಪರಿಸ್ಥಿತಿಯಿಂದ ಎಸ್ಸೆಸ್ಸೆಲ್ಸಿ ನಂತರ ವಿದ್ಯಾಭ್ಯಾಸ ಮುಂದುವರಿಸಲು ಅವರಿಗೆ ಸಾಧ್ಯವಾಗಿಲ್ಲ. ಉದ್ಯೋಗ ಅರಸಿ ತಿಪಟೂರಿಗೆ ಬಂದು ಹೋಟೆಲೊಂದರಲ್ಲಿ ಕೆಲಸಕ್ಕೆ ಸೇರಿದರು. ಅಲ್ಲಿ 15 ವರ್ಷ ದುಡಿದರು. ನಂತರ ಚಿಕ್ಕದಾಗಿ ಸ್ವಂತ ಹೋಟೆಲ್ ಆರಂಭಿಸಿದರು. ವಿದ್ಯಾಭ್ಯಾಸದ ಸಮಯದಲ್ಲಿ ತಾವು ಅನುಭವಿಸಿದ ಕಷ್ಟ ನೆನಪಿಗೆ ಬಂತು. ಹಸಿವು ಮಕ್ಕಳ ಓದಿಗೆ ತೊಡಕಾಗಬಾರದು ಎಂಬ ಕಾರಣಕ್ಕೆ ಹೋಟೆಲ್‌ನಲ್ಲಿ ಅತ್ಯಲ್ಪ ಹಣ ಪಡೆದು ಊಟ, ತಿಂಡಿ ನೀಡಲು ಆರಂಭಿಸಿದರು.

ಆರಂಭದಲ್ಲಿ ಹೋಟೆಲ್‌ಗೆ ಬರುತ್ತಿದ್ದ ಮಕ್ಕಳ ಸಂಖ್ಯೆ 50ರಿಂದ 100 ಇತ್ತು. ದಿನ ಕಳೆದಂತೆ ಸಂಖ್ಯೆ ಹೆಚ್ಚುತ್ತಾ ಹೋಯಿತು. ಈಗ ನಿತ್ಯ 250ರಿಂದ 300 ವಿದ್ಯಾರ್ಥಿಗಳು ಬರುತ್ತಿದ್ದಾರೆ. ಹಸಿವಿನಿಂದ ಬಳಲಿ ಬಂದು ತಿಂಡಿ ತಿಂದ ನಂತರ ಅವರ ಮುಖದಲ್ಲಿ ಅರಳುವ ನಗು ಕಂಡಾಗ ವೆಂಕಟೇಶ್ ಮೊಗದಲ್ಲಿಯೂ ಸಾರ್ಥಕತೆಯ ಭಾವ ಇಣುಕುತ್ತದೆ. ❖

ಹಾಕಿ ಅಂಗಳದ ಮುತ್ತು

ಗದುಗಿನ ಪ್ರತಿಭೆ ಹರೀಶ ಸೋಮಪ್ಪ ಮುತಗಾರ. ಬಡತನಕ್ಕೆ ಬಗ್ಗದೇ, ಕಷ್ಟಗಳಿಗೆ ಕುಗ್ಗದೇ ಹಾಕಿ ಕ್ರೀಡೆಯಲ್ಲಿ ಛಾಪು ಮೂಡಿಸುತ್ತ ಮುನ್ನುಗ್ಗುತ್ತಿರುವ 22 ವರ್ಷದ ಯುವಕ. ಅಣ್ಣ ಉಮೇಶ ಮುತಗಾರ ಹಾಕಿ ಆಡುವುದನ್ನು ನೋಡಿ ಬಾಲ್ಯದಲ್ಲಿಯೇ ಆಡಲು ಆರಂಭಿಸಿದರು.



ಗದುಗಿನ ಡಿವೈಎಸ್‌ಎಸ್ ಕ್ರೀಡಾಂಗಣದಲ್ಲಿ ಬಾಲಕ ಹರೀಶ ಆಟವನ್ನು ಗಮನಿಸಿದ ಬಳ್ಳಾರಿಯ ಬೆಸ್ಟ್ ಶಾಲೆಯ ಆಯ್ಕೆಗಾರರು ತಮ್ಮ ಹಾಕಿ ತಂಡಕ್ಕೆ ಸೇರ್ಪಡೆ ಮಾಡಿಕೊಂಡರು. ಅಲ್ಲಿಂದ ಇಲ್ಲಿಯವರೆಗೆ ಫಾರ್ವರ್ಡ್ ಆಟಗಾರನಾಗಿ ಬೆಳೆದಿದ್ದಾರೆ. ನವದೆಹಲಿಯ ರಾಷ್ಟ್ರೀಯ ಹಾಕಿ ಅಕಾಡೆಮಿಯಲ್ಲಿ ಎರಡು ವರ್ಷ ತರಬೇತಿಗಾಗಿ ಇದ್ದರು. 2016ರಲ್ಲಿ ಬಾಂಗ್ಲಾದೇಶದ ಢಾಕಾದಲ್ಲಿ ನಡೆದ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದ ಭಾರತ ತಂಡದಲ್ಲಿ ಇವರ ಆಟವೂ ಪ್ರಮುಖವಾಗಿತ್ತು. 2018ರಿಂದ ಸೀನಿಯರ್ ರಾಷ್ಟ್ರೀಯ ಹಾಕಿ ಕೂಟಗಳಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದಾರೆ.

- ಹೆಸರು: ಹರೀಶ ಸೋಮಪ್ಪ ಮುತಗಾರ
- ವಿದ್ಯಾರ್ಥಿ
- ಸಾಧನೆ: ಅಂತರರಾಷ್ಟ್ರೀಯ ಹಾಕಿ ಕ್ರೀಡಾಪಟು

ಬೆಂಗಳೂರು ಕೇಂದ್ರಿಯ ವಿಶ್ವವಿದ್ಯಾಲಯ ತಂಡದ ಪ್ರಮುಖ ಆಟಗಾರನಾಗಿದ್ದಾರೆ. 2020–21ರ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಕೂಟದಲ್ಲಿ ಬೆಳ್ಳಿ ಗೆದ್ದ ತಂಡದಲ್ಲಿ ಅವರಿದ್ದರು. ರಾಷ್ಟ್ರೀಯ ವಿಶ್ವವಿದ್ಯಾಲಯ ಖೇಲೊ ಇಂಡಿಯಾ ಕೂಟದಲ್ಲಿ ಬೆಂಗಳೂರು ಕೇಂದ್ರಿಯ ವಿವಿ ಚಿನ್ನದ ಪದಕ ಜಯಿಸಲು ಇವರ ಕಾಣಿಕೆ ಇತ್ತು. ಈ ಕೂಟದಲ್ಲಿ ಅವರು 12 ಗೋಲು ಗಳಿಸಿದ್ದರು. ಇದೇ ವರ್ಷ ಪುಣೆಯಲ್ಲಿ ಕಂಚಿನ ಪದಕ ಜಯಿಸಿದ ಕರ್ನಾಟಕ ತಂಡದಲ್ಲಿಯೂ ಆಡಿದ್ದರು. ಅವರ ತಂದೆ ಸೋಮಪ್ಪ ಮತ್ತು ರತ್ನಮ್ಮ ಕೃಷಿ ಕೂಲಿಗಾರರು. ಅಣ್ಣ ಉಮೇಶ್ ಪೊಲೀಸ್ ಇಲಾಖೆಯ ತಂಡದಲ್ಲಿ ಆಡುತ್ತಾರೆ. ಹರೀಶ್ ಬೆಂಗಳೂರಿನ ಅಲ್ ಅಮೀನ್ ಕಾಲೇಜಿನಲ್ಲಿ ಬಿ.ಎ. ಮೂರನೇ ವರ್ಷದಲ್ಲಿ ಓದುತ್ತಿದ್ದಾರೆ. ❖

ಪ್ರಜಾವಾಣಿ
ಪ್ರಜಾವಾಣಿ ಸಾಧಕರು 2022

ಅಂಗವೈಕಲ್ಯದ ನಡುವೆಯೂ ಕ್ರೀಡೆಯಲ್ಲಿ 50ಕ್ಕೂ ಹೆಚ್ಚು ಪದಕ ಗಳಿಕೆ, ಬಾಧಿಸುವ ಕ್ಯಾನ್ಸರ್ ನಡುವೆಯೂ ಮರೆಯಾಗದ ಕರ್ತವ್ಯ ಪ್ರಜ್ಞೆ, ಬಡಮಕ್ಕಳ ಶಿಕ್ಷಣಕ್ಕಾಗಿ ಮಿಡಿಯುವ ಹೃದಯವಂತ, ಸಂಬಳದ ಗಳಿಕೆಯಲ್ಲಿಯೂ ಸಮಾಜಸೇವೆಗೆ ಹಣ ಕಾಯ್ದಿಡುವ ಆದ್ಯತೆ
ಸಮಾಜ ಸೇವೆ ಮತ್ತು ತೆರೆಮರೆಯ ಸಾಧನೆಗೆ ಎಷ್ಟೊಂದು ಚೇತೋಹಾರಿ ಮುಖಗಳು



ಕನ್ನಡ ಸೇವೆಗೆ ಭಾಗೀರಥಿ ಕನ್ನಡತಿ

- **ಹೆಸರು:** ಭಾಗೀರಥಿ ಕನ್ನಡತಿ
- **ವೃತ್ತಿ:** ಯೋಗ ತರಬೇತುದಾರರು
- **ಸಾಧನೆ:** ನಾಡ, ನುಡಿ ಕುರಿತು ಕನ್ನಡೇತರರಲ್ಲಿ ಜಾಗೃತಿ

ಕನ್ನಡೇತರರಿಗೆ ಕನ್ನಡ ಭಾಷೆ ಕಲಿಸುವ, ಪರಭಾಷಿಕರಲ್ಲಿ ನಾಡು–ನುಡಿಯ ಕುರಿತು 'ಪ್ರೀತಿ' ಮೂಡಿಸುವ ಭಾಗೀರಥಿ, ಹೆಸರಿನೊಂದಿಗೇ 'ಕನ್ನಡ' ಜೋಡಿಸಿಕೊಂಡು 'ಭಾಗೀರಥಿ ಕನ್ನಡತಿ' ಎಂದೇ ಗುರುತಿಸಿಕೊಂಡಿದ್ದಾರೆ.

ಹಾಸನ ಜಿಲ್ಲೆ ಕೆಂಚಮ್ಮನ ಹೊಸಕೋಟೆ (ಸಕಲೇಶಪುರ) ಕಟ್ಟಿಹೊಳೆ ಗ್ರಾಮದವರಾದ ಭಾಗೀರಥಿ, ಬೆಂಗಳೂರಿನ ಕೆ.ಆರ್. ಪುರದಲ್ಲಿ ನೆಲೆಸಿದ್ದಾರೆ. ಎಸ್ಸೆಸ್ಸೆಲ್ಸಿ ಮುಗಿಸಿದ ಬಳಿಕ ಬೆಂಗಳೂರಿಗೆ ಬಂದ ಅವರು ಈಗ, ವಿದೇಶಿಯರಿಗೆ ಆನ್‌ಲೈನ್ ಮೂಲಕ ಕನ್ನಡ ಕಲಿಸುವ 'ಕನ್ನಡತಿ', ಯೋಗ ಕಲಿಸುವ 'ಯೋಗ ಮಾ'.

2001ರಲ್ಲಿ ಎಸ್‌ಎಸ್‌ಬಿ ಸೇವಾ ಫೌಂಡೇಷನ್ ಚಾರಿಟಬಲ್ ಟ್ರಸ್ಟ್ ಆರಂಭಿಸಿದ ಭಾಗೀರಥಿ, ಶಿಕ್ಷಣ, ಆರೋಗ್ಯ, ಯೋಗ ವಿಷಯಗಳಲ್ಲಿ ಸೇವಾ ಕಾರ್ಯಗಳನ್ನು ನಡೆಸುತ್ತಿದ್ದಾರೆ. 20 ವರ್ಷಗಳಲ್ಲಿ 26 ಸಾವಿರಕ್ಕೂ ಹೆಚ್ಚು ಕನ್ನಡೇತರರಿಗೆ ಉಚಿತವಾಗಿ ಕನ್ನಡ ಹೇಳಿಕೊಟ್ಟಿದ್ದಾರೆ. 2019ರಲ್ಲಿ ದುಬೈನಲ್ಲಿ ದೈಹಿಕ ಮತ್ತು ಸಾಂಸ್ಕೃತಿಕ ತರಬೇತುಗಾರ್ತಿ (ಫಿಸಿಕಲ್ ಆ್ಯಂಡ್ ಕಲ್ಚರಲ್ ಟ್ರೈನರ್) ಕೆಲಸಕ್ಕೆ ಸೇರಿದ್ದ ಅವರು, ಕೋವಿಡ್ ಕಾರಣದಿಂದ ಕೆಲಸ ಕಳೆದುಕೊಂಡಿದ್ದರು. ಅದೇ ವೇಳೆ ಆನ್‌ಲೈನ್‌ನಲ್ಲಿ ಕೆಲವು ವಿದ್ಯಾರ್ಥಿಗಳಿಗೆ ಯೋಗ ತರಬೇತಿ ನೀಡುತ್ತಿದ್ದರು. ಆ ನಂತರ ಬ್ರಿಟನ್‌ನ 'ಕನ್ನಡಿಗರು ಯುಕೆ' ಸಂಘಟನೆಯ ಸಂಪರ್ಕದ ಮೂಲಕ ಯುಕೆ ನಿವಾಸಿಗಳಿಗೆ ಏಳೆಂಟು ತಿಂಗಳುಗಳಿಂದ ಪ್ರತಿ ವಾರ ಆನ್‌ಲೈನ್‌ನಲ್ಲಿ ಯೋಗ ಕಲಿಸುತ್ತಿದ್ದಾರೆ.

ಕೇರಳ, ಆಂಧ್ರಪ್ರದೇಶ, ಗುಜರಾತ್, ದೆಹಲಿ ರಾಜ್ಯಗಳಲ್ಲಿ ಇವರು ಯೋಗ ತರಬೇತಿ ನೀಡಿದ್ದಾರೆ. ರಷ್ಯಾ, ಪಾಕಿಸ್ತಾನ, ಫಿಲಿಪ್ಪಿನ್ಸ್, ಅಮೆರಿಕ, ಕೆನಡಾ, ಥಾಯ್ಲೆಂಡ್, ನೇಪಾಳದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಸಿಬ್ಬಂದಿಗೆ ಯೋಗ ಕಲಿಸಿದ್ದಾರೆ. ಯುಎಇಯಲ್ಲಿ ಬುದ್ಧಿಮಾಂದ್ಯ ಯುವಕರಿಗೆ ಯೋಗ ಪರಿಚಯಿಸಿದ ಮೊದಲಿಗರಿವರು. ಅಲ್ಲಿನ ಎಲ್ಲ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಸಿಬ್ಬಂದಿಗೆ ಪ್ರಸವಪೂರ್ವ ಮತ್ತು ಪ್ರಸವನಂತರದ ಯೋಗ ಕಾರ್ಯಾಗಾರ, ಸ್ಲಿಪ್ ಡಿಸ್ಕ್, ಅಸ್ತಮಾ, ಮೈಗ್ರೇನ್, ತೂಕ ಇಳಿಸುವ ಯೋಗಗಳನ್ನು ಕಲಿಸುತ್ತಿದ್ದಾರೆ.

ಒಲಿಂಪಿಕ್ಸ್ ಈಜುಕೊಳದಲ್ಲಿ ಕನ್ನಡಿಗ ಶ್ರೀಹರಿಯ ಅಲೆ

- **ಹೆಸರು:** ಶ್ರೀಹರಿ ನಟರಾಜ
- ವಿದ್ಯಾರ್ಥಿ
- **ಸಾಧನೆ:** ಈಜು ಕ್ರೀಡೆಯಲ್ಲಿ ಅಂತರರಾಷ್ಟ್ರೀಯ ಸಾಧನೆ

ಬೆಂಗಳೂರು ಈಜು ಕ್ರೀಡೆಯ ರಾಜಧಾನಿಯೂ ಹೌದು. ಈ ಪ್ರಸಿದ್ಧಿಯ ಕಿರೀಟಕ್ಕೆ ಚಿಗುರುಮೀಸೆಯ ತರುಣ ಶ್ರೀಹರಿ ನಟರಾಜ ಹೆಮ್ಮೆಯ ಗರಿ ಮೂಡಿಸಿದ್ದಾರೆ. ಟೋಕಿಯೊ ಒಲಿಂಪಿಕ್ ಕೂಟದ ಪುರುಷರ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ವಿಶೇಷ ಎಂದರೆ ಅವರು 'ಎ' ಅರ್ಹತೆ ಗಳಿಸಿದ್ದು. ಈ ಸಾಧನೆ ಮಾಡಿದ ಭಾರತದ ಅತ್ಯಂತ ಕಿರಿಯ ವಯಸ್ಸಿನ ಈಜುಪಟುವೆಂಬ ಹೆಗ್ಗಳಿಕೆಗೂ ಪಾತ್ರರಾದರು. ಕೋವಿಡ್ ಕಾಲಘಟ್ಟದಲ್ಲಿ ಬಹಳಷ್ಟು ಅವಧಿಯವರೆಗೆ ಈಜುಕೊಳಗಳು ಬಾಗಿಲು ಮುಚ್ಚಿದ್ದರೂ ತಮ್ಮ ಮನೋದೈಹಿಕ ಸಾಮರ್ಥ್ಯವನ್ನು ಕಾಪಾಡಿಕೊಂಡು ಅವರು ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದ್ದು ಅಮೋಘ ಸಾಧನೆಯೇ ಸರಿ.

ಶ್ರೀಹರಿ ಈಜು ಕಲಿಯಲು ಆರಂಭಿಸಿದ ಕತೆ ಆಸಕ್ತಿಕರ. ಬಾಲ್ಯದಲ್ಲಿ ಬಹಳ ತುಂಟನಾಗಿದ್ದ ಶ್ರೀಹರಿಯ ಮೂಗಿನ ಮೇಲೆ ಕೋಪ ಇರುತ್ತಿತ್ತು. ಅವರ ಕೋಪ ಮತ್ತು ತುಂಟಾಟದ ಸ್ವಭಾವ ನಿಯಂತ್ರಿಸಲು ತಂದೆ ನಟರಾಜನ್ ಎರಡು ವರ್ಷದ ಶ್ರೀಹರಿಯನ್ನು ಈಜುಕೊಳಕ್ಕೆ ಇಳಿಸಿದರು. ಬೇಬಿ ಪೂಲ್‌ನಲ್ಲಿ ಶುರುವಾದ ಈಜಿನ ಮೋಜು ಒಲಿಂಪಿಕ್



ಕೂಟದವರೆಗೂ ಶ್ರೀಹರಿಯನ್ನು ಬೆಳೆಸಿತು. ಕೋಚ್ ಬಿನೇಶ್ ಅವರ ಮಾರ್ಗದರ್ಶನದಲ್ಲಿ ಈಜು ಕಲಿತರು.

10ನೇ ವಯಸ್ಸಿನಿಂದಲೇ ಅವರು ರಾಷ್ಟ್ರ ಮಟ್ಟದಲ್ಲಿ ಮಿಂಚಿದರು. ಹಣಕಾಸು ಮತ್ತು ಸೌಲಭ್ಯಗಳ ಇತಿಮಿತಿಯ ನಡುವೆಯೂ ಸತತ ಪರಿಶ್ರಮ ಮತ್ತು ಅಗಾಧ ಆಸಕ್ತಿಯಿಂದ ಗುರಿಯತ್ತ ಈಜಿದರು. 2018ರಲ್ಲಿ ಕಾಮನ್‌ವೆಲ್ತ್ ಕೂಟ, ಏಷ್ಯನ್ ಗೇಮ್ಸ್ ಮತ್ತು ಯೂತ್ ಒಲಿಂಪಿಕ್ಸ್‌ಗಳಲ್ಲಿ ಭಾರತವನ್ನು ಪ್ರತಿನಿಧಿಸಿದರು. ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ ನಂತರ ಅವರ ಆತ್ಮವಿಶ್ವಾಸ ಇಮ್ಮಡಿಸಿದೆ. ಮುಂಬರುವ ಮಹತ್ವದ ಈಜುಕೂಟಗಳತ್ತ ಚಿತ್ತ ನೆಟ್ಟಿದ್ದಾರೆ.



'ಪ್ರವಾಹ'ದೆದುರು ಈಸಿ ಗೆದ್ದ ನಿರಂಜನ್

- **ಹೆಸರು:** ನಿರಂಜನ್ ಮುಕುಂದನ್
- **ಸಾಧನೆ:** ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ಪ್ರತಿನಿಧಿಸಿ, 50ಕ್ಕೂ ಹೆಚ್ಚು ಪದಕ ಗೆದ್ದ ಹೆಮ್ಮೆ

ಉದ್ಯಾನನಗರಿಯ ಕನಸುಕಂಗಳ ಯುವಕ ನಿರಂಜನ್ ಮುಕುಂದನ್ ಅವರ ಜೀವನ ಅಕ್ಷರಶಃ ಪ್ರವಾಹದ ವಿರುದ್ಧದ ಈಜು. ಅಂಗವೈಕಲ್ಯದ ಸವಾಲು, ಹತ್ತೊಂಬತ್ತು ಶಸ್ತ್ರಚಿಕಿತ್ಸೆಗಳ ನೋವು ಮೀರಿ ನಿಂತು ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ ಈಜುಪಟು ಇವರು. ಅವರಿಗೆ ಈಗ 26 ವರ್ಷ.

ಹುಟ್ಟಿನಿಂದಲೇ ಕಾಡಿದ ಬೆನ್ನುಹುರಿಯ ದೌರ್ಬಲ್ಯ (ಸ್ಪೈನಾ ಬೈಫಿರಾ) ದಿಂದಾಗಿ ನಿರಂಜನ್‌ಗೆ ನಿಲ್ಲಲೂ ಸಾಧ್ಯವಾಗುತ್ತಿರಲಿಲ್ಲ. ಏಳನೇ ವಯಸ್ಸಿನಲ್ಲಿ ವೈದ್ಯರೊಬ್ಬರು ಅಕ್ವಾ ಥೆರಪಿ (ಈಜು) ಅಥವಾ ಕುದುರೆ ಸವಾರಿ ಕಲಿಸಿ ಎಂದು ಪಾಲಕರಿಗೆ ನೀಡಿದ ಸಲಹೆಯೇ ನಿರಂಜನ್ ಇಂದು ಈ ಎತ್ತರಕ್ಕೆ ಬೆಳೆಯಲು ಕಾರಣವಾಯಿತು. ಖಾಸಗಿ ಕಂಪೆನಿಯ ಉದ್ಯೋಗಿಗಳಾಗಿದ್ದ ಅಪ್ಪ ಆರ್.ಮುಕುಂದನ್ ಮತ್ತು ತಾಯಿ ಎಂ.ಲಕ್ಷ್ಮೀ ಅವರು ಮಗನಿಗೆ ಅಕ್ವಾ ಥೆರಪಿ ಕೊಡಿಸಿದರು. ತಮ್ಮ ಕನಸು ನನಸು ಮಾಡಿಕೊಳ್ಳಲು ಅವರು ಕಠಿಣ ಪರಿಶ್ರಮ, ಅಭ್ಯಾಸದ ಜೊತೆಗೆ 19 ಶಸ್ತ್ರಚಿಕಿತ್ಸೆಗಳನ್ನೂ ಮಾಡಿಸಿಕೊಳ್ಳಬೇಕಾಯಿತು. ಆ ನೋವುಗಳನ್ನು ನುಂಗುತ್ತ 19 ವರ್ಷಗಳಲ್ಲಿ ಅಂತರರಾಷ್ಟ್ರೀಯ ಪ್ಯಾರಾ ಈಜುಕೂಟಗಳಲ್ಲಿ 50ಕ್ಕೂ ಹೆಚ್ಚು ಪದಕಗಳನ್ನು ಗೆದ್ದ ದಾಖಲೆ ಇವರದ್ದು.

ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ 50 ಮೀಟರ್ಸ್ ಬಟರ್‌ಫ್ಲೈನಲ್ಲಿ ಸ್ಪರ್ಧಿಸಿದರು. 2021ರಲ್ಲಿ ಜರ್ಮನಿಯಲ್ಲಿ ನಡೆದ ಅಂತರರಾಷ್ಟ್ರೀಯ ಪ್ಯಾರಾ ಈಜಿನ 400 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ದಾಖಲೆ ಬರೆದರು. 12 ವರ್ಷ ಹಳೆಯದಾದ ಏಷ್ಯಾ ಮಟ್ಟದ ದಾಖಲೆಯನ್ನು ಅವರು ಮೀರಿ ನಿಂತರು. ಕ್ರೊವೇಷ್ಯಾ ಅಂತರರಾಷ್ಟ್ರೀಯ ಈಜಿನಲ್ಲಿ ಆರು ಚಿನ್ನ ಗೆದ್ದು 2022ರಲ್ಲಿ ನಡೆಯಲಿರುವ ವಿಶ್ವ ಪ್ಯಾರಾ ಈಜು ಸ್ಪರ್ಧೆಗೆ ಅರ್ಹತೆ ಗಳಿಸಿದ್ದಾರೆ.

ಪರಿಸರ ಸುಸ್ಥಿರತೆ ರಕ್ಷಣೆಗೆ ಒತ್ತು

- **ಹೆಸರು:** ಎಚ್.ಎಸ್.ಸುಧೀರ್
- **ವೃತ್ತಿ:** ಗುಬ್ಬಿ ಲ್ಯಾಬ್ಸ್ ಸಂಸ್ಥಾಪಕ
- **ಸಾಧನೆ:** ನಗರಗಳಿಗೆ ಪಾರ್ಕಿಂಗ್ ನೀತಿ, ಸೈಕಲ್‌ಸ್ನೇಹಿ ಪಥ ನಿರ್ಮಾಣ

ಎಚ್.ಎಸ್.ಸುಧೀರ್ ಅವರು ಗುಬ್ಬಿ ಲ್ಯಾಬ್ಸ್ ಸಂಸ್ಥಾಪಕ. ಪಶ್ಚಿಮಘಟ್ಟಗಳ ಕಪ್ಪೆಗಳ ಬಗೆಗಿನ ಮೊದಲ ಪುಸ್ತಕದ ಪ್ರಕಾಶಕ. ಅಲ್ಲದೆ ಅಪರೂಪದ ಒಂದು ಕಪ್ಪೆಯನ್ನು ಹೊರ ಜಗತ್ತಿಗೆ ಪರಿಚಯಿಸಿದ ತಂಡದಲ್ಲಿ ಇವರೂ ಭಾಗಿ. ಬೆಂಗಳೂರಿನಲ್ಲಿ ಮರಗಳು, ಪಕ್ಷಿಗಳ ವೈವಿಧ್ಯತೆ ಲೆಕ್ಕಹಾಕುವುದು. ನಗರಗಳ ಕ್ರಮಬದ್ಧ ಬೆಳವಣಿಗೆ, ಅಭಿವೃದ್ಧಿಯಲ್ಲಿ ಸುಸ್ಥಿರತೆ, ಭೂಬಳಕೆ, ಭೂ ಪ್ರದೇಶದಲ್ಲಿ ಆದ ಬದಲಾವಣೆಗಳಿಂದ ಪರಿಸರದ ಸುಸ್ಥಿರತೆಯ ಮೇಲಾಗುತ್ತಿರುವ ಪರಿಣಾಮಗಳು ಹಾಗೂ ನೈಸರ್ಗಿಕ ಸಂಪನ್ಮೂಲನದ ಬಳಕೆಯಿಂದ ಮಾನವ ಮತ್ತು ಪರಿಸರದ ಅಂತರ್ ಸಂಬಂಧವನ್ನು ಅರ್ಥೈಸುವಿಕೆಯ ಸಂಶೋಧನೆಗಳನ್ನು ನಿರಂತರವಾಗಿ ನಡೆಸಿದ್ದಾರೆ.

ವಾಹನಗಳಿಂದ ಆಗುವ ಮಾಲಿನ್ಯವನ್ನು ತಗ್ಗಿಸಲು ಐಐಎಸ್‌ಸಿ ಕ್ಯಾಂಪಸ್‌ನಲ್ಲಿ 'ನಮ್ಮ ಸೈಕಲ್' ಪಬ್ಲಿಕ್ ಬೈಸಿಕಲ್ ಶೇರಿಂಗ್ ವ್ಯವಸ್ಥೆ. ಜಯನಗರದಲ್ಲಿ ಸೈಕಲ್ ಸ್ನೇಹಿ ಪಥ ನಿರ್ಮಾಣದ ಯೋಜನೆ ರೂಪಿಸಿದರು. ಬಿಬಿಎಂಪಿ ಅದನ್ನು ಅನುಷ್ಠಾನಗೊಳಿಸಿತು. ಅಲ್ಲದೆ, ರಾಜ್ಯದಲ್ಲಿ 9 ಎರಡನೇ ಸ್ತರದ ನಗರಗಳಿಗೆ (ಟು ಟೈರ್ ಸಿಟೀಸ್) ವಾಹನಗಳ ಪಾರ್ಕಿಂಗ್ ನೀತಿ ರೂಪಿಸಿದರು.



ನಗರಗಳು ಮತ್ತು ಹವಾಮಾನ ವ್ಯವಸ್ಥೆಯ ನಕಾಶೆ ರೂಪಿಸುವ ಮತ್ತು ಅದಕ್ಕೆ ಬಳಸುವ ಟೂಲ್‌ಗಳ ಉಚಿತ ವ್ಯವಸ್ಥೆ ಅಭಿವೃದ್ಧಿಪಡಿಸಿದ್ದಾರೆ. 'ಇಂಡಿಯನ್ ಇನ್‌ಸ್ಟಿಟ್ಯೂಟ್ ಫಾರ್ ಹ್ಯೂಮನ್ ಸೆಟಲ್‌ಮೆಂಟ್'ನ ಫ್ಯಾಕಲ್ಟಿ ಆಗಿದ್ದಾಗ ಭಾರತದ 231 ನಗರಗಳು ಮತ್ತು ಆ ನಗರಗಳಲ್ಲಿ ಆದ ಬದಲಾವಣೆಯ ನಕಾಶೆ ರೂಪಿಸುವ ತಂಡವನ್ನು ಮುನ್ನಡೆಸಿದ್ದರು.

ಸಾರ್ವಜನಿಕರು ವಿಜ್ಞಾನದಲ್ಲಿ ಹೇಗೆ ಭಾಗವಹಿಸಬಹುದು ಎಂಬುದಕ್ಕೆ 'ಸಿಟಿಜನ್ ಸೈನ್ಸ್' ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಇದಕ್ಕೆ ಪ್ರಾಜೆಕ್ಟ್ ಅಶೋಕ ಎಂದು ಕರೆಯಲಾಗಿದೆ. ಇದರಡಿ ಪರಿಸರ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ಶಿಬಿರಗಳನ್ನು ನಡೆಸಲಾಗಿದೆ. ಇದರಲ್ಲಿ ಕ್ರೋಡೀಕರಿಸಿದ ಮಾಹಿತಿ (ಡೇಟಾ) ಮುಕ್ತವಾಗಿ ಹಂಚಲಾಗಿದೆ.

ಸಾಫ್ಟ್‌ವೇರ್ ಎಂಜಿನಿಯರ್ ಯಕ್ಷಗಾನ ಪರಿಚಾರಕ

- **ಹೆಸರು:** ರವಿ ಮಡೋಡಿ
- **ವೃತ್ತಿ:** ಸಾಫ್ಟ್‌ವೇರ್ ಎಂಜಿನಿಯರ್
- **ಸಾಧನೆ:** ಯಕ್ಷಗಾನ ಕಲೆ ಉಳಿಸಿ, ಬೆಳೆಸಲು ಅವಿರತ ಶ್ರಮ

ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ರವಿ ಮಡೋಡಿ ಅವರು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು ನಿಟ್ಟೂರು ಬಳಿಯ ಮಡೋಡಿ ಗ್ರಾಮದವರು. ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದರೂ ಯಕ್ಷಗಾನದ ಬಗ್ಗೆ ವಿಪರೀತ ಸೆಳೆತ. 12 ವರ್ಷಗಳಿಂದ ಯಕ್ಷಗಾನ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ 300ಕ್ಕೂ ಹೆಚ್ಚು ಪ್ರದರ್ಶನಗಳನ್ನು ತಮ್ಮ ತಂಡದೊಂದಿಗೆ ನೀಡಿದ್ದಾರೆ. ಈ ಕಲೆಯನ್ನು ಮುಂದಿನ ಪೀಳಿಗೆಗೆ ಉಳಿಸಿಕೊಡಲು ಶ್ರಮವಹಿಸುತ್ತಿದ್ದಾರೆ.

'ಯಕ್ಷಸಿಂಚನ' ಎನ್ನುವ ಹವ್ಯಾಸಿ ಯಕ್ಷಗಾನ ಸಂಸ್ಥೆಯ ಸ್ಥಾಪಕರಲ್ಲಿ ಒಬ್ಬರಾದ ರವಿ ಸಂಸ್ಥೆಯ ಈಗಿನ ಅಧ್ಯಕ್ಷರೂ ಹೌದು. ಯಕ್ಷವಾಹಿನಿ ಸಂಸ್ಥೆಯಲ್ಲಿ ಕಾರ್ಯಕಾರಿಣಿ ಮಂಡಳಿಯ ಸದಸ್ಯರಾಗಿಯೂ ಕೆಲಸ ಮಾಡುತ್ತಿದ್ದಾರೆ.

ಯಕ್ಷಗಾನ ಕ್ಷೇತ್ರಕ್ಕೆ ತಂತ್ರಜ್ಞಾನದ ಲಾಭ ದೊರಕಿಸಿಕೊಡುವಲ್ಲಿ ಅವರ ಪಾತ್ರ ದೊಡ್ಡದು. 255 ಪ್ರಸಂಗಗಳ ಹಸ್ತ ಪ್ರತಿಗಳನ್ನು ಡಿಜಿಟಲೀಕರಣಗೊಳಿಸಿದ್ದಾರೆ. 1,500ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸ್ಕ್ಯಾನ್ ಮಾಡಿ ಅಂತರ್ಜಾಲದಲ್ಲಿ ಸಿಗುವಂತೆ ಮಾಡಿದ್ದಾರೆ. ಯಕ್ಷಗಾನ ಕ್ಷೇತ್ರ ಉಳಿವಿಗೆ ಸಾಕಷ್ಟು ಕೊಡುಗೆ ನೀಡಿ ಅಪರಿಚಿತರಾಗಿಯೇ ಉಳಿಯುವ ಕಲಾವಿದರನ್ನು ಹುಡುಕಿ ಪರಿಚಯಿಸಿರುವ 'ಮಲೆನಾಡಿನ ಯಕ್ಷಚೇತನಗಳು' ಪುಸ್ತಕ ಇತ್ತೀಚೆಗೆ ಬಿಡುಗಡೆಗೊಂಡಿದೆ. ಯಕ್ಷಗಾನ ಕುರಿತ ಸಾಹಿತ್ಯವನ್ನು ಪರಿಚಯಿಸಲು 'ಸಾಹಿತ್ಯ ಸಾಂಗತ್ಯ' ಎಂಬ ಕಾರ್ಯಕ್ರಮವನ್ನೂ ನಡೆಸುತ್ತಿದ್ದಾರೆ. ಯಕ್ಷಗಾನ ಪ್ರದರ್ಶನಗಳ ಸಮಗ್ರ ಮಾಹಿತಿ ಒಳಗೊಂಡ 'ಯಕ್ಷಲೋಕ' ಆ್ಯಪ್ ಅಭಿವೃದ್ಧಿಪಡಿಸಿದ್ದಾರೆ. ಯಕ್ಷಗಾನದಲ್ಲಿ ರಾಮ, ಶುಕ್ರ, ಕಂಸ, ಶತ್ರುಘ್ನ, ಅರ್ಜುನ, ಜಮದಗ್ನಿ, ಬಲರಾಮ, ಜಾಂಬವ ಸೇರಿದಂತೆ 50ಕ್ಕೂ ಹೆಚ್ಚು ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.



ಕ್ಯಾನ್ಸರ್‌ಗೆ ಕ್ಯಾರೇ ಅನ್ನದ ಕಲಾವತಿ



- **ಹೆಸರು:** ಕಲಾವತಿ
- **ವೃತ್ತಿ:** ಆರೋಗ್ಯ ಸಹಾಯಕಿ
- **ಸಾಧನೆ:** ಸ್ತನ ಕ್ಯಾನ್ಸರ್ ನಡುವೆಯೂ ಕರ್ತವ್ಯ ಪ್ರಜ್ಞೆ

ಬಿಬಿಎಂಪಿಯ ಕಿರಿಯ ಆರೋಗ್ಯ ಸಹಾಯಕಿ ಕಲಾವತಿ ಎಸ್. ಜೇಮ್ಸ್ ಕರ್ತವ್ಯನಿಷ್ಠೆಯಲ್ಲಿ ಸದಾ ಒಂದು ಹೆಜ್ಜೆ ಮುಂದೆ. ಸ್ತನದ ಕ್ಯಾನ್ಸರ್ ಜೊತೆಗೆ ಒಂದು ದಶಕವಿಡೀ ಸೆಣಸಾಡಿದ ಇವರು ಈಗ ಈ ಮಾರಕ ಕಾಯಿಲೆಯನ್ನೇ ಗೆದ್ದಿದ್ದಾರೆ.

1997ರಲ್ಲಿ ತಾತ್ಕಾಲಿಕ ನೆಲೆಯಲ್ಲಿ ಬಿಬಿಎಂಪಿ ಕೆಲಸಕ್ಕೆ ಸೇರಿದ್ದ ಕಲಾವತಿ ವಿಭೂತಿಪುರದಲ್ಲಿ ಐದು ವರ್ಷ ಕ್ಷೇತ್ರಕಾರ್ಯದಲ್ಲಿ ತೊಡಗಿದ್ದರು. 2002ರಿಂದ 2010ರವರೆಗೆ ಹಲಸೂರು ರೆಫರಲ್ ಆಸ್ಪತ್ರೆಯಲ್ಲಿ ಆರೋಗ್ಯ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಸ್ತನ ಕ್ಯಾನ್ಸರ್ ಇರುವ ಬಗ್ಗೆ 2010ರ ಜನವರಿ ಅಂತ್ಯದಲ್ಲಿ ಅವರಿಗೆ ಸುಳಿವು ಸಿಕ್ಕಿತ್ತು. ನಂತರ ಶಸ್ತ್ರಚಿಕಿತ್ಸೆಗೆ ಒಳಗಾದರು. ಸುದೀರ್ಘ ಕಾಲ ಕೀಮೋಥೆರಪಿ ಹಾಗೂ ರೇಡಿಯೇಷನ್ ಥೆರಪಿಗೆ ಒಡ್ಡಿಕೊಳ್ಳುವಾಗಲೂ ಒಡಲ ನೋವನ್ನು ನುಂಗಿ ಹಸನ್ಮುಖಿಯಾಗಿಯೇ ಜನರ ಕೆಲಸ ಮಾಡಿಕೊಟ್ಟವರು. ಚಿಕಿತ್ಸೆಗೆ ಅಲ್ಪಾವಧಿ ರಜೆಯನ್ನು ಮಾತ್ರ ಪಡೆದು ಮತ್ತೆ ಕರ್ತವ್ಯಕ್ಕೆ ಹಾಜರಾಗುತ್ತಿದ್ದರು.

ಸುದೀರ್ಘ ಕಾಲ ಚಿಕಿತ್ಸೆಗೆ ಒಡ್ಡಿಕೊಂಡಿದ್ದರಿಂದ ಅವರು ಮಧುಮೇಹದಿಂದಲೂ ಬಳಲ ಬೇಕಾಯಿತು. ಅಸ್ತಮಾ ಕೂಡಾ ಆಗಾಗ ಬಾಧಿಸುತ್ತಿತ್ತು. ಅನಾರೋಗ್ಯ ಲೆಕ್ಕಿಸದೇ ಕೋವಿಡ್ ನಂತಹ ಇಕ್ಕಟ್ಟಿನ ಸಂದರ್ಭದಲ್ಲೂ ಕರ್ತವ್ಯಕ್ಕೆ ಚ್ಯುತಿ ಆಗದಂತೆ ನೋಡಿಕೊಂಡರು. ಕಾಯಿಲೆ ಜೊತೆಗಿನ ಹೋರಾಟ, ಕರ್ತವ್ಯದ ಜಂಜಡಗಳ ನಡುವೆಯೂ ಒಬ್ಬಳೇ ಮಗಳಿಗೆ ಎಂಜಿನಿಯರಿಂಗ್ ಶಿಕ್ಷಣ ಕೊಡಿಸಿದ್ದಾರೆ. ನಗರದ ದಾಸಪ್ಪ ಆಸ್ಪತ್ರೆ ಪ್ರಾಂಗಣದಲ್ಲಿರುವ ಬಿಬಿಎಂಪಿ ಆರೋಗ್ಯ ವಿಭಾಗದ ಕಚೇರಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ.

'ನಾನು ಯಾವತ್ತೂ ಅನಾರೋಗ್ಯದ ಬಗ್ಗೆ ತಲೆ ಕೆಡಿಸಿಕೊಂಡವಳೇ ಅಲ್ಲ. ಈಗಲೂ ಜನರಿಗೆ ಏನಾದರೂ ನೆರವಾಗಲು ಸಾಧ್ಯವಾದರೆ, ಅದರಲ್ಲೇ ಸಾರ್ಥಕತೆ ಕಂಡುಕೊಳ್ಳುತ್ತೇನೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಕಲಾವತಿ.

ಟ್ರ್ಯಾಕ್‌ನ ಹೊಸ ಬೆಳಕು ಪ್ರಿಯಾ ಮೋಹನ್

- **ಹೆಸರು:** ಪ್ರಿಯಾ ಮೋಹನ್
- ಕ್ರೀಡಾಪಟು
- **ಸಾಧನೆ:** ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಗಮನಾರ್ಹ ಸಾಧನೆ

ಸ್ಪೈಕ್ಸ್ ಶೂ ತೊಡುವುದು ಹೇಗೆಂದೇ ತಿಳಿಯದಿದ್ದ ಹುಡುಗಿಯೊಬ್ಬಳು ಸ್ಪ್ರಿಂಟ್ ತಾರೆಯಾಗಿ ಬೆಳೆದ ಬಗೆ ಅಪೂರ್ವ. ಈ ಅಪರೂಪದ ಸಾಧಕಿ ಬೆಂಗಳೂರಿನ ಅಥ್ಲೀಟ್ ಪ್ರಿಯಾ ಮೋಹನ್. ಲೋಕಾಯುಕ್ತ ನ್ಯಾಯಾಧೀಶ ಎಚ್.ಎ.ಮೋಹನ್ ಮತ್ತು ಚಂದ್ರಕಲಾ ಅವರ ಪುತ್ರಿ ಪ್ರಿಯಾ ಬೆಂಗಳೂರಿನಲ್ಲಿ ಓದಿ ಬೆಳೆದವರು.

2019ರಲ್ಲಿ ಗುಂಟೂರಿನಲ್ಲಿ ನಡೆದ ರಾಷ್ಟ್ರೀಯ ಜೂನಿಯರ್ ಕ್ರೀಡಾಕೂಟದ 18 ವರ್ಷದೊಳಗಿನವರ ವಿಭಾಗದ 200 ಮೀಟರ್ಸ್ ಓಟದಲ್ಲಿ 24.49 ಸೆಕೆಂಡು ಮತ್ತು 400 ಮೀಟರ್ಸ್ ಓಟದಲ್ಲಿ 55.27 ಸೆಕೆಂಡುಗಳಲ್ಲಿ ಗುರಿ ಮುಟ್ಟುವುದರೊಂದಿಗೆ ಪ್ರಿಯಾ ಭಾರತ ಅಥ್ಲೆಟಿಕ್ಸ್‌ನ 'ಟ್ರ್ಯಾಕ್'ನಲ್ಲಿ ಗಮನ ಸೆಳೆದಿದ್ದರು.

15ನೇ ವಯಸ್ಸಿನಲ್ಲಿ ಕೋಚ್ ಅರ್ಜುನ್ ಅಜಯ್ ಅವರ ಕಣ್ಣಿಗೆ ಬಿದ್ದ ನಂತರ ಅವರ ಕ್ರೀಡಾಜೀವನ ಬದಲಾಯಿತು. ಒಂದು ವರ್ಷ ಕಠಿಣ ಅಭ್ಯಾಸದ ಫಲವಾಗಿ ದಕ್ಷಿಣ ಏಷ್ಯನ್ ಕ್ರೀಡಾಕೂಟ ಅವರ ಪ್ರತಿಭೆ ಇನ್ನಷ್ಟು ಬೆಳಗಿತು. ಜೂನಿಯರ್ ಫೆಡರೇಷನ್ ಕಪ್ ಕೂಟದಲ್ಲಿ 200 ಮೀಟರ್ಸ್, 400 ಮೀಟರ್ಸ್, 4x100 ಮೀಟರ್ಸ್ ರಿಲೆಯಲ್ಲಿ ಚಿನ್ನ ಗೆದ್ದುಕೊಂಡ ಅವರು 200 ಮತ್ತು 400 ಮೀಟರ್ಸ್ ಓಟದಲ್ಲಿ ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡಿದರು.



ಹಾಂಗ್‌ಕಾಂಗ್‌ನಲ್ಲಿ ನಡೆದ ಯೂತ್ ಏಷ್ಯನ್ ಕೂಟದ 400 ಮೀಟರ್ಸ್ ಓಟದಲ್ಲಿ ನಾಲ್ಕನೇ ಸ್ಥಾನಗಳಿಸಿದ ಅವರು ಮೆಡ್ಲೆ ರಿಲೆಯಲ್ಲಿ ಬೆಳ್ಳಿ ಗೆದ್ದುಕೊಂಡರು. ಕೆನ್ಯಾದ ನೈರೋಬಿಯಲ್ಲಿ ನಡೆದ ವಿಶ್ವ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 4X400 ಮೀಟರ್ಸ್ ಮಿಶ್ರ ರಿಲೆಯಲ್ಲಿ ಕಂಚಿನ ಪದಕ ಗಳಿಸಿದರು. ಕೋಯಿಕ್ಕೋಡ್‌ನಲ್ಲಿ ನಡೆದ ದಕ್ಷಿಣ ವಲಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 200 ಮೀಟರ್ಸ್ ಓಟದಲ್ಲಿ 24.64 ಸೆಕೆಂಡುಗಳ ಕೂಟ ದಾಖಲೆ ನಿರ್ಮಿಸಿದ್ದರು. ರಾಷ್ಟ್ರ ಮಟ್ಟದಲ್ಲಿ 18 ಪದಕಗಳು ಅವರ ಮುಡಿಗೇರಿವೆ. ಅದರಲ್ಲಿ 15 ಚಿನ್ನದ ಪದಕಗಳಿವೆ.

ಪ್ರಚಾರ ಬಯಸದ ದಾನಿ



- **ಹೆಸರು:** ಎಸ್.ಆರ್. ಧರ್ಮೇಶ್
- **ವೃತ್ತಿ:** ಶಿಕ್ಷಕ
- **ಸಾಧನೆ:** ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವು, ಪ್ರೋತ್ಸಾಹ

ಶಾಲಾ ಮಕ್ಕಳಿಗೆ ಇಷ್ಟದ ಬಟ್ಟೆ ಕೊಡಿಸುವ ಮೂಲಕ ಜನಮನ ಸೆಳೆದವರು ಎಸ್.ಆರ್. ಧರ್ಮೇಶ್. ಅವರು ಪ್ರಚಾರ ಬಯಸದ ದಾನಿ. ಪ್ರಸ್ತುತ ಕೋಲಾರ ತಾಲ್ಲೂಕಿನ ವಕ್ಕಲೇರಿ ಸಮೀಪದ ಸೀಗಹಳ್ಳಿ ಶಾಲೆಯಲ್ಲಿ ಶಿಕ್ಷಕ. ಅವರ ಸಂಬಳದಲ್ಲಿ ಪ್ರತಿ ತಿಂಗಳೂ ಸಮಾಜ ಸೇವೆಗೆ ₹ 10 ಸಾವಿರ ಮೀಸಲಿಡುತ್ತಾರೆ.

ದಾನಿಗಳು ನಿಗದಿತ ಸಂಖ್ಯೆಯ ವಿದ್ಯಾರ್ಥಿಗಳಿಗೆ ಕಡಿಮೆ ದರದ ಬಟ್ಟೆ ವಿತರಿಸುವುದು ಸರ್ವೇಸಾಮಾನ್ಯ. ಆದರೆ, ಧರ್ಮೇಶ್ ಮಕ್ಕಳನ್ನೇ ಗುಂಪು ಗುಂಪಾಗಿ ಅಂಗಡಿಗೆ ಕರೆದೊಯ್ಯುತ್ತಾರೆ. ದರದ ಮಿತಿ ಇಲ್ಲದೆ ಅವರಿಗೆ ಇಷ್ಟವಾದ ಉಡುಪು ಆರಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಾಗಲಷ್ಟೇ ಅವರ ಮನಸ್ಸಿಗೆ ಸಮಾಧಾನ.

ಕಲಿಕಾ ಸಾಮಗ್ರಿಗಳನ್ನೂ ಖರೀದಿಸಿ ಮಕ್ಕಳಿಗೆ ನೀಡುತ್ತಾರೆ. ಹುಟ್ಟೂರಾದ ಜಂಗಮ ಗುರ್ಜೇನಹಳ್ಳಿಯಿಂದ ಶಾಲೆಗೆ ಹೋಗುವ ಮಾರ್ಗಮಧ್ಯೆ ಸಿಗುವ ಮಕ್ಕಳಿಗೆ ಚಾಕೊಲೇಟ್, ಬಿಸ್ಕತ್ ಪ್ಯಾಕ್ ನೀಡುವುದು ಅವರ ನಿತ್ಯದ ಹವ್ಯಾಸ.


ಶಿಕ್ಷಣವೇ ಶಕ್ತಿ ಎಂದು ನಂಬಿರುವ ಅವರು ಪ್ರತಿವರ್ಷ ಗ್ರಾಮೀಣ ಶಾಲೆಗಳಲ್ಲಿನ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನಿಸುತ್ತಾರೆ. ಈವರೆಗೆ 300ಕ್ಕೂ ಹೆಚ್ಚು ನೇತ್ರ ರೋಗಿಗಳಿಗೆ ಸ್ವಂತ ಖರ್ಚಿನಿಂದ ಶಸ್ತ್ರಚಿಕಿತ್ಸೆ ಮಾಡಿಸಿ ಕನ್ನಡಕ ಕೊಡಿಸಿದ್ದಾರೆ. ಹೆಣ್ಣುಮಕ್ಕಳಿಗೆ ಹೊಲಿಗೆ ತರಬೇತಿ ಕೊಡಿಸುತ್ತಿದ್ದಾರೆ. ಕಲಾವಿದರನ್ನು ಗುರುತಿಸಿ ಸನ್ಮಾನಿಸುತ್ತಿದ್ದಾರೆ. ಅವರ ಸೇವೆಯು ಪರಿಸರ ಸಂರಕ್ಷಣಾ ಕ್ಷೇತ್ರಕ್ಕೂ ವಿಸ್ತರಿಸಿದೆ.

ಅವರ ಸಮಾಜ ಸೇವೆಗೆ ಕುಟುಂಬದ ಸದಸ್ಯರು ಬೆನ್ನೆಲುಬಾಗಿ ನಿಂತಿದ್ದಾರೆ. ಯಾರಾದರೂ ಅವರ ಸೇವೆ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರೆ ಮುಜುಗರಪಟ್ಟುಕೊಳ್ಳುವ ದೊಡ್ಡತನ ಅವರದು.

ಬಂಗಾರಪೇಟೆಯ 'ಬಂಗಾರದ ಮನುಷ್ಯ'

ಬಲಗೈಲಿ ಮಾಡಿದ್ದು ಎಡಗೈಗೆ ಗೊತ್ತಾಗಬಾರದು ಎಂಬ ತತ್ವಕ್ಕೆ ಅಂಟಿಕೊಂಡವರು ಸಯ್ಯದ್ ಅಫ್ಸರ್ ಪಾಷಾ. ಸರಳ ವ್ಯಕ್ತಿತ್ವದ ಅವರದು ಕೋಲಾರ ಜಿಲ್ಲೆಯ ಬಂಗಾರಪೇಟೆ. ಅಲ್ಲಿಯೇ ಬೆಳೆದದ್ದು, ಓದಿದ್ದು. ಅವರು ಒಂಥರಾ ಬಂಗಾರಪೇಟೆಯ 'ಬಂಗಾರದ ಮನುಷ್ಯ'.

ವೃತ್ತಿಯಲ್ಲಿ ಅವರು ಮುಬಾರಕ್ ಹೋಟೆಲ್ ಮಾಲೀಕ. ಪ್ರವೃತ್ತಿಯಲ್ಲಿ ಸಮಾಜ ಸೇವಕ. ಬಡವರಿಗಾಗಿ ಛತ್ರ ಕಟ್ಟಿಸುತ್ತಾರೆ, ತಾವೇ ಮುಂದೆ ನಿಂತು ಉಚಿತವಾಗಿ ಮದುವೆ ಮಾಡಿಸುತ್ತಾರೆ. ಚಳಿಯಲ್ಲಿ ಮಲಗಿದವರಿಗೆ ಕಂಬಳಿ ಕೊಡುತ್ತಾರೆ. ಈ ಎಲ್ಲವನ್ನೂ ಸದ್ದಿಲ್ಲದೆ ಮಾಡುವ ಶ್ರಮಜೀವಿ.



- **ಹೆಸರು:** ಸಯ್ಯದ್ ಅಫ್ಸರ್ ಪಾಷಾ
- **ವೃತ್ತಿ:** ಹೋಟೆಲ್ ಮಾಲೀಕ
- **ಸಾಧನೆ:** ಬಡವರಿಗೆ ಕೊಡುಗೆ ದಾನಿ, ಪ್ರಚಾರದಿಂದ ದೂರ

ಹಬ್ಬವೆಂದು ಯಾರೇ ಸಹಾಯ ಕೋರಿ ಬಂದರೂ ಹಿಂದೂ– ಮುಸ್ಲಿಂ ಎಂಬ ಭೇದಭಾವ ತೋರುವುದಿಲ್ಲ. ಎಲ್ಲಾ ಜಾತಿ, ಧರ್ಮ ಮೀರಿದ ನಿಸ್ವಾರ್ಥ ಸೇವೆ ಅವರದು. ಇಂದಿಗೂ ಮೊಬೈಲ್ ಬಳಸಲ್ಲ. ತಾವು ಗಳಿಸಿದ ಹಣದಲ್ಲಿ ಅರ್ಧದಷ್ಟು ದಾನ ಮಾಡುತ್ತಾ ಬಂದಿರುವ ಇವರು ಬಡ ವಿದ್ಯಾರ್ಥಿಗಳಿಗೆ ದಿನವೂ ಉಚಿತವಾಗಿ ಊಟ ಹಾಕುತ್ತಾರೆ. ಓದಲು ಕಾಸಿಲ್ಲ ಎಂದು ಬಂದವರಿಗೆ ಜೇಬಲ್ಲಿ ಎಷ್ಟಿರುತ್ತದೋ ಅಷ್ಟನ್ನೂ ಎತ್ತಿ ಕೊಡುವಷ್ಟು ಉದಾರಿ.

ನಿತ್ಯ ಕನಿಷ್ಠ 300 ಜನರಿಗೆ ಅನ್ನದಾನ ಮಾಡುತ್ತಾರೆ. ಓದಿದ್ದು ಬರೀ ಒಂಬತ್ತನೇ ತರಗತಿ. ಕಡುಬಡತನದಿಂದ ಮುಂದೆ ಓದಲಾಗಿಲ್ಲ. ಹಾಗಾಗಿಯೇ, ತನ್ನಂತೆ ಬಡವರ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂದು ಶಾಲೆ ಕಟ್ಟಿಸಿದ್ದಾರೆ. ತಮ್ಮ ಜೀವನ ಇರುವುದೇ ಬೇರೊಬ್ಬರಿಗೆ ಸಹಾಯ ಮಾಡಲು ಎನ್ನುವುದು ಅವರ ಒಡಲ ನುಡಿ.

'ನನ್ನ ಜತೆ ಕೆಲಸ ಮಾಡುವವರನ್ನು ಮಕ್ಕಳಂತೆ ಅಲ್ಲದಿದ್ದರೂ ಸ್ನೇಹಿತರಂತೆ ಕಾಣುತ್ತೇನೆ' ಎನ್ನುತ್ತಾರೆ ಅಫ್ಸರ್ ಪಾಷಾ. ಸುದ್ದಿಗಾಗಿ ಸೇವೆ ಮಾಡಬೇಡ. ಸೇವೆ ಮಾಡಿ ಸದ್ದು ಮಾಡಬೇಡ. ಸದ್ದಿಲ್ಲದೆ ಸೇವೆ ಮಾಡು ಎಂಬ ಮದರ್ ತೆರೆಸಾ ಮಾತುಗಳಿಗೆ ಅವರು ಜೀವಂತ ನಿದರ್ಶನ.

ಸಮಾಜಸೇವೆಗೆ ಮುಡಿಪು

- **ಹೆಸರು:** ಎಸ್. ವಿನೋದ್
- **ವೃತ್ತಿ:** ಡಿಆರ್‌ಡಿಒದಲ್ಲಿ ತಾಂತ್ರಿಕ ಅಧಿಕಾರಿ
- **ಸಾಧನೆ:** ವಿಜ್ಞಾನಿ ಮತ್ತು ಸಾಮಾಜಿಕ ಚಟುವಟಿಕೆ

ಇವರು ಎಸ್. ವಿನೋದ್. 'ವಿನೋದ್ ಕರ್ತವ್ಯ' ಎಂದೇ ಗುರುತಿಸಲಾಗುತ್ತಿರುವ ಈ ಯುವಕ, ಡಿಆರ್‌ಡಿಒದಲ್ಲಿ ತಾಂತ್ರಿಕ ಅಧಿಕಾರಿ. 'ಬೆಂಗಳೂರು ಹುಡುಗರು ತಂಡ' ಮತ್ತು 'ಕರ್ತವ್ಯ ತಂಡ' ಸ್ಥಾಪಿಸಿ, ವಿವಿಧ ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಬೆಂಗಳೂರಿನ ಸರ್ಕಾರಿ ಶಾಲೆಗಳಿಗೆ ಪ್ರತಿ ಶನಿವಾರ ಕಂಪ್ಯೂಟರ್, ಸ್ಪೋಕನ್ ಇಂಗ್ಲಿಷ್ ಮತ್ತು ವ್ಯಕ್ತಿತ್ವ ವಿಕಸನ ಕುರಿತಾದ ತರಗತಿಗಳನ್ನು ಇವರ 'ಕರ್ತವ್ಯ ತಂಡ'ದ 40 ಸದಸ್ಯರು ತೆಗೆದುಕೊಳ್ಳುತ್ತಾರೆ. ಜತೆಗೆ, ಅಗತ್ಯ ಇರುವ ಮೂಲಸೌಕರ್ಯಗಳನ್ನು ಕಲ್ಪಿಸುವಲ್ಲಿ ನೆರವಾಗಿದ್ದಾರೆ. ಈಗಾಗಲೇ ಎಂಟು ಶಾಲೆಗಳಲ್ಲಿ ಕಂಪ್ಯೂಟರ್ ಪ್ರಯೋಗಾಲಯ ಮತ್ತು ಐದು ಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯವನ್ನು ತಮ್ಮ ಸ್ವಂತ ಖರ್ಚಿನಲ್ಲಿ ಸ್ಥಾಪಿಸಿದ್ದಾರೆ.



ಬೆಂಗಳೂರು ನಗರದಲ್ಲಿ ಮೊಳೆ ಮುಕ್ತ ಅಭಿಯಾನವವನ್ನು ಹಮ್ಮಿಕೊಳ್ಳುವ ಮೂಲಕ ವೃಕ್ಷಗಳ ಸಂರಕ್ಷಣೆಯಲ್ಲಿ ತೊಡಗಿದ್ದಾರೆ. ಮೊಳೆಯಿಂದಾಗುವ ಹಾನಿ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಪ್ರಯತ್ನದಲ್ಲಿ ಸಾಗಿದ್ದಾರೆ.

2020ರ ನವೆಂಬರ್ 15ರಿಂದ ಅಭಿಯಾನ ಆರಂಭಿಸಲಾಗಿದ್ದು, 1300 ಮರಗಳಿಂದ 12 ಸಾವಿರಕ್ಕೂ ಹೆಚ್ಚು ಮೊಳೆ ಮತ್ತು 8ಕೆ.ಜಿ. ಸ್ಟ್ಯಾಪಲ್ ಪಿನ್‌ಗಳನ್ನು ಇವರ ತಂಡದ ಸದಸ್ಯರು ಕಿತ್ತು ಹಾಕಿದ್ದಾರೆ. ಜತೆಗೆ, 12 ವಾರ್ಡ್‌ಗಳಲ್ಲಿ ಮರಗಳಿಗೆ ಪೋಸ್ಟರ್ ಅಂಟಿಸಿದವರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಭಿಕ್ಷಾಟನೆಯಂತಹ ಸಾಮಾಜಿಕ ಸಮಸ್ಯೆ ಬಗ್ಗೆಯೂ ಜಾಗೃತಿ ಮೂಡಿಸುವ ಕೆಲಸದಲ್ಲಿ ತೊಡಗಿದ್ದಾರೆ.

ಸಮಾಜ ಸೇವೆಯಲ್ಲಿ ಸಾರ್ಥಕ ಭಾವ



- **ಹೆಸರು:** ಅಮಲಿ ನಾಯಕ್
- (ಗ್ರಾಮೀಣ ಅಭ್ಯುದಯ ಸೇವಾ ಸಂಸ್ಥೆ ಸ್ಥಾಪಕಿ)
- **ಸಾಧನೆ:** ಅಂಗವಿಕಲರು, ಮಹಿಳೆಯರ ಏಳಿಗೆಗೆ ಹೋರಾಟ

ಆಧುನಿಕ ಬದುಕಿನ ಜಂಜಡ ಮತ್ತು ಕೌಟುಂಬಿಕ ಸಮಸ್ಯೆಗಳಿಗೆ ಬಿಡಿಸಲಾಗದ ನಂಟು. ನಿರ್ದಿಷ್ಟ ಸಮಯದಲ್ಲಿ ಆಪ್ತ ಸಮಾಲೋಚನೆ ಸಿಗದಿದ್ದರೆ ಕುಟುಂಬಗಳು ಸಂಕಷ್ಟದ ಕುಲುಮೆಯೊಳಗೆ ಬೇಯುವುದರಲ್ಲಿ ಅನುಮಾನವಿಲ್ಲ. ಸಮಸ್ಯೆಯ ಸುಳಿಗೆ ಸಿಲುಕಿದ ಮಹಿಳೆಯರಿಗೆ ಹಲವು ಸಂಘ–ಸಂಸ್ಥೆಗಳು ಊರುಗೋಲಾಗಿವೆ. ಇಂತಹ ಸಂಸ್ಥೆಗಳ ಪೈಕಿ ದೊಡ್ಡಬಳ್ಳಾಪುರದ ಗ್ರಾಮೀಣ ಅಭ್ಯುದಯ ಸೇವಾ ಸಂಸ್ಥೆಯೂ ಒಂದಾಗಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕೌಟುಂಬಿಕ ಸಮಸ್ಯೆಗೆ ಸಿಲುಕಿದವರು ಮೊದಲು ಈ ಸಂಸ್ಥೆಯ ಬಾಗಿಲು ಬಡಿಯುತ್ತಾರೆ. ಇದರ ಸಂಸ್ಥಾಪಕಿ ಅಮಲಿ ನಾಯಕ್. ಮಾನಸಿಕ ರೋಗಿಗಳು, ಅಂಗವಿಕಲರು, ದೌರ್ಜನ್ಯಕ್ಕೊಳಗಾದ ಮಹಿಳೆಯರ ಪರವಾಗಿ ಕೆಲಸ ಮಾಡುತ್ತಿರುವ ಅವರ ಸೇವೆಗೆ ಈಗ ಎರಡು ದಶಕದ ಸಂಭ್ರಮ.

ಅಂಗವಿಕಲರು, ಮಹಿಳೆಯರು ಹಾಗೂ ಮಾನಸಿಕ ರೋಗಿಗಳ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಅರ್ಹರಿಗೆ ತಲುಪಿಸುವಲ್ಲಿ ಅವರದು ದಣಿವರಿಯದ ಹೋರಾಟ. ದಾನಿಗಳ ನೆರವು ಪಡೆದು ಆರ್ಥಿಕವಾಗಿ ಹಿಂದುಳಿದ ಕುಟುಂಬದ ಅಂಗವಿಕಲರು, ಮಾನಸಿಕ ರೋಗಿಗಳಿಗೆ ಅಗತ್ಯ ಪರಿಕರಗಳು, ಮಾತ್ರೆ, ಚಿಕಿತ್ಸೆಗೂ ನೆರವಾಗುತ್ತಾರೆ. ಅವರ ಸೇವೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನೀಡುವ 'ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ'ಯೂ ಸಂದಿದೆ.

ಬಿಡಿಎ: 296 ನಿವೇಶನಗಳ ಹರಾಜು ● ₹348 ಕೋಟಿ ವರಮಾನ

76 ನಿವೇಶನಗಳಿಗೆ ಬೇಡಿಕೆ ಇಲ್ಲ

ಪ್ರಜಾವಾಣಿ ವಾರ್ತೆ

ಬಿಡಿಎ ಸುದ್ದಿ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಾಡಪ್ರಭು ಕೆಂಪೇಗೌಡ ಬಡಾವಣೆ ಹಾಗೂ ಅರ್ಕಾವತಿ ಬಡಾವಣೆಗಳಲ್ಲಿ ನಡೆಸಿದ ನಿವೇಶನಗಳ ಇ-ಹರಾಜು ಪ್ರಕ್ರಿಯೆ ಪೂರ್ಣಗೊಂಡಿದ್ದು, 296 ನಿವೇಶನಗಳು ವಿಕ್ರಯವಾಗಿವೆ. ಹರಾಜಿಗೆ ಇಟ್ಟಿದ್ದ 76 ನಿವೇಶನಗಳ ಖರೀದಿಗೆ ಯಾರೂ ಒಲವು ತೋರಿಲ್ಲ.

ಈ ಎರಡು ಬಡಾವಣೆಗಳ 372 ನಿವೇಶನಗಳನ್ನು ಬಿಡಿಎ ಹರಾಜಿಗೆ ಇಟ್ಟಿತ್ತು. ಈ ಪೈಕಿ ಕೆಂಪೇಗೌಡ ಬಡಾವಣೆ ನಿವೇಶನಗಳಿಗೆ ಬೇಡಿಕೆ ಕಡಿಮೆಯಿತ್ತು. ಕೆಂಪೇಗೌಡ, ಅರ್ಕಾವತಿ ಬಡಾವಣೆಗಳಲ್ಲಿ ತಲಾ 38 ನಿವೇಶನಗಳು ಮಾರಾಟವಾಗದೇ ಉಳಿದಿವೆ. ನಿಗದಿಪಡಿಸಿದ ಪ್ರಾರಂಭಿಕ ಮೊತ್ತದಿಂದ, ಕನಿಷ್ಠ ₹ 215 ಕೋಟಿ ವರಮಾನಗಳಿಸುವ ಉದ್ದೇಶವನ್ನು ಬಿಡಿಎ ಹೊಂದಿತ್ತು. ಆದರೆ, ಮಾರಾಟವಾಗಿರುವ 296 ನಿವೇಶನಗಳಿಂದ ಬಿಡಿಎಗೆ ₹ 348 ಕೋಟಿ ವರಮಾನ ಬರಲಿದೆ.

'ಇ ಹರಾಜು ಪ್ರಕ್ರಿಯೆಗೆ ಉತ್ತಮ ಪ್ರತಿಕ್ರಿಯೆ ಬಂದಿದೆ. ನಿರೀಕ್ಷೆ ಇಟ್ಟದ್ದಕ್ಕಿಂತ ₹ 133 ಕೋಟಿಗಳಷ್ಟು ಅಧಿಕ ವರಮಾನ ಸಂಗ್ರಹವಾಗಿದೆ' ಎಂದು ಬಿಡಿಎ ಆರ್ಥಿಕ ಸದಸ್ಯ ಎಸ್.ಎಂ.ರಾಮಪ್ರಸಾದ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 118 ಮೂಲೆ ನಿವೇಶನಗಳನ್ನು ಹರಾಜಿಗೆ ಇಡಲಾಗಿತ್ತು. ಇವುಗಳಲ್ಲಿ 80 ನಿವೇಶನಗಳು ಮಾತ್ರ ಮಾರಾಟವಾಗಿವೆ. ಇವುಗಳ ಮಾರಾಟದಿಂದ ಕನಿಷ್ಠ ₹ 44.28 ಕೋಟಿ ಗಳಿಸುವ ಉದ್ದೇಶವನ್ನು ಬಿಡಿಎ ಹೊಂದಿತ್ತು. ಹರಾಜಿನಿಂದ ₹ 63.59 ಕೋಟಿ ವರಮಾನ ಬರಲಿದೆ. ನಿರೀಕ್ಷೆಗಿಂತ ₹ 19.31 ಕೋಟಿಗಳಷ್ಟು ಮೊತ್ತ ಹೆಚ್ಚುವರಿಯಾಗಿ ಸಂಗ್ರಹವಾಗಿದೆ. ನಿವೇಶನ ಖರೀದಿ ಸಾಧ್ಯವಾಗದ ಬಿಡ್‌ದಾರರಿಗೆ ಪ್ರಾರಂಭಿಕ ಠೇವಣಿಯ ಮೊತ್ತವನ್ನು ಹಿಂದಿರುಗಿಸುವ ಪ್ರಕ್ರಿಯೆ ಜಾರಿಯಲ್ಲಿದೆ ಎಂದು ಪ್ರಾಧಿಕಾರವು ತಿಳಿಸಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಪ್ರತಿ ಚದರ ಅಡಿಗೆ ₹ 6,608ರಂತೆ ನಿವೇಶನ ಮಾರಾಟವಾಗಿದ್ದು ಗರಿಷ್ಠ ಮೊತ್ತ. ಅರ್ಕಾವತಿ ಬಡಾವಣೆಯಲ್ಲಿ ಪ್ರತಿ ಚದರ ಅಡಿಗೆ ₹ 14,368 ರಂತೆ ನಿವೇಶನ ಮಾರಾಟವಾಗಿದ್ದು ಗರಿಷ್ಠ ಮೊತ್ತ.

2022ರ ಜನವರಿ ತಿಂಗಳಲ್ಲಿ ಮತ್ತೆ ಸುಮಾರು 500 ಮೂಲೆ ನಿವೇಶನಗಳ ಹಾಗೂ 500 ಮಧ್ಯಂತರ ನಿವೇಶನಗಳ ಇ-ಹರಾಜು ನಡೆಸಲಾಗುವುದು ಎಂದು ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಐಪಿಎಸ್ ವರ್ಗಾವಣೆ: ಸಿಸಿಬಿಗೆ ರಮಣ್ ಗುಪ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷದ ಮುನ್ನಾ ದಿನವೇ ಬಹುಪಾಲು ಐಪಿಎಸ್ ಅಧಿಕಾರಿಗಳಿಗೆ ಬಡ್ತಿ ನೀಡಿ, ಹಲವರನ್ನು ವರ್ಗಾಯಿಸಲಾಗಿದೆ. ಕೆ.ವಿ.ಶರತ್ ಚಂದ್ರ ಅವರಿಗೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಹುದ್ದೆಗೆ ಬಡ್ತಿ ನೀಡಿ ಸಿಐಡಿಗೆ ವರ್ಗಾವಣೆ ಮಾಡಲಾಗಿದೆ.

ಎಸ್.ಮುರುಗನ್– ಎಡಿಜಿಪಿ, ಪೊಲೀಸ್ ಸಂವಹನ, ಲಾಜಿಸ್ಟಿಕ್ ಮತ್ತು ಆಧುನೀಕರಣ, ಎಂ.ನಂಜುಂಡಸ್ವಾಮಿ– ಎಡಿಜಿಪಿ, ಗೃಹ ರಕ್ಷಕದಳ, ಸೌಮೇಂದು ಮುಖರ್ಜಿ– ಐಜಿಪಿ, ಗುಪ್ತದಳ, ಬೆಂಗಳೂರು, ಎಸ್.ರವಿ– ಐಜಿಪಿ, ಕರ್ನಾಟಕ ರಾಜ್ಯ ಮೀಸಲು ಪಡೆ, ವಿಪುಲ್ ಕುಮಾರ್– ಐಜಿಪಿ, ಆಂತರಿಕ ಭದ್ರತೆ ವಿಭಾಗ, ಡಾ.ಎ.ಸುಬ್ರಮಣ್ಯೇಶ್ವರರಾವ್– ಐಜಿಪಿ, ಐಜಿ ಎಸಿಪಿ ಬೆಂಗಳೂರು ಪೂರ್ವ, ಲಾಬೂರಾಮ್– ಪೊಲೀಸ್ ಆಯುಕ್ತ, ಹುಬ್ಬಳ್ಳಿ–ಧಾರವಾಡ, ಸಂದೀಪ್ ಪಾಟೀಲ್– ಹೆಚ್ಚುವರಿ ಆಯುಕ್ತ, ಬೆಂಗಳೂರು ಪಶ್ಚಿಮ ವಿಭಾಗ, ಡಾ.ಪಿ.ಎಸ್.ಹರ್ಷ– ಐಜಿಪಿ, ಆಯುಕ್ತ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಿಕಾಶ್ ಕುಮಾರ್ ವಿಕಾಶ್– ಐಜಿಪಿ, ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ (ಬಡ್ತಿ ಪಡೆದವರು).

ರಮಣ್ ಗುಪ್ತ– ಜಂಟಿ ಆಯುಕ್ತ, ಬೆಂಗಳೂರು ಅಪರಾಧ ವಿಭಾಗ(ಸಿಸಿಬಿ), ಡಾ.ಕೆ.ತ್ಯಾಗರಾಜನ್– ಡಿಐಜಿ, ಪೊಲೀಸ್ ನೇಮಕಾತಿ ವಿಭಾಗ, ಡಾ.ಎಂ.ಬಿ.ಬೋರಲಿಂಗಯ್ಯ– ಪೊಲೀಸ್ ಆಯುಕ್ತ, ಬೆಳಗಾವಿ ನಗರ, ರಂಜಿತ್ ಕುಮಾರ್ ಬಂಡಾರು– ಎಸ್ಪಿ, ಭಯೋತ್ಪಾದಕ ನಿಗ್ರಹ ಕೇಂದ್ರ, ಅಂಶುಕುಮಾರ್– ಎಸ್ಪಿ, ಕರಾವಳಿ ಭದ್ರತೆ, ಉಡುಪಿ, ಸಾಹಿಲ್ ಬಾಗ್ಲಾ– ಡಿಸಿಪಿ, ಕಾನೂನು ಸುವ್ಯವಸ್ಥೆ, ಹುಬ್ಬಳ್ಳಿ–ಧಾರವಾಡ, ದೀಪನ್ ಎಂ.ಎನ್– ಎಸ್ಪಿ, ಮಂಗಳೂರು ದಕ್ಷಿಣ ಉಪವಿಭಾಗ,

ಎಂ.ವಿ. ಚಂದ್ರಕಾಂತ್– ಎಸ್ಪಿ, ಅರಣ್ಯವಿಭಾಗ, ಕೊಡಗು, ಮಧುರವೀಣಾ– ಎಸ್ಪಿ, ಸಿಐಡಿ, ಚನ್ನಬಸಪ್ಪ ಲಂಗೋಟಿ– ಎಸ್ಪಿ, ಗುಪ್ತದಳ, ಬೆಳಗಾವಿ, ಜಯಪ್ರಕಾಶ್– ಎಸ್ಪಿ, ಎಸಿಬಿ, ದಾವಣಗೆರೆ, ಕೆ.ಪಿ.ಅಂಜಲಿ– ಎಸ್ಪಿ, ಲೋಕಾಯುಕ್ತ, ಬೆಂಗಳೂರು, ಎಂ.ನಾರಾಯಣ– ಎಸ್ಪಿ, ಗುಪ್ತದಳ, ಬೆಳಗಾವಿ, ರಾಜೀವ್ ಎಂ– ಎಸ್ಪಿ, ಸಿಐಡಿ, ಬೆಂಗಳೂರು, ಎಂ.ಮುತ್ತುರಾಜು– ಎಸ್ಪಿ, ಗುಪ್ತದಳ, ಮೈಸೂರು, ಶೇಖರ್ ಎಚ್– ಎಸ್ಪಿ, ಆಂತರಿಕ ಭದ್ರತಾ ವಿಭಾಗ, ಬೆಂಗಳೂರು, ರವೀಂದ್ರ ಕಾಶಿನಾಥ್ ಗಡಾದಿ– ಎಸ್ಪಿ, ಹೆಸ್ಕಾಂ, ಅನಿತಾ ಭೀಮಪ್ಪ ಹದ್ದಣ್ಣನವರ್– ಎಸ್ಪಿ, ಕರ್ನಾಟಕ ಲೋಕಾಯುಕ್ತ, ವಿಜಯಪುರ, ಎ.ಕುಮಾರಸ್ವಾಮಿ– ಎಸ್ಪಿ, ಲೋಕಾಯುಕ್ತ, ಮಂಗಳೂರು, ಸಾರಾ ಫಾತಿಮಾ– ಎಸ್ಪಿ, ಸಿಐಡಿ, ಬೆಂಗಳೂರು, ಪರಡ್ಡಿ– ಎಸ್ಪಿ, ಚೆಸ್ಕಾಂ, ಎಂ.ಎ. ಅಯ್ಯಪ್ಪ–ಎಸ್ಪಿ, ವಿಚಕ್ಷಣ ವಿಭಾಗ, ಕೆಪಿಟಿಸಿಎಲ್,

ಮಲ್ಲಿಕಾರ್ಜುನ ಬಾಲದಂಡಿ– ಎಸ್ಪಿ, ಗುಪ್ತದಳ, ಬೆಂಗಳೂರು, ಅಮರನಾಥ ರೆಡ್ಡಿ– ಎಸ್ಪಿ, ಎಸಿಬಿ, ಪವನ್ ನೆಜ್ಜೂರು– ಎಸ್ಪಿ, ಲೋಕಾಯುಕ್ತ, ಬೆಂಗಳೂರು, ಶ್ರೀಹರಿ ಬಾಬು– ಎಸ್ಪಿ, ಎಸಿಬಿ, ಬೆಂಗಳೂರು, ಎಂ.ಎಸ್.ಗೀತಾ– ಎಸ್ಪಿ, ಲೋಕಾಯುಕ್ತ, ಬೆಳಗಾವಿ, ರಾಜೀವ್ ಎಂ– ಎಸ್ಪಿ, ಲೋಕಾಯುಕ್ತ, ಡಾ.ಶೋಭಾರಾಣಿ– ಎಸ್ಪಿ, ಬೆಸ್ಕಾಂ, ಸೌಮ್ಯಲತಾ– ಎಸ್ಪಿ, ಡಿಸಿಆರ್‌ಇ, ಬಿ.ಟಿ.ಕವಿತಾ– ಎಸ್ಪಿ, ಡಿಸಿಆರ್‌ಇ, ಮೈಸೂರು, ಅರುಣ್ ಪ್ರಶಾಂತ್– ಎಸ್ಪಿ, ಎಸಿಬಿ, ಬೆಂಗಳೂರು.

ಐಎಎಸ್–ಐಎಫ್‌ಎಸ್ ಬಡ್ತಿ: ವರ್ಷದ ಕೊನೆಯ ದಿನ ಪ್ರವರ್ತರ ನೀಡುವಂತೆ ಎಲ್ಲ ಶ್ರೇಣಿಯ ಐಎಎಸ್ ಹಾಗೂ ಐಎಫ್‌ಎಸ್ ಅಧಿಕಾರಿಗಳಿಗೆ ಬಡ್ತಿ ನೀಡಿ ಸರ್ಕಾರ ಆದೇಶ ಹೊರಡಿಸಿದೆ.

ಎಸ್‌ಜೆಪಿ ರಸ್ತೆಯಲ್ಲಿ ಪಾದಚಾರಿಗಳಿಗೆ ತಪ್ಪದ ಕಿರಿಕಿರಿ • ರಸ್ತೆಯಲ್ಲೇ ಸಾಲುಗಟ್ಟಿ ನಿಲ್ಲುವ ತಳ್ಳುಗಾಡಿ

ಸಿಲ್ವರ್ ಜ್ಯುಬಿಲಿ ರಸ್ತೆ: ನಿತ್ಯವೂ ಗಲಿಬಿಲಿ

• ಜಿ.ಶಿವಕುಮಾರ



ಎಸ್‌.ಜೆ.ಪಿ.ರಸ್ತೆಯಲ್ಲಿ ಶುಕ್ರವಾರ ಕಂಡು ಬಂದ ವಾಹನ ದಟ್ಟಣೆ– ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಬೆಂಗಳೂರು: ಕಣ್ಣು ಹಾಯಿಸಿದಷ್ಟೂ ದೂರದವರೆಗೆ ಸಾಲುಗಟ್ಟಿ ನಿಂತಿರುವ ವಾಹನಗಳು. ಮಾರ್ಗ ಮಧ್ಯದಲ್ಲೇ ತಳ್ಳುಗಾಡಿಗಳನ್ನು ನಿಲ್ಲಿಸಿಕೊಂಡು ಹೂವು, ಹಣ್ಣು, ತರಕಾರಿ ಮಾರುತ್ತಿರುವ ವ್ಯಾಪಾರಿಗಳು. ಕಿಷ್ಕಿಂಧೆಯಂತಾದ ಪ್ರದೇಶದಲ್ಲೇ ನುಸುಳಿ ಮುಂದೆ ಸಾಗಲು ಪ್ರಯತ್ನಿಸುವ ದ್ವಿಚಕ್ರ ವಾಹನ ಸವಾರರು...

ನಗರದ ಸಿಲ್ವರ್ ಜ್ಯುಬಿಲಿ ಪಾರ್ಕ್ (ಎಸ್‌ಜೆಪಿ) ರಸ್ತೆಯಲ್ಲಿ ಪ್ರಯಾಣಿಸುವವರಿಗೆ ನಿತ್ಯವೂ ಕಂಡುಬರುವ ದೃಶ್ಯಗಳಿವು.

ಕೆ.ಆರ್.ಮಾರುಕಟ್ಟೆ ವೃತ್ತದಿಂದ ಪುರಭವನ, ಕಾರ್ಪೊರೇಷನ್ ವೃತ್ತ, ಮೈಸೂರು ಬ್ಯಾಂಕ್ ವೃತ್ತ ಹಾಗೂ ಮೆಜೆಸ್ಟಿಕ್‌ಗೆ ಸಂಪರ್ಕ ಬೆಸೆಯುವ ಈ ರಸ್ತೆಯಲ್ಲಿ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತವೆ. ಹೀಗಾಗಿ ಬೆಳಿಗ್ಗೆ, ಮಧ್ಯಾಹ್ನ ಹಾಗೂ ಸಂಜೆಯ ಸಮಯದಲ್ಲಿ ಸಂಚಾರ ದಟ್ಟಣೆ ಏರ್ಪಡುತ್ತದೆ. ಇದರಿಂದ ಶಾಲೆ-ಕಾಲೇಜು ವಿದ್ಯಾರ್ಥಿಗಳು, ಉದ್ಯೋಗಿಗಳು ಹಾಗೂ ಕಾರ್ಮಿಕರು ಕಿರಿಕಿರಿ ಅನುಭವಿಸುವಂತಾಗಿದೆ.

ಕೆ.ಆರ್.ಮಾರುಕಟ್ಟೆ ಬಸ್ ನಿಲ್ದಾಣದಿಂದ ಹೊಸಕೋಟೆ, ನೆಲಮಂಗಲ, ಹಲಸೂರು, ಇಂದಿರಾನಗರ, ಕೆ.ಆರ್.ಪುರ, ಮಲ್ಯ ಆಸ್ಪತ್ರೆ, ರಿಚ್ಮಂಡ್ ವೃತ್ತ, ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಟ್ರಿನಿಟಿ ವೃತ್ತ, ಶಿವಾಜಿನಗರ, ವಿಧಾನಸೌಧ, ಆರ್.ಟಿ.ನಗರ, ಯಶವಂತಪುರ ಸೇರಿದಂತೆ ನಗರದ ಪ್ರಮುಖ ಭಾಗಗಳಿಗೆ ಹೋಗುವ ಬಿಎಂಟಿಸಿ ಬಸ್‌ಗಳು ಈ ಮಾರ್ಗವನ್ನೇ ಅವಲಂಬಿಸಬೇಕಾಗಿದೆ. ಬ್ಯಾಟರಾಯನಪುರ, ಮೈಸೂರು ರಸ್ತೆ ಭಾಗದಿಂದ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಮೇಲ್ಸೇತುವೆ ಮೂಲಕ ಮೆಜೆಸ್ಟಿಕ್ ಹಾಗೂ ಇತರೆಡೆ ಹೋಗುವವರು ಸಿಲ್ವರ್ ಜ್ಯುಬಿಲಿ ಉದ್ಯಾನದ ಪಕ್ಕದಿಂದ ಸಾಗಿ ಈ ರಸ್ತೆಯನ್ನು ಸೇರಬೇಕಾಗುತ್ತದೆ. ಹೀಗಾಗಿ ವಾರಾಂತ್ಯದ ದಿನಗಳಲ್ಲಿ ದಟ್ಟಣೆ ದುಪ್ಪಟ್ಟಾಗುತ್ತದೆ. ಬಸ್, ಕಾರು, ಆಟೊಗಳಲ್ಲಿ ಸಾಗುವವರು ದಟ್ಟಣೆಯಲ್ಲಿ ಸಿಲುಕಿ ಹೈರಾಣಾಗುವುದು ಸಾಮಾನ್ಯವಾಗಿದೆ.

‘ಎಸ್‌ಜೆಪಿ ರಸ್ತೆಯ ಒಂದು ಬದಿಯಲ್ಲಿ ಗೃಹಬಳಕೆ, ಗೃಹಾಲಂಕಾರ, ಗೃಹ ನಿರ್ಮಾಣಕ್ಕೆ ಉಪಯೋಗಿಸುವ ವಸ್ತುಗಳ ಮಾರಾಟ ಮಳಿಗೆಗಳಿವೆ. ಖರೀದಿಗೆಂದು ಬರುವ ಗ್ರಾಹಕರು ರಸ್ತೆ ಬದಿಯಲ್ಲೇ ವಾಹನಗಳನ್ನು ನಿಲುಗಡೆ ಮಾಡುತ್ತಾರೆ. ಆ ವಾಹನಗಳ ಮುಂಬದಿಯಲ್ಲೇ ವ್ಯಾಪಾರಿಗಳು ತಳ್ಳುಗಾಡಿಗಳನ್ನು ನಿಲ್ಲಿಸಿಕೊಂಡಿರುತ್ತಾರೆ. ರಸ್ತೆಯ ಅರ್ಧಭಾಗವನ್ನು ಅವರೇ ಆಕ್ರಮಿಸಿಕೊಂಡಿರುತ್ತಾರೆ. ಉಳಿದ 30 ಅಡಿ ಜಾಗದಲ್ಲೇ ಇತರೆ ವಾಹನಗಳು ಸಂಚರಿಸಬೇಕು. ಹೀಗಾಗಿಯೇ ದಟ್ಟಣೆ ಏರ್ಪಡುತ್ತದೆ’ ಎಂದು ನಗರ್ತರಪೇಟೆಯ ನಿವಾಸಿ ಸತೀಶ್ ಬೇಸರ ವ್ಯಕ್ತಪಡಿಸಿದರು.

‘ಕೆಲವೆಡೆ ರಸ್ತೆ ಹಾಳಾಗಿದೆ. ಅಲ್ಲಲ್ಲಿ ಗುಂಡಿಗಳೂ ಬಿದ್ದಿವೆ. ಹೀಗಾಗಿ ದ್ವಿಚಕ್ರವಾಹನ ಸವಾರರಿಗೆ ಸಮಸ್ಯೆಯಾಗುತ್ತಿದೆ. ರಸ್ತೆ ಮಧ್ಯೆಯೇ ಸರಕುಸಾಗಣೆ ವಾಹನಗಳನ್ನು ನಿಲ್ಲಿಸಿಕೊಂಡು ವಿವಿಧೆಡೆಯಿಂದ ತಂದ ಸರಕುಗಳನ್ನು ಇಳಿಸುತ್ತಿರುತ್ತಾರೆ. ಪೀಠೋಪಕರಣಗಳು, ಕಬ್ಬಿಣದ ಸಾಮಾಗ್ರಿಗಳನ್ನು ಖರೀದಿಸಿದವರೂ ರಸ್ತೆಯಲ್ಲೇ ವಾಹನಗಳನ್ನು ನಿಲುಗಡೆ ಮಾಡಿ ಅವುಗಳನ್ನು ತುಂಬುತ್ತಿರುತ್ತಾರೆ. ಇದಕ್ಕೆ ಕಡಿವಾಣ ಹಾಕುವವರೇ ಇಲ್ಲದಂತಾಗಿದೆ. ದಟ್ಟಣೆ ಏರ್ಪಡಲು ಇದು ಕೂಡ ಮುಖ್ಯ ಕಾರಣ’ ಎಂದು ವಿವರಿಸಿದರು.

‘ರಸ್ತೆಯಲ್ಲಿ ಓಡಾಡುವುದಕ್ಕೇ ಭಯ’

‘ಎಸ್‌ಜೆಪಿ ರಸ್ತೆಯು ಸದಾ ವಾಹನಗಳಿಂದ ಗಿಜಿಗುಡುತ್ತಿರುತ್ತದೆ. ಕೆಲವರು ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸುತ್ತಿರುತ್ತಾರೆ. ಹೀಗಾಗಿ ಈ ಮಾರ್ಗದಲ್ಲಿ ಸಾಗುವುದಕ್ಕೆ ಭಯವಾಗುತ್ತದೆ’ ಎಂದು ಹನುಮಂತನಗರದ ನಿವಾಸಿ ಶಿವರಂಜನ್ ಹೇಳಿದರು.



ಶಿವರಂಜನ್

‘ಸಂಚಾರ ಪೊಲೀಸ್ ಸಿಬ್ಬಂದಿ ರಸ್ತೆಯಲ್ಲೇ ವಾಹನಗಳನ್ನು ನಿಲ್ಲಿಸಿಕೊಂಡು ಟೋಯಿಂಗ್ ಮಾಡುತ್ತಿರುತ್ತಾರೆ. ರಸ್ತೆ ಬದಿಯಲ್ಲಿ ವಾಹನಗಳನ್ನು ನಿಲುಗಡೆ ಮಾಡದಂತೆ ಕಟ್ಟುನಿಟ್ಟಿನ ನಿಯಮ ರೂಪಿಸಿಬೇಕು. ಹಾಗಾದಾಗ ಮಾತ್ರ ಸಮಸ್ಯೆಗೆ ಪರಿಹಾರ ಸಾಧ್ಯ’ ಎಂದು ತಿಳಿಸಿದರು.

‘ಸಂಜೆ ವೇಳೆ ಈ ರಸ್ತೆಯಲ್ಲಿ ಸಾಗುವುದೇ ದೊಡ್ಡ ಸವಾಲು. ನಗರ್ತರಪೇಟೆ, ತಿಗಳರಪಾಳ್ಯ, ಎಸ್.ಪಿ (ಸದರ್ ಪತ್ರಪ್ಪ) ರಸ್ತೆಗೆ ಹೋಗುವವರು ಮುಖ್ಯರಸ್ತೆಯಿಂದ ಒಳರಸ್ತೆಗೆ ಏಕಾಏಕಿ ತಿರುವು ಪಡೆಯುತ್ತಾರೆ. ಆಗ ವಾಹನ ಡಿಕ್ಕಿಯಾಗಿ ಗಾಯಗಳಾಗಿರುವ ನಿದರ್ಶನಗಳೂ ಸಾಕಷ್ಟಿವೆ’ ಎಂದರು.

ಪ್ರಯಾಣ ಪ್ರಯಾಸ

‘ಪುರಭವನ ಬಳಿ ಧರಣಿ ನಡೆದರೆ ಸಂಕಟ’

‘ಪುರಭವನ ಬಳಿ ಆಗಾಗ ಪ್ರತಿಭಟನೆ, ಧರಣಿಗಳು ನಡೆಯುತ್ತಲೇ ಇರುತ್ತವೆ. ಆ ವೇಳೆಯಲ್ಲಿ ವಿಪರೀತ ದಟ್ಟಣೆ ಏರ್ಪಡುತ್ತದೆ. ವಾಹನ ಸವಾರರು, ಬಸ್ ಹಾಗೂ ಆಟೊಗಳಲ್ಲಿ ಪ್ರಯಾಣಿಸುವವರ ಸಂಕಟವೂ ಹೆಚ್ಚುತ್ತದೆ’ ಎಂದು ಚಾಮರಾಜಪೇಟೆಯ ಕಾರ್ತಿಕ್ ಬೇಸರ ವ್ಯಕ್ತಪಡಿಸಿದರು.

‘ತುರ್ತು ಕಾರ್ಯಗಳಿಗೆ ಹೋಗುವವರು ದಟ್ಟಣೆಯಲ್ಲಿ ಸಿಲುಕಿ ತೊಂದರೆ ಅನುಭವಿಸಬೇಕಾಗುತ್ತದೆ. ಮೆಜೆಸ್ಟಿಕ್ ಹಾಗೂ ಜೆ.ಸಿ. ರಸ್ತೆಯಿಂದ ಬರುವ ವಾಹನಗಳು ಪುರಭವನ ಬಸ್ ನಿಲ್ದಾಣದ ಬಳಿ ಬಲಕ್ಕೆ ತಿರುವು ಪಡೆದು ಪೈಲ್ವಾನ್ ಕೃಷ್ಣಪ್ಪ ರಸ್ತೆಯಲ್ಲಿ ಸಾಗುತ್ತವೆ. ಆಗ ಎಸ್‌ಜೆಪಿ ರಸ್ತೆ ಮೂಲಕ ಬರುವವರು ಸಿಗ್ನಲ್ ಬಿಡುವವರೆಗೂ ಕಾಯಬೇಕು’ ಎಂದು ತಿಳಿಸಿದರು.

ಎಂಇಎಸ್ ನಿಷೇಧಕ್ಕೆ ಆಗ್ರಹ ವಿವಿಧ ಸಂಘಟನೆಗಳಿಂದ ರ‍್ಯಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾರಾಷ್ಟ್ರ ಏಕೀಕರಣ ಸಮಿತಿಯನ್ನು (ಎಂಇಎಸ್) ರಾಜ್ಯದಲ್ಲಿ ನಿಷೇಧಿಸಬೇಕು’ ಎಂದು ಒತ್ತಾಯಿಸಿ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪುರಭವನದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ರ‍್ಯಾಲಿ ನಡೆಸಲು ಪ್ರತಿಭಟನಾಕಾರರು ಉದ್ದೇಶಿಸಿದ್ದರು. ಆದರೆ ಪೊಲೀಸರು ಇದಕ್ಕೆ ಅವಕಾಶ ನೀಡಲಿಲ್ಲ.

ಪುರಭವನದ ಎದುರು ಸೇರಿದ್ದ ಪ್ರತಿಭಟನಾಕಾರರು ಎಂಇಎಸ್ ವಿರುದ್ಧ ಧಿಕ್ಕಾರ ಕೂಗಿದರು. ‘ಬೇಕೆ ಬೇಕು ನ್ಯಾಯ ಬೇಕು’, ‘ನಮ್ಮ ನಾಡ ಧ್ವಜ ಸುಟ್ಟ ಕಿಡಿಗೇಡಿಗಳಿಗೆ ಧಿಕ್ಕಾರ’, ‘420 ಎಂಇಎಸ್‌ಗೆ ಧಿಕ್ಕಾರ’ ಎಂಬ ಘೋಷಣೆಗಳನ್ನು ಕೂಗಿದರು. ಎಂಇಎಸ್ ಕಿಡಿಗೇಡಿಗಳ ಪ್ರತಿಕೃತಿಗೆ ಚಪ್ಪಲಿಯಿಂದ ಹೊಡೆದು ಆಕ್ರೋಶ ವ್ಯಕ್ತಪಡಿಸಿದರು. ರಸ್ತೆಯಲ್ಲೂ ಉರುಳಾಡಿದರು. ಮುನ್ನೆಚ್ಚರಿಕೆ ದೃಷ್ಟಿಯಿಂದ ಪ್ರತಿಭಟನಾಕಾರರನ್ನು ಬಿಬಿಎಂಪಿ ಕೇಂದ್ರ ಕಚೇರಿ ಬಳಿ ಬಂಧಿಸಿದ ಪೊಲೀಸರು ಬಳಿಕ ಬಿಡುಗಡೆ ಮಾಡಿದರು.

‘ಎಂಇಎಸ್ ಸಂಘಟನೆ ನಿಷೇಧಿಸಲೇಬೇಕು. ಈ ಬೇಡಿಕೆಯಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಈ ವಿಚಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗಮನಕ್ಕೆ ತಂದಿದ್ದೇವೆ. ಅವರು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರಿಂದ ಕರ್ನಾಟಕ ಬಂದ್ ಮುಂದೂಡಿದ್ದೇವೆ’ ಎಂದು ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ತಿಳಿಸಿದರು.

‘ಮುಖ್ಯಮಂತ್ರಿಯವರು ತಮ್ಮ ಮಾತಿಗೆ ಬದ್ಧರಾಗಬೇಕು. ಎಂಇಎಸ್ ನಿಷೇಧಿಸದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಹೋರಾಟ ನಡೆಸುತ್ತೇವೆ. ಆಗ ಸಂಧಾನ ಸಭೆ ಕರೆದರೂ ಹೋಗುವುದಿಲ್ಲ’ ಎಂದು ಎಚ್ಚರಿಸಿದರು.



ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ವಾಟಾಳ್ ನಾಗರಾಜ್ ನೇತೃತ್ವದಲ್ಲಿ ನಗರದಲ್ಲಿ ಶುಕ್ರವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು– ಪ್ರಜಾವಾಣಿ ಚಿತ್ರ

ರಾಜ್ಯಪಾಲರಿಗೆ ಕರವೇ ಮನವಿ

ಬೆಂಗಳೂರು: ಶಿವಸೇನಾ ಹಾಗೂ ಎಂಇಎಸ್ ಸಂಘಟನೆಗಳನ್ನು ನಿಷೇಧಿಸಲು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆಯು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿತು.

‘ಎಂಇಎಸ್, ಶಿವಸೇನಾದಂತಹ ಸಂಘಟನೆಗಳ ಮೂಲಕ ಬೆಳಗಾವಿಯಲ್ಲಿ ಸದಾ ಸಂಘರ್ಷದ ವಾತಾವರಣ ನಿರ್ಮಿಸುತ್ತಿದ್ದಾರೆ. ಬೆಳಗಾವಿಯಲ್ಲಿ ಸಂಘಟಿತ ಅಪರಾಧಗಳನ್ನು ನಡೆಸುವ, ಎರಡು ಭಾಷಾ ಸಮುದಾಯಗಳ ನಡುವೆ ದ್ವೇಷ, ಪ್ರತೀಕಾರದ ಭಾವನೆ ಮೂಡಿಸುವ ಹಾಗೂ ಹಿಂಸಾಚಾರಕ್ಕೆ ಪ್ರಚೋದನೆ ನೀಡುವ ಕಾರ್ಯದಲ್ಲಿ ತೊಡಗಿದ್ದಾರೆ’ ಎಂದು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡ ದೂರಿದರು.

‘ಸಂಗೊಳ್ಳಿ ರಾಯಣ್ಣನ ಪ್ರತಿಮೆ ಭಗ್ನಗೊಳಿಸಿದ ಕೆಲ ಪುಂಡರು, ಕನ್ನಡಿಗರ ಆತ್ಮಾಭಿಮಾನದ ಪ್ರತೀಕವಾಗಿರುವ ಕನ್ನಡ ಧ್ವಜಕ್ಕೂ ಬೆಂಕಿ ಇಟ್ಟರು. ಮಹಾರಾಷ್ಟ್ರದ ವಿವಿಧೆಡೆ ಈಗಲೂ ಕನ್ನಡಿಗರ ಮೇಲೆ ಹಲ್ಲೆ ನಡೆಸಲಾಗುತ್ತಿದೆ. ಬೆಳಗಾವಿಯ ಮೇಲೆ ಹಕ್ಕು ಸ್ಥಾಪಿಸಲು ಮಹಾರಾಷ್ಟ್ರ ಸರ್ಕಾರ ಹುನ್ನಾರಗಳನ್ನು ಮಾಡುತ್ತಲೇ ಇದೆ. ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಬೇಕು ಎಂಬ ಬೇಡಿಕೆಯಲ್ಲಿ ಯಾವ ಅರ್ಥವೂ ಇಲ್ಲ. ಯಾಕೆಂದರೆ ಅದು ಕನ್ನಡಿಗರ ನೆಲ’ ಎಂದು ಹೇಳಿದರು.

‘ಶಿವಸೇನಾ ಮತ್ತು ಎಂಇಎಸ್ ಹದ್ದುಮೀರಿ ವರ್ತಿಸುತ್ತಿವೆ. ನಮ್ಮ ರಾಜ್ಯ ಸರ್ಕಾರದ ಆಸ್ತಿಪಾಸ್ತಿಗೆ ಹಾನಿ ಮಾಡುವುದಲ್ಲದೆ, ಬೆಳಗಾವಿಯ ಜನರಲ್ಲಿ ಭಯ, ಆತಂಕ ಮೂಡಿಸುತ್ತಿವೆ. ರಾಜ್ಯದಲ್ಲಿ ದ್ವೇಷದ ವಾತಾವರಣ ನಿರ್ಮಿಸಿ, ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದಿರುವ ಇವುಗಳ ನಿಷೇಧ ತಕ್ಷಣವೇ ಆಗಬೇಕು. ಅದಕ್ಕೆ ಅಗತ್ಯವಿರುವ ಕಾನೂನು ಮತ್ತು ರಾಜಕೀಯ ಪ್ರಕ್ರಿಯೆಗಳನ್ನು ಕೂಡಲೇ ಆರಂಭಿಸಬೇಕು’ ಎಂದು ಆಗ್ರಹಿಸಿದರು.



ಕವಿಗೋಷ್ಠಿ ಕಾರ್ಯಕ್ರಮದಲ್ಲಿ ವೈ. ಬಿ.ಎಚ್. ಜಯದೇವ್ ಇತರರು ಇದ್ದರು.

ಕುವೆಂಪು ಜನ್ಮದಿನ: ಸ್ಮಶಾನದಲ್ಲಿ ಕವಿಗೋಷ್ಠಿ

ಬೆಂಗಳೂರು: ‘ಕುವೆಂಪು ಅವರ ಸಮಗ್ರ ಸಾಹಿತ್ಯವನ್ನು ಇಂದಿನ ಯುವ ಜನಾಂಗ ಓದಬೇಕು. ಅವರು ಸಾಹಿತ್ಯದ ಮೂಲಕ ಸಾರಿದ ಜೀವನ ಮೌಲ್ಯಗಳನ್ನು ಅನುಸರಿಸಬೇಕು’ ಎಂದು ಲೇಖಕ ವೈ.ಬಿ.ಎಚ್. ಜಯದೇವ್ ಹೇಳಿದರು.

ಕುವೆಂಪು ಜನ್ಮದಿನದ ಅಂಗವಾಗಿ ಮಲ್ಲಸಂದ್ರದ ರುದ್ರಭೂಮಿಯಲ್ಲಿ ಕನ್ನಡ ಕ್ರಿಯಾ ಸಮಿತಿ ಆಯೋಜಿಸಿದ್ದ ಸ್ಮಶಾನ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕವಿಗೋಷ್ಠಿ ಉದ್ಘಾಟಿಸಿದ ಲೇಖಕ ಗುರುರಾಜ್ ಎಸ್ .ದಾವಣಗೆರೆ, ‘ಕುವೆಂಪು ಅವರು ಸ್ವಾತಂತ್ರ್ಯ ಪೂರ್ವದಲ್ಲೇ ತಮ್ಮ ಕೃತಿಗಳ ಮೂಲಕ ವೈಚಾರಿಕ ಪ್ರಜ್ಞೆಯನ್ನು ಬಿತ್ತಿದ್ದರು. ವಿಶ್ವಮಾನವ ಸಂದೇಶ ಸಾರಿದ್ದರು’ ಎಂದರು.

ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಜಿ. ಕುಮಾರ್, ‘ಕುವೆಂಪು ಅವರ ಕೃತಿಗಳಲ್ಲಿ ಮಾನವೀಯತೆ, ಸಾಮಾಜಿಕ ಕಳಕಳಿ, ಪ್ರೀತಿ, ಕರುಣೆ, ಬಂಡಾಯ, ವೈಚಾರಿಕತೆ ಈ ಎಲ್ಲವನ್ನೂ ಕಾಣಬಹುದು’ ಎಂದರು.

ಮಮತಾ ವಾರನಹಳ್ಳಿ, ಡಾ. ರಂಗನಾಥ್, ಕೆ.ಎಂ ರೇವಣ್ಣ, ಶಾಂತ ಕುಮಾರ್, ಚನ್ನಕೇಶವ ಲಾಳನಕಟ್ಟೆ, ಭಾರತಿ ಕೋಕಲೆ, ಡಾ.ಮಂಜುನಾಥ್, ಚಿತ್ತಣ್ಣ ದ್ವಾರನಕುಂಟೆ ಸೇರಿ 30ಕ್ಕೂ ಹೆಚ್ಚು ಕವಿಗಳು ಕವಿಗೋಷ್ಠಿಯಲ್ಲಿ ಭಾಗವಹಿಸಿದರು.

ಜಯಕರ್ನಾಟಕ ಸಂಘಟನೆ ಅಧ್ಯಕ್ಷ ಬಿ.ಎನ್.ಜಗದೀಶ್, ಕಾದಂಬರಿಕಾರ ಕಂನಾಡಿಗಾ ನಾರಾಯಣ, ಲಕ್ಷ್ಮೀ ಶ್ರೀನಿವಾಸ್ ಉಪಸ್ಥಿತರಿದ್ದರು. ಗಾಯಕರಾದ ಕೃಷ್ಣಮೂರ್ತಿ, ಈ. ಬಸವರಾಜ್ ಕುವೆಂಪು ರಚನೆಯ ಗೀತೆಗಳನ್ನು ಹಾಡಿದರು.

ಅನುದಾನ ಹಂಚಿಕೆ ತಾರತಮ್ಯ: ದೇವೇಗೌಡ ಆಕ್ರೋಶ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಸುಂಕದಕಟ್ಟೆ, ಹೆಗ್ಗನಹಳ್ಳಿ, ರಾಜಗೋಪಾಲನಗರ, ನೆಲಗದರನಹಳ್ಳಿ, ಚಿಕ್ಕಸಂದ್ರ, ಎ.ಜಿ.ಬಿ.ಲೇಔಟ್ ಗ್ರಾಮಗಳಲ್ಲಿ ಗುಂಡಿ ಬಿದ್ದ ರಸ್ತೆಗಳು, ಶೆಟ್ಟಿಹಳ್ಳಿ ಗ್ರಾಮದಲ್ಲಿ ಅರ್ಧಕ್ಕೆ ನಿಂತ ರೈಲ್ವೆ ಕೆಳಸೇತುವೆ ಕಾಮಗಾರಿ ಹಾಗೂ ಗಬ್ಬೆದ್ದು ನಾರುತ್ತಿರುವ ಚಿಕ್ಕಬಾಣಾವರ ಕೆರೆಯನ್ನು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಶುಕ್ರವಾರ ವೀಕ್ಷಿಸಿದರು.

ಈ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಅನಾದರ ತೋರಿರುವ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ದೇವೇಗೌಡರು, ‘ಕ್ಷೇತ್ರದ ಜೆಡಿಎಸ್ ಮುಖಂಡರನ್ನು ಜೊತೆಗೆ ಕರೆದೊಯ್ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡುತ್ತೇನೆ. ಅನುದಾನದ ಹಂಚಿಕೆಯಲ್ಲಿ ನಡೆದಿರುವ ತಾರತಮ್ಯದ ಕುರಿತು ಚರ್ಚೆ ಮಾಡುತ್ತೇನೆ. ಮುಖ್ಯಮಂತ್ರಿಯವರು ಸ್ಪಂದಿಸದೇ ಹೋದರೆ, ಮುಂದೆ ಹೋರಾಟ ನಡೆಸುವುದು ಅನಿವಾರ್ಯ’ ಎಂದು ಎಚ್ಚರಿಸಿದರು.

ವಿವಿಧ ಪ್ರದೇಶಗಳಿಗೆ ಭೇಟಿ ನೀಡಿದ ಬಳಿಕ ಅಬ್ಬಿಗೆರೆ ಗ್ರಾಮದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಚುನಾವಣೆ ಸಮಯದಲ್ಲಿ ರಾಜಕೀಯ ಮಾಡುವುದು ಸರ್ವೆ ಸಾಮಾನ್ಯ. ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಅವರ ಪಕ್ಷದ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಮಾತ್ರ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಇಂತಹ ತಾರತಮ್ಯವನ್ನು ರಾಜ್ಯ ರಾಜಕಾರಣದಲ್ಲಿ ನಾನು ನೋಡಿಯೇ ಇಲ್ಲ. ಅನುದಾನ ಹಂಚಿಕೆ ವಿಚಾರದಲ್ಲಿ ಇಷ್ಟೊಂದು ರಾಜಕೀಯ ಸಲ್ಲದು. ಇದು ಜನರಿಗೆ ಮಾಡುವ ಅನ್ಯಾಯ’ ಎಂದರು.

‘ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ನೀಡಿದ್ದ ಅನುದಾನವನ್ನು ಸರ್ಕಾರ ಹಿಂಪಡೆದಿದೆ. ಕಡಿತ ಮಾಡಿದ ಅನುದಾನವನ್ನು ಮತ್ತೆ ಬಿಡುಗಡೆ ಮಾಡುವಂತೆ ಹೈಕೋರ್ಟ್ ಆದೇಶಿಸಿದೆ. ಆದರೂ ಸರ್ಕಾರ ಅನುದಾನ ಬಿಡುಗಡೆಗೆ ವಿಳಂಬ ನೀತಿ ಅನುಸರಿಸುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ದಾಸರಹಳ್ಳಿ ವಿಧಾನಸಭಾಕ್ಷೇತ್ರಕ್ಕೆ ನೀಡುತ್ತಿರುವ ಅಲ್ಪ ಅನುದಾನವನ್ನು ಬಳಸಿಯೂ ಶಾಸಕ ಆರ್. ಮಂಜುನಾಥ್ ಜನಮೆಚ್ಚುವಂತೆ ಕೆಲಸವನ್ನು ಮಾಡುತ್ತಿದ್ದಾರೆ’ ಎಂದರು.

ಶಾಸಕ ಆರ್.ಮಂಜುನಾಥ್, ಜೆ.ಡಿ.ಎಸ್.ಮುಖಂಡರಾದ ರುದ್ರಗೌಡ .ಸಿ. ವೆಂಕಟೇಶ್ ಜೊತೆಯಲ್ಲಿದ್ದರು.



ದೇವೇಗೌಡ ಅವರು ದಾಸರಹಳ್ಳಿ ಕ್ಷೇತ್ರದ ಜನರ ಸಮಸ್ಯೆಗಳನ್ನು ಆಲಿಸಿದರು. ಶಾಸಕ ಆರ್‌.ಮಂಜುನಾಥ್ ಇದ್ದಾರೆ

‘₹ 650 ಕೋಟಿ ಅನುದಾನಕ್ಕೆ ಕತ್ತರಿ’

‘ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ₹ 650 ಕೋಟಿ ಅನುದಾನ ಹಂಚಿಕೆಯಾಗಿತ್ತು. ರಾಜಕಾಲುವೆ, ಮಳೆ ನೀರು ಚರಂಡಿ, ರಸ್ತೆಗಳ ಡಾಂಬರೀಕರಣ, ಕಾಂಕ್ರೀಟೀಕರಣ, ಉದ್ಯಾನಗಳ ಅಭಿವೃದ್ಧಿ, ರಸ್ತೆ ವಿಸ್ತರಣೆ ಕಾಮಗಾರಿಗಳ ಅನುಷ್ಠಾನಕ್ಕೆ ಸಿದ್ಧತೆ ನಡೆಸಿದ್ದೆವು. ಟೆಂಡರ್ ಕರೆದು ಕಾರ್ಯಾದೇಶ ನೀಡುವಷ್ಟರಲ್ಲಿ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂತು. ಹಂಚಿಕೆ ಮಾಡಿದ್ದ ಅಷ್ಟೂ ಅನುದಾನವನ್ನು ಸರ್ಕಾರ ಹಿಂಪಡೆಯಿತು’ ಎಂದು ಶಾಸಕ ಆರ್.ಮಂಜುನಾಥ್ ಆರೋಪಿಸಿದರು.

‘ಬಿಬಿಎಂಪಿಗೆ ಹೊಸತಾಗಿ ಸೇರಿದ 110 ಗ್ರಾಮಗಳಲ್ಲಿ ಕೆಲವು ಈ ಕ್ಷೇತ್ರದ ವ್ಯಾಪ್ತಿಯಲ್ಲಿವೆ. ಅವುಗಳ ಅಭಿವೃದ್ಧಿ ಕಾಮಗಾರಿಗಳಿಗೆ ₹ 405 ಕೋಟಿ ಅಗತ್ಯವಿದೆ ಎಂದು ಸರ್ಕಾರವೇ ಅಂದಾಜು ಪಟ್ಟಿ ತಯಾರಿಸಿದೆ. ಬಿಜೆಪಿ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ತಲಾ ₹ 250 ಕೋಟಿ ಅನುದಾನ ಹಂಚಿಕೆ ಮಾಡಿರುವ ಸರ್ಕಾರ ದಾಸರಹಳ್ಳಿ ಕ್ಷೇತ್ರಕ್ಕೆ ಕೇವಲ ₹ 25 ಕೋಟಿ ನೀಡಿದೆ. ಈ ಬಾರಿಯ ಮಳೆಗೆ ಕ್ಷೇತ್ರದ ರಸ್ತೆಗಳು ಅಧ್ವಾನ ಸ್ಥಿತಿ ತಲುಪಿವೆ’ ಎಂದು ದೂರಿದರು.

ಗಾಂಜಾ ಸರಬರಾಜು: ಪೆಡ್ಲರ್ ಬಂಧನ

ಬೆಂಗಳೂರು: ಹೊಸ ವರ್ಷಾಚರಣೆ ವೇಳೆ ಪಬ್‌ಗಳಲ್ಲಿ ನಡೆಯುವ ಪಾರ್ಟಿಗಳಿಗೆ ಮಾದಕ ವಸ್ತು ಸರಬರಾಜು ಮಾಡಲು ಮುಂದಾಗಿದ್ದ ಪೆಡ್ಲರ್‌ನನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಒಡಿಶಾ ಮೂಲದ ಸತ್ಯ ಪ್ರಸಾನ್ ಬಂಧಿತ. ಆತನಿಂದ ₹7 ಲಕ್ಷ ಮೌಲ್ಯದ 32 ಕೆ.ಜಿ.ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಹೊಸ ವರ್ಷಾಚರಣೆ ವೇಳೆ ನಗರದ ವಿವಿಧೆಡೆ ನಡೆಯುವ ಪಾರ್ಟಿಗಳಿಗೆ ಮಾದಕ ವಸ್ತು ಸರಬರಾಜು ಮಾಡಿ ಅಧಿಕ ಲಾಭ ಗಳಿಸುವುದು ಆರೋಪಿಯ ಉದ್ದೇಶವಾಗಿತ್ತು. ಇದನ್ನು ವಿಚಾರಣೆ ವೇಳೆ ಆತ ಒಪ್ಪಿಕೊಂಡಿದ್ದಾನೆ. ಡ್ರಗ್ಸ್ ಮಾರಾಟ ಜಾಲದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಅನುಮಾನವಿದೆ. ಈ ದಿಸೆಯಲ್ಲಿ ತನಿಖೆ ನಡೆಸುತ್ತಿದ್ದೇವೆ’ ಎಂದು ತಿಳಿಸಿದ್ದಾರೆ.

10 ಗ್ರಾಂ ಕ್ರಿಸ್ಟಲ್ ಪೌಡರ್ ಜಪ್ತಿ: ಠಾಣೆ ವ್ಯಾಪ್ತಿಯಲ್ಲಿ ಮಾದಕ ವಸ್ತು ಮಾರಲು ಯತ್ನಿಸಿದ್ದ ಮೂವರನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದು, 10 ಗ್ರಾಂ ಕ್ರಿಸ್ಟಲ್ ಪೌಡರ್ ಜಪ್ತಿ ಮಾಡಿದ್ದಾರೆ.

‘ನೈಜೀರಿಯಾದ ಪ್ರಜೆಯೊಬ್ಬನಿಂದ ಕ್ರಿಸ್ಟಲ್ ಪೌಡರ್ ಪಡೆದಿದ್ದ ಆರೋಪಿಗಳು ಅದನ್ನು ಮಾರಲು ಮುಂದಾಗಿದ್ದರು. ಈ ವಿಷಯವನ್ನು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ’ ಎಂದರು.

ಕಳ್ಳತನ: ‘ಎಸ್ಕೇಪ್ ಕಾರ್ತಿಕ್’ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗಳಿಗೆ ನುಗ್ಗಿ ಕಳ್ಳತನ ಮಾಡುವುದನ್ನೇ ಕಾಯಕವಾಗಿಸಿಕೊಂಡಿದ್ದ ಕಾರ್ತಿಕ್ ಕುಮಾರ್ ಯಾನೆ ಎಸ್ಕೇಪ್ ಕಾರ್ತಿಕ್‌ನನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆತನಿಂದ ₹11.43 ಲಕ್ಷ ಮೌಲ್ಯದ 254 ಗ್ರಾಂ ಚಿನ್ನದ ಆಭರಣಗಳನ್ನು ಜಪ್ತಿ ಮಾಡಲಾಗಿದೆ.

‘ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ವ್ಯಕ್ತಿಯೊಬ್ಬರು 2021ರ ಆ.2ರ ಮಧ್ಯಾಹ್ನ ಮನೆಗೆ ಬೀಗ ಹಾಕಿಕೊಂಡು ಕೋವಿಡ್ ಲಸಿಕೆ ಹಾಕಿಸಲು ಹೋಗಿದ್ದರು. ಅದೇ ದಿನ ಮಧ್ಯಾಹ್ನ 3 ಗಂಟೆಗೆ ಅವರ ಮಗ ಮನೆಗೆ ಬಂದು ನೋಡಿದಾಗ ಬೀರುವಿನಲ್ಲಿದ್ದ ಚಿನ್ನಾಭರಣಗಳು ನಾಪತ್ತೆಯಾಗಿದ್ದವು. ಬಾಗಿಲು ಒಡೆದು ಮನೆಗೆ ನುಗ್ಗಿದ್ದ ಆರೋಪಿ, ಬೀರುವಿನಲ್ಲಿದ್ದ ಚಿನ್ನದ ಆಭರಣಗಳನ್ನು ಕಳವು ಮಾಡಿದ್ದ. ಈ ಸಂಬಂಧ ಠಾಣೆಗೆ ದೂರು ನೀಡಿದ್ದರು. ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿತ್ತು. ವಿಚಾರಣೆ ವೇಳೆ ಕೃತ್ಯ ಮಾಡಿದ್ದನ್ನು ಆತ ಒಪ್ಪಿಕೊಂಡಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಆರೋಪಿ ಕಾಮಾಕ್ಷಿಪಾಳ್ಯ, ಬಸವೇಶ್ವರನಗರ, ಕೆ.ಪಿ.ಅಗ್ರಹಾರ ಠಾಣೆಯ ವ್ಯಾಪ್ತಿ ಸೇರಿದಂತೆ ನಗರದ ವಿವಿಧೆಡೆ 85ಕ್ಕೂ ಹೆಚ್ಚು ಕಡೆ ಕಳ್ಳತನ ನಡೆಸಿದ್ದ. ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಲ್ಲೂ ಕಳವು ಮಾಡಿದ್ದ. ಕಳವು ಪ್ರಕರಣಗಳಿಗೆ ಸಂಬಂಧಿಸಿದ ಆಭರಣಗಳನ್ನು ಜಪ್ತಿ ಮಾಡಲಾಗಿದೆ’ ಎಂದರು.

‘ಆಗಾಗ ಆತ ವಾಸ ಸ್ಥಳ ಬದಲಿಸುತ್ತಿದ್ದ. ಹೀಗಾಗಿ ಆತನನ್ನು ಪತ್ತೆ ಹಚ್ಚುವುದೇ ಸವಾಲಾಗಿತ್ತು’ ಎಂದು ಹೇಳಿದರು.

‘ಸ್ಥಳೀಯರ ಕೈಗೆ ಸಿಕ್ಕಿಬಿದ್ದಿದ್ದ’

‘ಮನೆ ಕಳವು ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ ಆರೋಪಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದ. ಜೈಲಿಗೆ ತರಕಾರಿ ಸರಬರಾಜು ಮಾಡುವ ವಾಹನದಲ್ಲಿ ಅಡಗಿ ಕುಳಿತು ಅಲ್ಲಿಂದ ಪರಾರಿಯಾಗಿದ್ದ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಮೈಸೂರಿನಲ್ಲಿ ಮನೆ ಕಳವು ಮಾಡಿ ಪರಾರಿಯಾಗುವ ವೇಳೆ ಸ್ಥಳೀಯರ ಕೈಗೆ ಸಿಕ್ಕಿಬಿದ್ದಿದ್ದ ಆತ, ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರಬಂದಿದ್ದ. ಜೈಲಿನಿಂದ ಬಿಡುಗಡೆಯಾದ ನಂತರವೂ ಕಳ್ಳತನ ಮಾಡುವುದನ್ನು ಮುಂದುವರಿಸಿದ್ದ’ ಎಂದು ಮಾಹಿತಿ ನೀಡಿದರು.



ವಶಕ್ಕೆ ಪಡೆದ ಚಿನ್ನದ ಆಭರಣಗಳು

ಅಪರಾಧ ಸುದ್ದಿ


ರೌಡಿ ಕಾಲಿಗೆ ಗುಂಡೇಟು

ಬೆಂಗಳೂರು: ಬಂಧಿಸಲು ಮುಂದಾದ ಪಿಎಸ್‌ಐ ಭುಜಕ್ಕೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ ಆರೋಪಿಯನ್ನು ಸಂಜಯನಗರ ಠಾಣೆ ಪೊಲೀಸರು ಕಾಲಿಗೆ ಗುಂಡೇಟು ಹೊಡೆದು ಬಂಧಿಸಿದ್ದಾರೆ.

‘ಗಿರಿನಗರ ಪೊಲೀಸ್ ಠಾಣೆಯ ರೌಡಿಶೀಟರ್ ದಿವಾಕರ ಅರಸ್ (24) ಬಂಧಿತ. ಈತ ಕಳ್ಳತನ ಪ್ರಕರಣದಲ್ಲಿ ಯಶವಂತಪುರ ಠಾಣೆ ಪೊಲೀಸರಿಗೆ ಬೇಕಾಗಿದ್ದ. ಭೂಪಸಂದ್ರ–ಹೆಬ್ಬಾಳ ರಸ್ತೆಯಲ್ಲಿರುವ ತೋಟದ ಮನೆಯೊಂದರಲ್ಲಿ ಆರೋಪಿ ಇರುವ ಬಗ್ಗೆ ಯಶವಂತಪುರ ಠಾಣೆಯ ಪಿಎಸ್‌ಐ ವಿನೋದ್ ರಾಥೋಡ್ ಅವರಿಗೆ ಮಾಹಿತಿ ಲಭಿಸಿತ್ತು. ಗುರುವಾರ ರಾತ್ರಿ 11 ಗಂಟೆ ಸುಮಾರಿಗೆ ಸಿಬ್ಬಂದಿ ಜೊತೆ ಸ್ಥಳಕ್ಕೆ ತೆರಳಿದ್ದ ಅವರ ಮೇಲೆ ಆರೋಪಿಯು ಹಲ್ಲೆ ನಡೆಸಿ ತಪ್ಪಿಸಿಕೊಂಡಿದ್ದ’ ಎಂದು ಪೊಲೀಸರು ಹೇಳಿದ್ದಾರೆ.

ಗುಂಡೇಟಿನಿಂದ ಕುಸಿದು ಬಿದ್ದ ಆತನನ್ನು ಬಂಧಿಸಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದರು.

ಚಿತ್ರಾವಳಿ



ಬೆಟ್ಟಹಲಸೂರು ಗ್ರಾಮಪಂಚಾಯಿತಿಯ ಚುನಾವಣೆಯಲ್ಲಿ ಗೆದ್ದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಶಾಸಕ ಕೃಷ್ಣಬೈರೇಗೌಡ ಅವರನ್ನು ಅಭಿನಂದಿಸಿದರು. ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲ ಗೌಡ, ಎನ್‌.ಎನ್‌.ಶ್ರೀನಿವಾಸಯ್ಯ, ಬಿ.ಕೆ.ಮಂಜುನಾಥ ಗೌಡ, ಕೆ.ಅಶೋಕನ್, ಬಿ.ಕೆ.ರವೀಂದ್ರನಾಥ ಗೌಡ, ಬಿ.ಎಂ. ನಾಗೇಶ್, ಬಿ.ಎನ್‌.ಶ್ರೀನಿವಾಸ ಮೂರ್ತಿ, ಎನ್‌.ಕೆ.ಮಹೇಶ್ ಕುಮಾರ್ ಮತ್ತಿತರರು ಇದ್ದಾರೆ



ಆಚಾರ್ಯ ಪಾಠಶಾಲಾ ಪ್ರೌಢಶಾಲೆ ನಗರದಲ್ಲಿ ಆಯೋಜಿಸಿದ್ದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ವಿವಿಧ ವಿಜ್ಞಾನದ ಮಾದರಿಗಳ ಬಗ್ಗೆ ವಿವರಿಸಿದರು. ಎಪಿಎಸ್ ಶಿಕ್ಷಣ ಟ್ರಸ್ಟ್‌ನ ಜಂಟಿ ಕಾರ್ಯದರ್ಶಿ ಪ್ರೊ.ಎ.ಪ್ರಕಾಶ್, ಎಪಿಎಸ್ ಪ್ರೌಢಶಾಲೆಯ ಆಡಳಿತ ಮಂಡಳಿ ಸದಸ್ಯ ಎ.ಪ್ರಭಾಕರ್ ಇದ್ದರು

ವಿಶ್ವೇಶ್ವರಯ್ಯ ಪಿಕಪ್ ಡ್ಯಾಂ ಹಾನಿಗೊಳಿಸಿದವರ ವಿರುದ್ಧ ಕ್ರಮ

ಖಾಸಗಿ ಕಾರಣಕ್ಕೆ ಡ್ಯಾಂಗೆ ಹಾನಿ: ಪರಿಶೀಲನೆ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ತಾಲ್ಲೂಕಿನ ಘಾಟಿ ಸುಬ್ರಹ್ಮಣ್ಯ ಸಮೀಪ ದಶಕಗಳ ಹಿಂದೆ ನಿರ್ಮಾಣವಾಗಿದ್ದ ವಿಶ್ವೇಶ್ವರಯ್ಯ ಪಿಕಪ್ ಡ್ಯಾಂಗೆ ಹಾನಿ ಮಾಡಿರುವ ಸ್ಥಳಕ್ಕೆ ಶುಕ್ರವಾರ ಶಾಸಕ ನಿಸರ್ಗ ನಾರಾಯಣಸ್ವಾಮಿ, ಟಿ.ವೆಂಕಟ ರಮಣಯ್ಯ ಭೇಟಿ ನೀಡಿದರು.

ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗುವುದು. ಮುಂದಿನ ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸಿ ಡ್ಯಾಂ ದುರಸ್ತಿ ಹಾಗೂ ಡ್ಯಾಂ ಸುತ್ತಲಿನ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಗೆ ಹಣ ನೀಡುವಂತೆ ಒತ್ತಾಯಿಸಲಾಗುವುದು ಎಂದು ಇಬ್ಬರು ಶಾಸಕರು ಆಶ್ವಾಸನೆ ನೀಡಿದರು.


ರಸ್ತೆ ನಿರ್ಮಾಣಕ್ಕಾಗಿ ಮೋರಿ ನಿರ್ಮಿಸಲು ಗುತ್ತಿಗೆ ಪಡೆದಿದ್ದವರು ಡ್ಯಾಂನಲ್ಲಿದ್ದ ನೀರು ಹೊರ ಬಿಡಲು ಕಟ್ಟೆಯ ಮಣ್ಣಿನ ದಿಬ್ಬದಲ್ಲಿ ಕಾಲುವೆ ತೋಡಿ ಶುಕ್ರವಾರ ಸಂಜೆ ನೀರು ಹೊರ ಹೋಗುವಂತೆ ಮಾಡಿದ್ದರು. ಘಟನೆಯ ಮಾಹಿತಿ ತಿಳಿದ ರೈತ ಸಂಘದ ಕಾರ್ಯಕರ್ತರು ಜೆಸಿಬಿ ತಡೆದು ತಹಶೀಲ್ದಾರ್ ವಶಕ್ಕೆ ಒಪ್ಪಿಸಿದ್ದರು. ಸ್ಥಳ ಪರಿಶಿಲನೆ ನಂತರ ಡ್ಯಾಂ ಹಾನಿ ಕುರಿತು ಮಾಹಿತಿ ನೀಡಿದ ಶಾಸಕ ನಿಸರ್ಗ ನಾರಾಯಣಸ್ವಾಮಿ, ಪಿಕಪ್ ಡ್ಯಾಂ ಉನ್ನತೀಕರಿಸಲು ಹಿಂದಿನ ಸರ್ಕಾರ ₹5 ಕೋಟಿ ಅನುದಾನ ಮಂಜೂರು ಮಾಡಿತ್ತು. ಈಗಿನ ಸರ್ಕಾರ ಅನುದಾನ ರದ್ದುಪಡಿಸಿದೆ ಎಂದರು.

ರಾಜ್ಯದಲ್ಲಿ ಬಿಜೆಪಿ ಆಡಳಿತವಿದೆ ಏನು ಮಾಡಿದರೂ ನಡೆಯುತ್ತದೆ ಎಂಬ ಭಾವನೆಯನ್ನು ಡ್ಯಾಂ ಸಮೀಪದ ಗೋಶಾಲೆ ನಡೆಸುವವರು ಬಿಡಬೇಕು. ಇಲ್ಲಿ ರಸ್ತೆ ಕಾಮಗಾರಿ ನಡೆಸುವ ವಿಚಾರದ ಬಗ್ಗೆ ಸ್ಥಳೀಯ ಶಾಸಕನಾಗಿರುವ ನನಗೆ ಮಾಹಿತಿಯೇ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ವರ್ಷ ಮಳೆರಾಯನ ಕೃಪೆಯಿಂದ ಡ್ಯಾಂ ತುಂಬಿದೆ. ಆದರೆ ಕೆಲವರ ಖಾಸಗಿ ಅನುಕೂಲಕ್ಕಾಗಿ ರಸ್ತೆ ನಿರ್ಮಾಣ ಮಾಡಲು ಡ್ಯಾಂಗೆ ಹಾನಿಯುಂಟು ಮಾಡಿರುವುದು ಸರಿಯಲ್ಲ ಎಂದರು.



ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಸಮೀಪದಲ್ಲಿನ ವಿಶ್ವೇಶ್ವರಯ್ಯ ಪಿಕಪ್ ಡ್ಯಾಂ ಹಾನಿಯಾಗಿರುವ ಸ್ಥಳವನ್ನು ಶಾಸಕ ಟಿ.ವೆಂಕಟರಮಣಯ್ಯ, ನಿಸರ್ಗ ನಾರಾಯಣಸ್ವಾಮಿ ಪರಿಶೀಲಿಸಿದರು



ಎಚ್‌.ಎಸ್‌.ವೆಂಕಟೇಶಮೂರ್ತಿ ಅವರಿಗೆ ‘ಹೆಜ್ಜೆಗುರುತು’ ಕೃತಿಯ ಪ್ರತಿಯನ್ನು ಅ.ನಾ.ಪ್ರಹ್ಲಾದರಾವ್ ಅವರು ಗುರುವಾರ ನೀಡಿದರು

‘ಹೆಜ್ಜೆಗುರುತು’ ಬಿಡುಗಡೆ

ಬೆಂಗಳೂರು: ಕನ್ನಡ ಚಲನಚಿತ್ರ ಚರಿತ್ರೆ ಕುರಿತು ಲೇಖಕ ಅ.ನಾ.ಪ್ರಹ್ಲಾದರಾವ್ ರಚಿಸಿರುವ ‘ಹೆಜ್ಜೆಗುರುತು’ ಕೃತಿಯನ್ನು ಕವಿ ಎಚ್.ಎಸ್.ವೆಂಕಟೇಶಮೂರ್ತಿ ಅವರು ನಗರದಲ್ಲಿ ಗುರುವಾರ ಬಿಡುಗಡೆ ಮಾಡಿದರು.

‘ಮೂಕಿ ಚಿತ್ರಗಳ ಕಾಲದಿಂದ ಆರಂಭಗೊಂಡು, ಚಿತ್ರರಂಗದ ಬೆಳವಣಿಗೆಯ ವಿವಿಧ ಮಜಲುಗಳನ್ನು ಕೃತಿಯಲ್ಲಿ ದಾಖಲಿಸಲಾಗಿದೆ. ಚಿತ್ರರಂಗದ ವ್ಯಕ್ತಿಗಳು ಹಾಗೂ ಘಟನಾವಳಿಗಳನ್ನು ಹೆಣೆಯುತ್ತಾ ಕನ್ನಡ ಚಿತ್ರರಂಗದ ಔನತ್ಯವನ್ನು ದಾಖಲಿಸಲು ಪ್ರಯತ್ನಿಸಿದ್ದೇನೆ’ ಎಂದು ಅ.ನಾ.ಪ್ರಹ್ಲಾದರಾವ್ ತಿಳಿಸಿದರು.

‘ಆರಂಭದಲ್ಲಿ ಬಿಡುಗಡೆಗೊಂಡ ಕನ್ನಡ ಚಿತ್ರಗಳು, ಮೂಕಿಚಿತ್ರಗಳು, ಟಾಕಿ ಚಿತ್ರಗಳ ವಿವರಗಳು ಕೃತಿಯಲ್ಲಿವೆ. ಹೊಸ ತಂತ್ರಜ್ಞಾನಗಳ ಬಳಕೆ, ಕನ್ನಡ ಚಿತ್ರರಂಗ ರಾಜ್ಯದಲ್ಲಿ ನೆಲೆಯಾದ ಪ್ರಕ್ರಿಯೆ, ವರ್ಣ ಚಿತ್ರಗಳು, ಹೊಸ ಅಲೆ ಚಿತ್ರಗಳು ಹಾಗೂ ಆ ಮೂಲಕ ಚಿತ್ರರಂಗಕ್ಕೆ ಬಂದು ನಿಂತ ಮಹನೀಯರ ವಿವರಗಳನ್ನು ಪುಸ್ತಕದಲ್ಲಿ ದಾಖಲಿಸಲಾಗಿದೆ’ ಎಂದರು.


ಮೈಸೂರಿನ ತಾರಾ ಪ್ರಿಂಟ್ಸ್ ಪ್ರಕಟಿಸಿರುವ ಈ ಕೃತಿ, 462 ಪುಟಗಳನ್ನು ಹೊಂದಿವೆ.

ಹಂಸಜ್ಯೋತಿ ಸಾಂಸ್ಕೃತಿಕ ಸಂಸ್ಥೆಯ ಮು.ಮುರಳೀಧರ ಹಾಗೂ ಮಲ್ಲಿಕಾ ಪ್ರಹ್ಲಾದ್ ಉಪಸ್ಥಿತರಿದ್ದರು.

ಕಾಂತಾವರ ಕನ್ನಡ ಸಂಘದ ದತ್ತಿನಿಧಿ ಪ್ರಶಸ್ತಿ ಘೋಷಣೆ

ಪ್ರಜಾವಾಣಿ ವಾರ್ತೆ


ಜಿ.ಎನ್‌.ಉಪಾಧ್ಯ


ರವೀಂದ್ರ ಭಟ್ಟ


ಬೇಲೂರು ರಘುನಂದನ್

ಮೂಡುಬಿದಿರೆ: ಕಾಂತಾವರ ಕನ್ನಡ ಸಂಘದಲ್ಲಿ ಈಚೆಗೆ ಸ್ಥಾಪಿಸಲಾಗಿರುವ ಮೂರು ದತ್ತಿ ನಿಧಿಗಳ ಪ್ರಶಸ್ತಿಗಳು ಘೋಷಣೆಯಾಗಿದ್ದು, ಧಾರವಾಡದ ಸಾಹಿತಿ ಡಾ. ಜಿ.ಎಂ.ಹೆಗಡೆ ಹೆಸರಿನ ಪ್ರಾಧ್ಯಾಪಕ, ಸಂಶೋಧಕ ಪ್ರಶಸ್ತಿಗೆ ಮುಂಬೈ ವಿ.ವಿ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ.ಎನ್.ಉಪಾಧ್ಯ ಆಯ್ಕೆಯಾಗಿದ್ದಾರೆ.

ರಂಗಕರ್ಮಿ ಮಂಜನಬೈಲ್ ಅವರ ಹೆಸರಿನ ರಂಗಸನ್ಮಾನ್ ಪ್ರಶಸ್ತಿಗೆ ನಾಟಕಕಾರ, ನಿರ್ದೇಶಕ ಬೇಲೂರು ರಘುನಂದನ್ ಮತ್ತು ಪತ್ರಕರ್ತ ಪಾ.ವೆಂ. ಆಚಾರ್ಯ ಹೆಸರಿನ ಪತ್ರಿಕಾ ಮಾಧ್ಯಮ ಪ್ರಶಸ್ತಿಗೆ 'ಪ್ರಜಾವಾಣಿ'ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಆಯ್ಕೆಯಾಗಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಪ್ರಶಸ್ತಿಯು ತಲಾ ₹10,000 ನಗದು, ತಾಮ್ರಪತ್ರ, ಸನ್ಮಾನವನ್ನೊಳಗೊಂಡಿದೆ ಎಂದು ಸಂಘದ ಕಾರ್ಯಾಧ್ಯಕ್ಷ ಡಾ.ನಾ. ಮೊಗಸಾಲೆ ತಿಳಿಸಿದ್ದಾರೆ.

ಜ.26 ರಿಂದ ಮನೆ ಬಾಗಿಲಿಗೇ ಸರ್ಕಾರಿ ದಾಖಲೆ

ಬೆಂಗಳೂರು: ಜನವರಿ 26 ರಿಂದ ರೈತರಿಗೆ ಸಂಬಂಧಿಸಿದ ವಿವಿಧ ದಾಖಲಾತಿಗಳನ್ನು ಅವರ ಮನೆ ಬಾಗಿಲಿಗೆ ತಲುಪಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ವಿಧಾನಸಭೆಯಲ್ಲಿ ಶುಕ್ರವಾರ ನಡೆದ ಜಿಲ್ಲಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲಾಧಿಕಾರಿಗಳು ರೈತರ ದಾಖಲಾತಿಗಳನ್ನು ಅವರ ಮನೆ ಬಾಗಿಲಿನಲ್ಲೇ ವಿತರಿಸುವ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಮಾಡಬೇಕು ಎಂದು ಸಲಹೆ ನೀಡಿದರು.

ಕಟ್ಟೀಮನಿ ಪ್ರತಿಷ್ಠಾನದ ಪ್ರಶಸ್ತಿಗೆ ಸಾರಾ ಅಬೂಬಕರ್ ಆಯ್ಕೆ


ಸಾರಾ ಅಬೂಬಕರ್

ಬೆಳಗಾವಿ: ಇಲ್ಲಿನ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ವತಿಯಿಂದ ನೀಡಲಾಗುವ 2021ನೇ ಸಾಲಿನ ಕಾದಂಬರಿಕ ವಿಭಾಗದ ಪ್ರಶಸ್ತಿಗೆ ಕಾದಂಬರಿಕಾರ್ತಿ ಹಾಗೂ ಪ್ರಗತಿಪರ ಚಿಂತಕಿ ಸಾರಾ ಅಬೂಬಕರ್ ಆಯ್ಕೆಯಾಗಿದ್ದಾರೆ.

'ಜೀವಮಾನ ಸಾಧನೆ ಗುರುತಿಸಿ ಸಾರಾ ಅಬೂಬಕರ್ ಅವರಿಗೆ ಪ್ರಶಸ್ತಿ ನೀಡಲು ಪ್ರತಿಷ್ಠಾನದ ಸರ್ವಸದಸ್ಯರ ಸಭೆಯಲ್ಲಿ ನಿರ್ಧರಿಸಲಾಗಿದೆ. ₹50 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. 2022ರ ಜನವರಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಮಲ್ಲಿಕಾರ್ಜುನ ಹಿರೇಮಠ ತಿಳಿಸಿದ್ದಾರೆ.

ರಾಜ್ಯಮಟ್ಟದ ಧಾರ್ಮಿಕ ಸಮಾವೇಶ ಜ.9ಕ್ಕೆ


ಸೈದಪ್ಪ ಗುತ್ತೇದಾರ್

ಶಿರಸಿ: ಸಮಾಜವನ್ನು ಸಂಘಟಿಸುವ ಉದ್ದೇಶ ಹಾಗೂ ಲೋಕ ಕಲ್ಯಾಣಾರ್ಥವಾಗಿ ರಾಜ್ಯಮಟ್ಟದ ನಾರಾಯಣಗುರು ಧಾರ್ಮಿಕ ಸಮಾವೇಶ ಹಾಗೂ ವಿಶ್ವಶಾಂತಿ ಯಾಗವನ್ನು ಜ.9 ರಂದು ಸಾಗರದ ಈಡಿಗರ ಭವನದಲ್ಲಿ ಆಯೋಜಿಸಲಾಗಿದೆ ಎಂದು ಬ್ರಹ್ಮಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸೈದಪ್ಪ ಗುತ್ತೇದಾರ್ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈಡಿಗ, ನಾಮಧಾರಿ, ಬಿಲ್ಲವ ಸೇರಿದಂತೆ 26 ಒಳಪಂಗಡಗಳ ಜನರನ್ನು ಸೇರಿಸಿ ಅವರಲ್ಲಿ ಧಾರ್ಮಿಕ ಜಾಗೃತಿ ಮೂಡಿಸಲು, ಸಮಾಜದಲ್ಲಿ ಹಿಂದುಳಿದ ವರ್ಗಗಳಿಗೆ ಧ್ವನಿಯಾಗುವ ಸಮಾವೇಶ ಇದಾಗಲಿದೆ. ಹಿಂದುಳಿದ ವರ್ಗಕ್ಕೆ ಸೇರಿದ 501 ಅರ್ಚಕರಿಂದ (ಶಾಂತಿಗಳು) ವಿಶ್ವಶಾಂತಿ ಯಾಗ ನಡೆಯಲಿದೆ'ಎಂದರು.

'ಸಚಿವ ಕೋಟ ಶ್ರೀನಿವಾಸ ಪೂಜಾರಿ ಸೇರಿದಂತೆ ಹಲವು ರಾಜಕೀಯ ನಾಯಕರು, ಗೌರಿಗದ್ದೆಯ ಅವಧೂತ ವಿನಯ ಗುರೂಜಿ ಸೇರಿದಂತೆ ಹಲವು ಸ್ವಾಮೀಜಿಗಳು, ಸಾಮಾಜಿಕ ಕ್ಷೇತ್ರದ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದರು.

ಹಳೇಬೀಡು: ನೆಲಕ್ಕೆ ಉರುಳಿದ ಹೊಂಬಾಳೆ ಬಿಟ್ಟ ಮರಗಳು

ಕಿಡಿಗೇಡಿಗಳಿಂದ 600 ಅಡಿಕೆ ಮರ ಧ್ವಂಸ

ಪ್ರಜಾವಾಣಿ ವಾರ್ತೆ


ಹಳೇಬೀಡು ಸಮೀಪದ ಯಲಹಂಕ ಗ್ರಾಮ ಪಂಚಾಯಿತಿಯ ಅಜ್ಜೇನಹಳ್ಳಿಯಲ್ಲಿ ಕಿಡಿಗೇಡಿಗಳು ಕತ್ತರಿಸಿರುವ ಅಡಿಕೆ ಮರಗಳನ್ನು ಶುಕ್ರವಾರ ತಹಶೀಲ್ದಾರ್ ಯು.ಎಂ.ಮೋಹನ್ ಕುಮಾರ್ ಪರಿಶೀಲಿಸಿದರು. ಸಬ್ ಇನ್‌ಸ್ಪೆಕ್ಟರ್ ಬಿ.ಗಿರಿಧರ್, ಉಪ ತಹಶಿಲ್ದಾರ್ ಎ.ಎನ್‌.ಮೋಹನ್ ಕುಮಾರ್, ರಾಜಸ್ವ ನಿರೀಕ್ಷಕ ಎನ್‌. ಜಿ.ಚಂದ್ರಶೇಖರ್ ಇದ್ದರು.

ಹಳೇಬೀಡು: ಇಲ್ಲಿನ ಯಲಹಂಕ ಗ್ರಾಮ ಪಂಚಾಯಿತಿಯ ಅಜ್ಜೇನಹಳ್ಳಿಯ ಉಪ್ಪಾರ ಸಮುದಾಯದ ರೈತ ವೀರಲಿಂಗೇಗೌಡರ ತೋಟದಲ್ಲಿದ್ದ 600 ಅಡಿಕೆ ಮರಗಳನ್ನು ಕಿಡಿಗೇಡಿಗಳು ಕತ್ತರಿಸಿರುವುದು ಶುಕ್ರವಾರ ಬೆಳಿಗ್ಗೆ ಬೆಳಕಿಗೆ ಬಂದಿದೆ. 1 ಎಕರೆ 5 ಗುಂಟೆಯಲ್ಲಿ ಬೆಳೆಸಿದ್ದ ಮರಗಳಲ್ಲಿ ಮುಂದಿನ ವರ್ಷದಿಂದ ಫಸಲು ದೊರೆಯುತ್ತಿತ್ತು.

'ಬರಗಾಲದಲ್ಲಿ ಕೊಳವೆಬಾವಿ ಒಣಗಿದಾಗ ಪತ್ನಿ ಕಮಲಮ್ಮ ನೆರವಿನೊಂದಿಗೆ 1 ಕಿ.ಮೀ ದೂರದಿಂದ ನೀರು ಹೊತ್ತು ತೋಟವನ್ನು ಉಳಿಸಿಕೊಂಡಿದ್ದೆ. ಇದುವರೆಗೆ ₹12 ಲಕ್ಷ ಖರ್ಚಾಗಿತ್ತು. ಇಲ್ಲಿಯವರೆಗೂ ಯಾವುದೇ ಆದಾಯವಿಲ್ಲದ ಕಾರಣ, ಕೂಲಿ ಮಾಡುತ್ತಿದ್ದೆವು. ಮಗಳಿಗೆ ಕಷ್ಟಪಟ್ಟು ಮದುವೆ ಮಾಡಿದ್ದೆವು. ಇಬ್ಬರು ಗಂಡು ಮಕ್ಕಳು ಕೂಲಿ ಮಾಡುತ್ತಿದ್ದಾರೆ' ಎಂದುವೀರಲಿಂಗೇಗೌಡ ಅಳಲು ತೋಡಿಕೊಂಡರು.

'ಫಸಲು ಬಂದರೆ ನೆಮ್ಮದಿ ಕಾಣಬಹುದು ಎಂದು ಕನಸು ಕಂಡಿದ್ದೆವು. ಕತ್ತಿ ಏಟಿಗೆ 150 ಮರಗಳು ಸಂಪೂರ್ಣ ಕೆಳಗೆ ಬಿದ್ದಿದ್ದರೆ, ಉಳಿದ ಮರಗಳಿಗೂ ತೀವ್ರವಾಗಿ ಏಟುಬಿದ್ದಿದ್ದು, ಚೇತರಿಸಿಕೊಳ್ಳಲು ಸಾಧ್ಯವಿಲ್ಲ' ಎಂದರು.


'ಕಳೆದ ತಿಂಗಳು ಮಳೆ ಹೊಡೆತಕ್ಕೆ ವಾಸದ ಮನೆ ಬಿದ್ದು ಹೋಯಿತು. ಗಾಯದ ಮೇಲೆ ಬರೆ ಎಳೆದಂತೆ ಮರಗಳನ್ನು ಕಡಿದಿದ್ದಾರೆ' ಎಂದು ಕಮಲಮ್ಮ ಕಣ್ಣೀರಿಟ್ಟರು.

ಸ್ಥಳಕ್ಕೆ ಭೇಟಿ ನೀಡಿದ್ದ ತಹಶೀಲ್ದಾರ್ ಯು.ಎಂ.ಮೋಹನ್ ಕುಮಾರ್, 'ಘಟನೆ ಕುರಿತು ಉಪವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿಗೆ ಮಾಹಿತಿ ನೀಡಲಾಗುವುದು. ಮರ ಕಡಿದವರನ್ನು ಪತ್ತೆ ಹಚ್ಚಲು ಪೊಲೀಸರಿಗೆ ಸೂಚಿಸಲಾಗುವುದು' ಎಂದರು.

'ಅಡಿಕೆ ಮರ ತುಂಡು ಮಾಡಿರುವುದಕ್ಕೆ ಪರಿಹಾರ ದೊರಕುವುದಿಲ್ಲ. ಹೊಸದಾಗಿ ತೋಟ ಬೆಳೆಸಲು ನರೇಗಾ ಯೋಜನೆ ಅಡಿಯಲ್ಲಿ ಸಹಾಯಧನ ಪಡೆಯಲು ಅವಕಾಶವಿದೆ' ಎಂದು ಹಿರಿಯ ತೋಟಗಾರಿಕಾ ಸಹಾಯಕ ನಿರ್ದೇಶಕ ಯತೀಶ್ ತಿಳಿಸಿದರು.

> **ಬೆಳೆಯುತ್ತಿರುವ ಗಿಡಮರಗಳಿಗೆ ಹಾನಿ ಮಾಡುವುದು ತಪ್ಪು. ಅಡಿಕೆ ಮರಗಳು ಕತ್ತಿಯ ಏಟಿಗೆ ಸಿಕ್ಕಿ ಹಾಳಾಗಿರುವುನ್ನು ನೋಡಿದಾಗ ಮನಸ್ಸಿಗೆ ನೋವಾಯಿತು.**
> **ಯು.ಎಂ.ಮೋಹನ್ ಕುಮಾರ್,** ತಹಶೀಲ್ದಾರ್ ಬೇಲೂರು

3 ವರ್ಷಗಳಾದರೂ ಸಲ್ಲಿಕೆಯಾಗದ ವರದಿ: ಹೊರಟ್ಟಿ ಬೇಸರ



ಹುಬ್ಬಳ್ಳಿ: ನೂತನ ಪಿಂಚಣಿ ಯೋಜನೆಯಲ್ಲಿ ಮಾರ್ಪಾಡು ಮಾಡುವ ಕುರಿತು ಪರಿಶೀಲಿಸಲು ಸರ್ಕಾರ ಅಧಿಕಾರಿಗಳ ಸಮಿತಿಯನ್ನು ರಚಿಸಿ ಮೂರು ವರ್ಷಗಳಾಗಿದ್ದರೂ ಇದುವರೆಗೆ ವರದಿ ಸಲ್ಲಿಕೆಯಾಗದಿರುವುದಕ್ಕೆ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ಹಾಗೂ ನೂತನ ಪಿಂಚಣಿ ಯೋಜನೆಯ ಮಾರ್ಪಾಡು ಸಮಿತಿಯ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ.

ಪತ್ರದಲ್ಲೇನಿದೆ?: 2006ಕ್ಕಿಂತ ಮುಂಚಿನ ಸರ್ಕಾರಿ, ಅನುದಾನಿತ ಸಿಬ್ಬಂದಿಯ ವೇತನ ಹಾಗೂ ಇತರ ಸೌಲಭ್ಯಗಳು ಒಂದೇ ರೀತಿಯಾಗಿದ್ದವು. ನೂತನ ಪಿಂಚಣಿ ಆದೇಶದಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯ ವಂತಿಗೆಯನ್ನು ಆಡಳಿತ ಮಂಡಳಿಗಳೇ ತುಂಬಬೇಕೆಂದು ಆದೇಶಿಸಲಾಗಿದೆ. ಇದರಿಂದಾಗಿ ಅಲ್ಲಿ ನೂತನ ಪಿಂಚಣಿ ಯೋಜನೆ ಜಾರಿಗೊಂಡಿಲ್ಲ.

ಅನುದಾನಿತ ಸಿಬ್ಬಂದಿಯ ಪಿಂಚಣಿ ಪಾವತಿಯನ್ನು ಆಡಳಿತ ಮಂಡಳಿಗಳಿಗೆ ವಹಿಸಿರುವುದು ಸಂವಿಧಾನ ವಿರೋಧಿಯಾಗಿದೆ ಎಂದಿದ್ದಾರೆ.

ಹೊಸ ವರ್ಷದ ಸಂಕಲ್ಪ

ಹೊಸ ವರ್ಷ ಬಂದಿದೆ. ಕೋವಿಡ್‌ನಂಥ ಬಿಕ್ಕಟ್ಟಿನ ಸಂದರ್ಭದಲ್ಲೂ ಈ ವರ್ಷವನ್ನು ನವೋತ್ಸಾಹದಿಂದ ಬರಮಾಡಿಕೊಳ್ಳಬೇಕಿದೆ. ಹೊಸ ವರ್ಷಕ್ಕೆ ನಮ್ಮ ತಯಾರಿ ಹೇಗಿರಬೇಕು ಎಂಬ ಸಂದೇಶವನ್ನು ವಿವಿಧ ಕ್ಷೇತ್ರಗಳ ಪ್ರಸಿದ್ಧ ವ್ಯಕ್ತಿಗಳು ಇಲ್ಲಿ ಹಂಚಿಕೊಂಡಿದ್ದಾರೆ.

ಅಸಹನೆ, ಗುದ್ದಾಟ ಬಿಟ್ಟುಬಿಡಿ




ಸಂಕಷ್ಟದಿಂದ ಕೂಡಿದ್ದ 2021 ಕಳೆದುಹೋಗಿದೆ. ಕೆಲವು ಮನುಷ್ಯ ನಿರ್ಮಿತ ಕಷ್ಟಗಳು ಇದ್ದರೆ, ಇನ್ನು ಕೆಲವು ನೈಸರ್ಗಿಕವಾಗಿ ಬಂದಿದ್ದವು. ಪ್ರಕೃತಿ ವಿಕೋಪಗಳನ್ನು ಸಂಪೂರ್ಣವಾಗಿ ತಡೆಯಲು ಸಾಧ್ಯವಿಲ್ಲ. ಮನುಷ್ಯನ ತಪ್ಪಿನಿಂದಾಗುವ ಕಷ್ಟಗಳು ಬರದಂತೆ ನೋಡಿಕೊಳ್ಳಬೇಕು. ಹೊಸ ವರ್ಷದಲ್ಲಿ ಅಂತಹ ಸಂಕಲ್ಪವನ್ನು ತೊಡೋಣ.

ಅಸಹನೆ, ಗುದ್ದಾಟ ಬಿಟ್ಟುಬಿಡಿ. ನಮ್ಮ ನಮ್ಮಲ್ಲೇ ಕಿತ್ತಾಟ ಬೇಡ. ಇವನನ್ನು ಕಡಿ, ಅವನನ್ನು ಹರಿ ಎಂಬ ದ್ವೇಷ ಸಾಕು. ಈ ದೇಶ ನನಗೆ ಮಾತ್ರ ಸೇರಿದ್ದು, ಉಳಿದವರನ್ನು ಹೊರಗೆ ಓಡಿಸಿ ಎಂಬ ಅರಚಾಟ ನಿಲ್ಲಲಿ. ಜಾತಿ, ಧರ್ಮಗಳ ಹೆಸರಿನಲ್ಲಿ ಸಿಟ್ಟು, ಕೋಪ ತೋರಿಸುವುದರಿಂದ ಯಾವುದೇ ಲಾಭವಿಲ್ಲ. ಧರ್ಮಗಳ ನಡುವೆ ದ್ವೇಷದ ದಾರಿಯಲ್ಲಿ ಹೋದರೆ ಈ ದೇಶಕ್ಕೆ ವಿನಾಶ ಕಾದಿದೆ. ಭಾರತವು ಎಲ್ಲ ಧರ್ಮ, ಜಾತಿಗಳ ಜನರಿಗೆ ಸೇರಿದ್ದು ಎಂಬ ಮನೋಭಾವ ಬೆಳೆಯಲಿ.

ಅಲ್ಪಸಂಖ್ಯಾತರು, ಮಹಿಳೆಯರು, ಮಕ್ಕಳಿಗೆ ನೆಮ್ಮದಿ ಇರಬೇಕು. ಅವರಿಗೆ ರಕ್ಷಣೆ, ವಿದ್ಯೆ, ಆರೋಗ್ಯ ಕೊಡುವುದು ನಮ್ಮ ಕರ್ತವ್ಯ. ಅಂತಹ ಸಂಕಲ್ಪ ಕೈಗೊಂಡರೆ ಈ ದೇಶಕ್ಕೆ ಸರಿಸಾಟಿಯಾದ ದೇಶ ಜಗತ್ತಿನಲ್ಲಿ ಬೇರೊಂದಿಲ್ಲ. 2022 ನೆಮ್ಮದಿ ತರಲಿ, ಎಲ್ಲರಿಗೂ ಶುಭವಾಗಲಿ.

ಪಂಡಿತ್ ರಾಜೀವ ತಾರಾನಾಥ್, ಸರೋದ್ ವಾದಕ

‘ಅದ್ದೂರಿ ಆಚರಣೆ ತ್ಯಜಿಸಿ’



ಕೋವಿಡ್ ಮೊದಲ ಮತ್ತು ಎರಡನೇ ಅಲೆಯನ್ನು ಎದುರಿಸಿದ್ದೇವೆ. ಎರಡು ವರ್ಷಗಳ ಅವಧಿಯಲ್ಲಿ ಹಲವರು ಸಮಸ್ಯೆಗಳನ್ನು ಎದುರಿಸಿದ್ದಾರೆ. ಕೆಲವರು ರೋಗದ ತೀವ್ರತೆಗೆ ಮೃತಪಟ್ಟಿದ್ದಾರೆ. ದೇಶದಲ್ಲಿ 2020ರ ಜನವರಿಯಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿತ್ತು. 2021ರ ಜನವರಿಯಲ್ಲಿ ಕೊರೊನಾ ರೂಪಾಂತರಿ ಡೆಲ್ಟಾ ಪತ್ತೆಯಾಯಿತು. ಈಗ ಓಮೈಕ್ರಾನ್ ಕಾಣಿಸಿಕೊಂಡಿದೆ. 2022ರ ವರ್ಷಪೂರ್ತಿ ಕೋವಿಡ್ ಇರುವ ಸಾಧ್ಯತೆಯಿದೆ. ಜನವರಿ, ಫೆಬ್ರುವರಿ ತಿಂಗಳಲ್ಲಿ ಸೋಂಕು ಜಾಸ್ತಿಯಾಗಬಹುದು. ಆದ್ದರಿಂದ ಮುನ್ನೆಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಮದುವೆ ಸೇರಿದಂತೆ ವಿವಿಧ ಶುಭ ಸಮಾರಂಭಗಳು, ಹಬ್ಬಗಳು, ಜಾತ್ರೆಗಳನ್ನು ಸರಳವಾಗಿ ಆಚರಿಸಬೇಕು. ರಾಜಕೀಯ ಸೇರಿದಂತೆ ವಿವಿಧ ಬಹಿರಂಗ ಸಭೆ–ಸಮಾರಂಭಗಳಿಗೂ ನಿರ್ಬಂಧ ಅಗತ್ಯ. ಜ್ವರ, ಕೆಮ್ಮು ಸೇರಿದಂತೆ ಕೋವಿಡ್‌ನ ವಿವಿಧ ಲಕ್ಷಣಗಳು ಕಾಣಿಸಿಕೊಂಡರೆ ಕೂಡಲೇ ಪರೀಕ್ಷೆ ಮಾಡಿಸಿಕೊಳ್ಳಬೇಕು. ಇದರಿಂದ ಕುಟುಂಬದ ಸದಸ್ಯರಿಗೆ ರಕ್ಷಣೆ ನೀಡಬಹುದು. ಎಲ್ಲರೂ ಕೋವಿಡ್ ಲಸಿಕೆಯನ್ನು ಹಾಕಿಸಿಕೊಳ್ಳಬೇಕು. ಮುಖಗವಸು (ಮಾಸ್ಕ್) ಮೊಬೈಲ್ ರೀತಿ ಸದಾ ನಮ್ಮ ಜೊತೆಗೆ ಇರಬೇಕು. ಮನೆಯಿಂದ ಹೊರಗಡೆ ಹೋಗುವಾಗ ಮುಖಗವಸು ಧರಿಸುವುದನ್ನು ಮರೆಯಕೂಡದು.

ಡಾ.ಸಿ.ಎನ್.ಮಂಜುನಾಥ್, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ

ಮನಸ್ಸು ಶುದ್ಧಿಯಾಗಿ ಇಟ್ಟುಕೊಳ್ಳೋಣ



ಆರೋಗ್ಯವೇ ಭಾಗ್ಯ. ನಮಗೆ ಅನಾರೋಗ್ಯವಾದರೆ ಇಡೀ ಕುಟುಂಬವೇ ಭಯದ ವಾತಾವರಣದಲ್ಲಿ ಇರುತ್ತದೆ. ಕೆಲಸಕ್ಕೆ ಅಡ್ಡಿಯಾಗುತ್ತದೆ. ಪ್ರಸ್ತುತ ಆರೋಗ್ಯ, ಆಯಸ್ಸು ಕೊಟ್ಟು ಕಾಪಾಡು ಎಂದು ದೇವರಲ್ಲಿ ಬೇಡಿಕೊಳ್ಳುವಂತಾಗಿದೆ. ಆರೋಗ್ಯದ ಮುಂದೆ ಎಷ್ಟು ಕೋಟಿ ಹಣವಿದ್ದರೂ ನಗಣ್ಯ. ಸಂಚಾರಿ ವಿಜಯ್, ಅಪ್ಪು ಸೇರಿದಂತೆ ಹೋದ ವರ್ಷ ನಾವು ಬಹಳಷ್ಟು ಜನರನ್ನು ಆಕಸ್ಮಿಕವಾಗಿ ಕಳೆದುಕೊಂಡೆವು. ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದು ಬಹಳ ಮುಖ್ಯ. ಮಾಸ್ಕ್ ಎನ್ನುವುದು ಫ್ಯಾಷನ್ ಅಲ್ಲ. ಇದನ್ನು ಜನರು ಅರ್ಥ ಮಾಡಿಕೊಳ್ಳಲಿ. ನಮ್ಮ ಆರೋಗ್ಯವನ್ನು ನಾವೇ ಕಾಪಾಡಿಕೊಳ್ಳಬೇಕು. ದೈಹಿಕ ಶುದ್ಧತೆ ಜತೆಗೆ ಮನಸ್ಸಿನೊಳಗೂ ನಮ್ಮನ್ನು ನಾವು ಶುದ್ಧಿಯಾಗಿಟ್ಟುಕೊಳ್ಳುವುದು ಮುಖ್ಯ. ಒಳ್ಳೆಯದನ್ನೇ ಯೋಚನೆ ಮಾಡೋಣ. ಕೆಟ್ಟ ಆಲೋಚನೆಗಳನ್ನು ಮಾಡದೆ, ಯಾರಾದರೂ ಬೆಳೆಯುತ್ತಿದ್ದಾರೆ ಎಂದರೆ ಅವರ ಕಾಲೆಳೆಯುವುದನ್ನು ಬಿಟ್ಟು ಒಳ್ಳೆಯದನ್ನು ಬಯಸೋಣ. ಜೊತೆಯಲ್ಲಿರುವವರನ್ನು ಖುಷಿಯಾಗಿಟ್ಟುಕೊಳ್ಳೋಣ. ನಾವು ಎಲ್ಲಿ ವಾಸ ಮಾಡುತ್ತಿದ್ದೇವೆಯೋ, ಆ ಜಾಗವನ್ನು, ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳೋಣ. ನಾನು ಎನ್ನುವವರಿಗೆ ಆಯಸ್ಸು ಕಡಿಮೆ ಎಂದು ನಮ್ಮ ತಂದೆ ಹೇಳುತ್ತಿದ್ದರು. ನಾನು ಅನ್ನುವುದಕ್ಕಿಂತ ನಾವು ಎಂದು ಬಾಳಿ ಬದುಕಿದರೆ ಉತ್ತಮ. ಇದು ನಮ್ಮೆಲ್ಲರ ಸಂಕಲ್ಪವಾಗಿರಲಿ.

ರಚಿತಾ ರಾಮ್, ನಟಿ


‘ಬಹು ಕೌಶಲಗಳನ್ನು ವೃದ್ಧಿಸಿಕೊಳ್ಳಿ’



ಕೋವಿಡ್ ಕಾಣಿಸಿಕೊಂಡ ಬಳಿಕ ಕಾರ್ಯಕ್ಷೇತ್ರದ ವಾತಾವರಣ, ಕೆಲಸದ ಸ್ವರೂಪ ಸಂಪೂರ್ಣ ಬದಲಾಗಿದೆ. ರಂಗಭೂಮಿ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಬಲವಾದ ಹೊಡೆತ ಬಿದ್ದಿದೆ. ಚಿತ್ರಮಂದಿರಗಳಲ್ಲಿ ಶೇ 50 ರಷ್ಟು ಆಸನಗಳ ನಿರ್ಬಂಧದಿಂದ ಚಿತ್ರೋದ್ಯಮ ಸಂಕಷ್ಟಕ್ಕೆ ಸಿಲುಕಿತು. ಕೋವಿಡ್ ದೂರವಾಗದಿರುವುದರಿಂದ ಇನ್ನಷ್ಟು ದಿನ ಸವಾಲುಗಳ ನಡುವೆಯೇ ಸಾಗಬೇಕಾಗಿದೆ. ಹಾಗಂತ ಆತ್ಮಸ್ಥೈರ್ಯ ಕಳೆದುಕೊಳ್ಳಬೇಕಿಲ್ಲ. ಯಾವುದೇ ಒಂದು ಉದ್ಯೋಗಕ್ಕೆ ನೆಚ್ಚಿಕೊಳ್ಳಬಾರದು. ಬಹು ಕೌಶಲಗಳನ್ನು ವೃದ್ಧಿಸಿಕೊಳ್ಳಬೇಕು. ಆಗ ಉದ್ಯೋಗ ಕಳೆದುಕೊಂಡರೂ ಬೇರೆ ಕಸುಬು ಮಾಡಬಹುದು. ನಾನು ಅಭಿನಯದ ಜೊತೆಗೆ ಅಡುಗೆ, ವಾಹನ ಚಾಲನೆ, ಮಕ್ಕಳಿಗೆ ಪಾಠ ಸೇರಿದಂತೆ ವಿವಿಧ ಕೌಶಲಗಳನ್ನು ಬೆಳೆಸಿಕೊಂಡಿದ್ದೇನೆ. ಸದಾ ಒಂದಲ್ಲ ಒಂದು ಕಾರ್ಯಚಟುವಟಿಕೆಯಲ್ಲಿ ನಿರತನಾಗಿರುತ್ತೇನೆ. ಜಗತ್ತಿನಲ್ಲಿನ ಆಗುಹೋಗುಗಳ ಬಗ್ಗೆ ಅರಿತುಕೊಳ್ಳುವುದು ಮುಖ್ಯ. ಪುಸ್ತಕಗಳನ್ನು ಓದಿ ಜ್ಞಾನ ವೃದ್ಧಿಸಿಕೊಳ್ಳಬೇಕು. ಯಾವುದೇ ಕೆಲಸವಾದರೂ ಸಣ್ಣದು, ದೊಡ್ಡದು ಎಂಬ ಭಾವನೆ ನಮ್ಮಲ್ಲಿ ಇರಬಾರದು. ನಾವು ಮಾಡುವ ಕೆಲಸದಲ್ಲಿಯೇ ಆತ್ಮತೃಪ್ತಿ ಕಂಡುಕೊಳ್ಳಬೇಕು.

ಅರುಂಧತಿ ನಾಗ್, ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದೆ

ಜೀವನಗಾಥೆಗೆ ಫಲಶ್ರುತಿಯಾಗಲಿ...



ಇಪ್ಪತ್ತೆರಡು ಬಾಗಿಲು ತೆರೆಯುತ್ತಾ ಇದೆ. ಈಗ ಭವಿಷ್ಯ, ಚರಾಚರ ಜೀವಜಗತ್ತಿಗೆ ಹಿತವನ್ನುಂಟು ಮಾಡಲೆಂದು ಕಾಯುವ ಕೃಪಾಶಕ್ತಿಯನ್ನು ವಿನಯದಿಂದ ಪ್ರಾರ್ಥಿಸೋಣ. ಒಂದು ಶಕುನದ ಹಕ್ಕಿ ಕೂಡ ಶುಭ ನುಡಿಯುವುದು ಎಂಬುದು ನಮ್ಮ ನಂಬಿಕೆ. ಇಂಥ ಶುಭ ನುಡಿಯೆ ನಮ್ಮ ಜೀವನಗಾಥೆಗೆ ಜೀವಶ್ರುತಿಯಾಗಲಿ..

ಕೊರೊನಾದಂಥ ದುಷ್ಟ ಸಾಂಕ್ರಾಮಿಕಗಳು ದಮನಗೊಳ್ಳಲಿ...ನಮ್ಮ ಕಣ್ಮುಂದೆ ಉತ್ಸಾಹಿ ತರುಣ ತರುಣಿಯರು ನಗು ನಗುತ್ತಾ ಓಡಾಡಿ. ನಮ್ಮ ನಾಡು ನುಡಿಯ ಅಭಿಮಾನ ವೃದ್ಧಿಸಲಿ. ಪ್ರತಿಯೊಂದು ಜೀವಿಯೂ ಮತ್ತೊಂದು ಜೀವದ ಹಿಗ್ಗು ಹಿಗ್ಗಿಸುವಲ್ಲೇ ಬಾಳ್ವೆಯ ಸಾರ್ಥಕತೆ ಎಂಬುದು ಈವತ್ತು ನಮ್ಮ ಏಕಾಂತದ ಧ್ಯಾನವಾಗುವುದಾದರೆ ಶುಭವು ತನಗೆ ತಾನೇ ತೆರೆದುಕೊಳ್ಳುತ್ತದೆ.

-ಸ್ವಸ್ತಿ ಅನ್ನಿರಿ...ಅಸ್ತು ಅನ್ನುವೆ.

ಎಚ್.ಎಸ್.ವೆಂಕಟೇಶಮೂರ್ತಿ, ಕವಿ

ಏನೇ ಬಂದರೂ ಎದುರಿಸಿದರೆ ಬದುಕು ಸುಂದರ



ಭಯವಿಲ್ಲದೇ ಬದುಕಬೇಕು. ಕೊರೊನಾ, ರೂಪಾಂತರಿ ವೈರಾಣು ಓಮೈಕ್ರಾನ್–ಹೀಗೆ ಒಂದರ ಹಿಂದೆ ಮತ್ತೊಂದು ಬರ್ತಾನೆ ಇರುತ್ತವೆ. ಅದಕ್ಕೆ ಹೆದರಬಾರದು. ಧೈರ್ಯದಿಂದ ಎದುರಿಸಬೇಕು. ಓಮೈಕ್ರಾನ್ ಬಂದ ಎಷ್ಟೋ ಜನ ಈಗ ಚೇತರಿಸಿಕೊಂಡು ಆರಾಮಾಗಿದ್ದಾರೆ. ಏನೂ ಆಗಲ್ಲ. ಮಾಸ್ಕ್, ಸೋಷಿಯಲ್ ಡಿಸ್ಟೆನ್ಸ್ ಇತ್ಯಾದಿ ಮುನ್ನೆಚ್ಚರಿಕೆಗಳನ್ನು ಬಳಸಬೇಕು. ಏನೇ ಬಂದರೂ ಎದುರಿಸಬೇಕು. ಫಿಟ್ ಆಗಿರಬೇಕು. ಫಿಟ್‌ನೆಸ್ ಎಂದರೆ ಬರೀ ದೈಹಿಕವಾಗಿ ಅಲ್ಲ. ಮಾನಸಿಕವಾಗಿಯೂ ಸದೃಢವಾಗಿರಬೇಕು. ಸದಾ ಖುಷಿಯಾಗಿರಬೇಕು. ಯಾರ ಬಗ್ಗೆ ಮತ್ತು ಯಾವುದೇ ವಿಷಯಗಳ ಕುರಿತು ಸಂದೇಹಗಳನ್ನು ಮನದಲ್ಲಿಟ್ಟುಕೊಳ್ಳಬಾರದು. ಆತ್ಮವಿಶ್ವಾಸದಿಂದ ಬಾಳಬೇಕು. ಆಗ ಬದುಕು ಸುಂದರವಾಗುತ್ತದೆ.

ಅಶ್ವಿನಿ ನಾಚಪ್ಪ, ಅಂತರರಾಷ್ಟ್ರೀಯ ಅಥ್ಲೀಟ್ ಮತ್ತು ಕೋಚ್

ಎರಡನೇ ದಿನವೂ ಸತತ ಐದು ಗಂಟೆ ಸಭೆ ನಡೆಸಿದ ಸಿ.ಎಂ ● ನಾನೇ ಬಾಸ್ ಎಂಬ ದರ್ಪ ಬಿಡಿ–ಸೂಚನೆ

‘ರಿಯಲ್‌ಎಸ್ಟೇಟ್ ನಂಟಿದ್ದರೆ ಎತ್ತಂಗಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಿಯಲ್ ಎಸ್ಟೇಟ್ ವ್ಯಕ್ತಿಗಳ ಜತೆ ನಂಟು ಇಟ್ಟುಕೊಂಡಿದ್ದರೆ ಮುಲಾಜಿಲ್ಲದೇ ಎತ್ತಂಗಡಿ ಮಾಡಬೇಕಾಗುತ್ತದೆ. ನಿಮ್ಮ ಕಚೇರಿಗಳಲ್ಲಿ ‘ಬಾಸಿಸಂ’ ಮಾಡುವುದನ್ನು ನಿಲ್ಲಿಸಿ; ಕಠಿಣ ಶ್ರಮ ಹಾಕಿ ಜನರ ಕೆಲಸಗಳನ್ನು ಮಾಡಿ ಇಲ್ಲವೇ ಬೇರೆ ಇಲಾಖೆ ಹುಡುಕಿಕೊಳ್ಳಿ...’

2021ರ ವರ್ಷದ ಕೊನೆಯ ದಿನ ಈ ರೀತಿ ಜಿಲ್ಲಾಧಿಕಾರಿಗಳಿಗೆ ಎಚ್ಚರಿಕೆಯ ಚಾಟಿ ಬೀಸಿದ್ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ.

ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಭೆಯನ್ನು ಗುರುವಾರ ನಡೆಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದ ಬೊಮ್ಮಾಯಿ, ಶುಕ್ರವಾರ ಎಲ್ಲ ಜಿಲ್ಲಾಧಿಕಾರಿಗಳ ಸಭೆ ನಡೆಸಿದರು. ದಕ್ಷತೆ, ಪ್ರಾಮಾಣಿಕತೆ ರೂಢಿಸಿಕೊಂಡು ತ್ವರಿತಗತಿಯಲ್ಲಿ ಕೆಲಸ ಮಾಡುವಂತೆ ಅವರು ಕಟ್ಟುನಿಟ್ಟಿನ ಸೂಚನೆಯನ್ನೂ ನೀಡಿದರು. ಸುಮಾರು ಐದು ಗಂಟೆಗಳ ಕಾಲ ಸಭೆ ನಡೆಸಿ ಎಲ್ಲ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿ, ಪ್ರಗತಿಯಲ್ಲಿ ವೇಗ ಕಾಣದ ಜಿಲ್ಲಾಧಿಕಾರಿಗಳ ಕಿವಿ ಹಿಂಡಿದರು.

‘ಭೂವ್ಯವಹಾರಗಳ ವಿಷಯವನ್ನು ಅತ್ಯಂತ ಎಚ್ಚರಿಕೆಯಿಂದ ನಿರ್ವಹಿಸಬೇಕು. ರಿಯಲ್‌ಎಸ್ಟೇಟ್ ವ್ಯಕ್ತಿಗಳಿಂದ ದೂರ ಇರಬೇಕು. ಅವರ ಜತೆ ಯಾವುದೇ ರೀತಿಯ ನಂಟು ಇಟ್ಟುಕೊಳ್ಳಬಾರದು. ಒಂದು ವೇಳೆ ಯಾರಾದರೂ ಅಂತಹ ನಂಟು ಇಟ್ಟುಕೊಂಡಿದ್ದರೆ ಸುಮ್ಮನೆ ಬಿಡುವುದಿಲ್ಲ. ಸಾಮಾನ್ಯ ಜನರ ಕೆಲಸ ಮಾಡಲು ಆ ಹುದ್ದೆಗಳಲ್ಲಿ ಕೂತಿದ್ದೀರಿ ಎಂಬುದನ್ನು ಮರೆಯಬಾರದು. ‘ನಾನೇ ಬಾಸ್’ ಎಂಬ ದರ್ಪದ ಧೋರಣೆ ಇಟ್ಟುಕೊಳ್ಳಬೇಡಿ. ಇಂತಹ ಪ್ರವೃತ್ತಿಯಿಂದ ಜನಸಾಮಾನ್ಯರು ನರಳುವಂತಾಗುತ್ತದೆ. ಅದಕ್ಕೆ ಆಸ್ಪದ ನೀಡಬಾರದು’ ಎಂದು ಅವರು ಹೇಳಿದರು.



ಜಿಲ್ಲಾಧಿಕಾರಿಗಳ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕಂದಾಯ ಸಚಿವ ಆರ್‌. ಅಶೋಕ ಮಾತುಕತೆ ನಡೆಸಿದರು. ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್‌, ಸಚಿವ ಗೋವಿಂದ ಕಾರಜೋಳ, ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

‘ಅಧಿಕಾರ ಎಂದರೆ ಜವಾಬ್ದಾರಿ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಿ. ಜಿಲ್ಲಾ ಮ್ಯಾಜಿಸ್ಟ್ರೇಟ್ ಎಂಬ ಗತ್ತಿನಲ್ಲಿ ವರ್ತಿಸಬೇಡಿ. ಅಧಿಕಾರದಿಂದ ಹೆಚ್ಚು ವಿನಯಶೀಲರಾಗಬೇಕು. ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರ ಕಾರ್ಯವೈಖರಿ ಮೇಲೆ ನಿಗಾ ಇಡಿ. ಅವರಿಗೆ ಕೆಲಸ ಕೊಟ್ಟು ನಿಮ್ಮ ಹೊರೆ ಕಡಿಮೆ ಮಾಡಿಕೊಳ್ಳಿ. ನೀವು ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೆ ಸರ್ಕಾರ ವರ್ಚಸ್ಸೂ ಹೆಚ್ಚಾಗುತ್ತದೆ’ ಎಂದು ಬೊಮ್ಮಾಯಿ ಕಿವಿಮಾತು ಹೇಳಿದರು.

> **ಜಿಲ್ಲೆಗಳಲ್ಲಿ ಉತ್ತಮ ಆಡಳಿತವನ್ನು ನೀಡಲು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಿ, ಬದಲಾವಣೆ ಬಗ್ಗೆ ಚಿಂತಿಸದೇ, ನೀವೇ ಬದಲಾವಣೆ ತನ್ನಿ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

‘ನೀವು ಜನರ ಸೇವೆ ಮಾಡುವ ಸೇವಕರು ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಿ. ಆದ್ದರಿಂದ ಜನರ ಮಧ್ಯೆ ಹೋಗಿಯೇ ಕೆಲಸ ಮಾಡಬೇಕು ಎಂದು ಬಯಸುತ್ತೇನೆ. ಕೆಳ ಹಂತದ ಅಧಿಕಾರಿಗಳು ಜಿಲ್ಲಾಧಿಕಾರಿಗಳಂತೆ ವರ್ತಿಸಲು ಅವಕಾಶ ಕೊಡಬೇಡಿ. ಸ್ವಂತಿಕೆ, ವಿವೇಚನೆ ಬಳಸಿ ಕೆಲಸ ಮಾಡಿ’ ಎಂದೂ ಸಲಹೆ ನೀಡಿದರು.

‘ಸರ್ಕಾರ ಮತ್ತು ಜನರ ಮಧ್ಯೆ ಜಿಲ್ಲಾಧಿಕಾರಿಗಳು ಬಹು ಮುಖ್ಯಕೊಂಡಿ. ನೀವು ಜನರಿಗೆ ಸ್ಪಂದಿಸದೇ ಕೆಲವರ ಹಿತಾಸಕ್ತಿಯಲ್ಲಿ ಕೆಲಸ ಮಾಡಿದರೆ, ಜಿಲ್ಲಾಧಿಕಾರಿಗಳಾಗಿರಲು ಅರ್ಹತೆ ಕಳೆದುಕೊಳ್ಳುತ್ತೀರಿ. ಇತರ ಐಎಎಸ್ ಅಧಿಕಾರಿಗಳಿಗೂ ನಿಮಗೂ ವ್ಯತ್ಯಾಸ ಇದೆ ಎಂಬುದನ್ನು ತಿಳಿದುಕೊಳ್ಳಬೇಕು’ ಎಂದು ಅವರು ಹೇಳಿದರು.

ವರ್ಷದೊಳಗೆ ಪ್ರಕರಣಗಳ ವಿಲೇವಾರಿಗೆ ಸೂಚನೆ

ಗೋಮಾಳ, ಬಗರ್‌ಹುಕುಂ, ಡೀಮ್ಡ್ ಅರಣ್ಯ ಪ್ರದೇಶಗಳ ವ್ಯಾಜ್ಯಗಳಿಗೆ ತಕ್ಷಣವೇ ಕಾನೂನು ಪರಿಹಾರ ನೀಡಬೇಕು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

ಇವುಗಳಿಗೆ ಪರಿಹಾರ ಸಿಗದೇ ಇರುವ ಕಾರಣ ಜನರು ಅನಿಶ್ಚಿತತೆಯಿಂದ ಬದುಕುತ್ತಿದ್ದಾರೆ. ಇದಕ್ಕಾಗಿ ಸರ್ಕಾರ ನಿಶ್ಚಿತ, ಸ್ಪಷ್ಟ ಆಡಳಿತ, ಗೊಂದಲಗಳಿಲ್ಲದ ನಿರ್ಧಾರಗಳನ್ನು ಕೈಗೊಳ್ಳುತ್ತದೆ. ಜಿಲ್ಲಾಧಿಕಾರಿಗಳು ಸವಾಲುಗಳಿಗೆ ಸ್ಪಷ್ಟತೆಯಿಂದ ಸಕಾರಾತ್ಮಕ ಪರಿಹಾರ ನೀಡಬೇಕು ಎಂದು ಹೇಳಿದರು.

ಐದು ವರ್ಷಗಳಿಂದ ಬಾಕಿ ಇರುವ ಜಮೀನು ವ್ಯಾಜ್ಯ ಮತ್ತು ನ್ಯಾಯಾಲಯ ಪ್ರಕರಣಗಳು ರೈತರ ಆರ್ಥಿಕ ಸ್ಥಿತಿಗತಿ ನಿರ್ಧರಿಸುತ್ತದೆ. ಆದ್ದರಿಂದ ತಹಶೀಲ್ದಾರ, ಉಪವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಬಾಕಿ ಇರುವ ಕೋರ್ಟ್ ಪ್ರಕರಣಗಳು ಶೀಘ್ರದಲ್ಲಿ ಇತ್ಯರ್ಥವಾಗಬೇಕು. ಇದಕ್ಕೆ ಅವಶ್ಯಕತೆ ಇದ್ದಲ್ಲಿ, ಹೆಚ್ಚುವರಿ ತಹಶೀಲ್ದಾರ್, ಉಪವಿಭಾಗಾಧಿಕಾರಿಗಳ ನಿಯೋಜನೆಗೆ ಪ್ರಸ್ತಾವನೆ ಸಲ್ಲಿಸಬೇಕು. ಒಂದು ವರ್ಷದೊಳಗೆ ಎಲ್ಲ ನ್ಯಾಯಾಲಯಗಳ ಪ್ರಕರಣಗಳು ವಿಲೇವಾರಿ ಆಗಬೇಕು ಎಂದು ಸೂಚಿಸಿದರು.

‘10 ಗಂಟೆ ಕೆಲಸ ಮಾಡಿ; ಇಲ್ಲವೇ ಹೊರಡಿ’

‘ಜನರಿಗಾಗಿ ದಿನಕ್ಕೆ ಕನಿಷ್ಠ 10 ಗಂಟೆಗಳ ಕಾಲ ಕೆಲಸ ಮಾಡಲೇಬೇಕು. ಅಷ್ಟು ಮಾಡಲು ಆಗುವುದಿಲ್ಲವೇ, ಆಗದಿದ್ದರೆ ಆರಾಮವಾಗಿ ಕೆಲಸ ಮಾಡಬಹುದಾದ ಇಲಾಖೆಗಳನ್ನು ಹುಡುಕಿಕೊಂಡು ಹೋಗಿ. ನಾವು ಬೇರೆಯವರನ್ನು ಹುಡುಕಿಕೊಳ್ಳುತ್ತೇವೆ’ ಎಂದು ಬೊಮ್ಮಾಯಿ ಎಚ್ಚರಿಕೆ ಕೊಟ್ಟರು.

ಬೆಳೆ ಪರಿಹಾರ ನೀಡಲು ವಿಳಂಬ ಮಾಡಿದ ಜಿಲ್ಲಾಧಿಕಾರಿಗಳಿಗೆ ಮೇಲಿನಂತೆ ಮಾತಿನ ಚಾಟಿ ಬೀಸಿದ ಅವರು, ‘ಜಿಲ್ಲಾಧಿಕಾರಿ ಹುದ್ದೆ ಮಹತ್ವದ್ದು ಎಂಬುದನ್ನು ಮರೆಯಬೇಡಿ’ ಎಂದೂ ಹೇಳಿದರು.

ಪಠ್ಯದಲ್ಲಿ ಬಾಬಾಬುಡನ್‌ಗಿರಿ ಹೆಸರು ಬದಲಿಗೆ ಸೂಚನೆ

ಬೆಂಗಳೂರು: ‘ಇನಾಮ್ ದತ್ತಾತ್ರೇಯ ಪೀಠ ಅಥವಾ ಚಂದ್ರದ್ರೋಣ ಪರ್ವತಕ್ಕೆ ಶಾಲಾ ಪಠ್ಯಪುಸ್ತಕಗಳಲ್ಲಿ ‘ಬಾಬಾಬುಡನ್‌ಗಿರಿ’ ಎಂದು ಬಳಸಿದ್ದು, ಪಠ್ಯದಲ್ಲಿ ಮೂಲ ಹೆಸರನ್ನೇ ಬಳಸಬೇಕು ಎಂಬ ಬೇಡಿಕೆ ಬಂದಿದೆ. ಸರ್ಕಾರದ ಅಧಿಕೃತ ದಾಖಲೆಗಳನ್ನು ಪರಿಶೀಲಿಸಿ ಕ್ರಮತೆಗೆದುಕೊಳ್ಳಿ’ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

4,6, ಮತ್ತು 9 ನೇ ತರಗತಿಗಳ ಪಠ್ಯ ಪುಸ್ತಕಗಳಲ್ಲಿ ಚಿಕ್ಕಮಗಳೂರಿನ ಪ್ರವಾಸಿ ತಾಣ ‘ಬಾಬಾಬುಡನ್‌ಗಿರಿ’ ಎಂದು ನಮೂದಿಸಲಾಗಿದೆ. ಸರ್ಕಾರಿ ದಾಖಲೆಗಳ ಪ್ರಕಾರ ಇನಾಮ್ ದತ್ತಾತ್ರೇಯ ಅಥವಾ ಚಂದ್ರ ದ್ರೋಣ ಪರ್ವತ ಎಂದು ಕರೆಯಲ್ಪಡುತ್ತಿವೆ. ಇದನ್ನು ಸರಿಪಡಿಸಬೇಕು ಎಂದು ಉಪಸಭಾಪತಿ ಎಂ.ಕೆ. ಪ್ರಾಣೇಶ್ ಅವರು ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದರು.

ಸಂಕ್ಷಿಪ್ತ ಸುದ್ದಿ

ಹಿಜಾಬ್ ಧರಿಸಿದ್ದಕ್ಕೆ ಪ್ರವೇಶ ನಿರಾಕರಣೆ

ಉಡುಪಿ: ಇಲ್ಲಿಯ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಹಿಜಾಬ್ ಧರಿಸಿದ ಕಾರಣಕ್ಕೆ 6 ವಿದ್ಯಾರ್ಥಿನಿಯರಿಗೆ ತರಗತಿಗೆ ಪ್ರವೇಶ ನಿರಾಕರಿಸಲಾಗಿದೆ ಎಂಬ ಆರೋಪ ಕೇಳಿಬಂದಿದೆ.

‘ಕಳೆದ ವರ್ಷ ವಿಜ್ಞಾನ ವಿಭಾಗದಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಹಿಜಾಬ್ ಧರಿಸಲು ಅನುಮತಿ ನೀಡಲಾಗಿತ್ತು. ಈ ವರ್ಷ ಅನುಮತಿ ನೀಡುತ್ತಿಲ್ಲ. ಹಿಜಾಬ್ ಧರಿಸಿದ್ದಕ್ಕೆ ತರಗತಿಗೆ ಸೇರಿಸುತ್ತಿಲ್ಲ. ಮೂರು ದಿನಗಳಿಂದ ಕೊಠಡಿಯ ಹೊರಗೆ ನಿಂತು, ಮನೆಗೆ ತೆರಳುತ್ತಿದ್ದೇವೆ’ ಎಂದು ವಿದ್ಯಾರ್ಥಿನಿಯರು ದೂರಿದ್ದಾರೆ.

‘ಪ್ರಣವಾನಂದ ಸ್ವಾಮೀಜಿಗೂ ಈಡಿಗರ ಸಂಘಕ್ಕೂ ಸಂಬಂಧವಿಲ್ಲ’

ಬೆಂಗಳೂರು: ‘ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘಕ್ಕೂ ಪ್ರಣವಾನಂದ ಸ್ವಾಮೀಜಿಗೂ ಯಾವುದೇ ಸಂಬಂಧವಿಲ್ಲ. ಸಂಘದ ಚುನಾವಣೆಯು ಬೈಲಾಕ್ಕೆ ಅನುಗುಣವಾಗಿ ನಡೆಯುತ್ತಿದೆ’ ಎಂದು ಸಂಘದ ಅಧ್ಯಕ್ಷ ಎಂ.ತಿಮ್ಮೇಗೌಡ ತಿಳಿಸಿದ್ದಾರೆ.

‘ಸಂಘವು ಪಾರದರ್ಶಕತೆಯಿಂದ ನಡೆಯುತ್ತಿದ್ದು, ಸಮಾಜದ ಅಭಿವೃದ್ಧಿ ಚಿಂತನೆಯನ್ನು ಹೊಂದಿದೆ. ಇದೇ 9ರಂದು ನಡೆಯಲಿರುವ ಸಂಘದ ಚುನಾವಣೆಯು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ–1960 ಹಾಗೂ ಸಂಘದ ಬೈಲಾದ ಅನುಗುಣವಾಗಿ ನಡೆಯುತ್ತಿದೆ. ಪ್ರಣವಾನಂದ ಸ್ವಾಮೀಜಿ ಈಡಿಗರ ಸಂಘದ ಸದಸ್ಯರೂ ಅಲ್ಲ. ಅವರು ನಡೆಸುತ್ತಿರುವ ರಾಣೆಬೆನ್ನೂರಿನ ಶರಣ ಬಸವೇಶ್ವರ ಮಠಕ್ಕೂ ನಮ್ಮ ಸಂಘಕ್ಕೂ ಯಾವುದೇ ಸಂಬಂಧವಿಲ್ಲ’ ಎಂದು ಸ್ಪಷ್ಟನೆ ನೀಡಿದ್ದಾರೆ.

‘ರಾಜ್ಯದಲ್ಲಿ 70 ಲಕ್ಷ ಇರುವ ಈಡಿಗ ಸಮುದಾಯದಲ್ಲಿ 13 ಸಾವಿರ ಮಂದಿಗೆ ಸಂಘದ ಸದಸ್ಯತ್ವ ನೀಡಲಾಗಿದೆ. ಸಂಘದ ಚುನಾವಣಾಧಿಕಾರಿ ಆದೇಶವಿಲ್ಲದೆ, ಐವರು ಅಧಿಕಾರಿಗಳನ್ನು ಚುನಾವಣಾಧಿಕಾರಿಗಳನ್ನಾಗಿ ನೇಮಿಸಿದ್ದಾರೆ’ ಎಂದು ಪ್ರಣವಾನಂದ ಸ್ವಾಮೀಜಿ ಆರೋಪಿಸಿದ್ದರು.

ಸಂಘ ಪರಿವಾರಕ್ಕೆ ದೇಗುಲ ಹಸ್ತಾಂತರ: ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಜನರ ಆಸ್ತಿಯಾಗಿರುವ ದೇವಾಲಯಗಳನ್ನು ಬಿಜೆಪಿ ಸರ್ಕಾರ, ತಮ್ಮ ಪಕ್ಷ ಹಾಗೂ ಸಂಘ ಪರಿವಾರದ ಕಾರ್ಯಕರ್ತರಿಗೆ ಹಂಚಲು ಮುಂದಾಗಿದ್ದು, ಇಂತಹ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ಸರ್ಕಾರ ಸುಟ್ಟು ಭಸ್ಮವಾಗಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.



ಡಿ.ಕೆ. ಶಿವಕುಮಾರ್

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ಇದು ಹಿಂದೂ ವಿರೋಧಿ ನೀತಿಯಾಗಿದ್ದು ರಾಜ್ಯದ ಜನರು ಹಾಗೂ ಆ ದೇವರು ಬಿಜೆಪಿಯನ್ನು ಎಂದಿಗೂ ಕ್ಷಮಿಸುವುದಿಲ್ಲ ಎಂದರು.

‘ನಾವು ಕೂಡ ಹಿಂದೂಗಳಾಗಿದ್ದು, ಧರ್ಮ ಹಾಗೂ ಸಂಸ್ಕೃತಿಯಲ್ಲಿ ನಂಬಿಕೆ ಇಟ್ಟಿದ್ದೇವೆ. ಈ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಒಂದೇ ಒಂದು ಜನಪರ ಯೋಜನೆ ನೀಡಲಿಲ್ಲ. ಚುನಾವಣೆಯಲ್ಲಿ ಸೋಲುವ ಭಯದಿಂದ ಗೋಹತ್ಯೆ ಹಾಗೂ ಮತಾಂತರ ನಿಷೇಧ, ದೇವಾಲಯಗಳಿಗೆ ಸ್ವಾಯತ್ತತೆ ನೀಡುವ ಕಾನೂನು ತರುತ್ತಿದ್ದಾರೆ. ಚುನಾವಣೆ ಸೋಲನ್ನು ಮರೆಮಾಚಲು, ಜನರನ್ನು ಭಾವನಾತ್ಮಕವಾಗಿ ಹಿಡಿದಿಡಲು ಪ್ರಯತ್ನಿಸುತ್ತಿದ್ದು, ನಾವು ಇದಕ್ಕೆ ಅವಕಾಶ ನೀಡುವುದಿಲ್ಲ’ ಎಂದು ಹೇಳಿದರು.

‘ಇಂತಹ ಕ್ರಮಗಳಿಂದ ಜನ ಮತ ಹಾಕುತ್ತಾರೆ ಎಂಬ ಭ್ರಮೆಯಿಂದ ಮುಖ್ಯಮಂತ್ರಿ ಹೊರಬರಬೇಕು. ದೇವಾಲಯಗಳಲ್ಲಿ ಈಗಿರುವ ವ್ಯವಸ್ಥೆ ಮುಂದುವರಿಸಲು ಬಿಡಬೇಕು’ ಎಂದು ಆಗ್ರಹಿಸಿದ ಅವರು, ‘ದೇವರು, ದೇವಾಲಯಗಳನ್ನೇ ಮಾರಲು ಕ್ರೂರ ಕೃತ್ಯಕ್ಕೆ ಕೈ ಹಾಕಿರುವುದು ಸರಿಯಲ್ಲ. ಜನವರಿ 4ರಂದು ಸಭೆ ನಡೆಸಿ ಮುಂದಿನ ಹೋರಾಟ ನಡೆಸುವ ಬಗ್ಗೆ ತೀರ್ಮಾನ ಮಾಡುತ್ತೇವೆ’ ಎಂದು ಅವರು ಹೇಳಿದರು.

‘ಭಕ್ತರು ಎಂದರೆ ಸಂಘ ಸಂಸ್ಥೆ ಅಲ್ಲ’

‘ದೇವಸ್ಥಾನಗಳನ್ನು ಭಕ್ತರಿಗೆ ನೀಡುವುದೆಂದರೆ ಯಾವುದೇ ಸಂಘ– ಸಂಸ್ಥೆಗಳಿಗೆ ಒಪ್ಪಿಸುತ್ತೇವೆ ಎಂಬ ಅರ್ಥವಲ್ಲ’ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.



ದೇವಾಲಯಗಳನ್ನು ಸಂಘ ಪರಿವಾರದ ಸಂಸ್ಥೆಗಳಿಗೆ ನೀಡಲು ಹೊರಟಿದ್ದಾರೆ ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಟೀಕೆಗೆ ಪ್ರತಿಕ್ರಿಯಿಸಿದ ಅವರು, ‘ಭಕ್ತರು ಎಂದರೆ ಅದು ಶಿವಕುಮಾರ್ ಆಗಿರಬಹುದು, ಆರ್‌ಎಸ್‌ಎಸ್, ಬಿಜೆಪಿಯೂ ಆಗಿರಬಹುದು. ಒಟ್ಟಿನಲ್ಲಿ ಸರ್ಕಾರದ ಹಿಡಿತದಿಂದ ತಪ್ಪಿಸಿ ಭಕ್ತರಿಗೆ ನೀಡಬೇಕು, ಅವರಿಂದಲೇ ನಿರ್ವಹಣೆ ಆಗಬೇಕು ಎಂಬುದು ನಮ್ಮ ಚಿಂತನೆ. ದೇವಾಲಯಗಳಲ್ಲಿ ಸಂಗ್ರಹವಾಗುವ ಹಣ ದೇವಾಲಯಗಳ ಅಭಿವೃದ್ಧಿಗೆ ಮತ್ತು ಭಕ್ತರ ಅನುಕೂಲಕ್ಕಾಗಿ ಬಳಸಲಾಗುವುದು’ ಎಂದು ವಿವರಿಸಿದರು.


‘ಹಿಂದೂ ದೇವಾಲಯಗಳ ನಿರ್ವಹಣೆಯನ್ನು ಭಕ್ತರ ಕೈಗೆ ನೀಡುವುದಕ್ಕೆ ಪೂರಕವಾಗಿ ವಿಶೇಷ ಕಾನೂನು ಜಾರಿಗೆ ತರುತ್ತೇವೆ’ ಎಂದೂ ಅವರು ಹೇಳಿದರು.

ಹಿಂದೂಗಳ ಭಾವನೆಗೆ ಧಕ್ಕೆ ಉಂಟು ಮಾಡಿದ ಪ್ರಕರಣ

ಭದ್ರತೆಯೊಂದಿಗೆ ಕೋರ್ಟ್‌ಗೆ ಭಗವಾನ್ ಹಾಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಮಾಯಣ, ಮಹಾಭಾರತ ಮತ್ತು ಹಿಂದೂ ಧರ್ಮ ದೇವತೆಗಳನ್ನು ಅವಹೇಳನ ಮಾಡಿ ಹಿಂದೂಗಳ ಭಾವನೆಗಳಿಗೆ ಧಕ್ಕೆ ಉಂಟುಮಾಡಿದ್ದಾರೆ’ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣದ ಮೊದಲ ಆರೋಪಿಯಾಗಿರುವ ಪ್ರೊ. ಕೆ.ಎಸ್. ಭಗವಾನ್ ಶುಕ್ರವಾರ 8ನೇ ಎಸಿಎಂಎಂ ನ್ಯಾಯಾಲಯಕ್ಕೆ ಬಿಗಿ ಭದ್ರತೆಯ ನಡುವೆ ಹಾಜರಾದರು.



ಕೆ.ಎಸ್. ಭಗವಾನ್

ನ್ಯಾಯಾಧೀಶ ವೀರನಗೌಡ ಎಸ್. ಪಾಟೀಲ ಪ್ರಕರಣದ ವಿಚಾರಣೆ ನಡೆಸಿದರು. ಈ ವೇಳೆ ಭಗವಾನ್ ಪರವಾಗಿ ವಕೀಲ ಸಿ.ಎಚ್. ಹನುಮಂತರಾಯ ವಕಾಲತ್ತು ಸಲ್ಲಿಸಿದರು.

ಪ್ರಕರಣದ ಇನ್ನಿಬ್ಬರು ಆರೋಪಿಗಳಾದ ಚಂದ್ರಶೇಖರ ಪಾಟೀಲ (ಚಂಪಾ) ಹಾಗೂ ತಮಿಳ್ ಸೆಲ್ವಿ ಅವರಿಗೂ ಸಮನ್ಸ್ ಜಾರಿ ಮಾಡಲಾಗಿತ್ತು. ಆದರೆ ಅವರಿಬ್ಬರೂ ಗೈರು ಹಾಜರಾಗಿದ್ದರು. ಚಂಪಾ ಮತ್ತು ತಮಿಳ್ ಸೆಲ್ವಿ ಪರವಾಗಿ ಹಾಜರಾಗಿದ್ದ ವಕೀಲರು, ತಮ್ಮ ಕಕ್ಷಿದಾರ ಆರೋಪಿಗಳ ಹಾಜರಾತಿಗೆ ವಿನಾಯಿತಿ ಕೋರಿದರು. ನ್ಯಾಯಾಲಯ ವಿಚಾರಣೆಯನ್ನು 2022ರ ಏಪ್ರಿಲ್ 4ಕ್ಕೆ ಮುಂದೂಡಿತು.

ಜನ್ಮದಿನದ ಕಾರ್ಯಕ್ರಮ ನಡೆದ ಸ್ಥಳ ಬೆಂಗಳೂರು ಎಂಬ ಕಾರಣಕ್ಕೆ ನಂತರ ಈ ಪ್ರಕರಣವನ್ನು ಹೈ ಗ್ರೌಂಡ್ಸ್ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿತ್ತು. ತನಿಖೆ ನಡೆಸಿದ್ದ ಹೈ ಗ್ರೌಂಡ್ಸ್ ಠಾಣೆ ಪೊಲೀಸರು 8ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಈ ಹಿಂದೆ ನ್ಯಾಯಾಲಯದ ಆವರಣದಲ್ಲಿ ವಕೀಲರಾದ ಮೀರಾ ರಾಘವೇಂದ್ರ ಅವರು ಭಗವಾನ್ ಮುಖಕ್ಕೆ ಮಸಿ ಬಳಿದಿದ್ದ ಕಾರಣ ಇಂದು ಹೆಚ್ಚಿನ ಪೊಲೀಸ್ ಭದ್ರತೆ ಒದಗಿಸಲಾಗಿತ್ತು.

ಏನಿದು ಪ್ರಕರಣ?

ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದಿದ್ದ ಪೆರಿಯಾರ್ ಜನ್ಮದಿನದ ಕಾರ್ಯಕ್ರಮದಲ್ಲಿ ಪ್ರೊ. ಭಗವಾನ್, ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ) ಹಾಗೂ ತಮಿಳ್ ಸೆಲ್ವಿ ಭಾಷಣ ಮಾಡಿದ್ದರು.

ಭಾಷಣದಲ್ಲಿ ಅವರು, ‘ಶ್ರೀರಾಮ ತಂದೆಗೆ ಹುಟ್ಟಿದ ಮಗನಲ್ಲ, ಮಹಾಭಾರತ ಓದಬೇಡಿ. ದೇವಾಲಯಗಳು ಕೇವಲ ಹಣ ಮಾಡುವ ವ್ಯವಸ್ಥೆ ಸೃಷ್ಟಿಸಿಕೊಂಡಿವೆ. ಭಗವದ್ಗೀತೆ ಓದುವವರು ಭಯೋತ್ಪಾದಕರಾಗಿ ಪರಿವರ್ತನೆಯಾಗುತ್ತಾರೆ, ಉಪನಿಷತ್ತು ಒಂದು ಕೆಟ್ಟ ಗ್ರಂಥ... ಎಂದೆಲ್ಲ, ಧರ್ಮಗಳ ನಡುವೆ ಸಂಘರ್ಷ ಉಂಟು ಮಾಡುವ ಅವಹೇಳನಾಕಾರಿ ಭಾಷಣ ಮಾಡಿದ್ದಾರೆ. ಇದರಿಂದ ಹಿಂದೂಗಳ ಶ್ರೇಷ್ಠ ಧರ್ಮಗ್ರಂಥಗಳಿಗೆ ಅವಮಾನ ಮಾಡಲಾಗಿದೆ’ ಎಂದು ಆರೋಪಿಸಿ ಬೆಳ್ತಂಗಡಿ ನಿವಾಸಿ ಶಾಮಸುಂದರ ಭಟ್ ಎಂಬುವವರು ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ 2017ರ ಸೆಪ್ಟೆಂಬರ್ 19ರಂದು ದೂರು ನೀಡಿದ್ದರು.

‘ಗೋವು ಆಧಾರಿತ ಉತ್ಪನ್ನಕ್ಕೆ ಯೋಜನೆ’

ಬೆಂಗಳೂರು: ಗೋಶಾಲೆಗಳನ್ನು ಸ್ವಾವಲಂಬಿಯಾಗಿಸಲು ಗೋವು ಆಧಾರಿತ ಉತ್ಪನ್ನಗಳನ್ನು ತಯಾರಿಸುವ ಯೋಜನೆ ರೂಪಿಸಲಾಗುವುದು ಎಂದು ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ ಹೇಳಿದರು.

ಗೋಶಾಲೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಗುಜರಾತ್, ಮಹಾರಾಷ್ಟ್ರ, ಉತ್ತರ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡಿದ್ದ ಅವರು, ಅಲ್ಲಿನ ಅಧ್ಯಯನದ ಮಾಹಿತಿಗಳನ್ನು ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಹಂಚಿಕೊಂಡರು.

ಆ ರಾಜ್ಯಗಳಲ್ಲಿನ ಗೋಶಾಲೆಗಳಲ್ಲಿ ಗೋವುಗಳ ಸಗಣಿ, ಮೂತ್ರದಿಂದ ಸುಮಾರು ನೂರಕ್ಕೂ ಹೆಚ್ಚು ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಸರ್ಕಾರದ ಅನುದಾನವೇ ಇಲ್ಲದಂತೆ ಗೋಶಾಲೆಗಳನ್ನು ಸ್ವಾವಲಂಬಿಯಾಗಿಸಲಾಗಿದೆ. ಇದೇ ಮಾದರಿಯನ್ನು ಕರ್ನಾಟಕದಲ್ಲೂ ಅನುಷ್ಠಾನಕ್ಕೆ ತರಲಾಗುವುದು ಎಂದು ಅವರು ಹೇಳಿದರು.

ಕೇಂದ್ರ ಸರ್ಕಾರದ ಗೋಬರ್ ಧನ್ ಯೋಜನೆ ಅಡಿಯಲ್ಲಿ ಕೆಲ ಗೋಶಾಲೆಗಳನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ಅವರು ಹೇಳಿದರು.

ಪೀಯೂಷ್ ಜೈನ್ ನಂತರ ಸಮಾಜವಾದಿ ಪಕ್ಷದ ನಾಯಕನಿಗೆ ಶೋಧದ ಆಘಾತ

ಪುಷ್ಪರಾಜ್ ಜೈನ್ ಮನೆಯಲ್ಲಿ ಐಟಿ ಶೋಧ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಕಾನ್ಪುರದ ಸುಗಂಧ ದ್ರವ್ಯ ಉದ್ಯಮಿ ಮತ್ತು ಸಮಾಜವಾದಿ ಪಕ್ಷದ ನಾಯಕ ಪುಷ್ಪರಾಜ್ ಜೈನ್ ಅವರ ನಿವಾಸ ಮತ್ತು ಕಚೇರಿ ಸೇರಿ 50 ಸ್ಥಳಗಳಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಶುಕ್ರವಾರ ಶೋಧ ಕಾರ್ಯ ನಡೆಸಿದ್ದಾರೆ. ಈ ಶೋಧಕಾರ್ಯವೂ ಆಡಳಿತಾರೂಢ ಬಿಜೆಪಿ ಮತ್ತು ಸಮಾಜವಾದಿ ಪಕ್ಷದ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

ಇದೇ ವಾರದ ಆರಂಭದಲ್ಲಿ ಕಾನ್ಪುರದ ಮತ್ತೊಬ್ಬ ಸುಗಂಧ ದ್ರವ್ಯ ಉದ್ಯಮಿ ಪೀಯೂಷ್ ಜೈನ್ ಅವರ ನಿವಾಸದಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಶೋಧಕಾರ್ಯ ನಡೆಸಿದ್ದರು. ಆಗ ಒಟ್ಟು ₹ 196 ಕೋಟಿ ನಗದು, 25 ಕೆ.ಜಿ. ಚಿನ್ನ ಮತ್ತು 250 ಕೆ.ಜಿ.ಯಷ್ಟು ಬೆಳ್ಳಿಯನ್ನು ವಶಕ್ಕೆ ಪಡೆದುಕೊಳ್ಳಲಾಗಿತ್ತು. 'ಪೀಯೂಷ್ ಜೈನ್ ಸಮಾಜವಾದಿ ಪಕ್ಷದ ನಾಯಕ' ಎಂದು ಬಿಜೆಪಿ ಆರೋಪಿಸಿತ್ತು. ಅದನ್ನು ಸಮಾಜವಾದಿ ಪಕ್ಷವು ನಿರಾಕರಿಸಿತ್ತು.

'ಸಮಾಜವಾದಿ ಪಕ್ಷದ ನಾಯಕ ಮತ್ತು ಉದ್ಯಮಿ ಪುಷ್ಪರಾಜ್ ಜೈನ್ ಮನೆಯ ಮೇಲೆ ದಾಳಿ ನಡೆಸಲು ಬಿಜೆಪಿ ಯೋಜಿಸಿತ್ತು. ಆದರೆ ತಪ್ಪು ಗ್ರಹಿಕೆಯಿಂದ ಬಿಜೆಪಿ ಬೆಂಬಲಿಗ ಉದ್ಯಮಿ ಪೀಯೂಷ್ ಜೈನ್ ಮನೆಯ ಮೇಲೆ ದಾಳಿ ನಡೆಸಲಾಗಿದೆ. ಅಲ್ಲಿ ಅಪಾರ ಪ್ರಮಾಣದ ನಗದು ಪತ್ತೆಯಾಗಿದೆ' ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಲೇವಡಿ ಮಾಡಿದ್ದರು.

ಇದರ ಬೆನ್ನಲ್ಲೇ, ಸಮಾಜವಾದಿ ಪಕ್ಷದಿಂದ ಉತ್ತರ ಪ್ರದೇಶ ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವ ಸುಗಂಧ ದ್ರವ್ಯ ಉದ್ಯಮಿ ಪುಷ್ಪರಾಜ್ ಜೈನ್ ಅವರ ಮನೆ ಮತ್ತು ಕಚೇರಿಗಳಲ್ಲಿ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಶೋಧಕಾರ್ಯ ನಡೆಸಿದ್ದಾರೆ. ಗುರುವಾರ ಬೆಳಿಗ್ಗೆಯಿಂದಲೇ ಶೋಧಕಾರ್ಯ ಆರಂಭವಾಗಿದೆ. ಆದರೆ ಶೋಧದ ವೇಳೆ ನಗದು, ಸ್ವತ್ತುಗಳ ದಾಖಲೆ, ಚಿನ್ನ ಮತ್ತಿತರ ಚರಾಸ್ತಿಗಳು ಪತ್ತೆಯಾದ ಬಗ್ಗೆ ಆದಾಯ ತೆರಿಗೆ ಇಲಾಖೆ ಯಾವುದೇ ಮಾಹಿತಿ ನೀಡಿಲ್ಲ.

ಈ ದಾಳಿಯನ್ನು ಸಮಾಜವಾದಿ ಪಕ್ಷವು ಖಂಡಿಸಿದೆ. 'ತನ್ನದೇ ನಾಯಕನನ್ನು ಬಂಧಿಸಿದ್ದ ಬಿಜೆಪಿಯು ಈಗ ತನ್ನ ಆಪ್ತ ಇಲಾಖೆ, ಆದಾಯ ತೆರಿಗೆ ಇಲಾಖೆಯನ್ನು ಬಳಸಿಕೊಂಡು ನಮ್ಮ ಪಕ್ಷದ ಪುಷ್ಪರಾಜ್ ಜೈನ್ ಅವರ ಮನೆಯಲ್ಲಿ ಶೋಧಕಾರ್ಯ ನಡೆಸಿದೆ. ಇದು ಕೇಂದ್ರದ ಸಂಸ್ಥೆಗಳ ದುರ್ಬಳಕೆ. ಇದೆಲ್ಲವನ್ನೂ ಜನರು ನೋಡುತ್ತಿದ್ದಾರೆ. ಮತದಾನದ ಮೂಲಕ ಅವರು ಇದಕ್ಕೆ ತಕ್ಕುದಾದ ಉತ್ತರವನ್ನು ನೀಡಲಿದ್ದಾರೆ' ಎಂದು ಅಖಿಲೇಶ್ ಯಾದವ್ ಟೀಕಿಸಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಹ ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ.

'ಅಲ್ಲಿ ಎಷ್ಟು ಎತ್ತರದ ಗೋಡೆಯಿತ್ತೋ, ಅಷ್ಟೇ ಎತ್ತರದವರೆಗೆ ಹಣವಿತ್ತು. ಅಲ್ಲಿ ಪತ್ತೆಯಾದದ್ದು ಬಿಜೆಪಿಯ ಹಣವಲ್ಲ. ಅದು ಬಿಜೆಪಿಯ ಹಣ ಎಂದು ಯಾರು ಹೇಳಿದರು. ಹಣ ಇಟ್ಟಿದ್ದವರ ಸ್ನೇಹಿತರಿಗೆ, ಅದು ಯಾರ ಹಣ ಎಂಬುದು ಗೊತ್ತಿರುತ್ತದೆ' ಎಂದು ಅವರು ಹೇಳಿದ್ದಾರೆ.



ಉದ್ಯಮಿ ಪುಷ್ಪರಾಜ್ ಜೈನ್ ಅವರ ಕಾನ್ಪುರದಲ್ಲಿನ ಕಚೇರಿಯಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಶುಕ್ರವಾರ ಶೋಧಕಾರ್ಯ ನಡೆಸಿದರು —ಪಿಟಿಐ ಚಿತ್ರ

ಚುನಾವಣಾ ಕಣದಲ್ಲಿ

- ಸಮಾಜವಾದಿ ಪಕ್ಷ(ಎಸ್‌ಪಿ) ವಿಧಾನ ಪರಿಷತ್ ಸದಸ್ಯ ಶತರುದ್ರ ಪ್ರಕಾಶ್ ಶುಕ್ರವಾರ ಬಿಜೆಪಿ ಸೇರಿದರು. ಉತ್ತರ ಪ್ರದೇಶ ಬಿಜೆಪಿ ಘಟಕದ ಮುಖ್ಯಸ್ಥ ಸ್ವತಂತ್ರ ದೇವ್ ಸಿಂಗ್ ಅವರು ಪಕ್ಷದ ಮುಖ್ಯಕಚೇರಿಯಲ್ಲಿ ಪ್ರಕಾಶ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಎಸ್‌ಪಿ ಸಂಸ್ಥಾಪಕ ಮುಲಾಯಂ ಸಿಂಗ್ ಯಾದವ್ ಅವರ ಸರ್ಕಾರದಲ್ಲಿ ಪ್ರಕಾಶ್ ಅವರು ಸಚಿವರಾಗಿದ್ದರು
- ಚಂಡೀಗಡದಲ್ಲಿ ಲಾರಿ ಮಾಲೀಕರು ಮತ್ತು ಸಾಗಣೆದಾರರ ಸಂಘಟನೆಗಳ ಒಕ್ಕೂಟವು ಆಯೋಜಿಸಿದ್ದ ಪ್ರತಿಭಟನೆಯಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾಗಿಯಾಗಿದ್ದರು. ಪಂಜಾಬ್‌ನಲ್ಲಿ ಎಎಪಿ ಅಧಿಕಾರಕ್ಕೆ ಬಂದರೆ, ಲಾರಿ ಮಾಫಿಯಾವನ್ನು ಕೊನೆಗಾಣಿಸುತ್ತೇವೆ ಎಂದು ಭರವಸೆ ನೀಡಿದರು
- ತ್ರಿಪುರಾದಲ್ಲಿ ಟಿಎಂಸಿ ನೆಲೆಯನ್ನು ವಿಸ್ತರಿಸಲು ಪಕ್ಷದ ನಾಯಕ ಅಭಿಷೇಕ್ ಬ್ಯಾನರ್ಜಿ ಅವರು, ರಾಜ್ಯ ಪ್ರವಾಸ ನಡೆಸಲಿದ್ದಾರೆ. 2023ರಲ್ಲಿ ನಡೆಯಲಿರುವ ಚುನಾವಣೆಗೆ ಈಗಿನಿಂದಲೇ ಸಿದ್ಧತೆ ನಡೆಸಲಾಗುತ್ತದೆ ಎಂದು ಪಕ್ಷವು ಘೋಷಿಸಿದೆ

ಪ್ರಜಾ ಮತ
ಜನತಂತ್ರದ ಹಬ್ಬ 2021

ಮತ್ತೆ ಚುನಾವಣಾ ಬಾಂಡ್ ಮಾರಾಟ

ನವದೆಹಲಿ (ಪಿಟಿಐ): ಚುನಾವಣೆ ಸಂದರ್ಭದಲ್ಲಿ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಲು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಮೂಲಕ ನೀಡಲಾಗುವ ಚುನಾವಣಾ ಬಾಂಡ್‌ಗಳನ್ನು ಮತ್ತೆ ಮಾರಾಟ ಮಾಡಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿದೆ.

'ಈ ವರ್ಷದಲ್ಲಿ ಐದು ರಾಜ್ಯಗಳ ಚುನಾವಣೆ ನಡೆಯಲಿದ್ದು, ಈ ಸಲುವಾಗಿ 19ನೇ ಕಂತಿನಲ್ಲಿ ಚುನಾವಣಾ ಬಾಂಡ್ ಮಾರಾಟಕ್ಕೆ ಅವಕಾಶ ನೀಡಲಾಗಿದೆ. ಜನವರಿ 1ರಿಂದ 10ರವರೆಗೆ ಎಸ್‌ಬಿಐನ 29 ಶಾಖೆಗಳಲ್ಲಿ ಬಾಂಡ್‌ಗಳ ಮಾರಾಟ ನಡೆಯಲಿದೆ' ಎಂದು ಹಣಕಾಸು ಸಚಿವಾಲಯವು ಹೇಳಿದೆ.

ರಾಜಕೀಯ ಪಕ್ಷಗಳಿಗೆ ನಗದು ದೇಣಿಗೆ ನೀಡುವುದಕ್ಕೆ ಪರ್ಯಾಯವಾಗಿ ಚುನಾವಣಾ ಬಾಂಡ್ ಮೂಲಕ ದೇಣಿಗೆ ನೀಡುವ ವ್ಯವಸ್ಥೆ ಜಾರಿ ಮಾಡಲಾಗಿತ್ತು. ಚುನಾವಣೆಗಳು ಘೋಷಣೆಯಾಗುವುದಕ್ಕೂ ಕೆಲವು ತಿಂಗಳು ಮೊದಲು ಇವುಗಳನ್ನು ಮಾರಾಟ ಮಾಡಲಾಗುತ್ತದೆ. ಮಾರಾಟದ ಅವಧಿ ಮುಗಿದ ನಂತರದ 15 ದಿನಗಳ ಒಳಗೆ ರಾಜಕೀಯ ಪಕ್ಷಗಳು ಈ ಬಾಂಡ್‌ಗಳನ್ನು ನಗದೀಕರಿಸಿಕೊಳ್ಳಬೇಕು.

2018ರಲ್ಲಿ ಮೊದಲ ಬಾರಿ ಚುನಾವಣಾ ಬಾಂಡ್‌ಗಳನ್ನು ಮಾರಾಟ ಮಾಡಲಾಗಿತ್ತು. ಬಾಂಡ್ ಮಾರಾಟದ ವೇಳೆ ದೇಣಿಗೆ ನೀಡಿದವರ ವಿವರವನ್ನು ಸಂಗ್ರಹಿಸುವ ವ್ಯವಸ್ಥೆ ಇಲ್ಲ. 'ಕಪ್ಪುಹಣವನ್ನು ಸಕ್ರಮ ಮಾಡಿಕೊಳ್ಳಲು ಚುನಾವಣಾ ಬಾಂಡ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ. ಬಿಜೆಪಿಯೇ ಇದರ ದೊಡ್ಡ ಫಲಾನುಭವಿ. ಚುನಾವಣಾ ಬಾಂಡ್‌ಗಳನ್ನು ನಿಷೇಧಿಸಿ' ಎಂದು ಹಲವು ಸಾಮಾಜಿಕ ಕಾರ್ಯಕರ್ತರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ನುಡಿ–ಕಿಡಿ

ಪಂಜಾಬ್‌ನಲ್ಲಿ ಅತ್ಯಂತ ದುರ್ಬಲ ಸರ್ಕಾರವಿದೆ. ಆ ಸರ್ಕಾರದಲ್ಲಿ ಇರುವವರು ಮುಖ್ಯಮಂತ್ರಿ ಕುರ್ಚಿಗಾಗಿ ಬಡಿದಾಡುತ್ತಿದ್ದಾರೆ. ಆ ಸರ್ಕಾರವನ್ನು ಮನೆಗೆ ಕಳುಹಿಸಿ, ಪ್ರಾಮಾಣಿಕವಾದ ಸರ್ಕಾರವನ್ನು ತರಬೇಕು

ಅರವಿಂದ ಕೇಜ್ರಿವಾಲ್, ಎಎಪಿ ಸಂಚಾಲಕ ಮತ್ತು ದೆಹಲಿ ಮುಖ್ಯಮಂತ್ರಿ

ಹೊರಗಿನ ಪಕ್ಷಗಳು ಬಂದು ಇಲ್ಲಿ ಅಧಿಕಾರ ನಡೆಸಲು ಮತ್ತು ತಮ್ಮ ಸಿದ್ಧಾಂತಗಳನ್ನು ಪ್ರಯೋಗಿಸಲು ಗೋವಾದ ಜನರು ಅವಕಾಶ ನೀಡುವುದಿಲ್ಲ

ಪ್ರಮೋದ್ ಸಾವಂತ್, ಗೋವಾ ಮುಖ್ಯಮಂತ್ರಿ ಮತ್ತು ಬಿಜೆಪಿ ನಾಯಕ

ಪ್ರಕಾಶ್ ಸಿಂಗ್ ಬಾದಲ್ ಮತ್ತು ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು 25 ವರ್ಷಗಳ ಕಾಲ ಪಂಜಾಬ್ ಅನ್ನು ಲೂಟಿ ಮಾಡಿದರು. ಯುವಕರು ಇಲ್ಲಿ ಇರಲು ಇಷ್ಟಪಡದಂತಹ ಪರಿಸ್ಥಿತಿಗೆ ಈ ರಾಜ್ಯವನ್ನು ತಂದರು

ನವಜೋತ್ ಸಿಂಗ್ ಸಿಧು, ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ



ಅಯೋಧ್ಯೆಯ ಹನುಮಾನ್ ಗಡಿ ದೇವಾಲಯಕ್ಕೆ ಭೇಟಿ ನೀಡಿದ್ದ ಅಮಿತ್ ಶಾ ಅವರಿಗೆ ಗದೆ ನೀಡಲಾಯಿತು —ಪಿಟಿಐ ಚಿತ್ರ

ಕರ ಸೇವಕರಿಗೆ ಗುಂಡಿಕ್ಕಲು ಆದೇಶಿಸಿದ್ದ ಎಸ್‌ಪಿ: ಶಾ

ಅಯೋಧ್ಯೆ (ಉತ್ತರ ಪ್ರದೇಶ) (ಪಿಟಿಐ): 'ಕರಸೇವಕರಿಗೆ ಗುಂಡಿಕ್ಕಲು ಸಮಾಜವಾದಿ ಪಕ್ಷದ ಸರ್ಕಾರವು ಆದೇಶಿಸಿತ್ತು. ರಾಮನನ್ನು ಹಲವು ವರ್ಷಗಳ ಕಾಲ ಟೆಂಟ್‌ನಲ್ಲಿ ಇರುವಂತೆ ಮಾಡಲಾಗಿತ್ತು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಲ್ಲಿ ನಡೆದ ಬಿಜೆಪಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಅಯೋಧ್ಯೆಯಲ್ಲಿ ಕರಸೇವಕರಿಗೆ ಗುಂಡಿಕ್ಕಲಾಗಿತ್ತು. ಅವರ ಶವಗಳನ್ನು ಸರಯೂ ನದಿಯಲ್ಲಿ ಬಿಸಾಡಲಾಗಿತ್ತು. ಇದು ನಿಮಗೆ ನೆನಪಿದೆಯೇ? ಎಸ್‌ಪಿ ಮತ್ತು ಬಿಎಸ್‌ಪಿ ಆಡಳಿತದಲ್ಲಿ ಜನರ ನಂಬಿಕೆಯನ್ನು ಗೌರವಿಸುವ ಪರಿಪಾಠವೇ ಇರಲಿಲ್ಲ' ಎಂದು ಅವರು ಹರಿಹಾಯ್ದಿದ್ದಾರೆ.

'ಅಖಿಲೇಶ್ ಯಾದವ್ ಅವರು ಮತ ಕೇಳಲು ಇಲ್ಲಿಗೆ ಬರುತ್ತಾರೆ. ಆಗ, ಕರಸೇವಕರು ಏನು ಅನ್ಯಾಯ ಮಾಡಿದ್ದರೆಂದು ಅವರನ್ನು ಗುಂಡಿಟ್ಟು ಕೊಂದಿರಿ ಎಂದು ಪ್ರಶ್ನಿಸಿ' ಎಂದು ಶಾ ಕರೆ ನೀಡಿದ್ದಾರೆ.

'ರಾಮ ಮಂದಿರ ನಿರ್ಮಾಣವನ್ನು ತಡೆಯಲು ಎಸ್‌ಪಿ, ಬಿಎಸ್‌ಪಿ ಮತ್ತು ಕಾಂಗ್ರೆಸ್ ತಡೆ ಒಡ್ಡುತ್ತಲೇ ಇದ್ದವು. ಹೀಗಾಗಿಯೇ ರಾಮಲಲ್ಲಾ ದಶಕಗಳ ಕಾಲ ಟೆಂಟ್‌ನಲ್ಲಿಯೇ ಕಳೆಯಬೇಕಾಯಿತು. ಈಗ ಅದನ್ನು ತಡೆಯಲು ಯಾರಾದರೂ ಬಯಸಿದರೆ, ತಡೆಯಲು ಯತ್ನಿಸಲಿ' ಎಂದು ಅವರು ಸವಾಲು ಹಾಕಿದ್ದಾರೆ.

64 ದಿನಗಳ ಗರಿಷ್ಠ ಮಟ್ಟಕ್ಕೆ ಏರಿದ ಹೊಸ ಪ್ರಕರಣಗಳ ಸಂಖ್ಯೆ

ಕೋವಿಡ್: ಒಂದೇ ದಿನ 16,764 ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಒಮ್ಶೈಕ್ರಾನ್ ಕೋವಿಡ್ ಪ್ರಕರಣಗಳ ಸಂಖ್ಯೆ 1,270ಕ್ಕೆ ಏರಿಕೆಯಾಗಿದೆ. ಗುರುವಾರದಿಂದ ಶುಕ್ರವಾರ ಬೆಳಿಗ್ಗೆವರೆಗೆ ಒಟ್ಟು 309 ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿವೆ. ಇದೇ ಅವಧಿಯಲ್ಲಿ ದೇಶದಾದ್ಯಂತ ಒಟ್ಟು 16,764 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ.

ಈ ಅವಧಿಯಲ್ಲಿ ದೇಶದಾದ್ಯಂತ ಒಟ್ಟು 220 ಮಂದಿ ಕೋವಿಡ್‌ಗೆ ಬಲಿಯಾಗಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆ ಹೇಳಿದೆ.

ಈವರೆಗೆ ದೇಶದಲ್ಲಿ ಪತ್ತೆಯಾಗಿರುವ ಓಮೈಕ್ರಾನ್ ಪ್ರಕರಣಗಳಲ್ಲಿ ಮಹಾರಾಷ್ಟ್ರದಲ್ಲೇ ಗರಿಷ್ಠ ಪ್ರಕರಣಗಳು (450) ಪತ್ತೆಯಾಗಿವೆ. ದೆಹಲಿಯಲ್ಲಿ 320, ಕೇರಳದಲ್ಲಿ 109 ಮತ್ತು ಗುಜರಾತ್‌ನಲ್ಲಿ 97 ಪ್ರಕರಣಗಳು ಪತ್ತೆಯಾಗಿವೆ.

ದೇಶದಲ್ಲಿ ಕಳೆದ 64 ದಿನಗಳಲ್ಲಿ ಇದೇ ಮೊದಲ ಬಾರಿ ಒಂದೇ ದಿನದಲ್ಲಿ 16,000ಕ್ಕೂ ಹೆಚ್ಚು ಪ್ರಕರಣಗಳು ದೃಢಪಟ್ಟಿವೆ. ಇದಕ್ಕೂ ಮೊದಲು ಅಕ್ಟೋಬರ್ 27ರಂದು 16,156 ಪ್ರಕರಣಗಳು ಪತ್ತೆಯಾಗಿತ್ತು.

ಜತೆಗೆ ಕೋವಿಡ್ ದೃಢಪಡುವ ಪ್ರಮಾಣವೂ ಏರಿಕೆಯಾಗಿದೆ. ಡಿಸೆಂಬರ್ ತಿಂಗಳ ಎಲ್ಲಾ ದಿನವೂ ನಡೆಸಲಾದ ಪರೀಕ್ಷೆಗಳಲ್ಲಿ ಕೋವಿಡ್ ದೃಢಪಡುವ ಪ್ರಮಾಣ ಶೇ1ಕ್ಕಿಂತಲೂ ಕಡಿಮೆ ಇತ್ತು. ಆದರೆ ಈಗ ಈ ಪ್ರಮಾಣವು ಶೇ 1.34ಕ್ಕೆ ಏರಿಕೆಯಾಗಿದೆ. ಇದು 84 ದಿನಗಳಲ್ಲೇ ಗರಿಷ್ಠ.

ಮಹಾರಾಷ್ಟ್ರದಲ್ಲಿ ಶುಕ್ರವಾರ ಒಂದೇ ದಿನ 8,067 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಮುಂಬೈ ನಗರವೊಂದರಲ್ಲೇ 5,428 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ.

ಮುಂಬೈನಲ್ಲಿ ನಿರ್ಬಂಧ: ಕೋವಿಡ್ ಸೋಂಕು ಹರಡುವಿಕೆ ತಡೆಗಟ್ಟುವ ನಿಟ್ಟಿನಲ್ಲಿ ಮುಂಬೈ ಪೊಲೀಸರು ನಗರದಲ್ಲಿ ಪ್ರತಿಬಂಧಕಾಜ್ಞೆ ಜಾರಿ ಮಾಡಿದ್ದಾರೆ. ಅದರಂತೆ, ಪ್ರತಿದಿನ ಸಂಜೆ ಐದು ಗಂಟೆಯಿಂದ ಮರುದಿನ ಬೆಳಗ್ಗೆ ಐದು ಗಂಟೆಯವರೆಗೆ ಪ್ರತಿಬಂಧಕಾಜ್ಞೆ ಜಾರಿಯಲ್ಲಿರುತ್ತದೆ. ಶುಕ್ರವಾರ ಮಧ್ಯಾಹ್ನ 1 ಗಂಟೆಯಿಂದಲೇ ಈ ನಿರ್ಬಂಧ ಜಾರಿಗೆ ಬರಲಿದೆ. ಇದು ಜ.15ರ ವರೆಗೂ ಜಾರಿಯಲ್ಲಿ ಇರಲಿದೆ.

ಜನರು ಸಮುದ್ರ ತೀರ, ಮೈದಾನಗಳು, ಉದ್ಯಾನಗಳು ಸೇರಿ ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿ ಗುಂಪು ಸೇರುವುದನ್ನು ತಡೆಯಲು ಈನಿಯಮ ಜಾರಿಗೆ ತರಲಾಗಿದೆ. ಮುಂಬೈ ಡಿಸಿಪಿ ಎಸ್. ಚೈತನ್ಯ ಈ ಆದೇಶ ಹೊರಡಿಸಿದ್ದಾರೆ. ಮದುವೆ ಮತ್ತು ಸಾಮಾಜಿಕ, ರಾಜಕೀಯ ಅಥವಾ ಧಾರ್ಮಿಕ ಸಮಾರಂಭಗಳಿಗೆ ಕೇವಲ 50 ಜನರು ಸೇರಲು ಅವಕಾಶ ನೀಡಲಾಗಿದೆ. ಅಂತಿಮ ಸಂಸ್ಕಾರಕ್ಕೆ 20 ಜನರು ಸೇರಬಹುದು.



ಮುಂಬೈನ ದಾದರ್ ರೈಲು ನಿಲ್ದಾಣದಲ್ಲಿ ಪ್ರಯಾಣಿಕರ ಮೂಗು ಮತ್ತು ಗಂಟಲ ದ್ರವದ ಮಾದರಿಯನ್ನು ಆರೋಗ್ಯ ಕಾರ್ಯಕರ್ತರು ಸಂಗ್ರಹಿಸಿದರು—ಪಿಟಿಐ ಚಿತ್ರ

- ಕೋವಿಶೀಲ್ಡ್ ಲಸಿಕೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅನುಮತಿ ಕೋರಿ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಕಂಪನಿಯು ಕೇಂದ್ರೀಯ ಪ್ರಧಾನ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಗೆ ಅರ್ಜಿ ಸಲ್ಲಿಸಿದೆ
- ಡಿಸೆಂಬರ್ ತಿಂಗಳಲ್ಲಿ ದೆಹಲಿಯಲ್ಲಿ ಒಟ್ಟು 9 ಕೋವಿಡ್ ಸಾವುಗಳು ಸಂಭವಿಸಿವೆ. ನಾಲ್ಕು ತಿಂಗಳಲ್ಲಿ ಇದೇ ಅತ್ಯಧಿಕ
- ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿರುವ ಕಾರಣ ರಾಷ್ಟ್ರಪತಿ ಭವನ ಮತ್ತು ರಾಷ್ಟ್ರಪತಿ ಭವನದ ವಸ್ತು ಸಂಗ್ರಹಾಲಯಕ್ಕೆ ಪ್ರವಾಸಿಗರ ಭೇಟಿಯನ್ನು ಅನಿರ್ದಿಷ್ಟಾವಧಿಯವರೆಗೆ ಸ್ಥಗಿತಗೊಳಿಸಲಾಗಿದೆ

'ಓಮೈಕ್ರಾನ್ ಪ್ರಾಬಲ್ಯ'

'ದೇಶದಲ್ಲಿ ಪ್ರತಿದಿನ ಪತ್ತೆಯಾಗುತ್ತಿರುವ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಆದರೆ ಡೆಲ್ಟಾ ರೂಪಾಂತರ ತಳಿ ಪ್ರಕರಣಗಳಿಗೆ ಹೋಲಿಸಿದರೆ, ಓಮೈಕ್ರಾನ್ ರೂಪಾಂತರ ತಳಿಯ ಪ್ರಕರಣಗಳ ಸಂಖ್ಯೆಯ ಏರಿಕೆ ಪ್ರಮಾಣ ಹೆಚ್ಚು' ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಮೂಲಗಳು ಹೇಳಿವೆ.

'ವಿದೇಶಗಳಿಂದ ವಾಪಸಾದವರಲ್ಲಿ ಕೋವಿಡ್ ದೃಢಪಡುವ ಪ್ರಮಾಣ ಏರಿಕೆಯಾಗುತ್ತಿದೆ. ಆದರೆ, ವಿದೇಶಗಳಿಂದ ಹಿಂತಿರುಗಿ ಕೋವಿಡ್ ದೃಢಪಟ್ಟ ಶೇ 80ರಷ್ಟು ಜನರಿಗೆ ಓಮೈಕ್ರಾನ್‌ನಿಂದಲೇ ಕೋವಿಡ್ ತಗುಲಿದೆ. ಆದರೆ ದೇಶದಾದ್ಯಂತ ಪತ್ತೆಯಾಗುತ್ತಿರುವ ಓಮೈಕ್ರಾನ್ ಕೋವಿಡ್ ಪ್ರಕರಣಗಳಲ್ಲಿ, ಮೂರನೇ ಒಂದರಷ್ಟು ಪ್ರಕರಣಗಳು ಸೌಮ್ಯ ಲಕ್ಷಣವನ್ನು ಮಾತ್ರ ಹೊಂದಿವೆ' ಎಂದು ಸಚಿವಾಲಯದ ಮೂಲಗಳು ಮಾಹಿತಿ ನೀಡಿವೆ. ದೇಶದ ಒಟ್ಟು 23 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿವೆ. ಆದರೆ, 19 ರಾಜ್ಯಗಳಲ್ಲಿ ಪರಿಸ್ಥಿತಿ ತೀವ್ರವಾಗಿದೆ.

'ಹಗುರವಾಗಿ ಪರಿಗಣಿಸುವಂತಿಲ್ಲ'

'ಕೋವಿಡ್‌ನ ಮೊದಲ ಮತ್ತು ಎರಡನೇ ಅಲೆಯಲ್ಲಿ ರುಚಿ ಮತ್ತು ವಾಸನೆ ಗ್ರಹಣ ಶಕ್ತಿ ಕುಂದುವುದು ಪ್ರಧಾನ ಲಕ್ಷಣಗಳಲ್ಲಿ ಒಂದಾಗಿತ್ತು. ಆದರೆ ಓಮೈಕ್ರಾನ್‌ನಿಂದ ಉಂಟಾಗುತ್ತಿರುವ ಮೂರನೇ ಅಲೆಯಲ್ಲಿ ಈ ಲಕ್ಷಣಗಳು ಗೋಚರಿಸುತ್ತಿಲ್ಲ. ಹಾಗೆಂದು ಓಮೈಕ್ರಾನ್ ಅನ್ನು ಹಗುರವಾಗಿ ಪರಿಗಣಿಸಬೇಕಿಲ್ಲ' ಎಂದು ಭಾರತೀಯ ವೈದ್ಯಕೀಯ ಸಂಘಟನೆ ಮತ್ತು ಮಹಾರಾಷ್ಟ್ರ ಸರ್ಕಾರವು ಜಂಟಿಯಾಗಿ ಹೊರಡಿಸಿರುವ ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

'ಆರೋಗ್ಯದಲ್ಲಿ ಯಾವುದೇ ಬದಲಾವಣೆ ಮತ್ತು ಸಮಸ್ಯೆ ಕಂಡುಬಂದಲ್ಲಿ ಯಾರೂ ಸ್ವತಃ ಔಷಧೋಪಚಾರ ಮಾಡಿಕೊಳ್ಳಬಾರದು. ವೈದ್ಯರನ್ನು ಸಂಪರ್ಕಿಸಿ, ಚಿಕಿತ್ಸೆ ಪಡೆದುಕೊಳ್ಳಬೇಕು. ಜತೆಗೆ ಕೋವಿಡ್ ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಲಸಿಕೆ ಹಾಕಿಸಿಕೊಳ್ಳದೇ ಇರುವವರು, ಶೀಘ್ರವೇ ಲಸಿಕೆ ಹಾಕಿಸಿಕೊಳ್ಳಬೇಕು' ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

'ಓಮೈಕ್ರಾನ್ ಅತ್ಯಂತ ವೇಗವಾಗಿ ಹರಡುತ್ತಿದ್ದರೂ, ಅದು ಉಂಟು ಮಾಡುತ್ತಿರುವ ರೋಗದ ತೀವ್ರತೆ ಕಡಿಮೆ ಇದೆ. ಜ್ವರ, ಗಂಟಲು ಕೆರೆತ, ನೆಗಡಿ, ಆಯಾಸ, ಬೆನ್ನು ನೋವು, ಮೈಕೈ ನೋವು ಮತ್ತು ತಲೆ ನೋವು ಇದರ ಲಕ್ಷಣಗಳು. ಇದರ ಲಕ್ಷಣಗಳು ಸೌಮ್ಯ ಸ್ವರೂಪದ್ದೇ ಆಗಿದ್ದರೂ, ವೈರಾಣುಗಳು ಯಾವಾಗ ಬೇಕಾದರೂ ರೂಪಾಂತರವಾಗಬಹುದು. ಹೀಗಾಗಿ ಅದು ಹರಡದಂತೆ ಎಚ್ಚರವಹಿಸಬೇಕು' ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ಸಂಕ್ಷಿಪ್ತ ಸುದ್ದಿ

ವಿಮಾನದ ಶೌಚಾಲಯದಲ್ಲಿ ಮಹಿಳೆಗೆ 3 ಗಂಟೆ ಕ್ವಾರಂಟೈನ್

ನ್ಯೂಯಾರ್ಕ್ (ಪಿಟಿಐ): ಶಿಕಾಗೊದಿಂದ ಐಸ್‌ಲ್ಯಾಂಡ್‌ನತ್ತ ಸಾಗುತ್ತಿದ್ದ ವಿಮಾನದಲ್ಲಿ, ಮಾರ್ಗ ಮಧ್ಯದಲ್ಲಿಯೇ ಕೋವಿಡ್–19 ದೃಢಪಟ್ಟ ಮಹಿಳೆಯೊಬ್ಬರನ್ನು ಮೂರು ಗಂಟೆಗಳ ಕಾಲ ವಿಮಾನದ ಶೌಚಾಲಯದಲ್ಲಿಯೇ ಕ್ವಾರಂಟೈನ್ ಮಾಡಲಾಗಿತ್ತು ಎಂಬುದು ತಡವಾಗಿ ಗೊತ್ತಾಗಿದೆ.

ಮಿಚಿಗನ್‌ನ ಶಿಕ್ಷಕಿ ಮಾರಿಸಾ ಫೋಟಿಯೊ ಅವರು ಡಿಸೆಂಬರ್ 19ರಂದು ಪ್ರಯಾಣಿಸುತ್ತಿದ್ದಾಗ, ಮಾರ್ಗ ಮಧ್ಯದಲ್ಲಿ ಗಂಟಲು ಬೇನೆ ಕಾಣಿಸಿಕೊಂಡಿದೆ. ಕೂಡಲೇ ಅವರು ಶೌಚಾಲಯಕ್ಕೆ ಹೋಗಿ ಕೋವಿಡ್ ರ‍್ಯಾಪಿಡ್ ಪರೀಕ್ಷೆ ಮಾಡಿಕೊಂಡಿದ್ದಾರೆ. ಅದರಲ್ಲಿ ಅವರಿಗೆ ಕೋವಿಡ್ ದೃಢಪಟ್ಟಿದೆ. ಈ ವಿಷಯ ತಿಳಿದ ಬಳಿಕ ಅವರನ್ನು ಶೌಚಾಲಯದಲ್ಲಿಯೇ ಕ್ವಾರಂಟೈನ್ ಮಾಡಲಾಗಿತ್ತು ಎಂದು ಡಬ್ಲ್ಯುಎಬಿಸಿ–ಟಿವಿ ವರದಿ ಮಾಡಿದೆ.

'ವಿಮಾನ ಪ್ರಯಾಣಕ್ಕೂ ಮುನ್ನ ಎರಡು ಬಾರಿ ಪಿಸಿಆರ್ ಪರೀಕ್ಷೆ ಮತ್ತು ಐದು ಬಾರಿ ರ‍್ಯಾಪಿಡ್ ಪರೀಕ್ಷೆಗೆ ಒಳಗಾಗಿದ್ದೆ. ಈ ಎಲ್ಲ ಬಾರಿಯೂ ನೆಗೆಟಿವ್ ವರದಿ ಬಂದಿತ್ತು' ಎಂದು ಶಿಕ್ಷಕಿಯ ಹೇಳಿಕೆಯನ್ನು ಉಲ್ಲೇಖಿಸಿ ಸಿಎನ್‌ಎನ್ ವರದಿ ಮಾಡಿದೆ. ಅವರು ಕೋವಿಡ್‌ನ ಎರಡೂ ಡೋಸ್ ಲಸಿಕೆಯ ಜತೆಗೆ ಬೂಸ್ಟರ್ ಡೋಸ್‌ಕೂಡ ಪಡೆದಿದ್ದಾರೆ.

ಬ್ರಿಟನ್: ಆಸ್ಪತ್ರೆ ಸೇರುತ್ತಿರುವವರ ಸಂಖ್ಯೆ ಹೆಚ್ಚಳ

ಲಂಡನ್: ಬ್ರಿಟನ್‌ನಲ್ಲಿ ಕೋವಿಡ್ 19ರ ಪ್ರಕರಣಗಳು ಏರಿಕೆಯಾಗುತ್ತಿದ್ದು, ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆಯೂ ಹೆಚ್ಚಾಗಿದೆ. ಗುರುವಾರ ಒಂದೇ ದಿನ 11,452 ಜನರು ಕೋವಿಡ್ ಕಾರಣಕ್ಕಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಬ್ರಿಟನ್‌ನ ಆರೋಗ್ಯ ಇಲಾಖೆ ಅಂಕಿ ಅಂಶಗಳು ತಿಳಿಸಿವೆ.

ಆಸ್ಪತ್ರೆಗೆ ದಾಖಲಾಗುತ್ತಿರುವ ಸೋಂಕಿತರ ಪೈಕಿ ಶೇ 90ರಷ್ಟು ಮಂದಿ ಕೋವಿಡ್ ಬೂಸ್ಟರ್ ಡೋಸ್ ಲಸಿಕೆ ಪಡೆಯದವರಾಗಿದ್ದಾರೆ ಎಂದು ಇಲಾಖೆ ತಿಳಿಸಿದೆ.

ಇಲ್ಲಿಯವರೆಗೆ ದೇಶದ 2.81 ಕೋಟಿ ಜನರು ಬೂಸ್ಟರ್ ಡೋಸ್ ಪಡೆದಿದ್ದಾರೆ. ಅಂದರೆ ದೇಶದ ಪ್ರತಿ ಅರ್ಹ 10 ವಯಸ್ಕರ ಪೈಕಿ ಏಳು ವಯಸ್ಕರು ಬೂಸ್ಟರ್ ಡೋಸ್ ಪಡೆದಿದ್ದಾರೆ ಎಂದು ಇಲಾಖೆ ಮಾಹಿತಿ ನೀಡಿದೆ. ವೇಗವಾಗಿ ಹರಡುತ್ತಿರುವ ಓಮೈಕ್ರಾನ್ ರೋಪಾಂತರಿಯಿಂದ ರಕ್ಷಣೆ ಪಡೆಯಲು ಎಲ್ಲರೂ ಬೂಸ್ಟರ್ ಡೋಸ್ ಪಡೆಯಬೇಕು. ಬ್ರಿಟನ್‌ನ ಪ್ರತಿ ವಯಸ್ಕರಿಗೂ ಬೂಸ್ಟರ್ ಡೋಸ್ ಪಡೆಯುವ ಅವಕಾಶವನ್ನು ಸರ್ಕಾರ ಒದಗಿಸಿದೆ ಎಂದು ಬ್ರಿಟನ್ ಸರ್ಕಾರ ತಿಳಿಸಿದೆ.

ಇಸ್ರೇಲ್: 4ನೇ ಡೋಸ್ ನೀಡಿಕೆ ಆರಂಭ

ಜೆರುಸಲೇಂ: ಓಮೈಕ್ರಾನ್ ವ್ಯಾಪಿಸುತ್ತಿರುವ ಕಾರಣ ಇಸ್ರೇಲ್, ಕಡಿಮೆ ರೋಗ ನಿರೋಧಕ ಶಕ್ತಿ ಹೊಂದಿರುವವರಿಗೆ ನಾಲ್ಕನೇ ಡೋಸ್ ಲಸಿಕೆ ನೀಡಲು ಆರಂಭಿಸಿದೆ. ಈ ಮೂಲಕ ಹೊಸ ರೂಪಾಂತರ ತಳಿಯನ್ನು ಸಮರ್ಪಕವಾಗಿ ಎದುರಿಸಲು ರಾಷ್ಟ್ರ ಸಜ್ಜಾಗಿದೆ. ಇಸ್ರೇಲ್‌ನ ಶೆಬಾ ವೈದ್ಯಕೀಯ ಕೇಂದ್ರದಲ್ಲಿ ಶುಕ್ರವಾರ 4ನೇ ಡೋಸ್ ಲಸಿಕೆಯನ್ನು ಹೃದಯ, ಶ್ವಾಸಕೋಶ ಕಸಿ ರೋಗಿಗಳಿಗೆ ನೀಡಲಾಯಿತು.

ದ್ವೇಷ ಭಾಷಣ ರಾಷ್ಟ್ರಪತಿಗೆ ಪತ್ರ

ನವದೆಹಲಿ: ಹರಿದ್ವಾರದಲ್ಲಿ ಈಚೆಗೆ ನಡೆದಿದ್ದ ಧರ್ಮ ಸಂಸತ್‌ನಲ್ಲಿ, ಮುಸ್ಲಿಮರ ಹತ್ಯಾಕಾಂಡಕ್ಕೆ ಧಾರ್ಮಿಕ ಗುರುಗಳು ಕರೆ ನೀಡಿದ್ದರ ವಿರುದ್ಧ ಸೇನಾಪಡೆಗಳ ಐವರು ನಿವೃತ್ತ ಮುಖ್ಯಸ್ಥರೂ ಸೇರಿ 100ಕ್ಕೂ ಹೆಚ್ಚು ಜನರು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ ಎಂದು ಎನ್‌ಡಿ ಟಿ.ವಿ. ವರದಿ ಮಾಡಿದೆ.

'ಮೂರು ದಿನಗಳ ಧರ್ಮ ಸಂಸತ್ ಕಾರ್ಯಕ್ರಮದಲ್ಲಿ ಹಿಂದೂ ಸಾಧುಗಳು ಮತ್ತು ಇತರ ನಾಯಕರು ಮಾಡಿದ ಭಾಷಣದ ವಸ್ತು ಕೇಳಿ ನಾವು ವಿಚಲಿತರಾಗಿದ್ದೇವೆ. ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡಲು ಅಲ್ಲಿ, ಪದೇ ಪದೇ ಕರೆ ನೀಡಲಾಯಿತು. ಹಿಂದೂ ಧರ್ಮವನ್ನು ಕಾಪಾಡಲು ಅಗತ್ಯ ಬಂದರೆ ಶಸ್ತ್ರಗಳನ್ನು ಹಿಡಿದು ಮುಸ್ಲಿಮರನ್ನು ಹತ್ಯೆಮಾಡಿ ಎಂದು ಕರೆ ನೀಡಲಾಯಿತು. ಈ ರೀತಿ ಹಿಂಸೆಗೆ ಪ್ರಚೋದನೆ ನೀಡಲು ನಾವು ಅನುವು ಮಾಡಿಕೊಡಬಾರದು. ಈ ರೀತಿಯ ಪ್ರಚೋದನೆಗಳು ಆಂತರಿಕ ಭದ್ರತೆಯನ್ನು ಮಾತ್ರ ಹಾಳುಮಾಡುವುದಿಲ್ಲ. ಜೊತೆಗೆ ದೇಶದ ಸಾಮಾಜಿಕ ಸಂರಚನೆಗೂ ಹಾನಿ ಉಂಟುಮಾಡುತ್ತವೆ' ಎಂದು ಪತ್ರದಲ್ಲಿ ಹೇಳಲಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

'ಮುಸ್ಲಿಮರ ವಿರುದ್ಧ ಶಸ್ತ್ರ ಕೈಗೆತ್ತಿಕೊಳ್ಳುವಂತೆ ಪೊಲೀಸರು ಮತ್ತು ಸೈನಿಕರಿಗೂ ಕರೆ ನೀಡಲಾಗಿದೆ. ಇವೆಲ್ಲವನ್ನು ತಡೆಗಟ್ಟಲು ನೀವು ಮಧ್ಯಪ್ರವೇಶಿಸಬೇಕು' ಎಂದು ಪತ್ರದಲ್ಲಿ ಆಗ್ರಹಿಸಲಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಪ್ರೀತಿ ಗೌಣ ಅಪರಾಧವೇ ಎಲ್ಲಾ...

ನಾವು ನೋಡಿದ ಸಿನಿಮಾ

ಸಾಮಾನ್ಯ ಕ್ರೈಂ-ಥ್ರಿಲ್ಲರ್ ಚಿತ್ರಗಳ ಸಿದ್ಧ ಸೂತ್ರಗಳನ್ನೇ ಬಳಸಿದರೂ ಅಲ್ಪ ಪ್ರೇಮಕಥೆಯನ್ನೂ ಬೆರೆಸುವ ಮೂಲಕ ಶಂಕರ್ ಎಸ್. ರಾಜ್ ಅವರು 'ಲವ್ ಯೂ ರಚ್ಚು' ಚಿತ್ರವನ್ನು ಪ್ರೇಕ್ಷಕರ ಮುಂದಿಟ್ಟಿದ್ದಾರೆ.

ಹಾಗಂತ ಚಿತ್ರದ ಹೆಸರು ಕೇಳಿ ಇದೊಂದು ನವಿರು ಪ್ರೇಮಕಥೆಯನ್ನು ಹೊಂದಿರುವ ಚಿತ್ರ ಎಂದುಕೊಂಡರೆ ನಿರಾಸೆ ಗ್ಯಾರಂಟಿ. ಇಲ್ಲಿ ಪ್ರೇಮಕಥೆ ಕೇವಲ ಒಂದು ಎಳೆಯಷ್ಟೇ. ಉಳಿದಂತೆ ಕ್ರೈಂ, ಥ್ರಿಲ್ಲರ್, ಸಸ್ಪೆನ್ಸ್‌ಗಳೇ ಇಲ್ಲಿ ವಿಜೃಂಭಿಸಿವೆ. ಕೇವಲ ಎರಡು ದಿನಗಳ ಅವಧಿಯಲ್ಲಿ ನಾಯಕ-ನಾಯಕಿಯ ಬದುಕಿನಲ್ಲಿ ನಡೆಯುವ ಸನ್ನಿವೇಶಗಳನ್ನಿಟ್ಟು ಇಡೀ ಚಿತ್ರದ ಕಥೆಯನ್ನು ಹೊಸೆಯಲಾಗಿದೆ.

ಚಿತ್ರದ ನಾಯಕ ಅಜಯ್ ಉದ್ಯಮಿ. ಆತನಿಗೆ ಹೆಂಡತಿ ರಚ್ಚು ಅಂದರೆ ಪಂಚಪ್ರಾಣ. ಉದ್ಯೋಗದ ನಿಮಿತ್ತ ಬೇರೆ ಊರಿಗೆ ಹೋಗಿದ್ದ ಆತ ಮನೆಗೆ ಮರಳಿದಾಗ ಅಲ್ಲಿ ಕೊಲೆಯೊಂದು ನಡೆದಿರುತ್ತದೆ. ಈ ಪ್ರಕರಣದಿಂದ ಹೊರಬರಲು ಗಂಡ–ಹೆಂಡತಿ ನಡೆಸುವ ಪಡಿಪಾಟಲು ಈ ಚಿತ್ರದ ಮುಖ್ಯ ಕಥಾಹಂದರ. ಕಥೆಯು ಹಲವು ತಿರುವುಗಳನ್ನು ಪಡೆಯುತ್ತಾ ಮುಂದೆ ಸಾಗುತ್ತದೆ.

ಚಿತ್ರದ ಮೊದಲಾರ್ಧದಲ್ಲಿ ಕಥೆ ನಿಧಾನಗತಿಯಲ್ಲಿ ಸಾಗುತ್ತದೆ. ಕೆಲವು ಸನ್ನಿವೇಶಗಳನ್ನು ಅನಗತ್ಯವಾಗಿ ದೀರ್ಘವಾಗಿ ಚಿತ್ರಿಸಿದಂತೆ ಭಾಸವಾಗುತ್ತದೆ. ದ್ವಿತೀಯಾರ್ಧದಲ್ಲಿ ಕೆಲವು ಸನ್ನಿವೇಶಗಳು ಪ್ರೇಕ್ಷಕರನ್ನು ತುದಿಗಾಲಲ್ಲಿ ನಿಲ್ಲಿಸಿದರೂ ಇನ್ನು ಕೆಲವು ಸನ್ನಿವೇಶಗಳು ನೀರಸ.

ಶವವೊಂದನ್ನು ಮರೆಮಾಡುವ ಸಲುವಾಗಿ ಅದನ್ನು ಕಾರಿನಲ್ಲಿ ಹಾಕಿಕೊಂಡು ನಾಯಕ-ನಾಯಕಿ ಸುತ್ತಾಡುವುದೇ ಚಿತ್ರದ ಬಹುಭಾಗವನ್ನು ಆವರಿಸಿಕೊಂಡಿದೆ. ಇದು ಪ್ರೇಕ್ಷಕರ ತಾಳ್ಮೆಯನ್ನು ಪರೀಕ್ಷೆಗೊಡ್ಡುತ್ತದೆ.

ಚಿತ್ರದ ಕೆಲವು ಪಾತ್ರಗಳು ಹೆಸರಿಗಷ್ಟೇ ಎಂಬಂತೆ ಮೂಡಿ ಬಂದಿವೆ. ನಾಯಕಿಯ ತಂದೆಯ ಪಾತ್ರದಲ್ಲಿ ನಟಿಸಿರುವ ಅಚ್ಯುತ ಕುಮಾರ್ ಅವರ ಪಾತ್ರವು ಇನ್ನಷ್ಟು ವಿಸ್ತಾರವಿರಬೇಕಿತ್ತು ಅನ್ನಿಸದಿರದು.

ಹೊಡೆದಾಟದ ದೃಶ್ಯಗಳನ್ನು ಕೆಲವೆಡೆ ನಿರ್ದೇಶಕರು ಅನಗತ್ಯವಾಗಿ ತುರುಕಿದ್ದಾರೆ. ಹೊಡೆದಾಟ ದೃಶ್ಯಗಳಿಗೂ ಕಥೆಗೂ ಯಾವುದೇ ಸಂಬಂಧವಿಲ್ಲದ ಕಾರಣ ಇವು ಇರಲೇಬೇಕೆಂದು ನಿರ್ದೇಶಕರು ಹಟಕ್ಕೆ ಬಿದ್ದಂತೆ ತೋರುತ್ತದೆ.


ಅಜಯ್ ರಾವ್ ಅವರು ತಮ್ಮ ಹಿಂದಿನ ಸಿನಿಮಾಗಳಿಗಿಂತ ಇದರಲ್ಲಿ ಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಅಜಯ್ ಮತ್ತು ರಚಿತಾ ರಾಮ್ ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಚಿತ್ರದಲ್ಲಿ ನಾಯಕ, ನಾಯಕಿಯ ವೈಭವೀಕರಣಕ್ಕಿಂತ ಕಥೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಆದರೂ ಕಥೆಯ ನಿಧಾನಗತಿ ಅಲ್ಲಲ್ಲಿ ಪ್ರೇಕ್ಷಕರಿಗೆ ನೀರಸವೆನ್ನಿಸದಿರದು.

ಮಣಿಕಾಂತ್ ಕದ್ರಿ ಸಂಗೀತದಲ್ಲಿ ಮೂಡಿಬಂದಿರುವ ಹಾಡುಗಳು ಮುದ ನೀಡುತ್ತವೆ.

-ನವೀನ್ ಕುಮಾರ್ ಜಿ.

ಲವ್ ಯೂ ರಚ್ಚು

- ನಿರ್ಮಾಣ: ಗುರು ದೇಶಪಾಂಡೆ
- ನಿರ್ದೇಶನ: ಶಂಕರ್ ಎಸ್. ರಾಜ್
- ತಾರಾಗಣ: ಅಜಯ್ ರಾವ್, ರಚಿತಾ ರಾಮ್, ಅಚ್ಯುತ ಕುಮಾರ್, ಅರುಣ್ ಗೌಡ, ರಘು ಶಿವಮೊಗ್ಗ



'ಲವ್ ಯೂ ರಚ್ಚು' ಸಿನಿಮಾದಲ್ಲಿ ಅಜಯ್ ರಾವ್ ಮತ್ತು ರಚಿತಾ ರಾಮ್

ರೈಲ್ವೆ ಮಂಡಳಿಯ ನೂತನ ಅಧ್ಯಕ್ಷರಾಗಿ ವಿ.ಕೆ ತ್ರಿಪಾಠಿ ನೇಮಕ


ಪ್ರಜಾವಾಣಿ ವಾರ್ತೆ

ನವದೆಹಲಿ: ವಿನಯ್ ಕುಮಾರ್ ತ್ರಿಪಾಠಿ ಅವರನ್ನು ರೈಲ್ವೆ ಮಂಡಳಿಯ ಅಧ್ಯಕ್ಷ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ನೇಮಿಸಲು ಸಂಪುಟ ನೇಮಕಾತಿ ಸಮಿತಿ (ಎಸಿಸಿ) ಅನುಮೋದನೆ ನೀಡಿದೆ.

ಪ್ರಸ್ತುತ, ವಿನಯ್ ಕುಮಾರ್ ತ್ರಿಪಾಠಿ ಅವರು ಗೋರಖ್‌ಪುರದ ಈಶಾನ್ಯ ರೈಲ್ವೆ ವಿಭಾಗದ ಪ್ರಧಾನ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸುನೀತ್ ಶರ್ಮಾ ಅವರು ರೈಲ್ವೆ ಮಂಡಳಿಯ ಅಧ್ಯಕ್ಷ ಹಾಗೂ ಸಿಇಒ ಸ್ಥಾನದಿಂದ ಶುಕ್ರವಾರ ನಿವೃತ್ತಿ ಪಡೆದರು. ಇದೀಗ ಅವರ ಸ್ಥಾನಕ್ಕೆ ತ್ರಿಪಾಠಿ ಅವರನ್ನು ನೇಮಕ ಮಾಡಲಾಗಿದೆ.

ತ್ರಿಪಾಠಿ ಅವರು ರೂರ್ಕಿಯಿಂದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದರು.



ವಿ.ಕೆ ತ್ರಿಪಾಠಿ

ಎನ್‌ಜಿಒಗಳ ಎಫ್‌ಸಿಆರ್‌ಎ ನೋಂದಣಿ ಸಿಂಧುತ್ವ ವಿಸ್ತರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ : ಮದರ್ ಥೆರೆಸಾ ಅವರು ಸ್ಥಾಪಿಸಿದ ಮಿಷನರೀಸ್ ಆಫ್ ಚಾರಿಟಿಯ (ಎಂಒಸಿ) ಅರ್ಜಿಯನ್ನು ತಿರಸ್ಕರಿಸಿದ ಕೆಲವು ದಿನಗಳ ಬಳಿಕ ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯವು ವಿದೇಶಿ ದೇಣಿಗೆ ಸಂಗ್ರಹಿಸಲು ಎನ್‌ಜಿಒಗಳ ಪರವಾನಗಿಯ ಮಾನ್ಯತೆಯನ್ನು 2022ರ ಮಾರ್ಚ್ 31ರವರೆಗೆ ವಿಸ್ತರಿಸಿ ಶುಕ್ರವಾರ ಆದೇಶ ಹೊರಡಿಸಿದೆ.

'ವಿವಿಧ ಎನ್‌ಜಿಒಗಳ ಸುಮಾರು 15 ಸಾವಿರ ಅರ್ಜಿಗಳು ಬಾಕಿ ಉಳಿದಿದ್ದು, ನವೀಕರಣ ಅರ್ಜಿಗಳು ಬಾಕಿ ಉಳಿದಿರುವ ಎನ್‌ಜಿಒಗಳು ಮಾತ್ರ ವಿಸ್ತರಣೆಯ ಪ್ರಯೋಜನಗಳನ್ನು ಪಡೆಯಬಹುದು. ಆದರೆ, ವಿದೇಶಿ ದೇಣಿಗೆ ನಿಯಂತ್ರಣ ಕಾಯಿದೆ (ಎಫ್‌ಸಿಆರ್‌ಎ) ನೋಂದಣಿಯ ನವೀಕರಣಕ್ಕಾಗಿ ಅವರ ಅರ್ಜಿಗಳನ್ನು ಈಗಾಗಲೇ ತಿರಸ್ಕರಿಸಿರುವುದರಿಂದ ಎಂಒಸಿಯಂತಹ ಸಂಸ್ಥೆಗಳು ಅರ್ಹತೆ ಹೊಂದಿರುವುದಿಲ್ಲ' ಎಂದೂ ಸಚಿವಾಲಯವು ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಈ ಬಗ್ಗೆ ಹೊರಡಿಸಿರುವ ಸಾರ್ವಜನಿಕ ಸೂಚನೆಯ ಪ್ರಕಾರ, 'ಸಾರ್ವಜನಿಕ ಹಿತಾಸಕ್ತಿಗಾಗಿ ಕಾರ್ಯ ನಿರ್ವಹಿಸುತ್ತಿರುವ ಎನ್‌ಜಿಒಗಳ ಎಫ್‌ಸಿಆರ್‌ಎ ನೋಂದಣಿ ಪ್ರಮಾಣಪತ್ರಗಳ ಮಾನ್ಯತೆಯನ್ನು 2022ರ ಮಾರ್ಚ್ 31ರವರೆಗೆ ಅಥವಾ ನವೀಕರಣ ಅರ್ಜಿಗಳ ವಿಲೇವಾರಿ ದಿನಾಂಕದವರೆಗೆ ಇವುಗಳಲ್ಲಿ ಯಾವುದು ಮೊದಲು ಮಾನದಂಡಗಳನ್ನು ಪೂರೈಸುತ್ತದೆಯೋ ಅವುಗಳ ಪರವಾನಗಿ ಮಾನ್ಯತೆ ವಿಸ್ತರಣೆಯಾಗುತ್ತದೆ' ಎಂದು ಗೃಹಸಚಿವಾಲಯವು ತಿಳಿಸಿದೆ.

ಎಫ್‌ಸಿಆರ್‌ಎ ನೋಂದಣಿ ಪ್ರಮಾಣಪತ್ರಗಳನ್ನು ಹೊಂದಿರುವ ಎನ್‌ಜಿಒಗಳ ಮಾನ್ಯತೆಯು 2020ರ ಸೆ. 29ರಿಂದ 2022ರ ಮಾರ್ಚ್ 31ರ ನಡುವೆ ಮುಕ್ತಾಯಗೊಳ್ಳುತ್ತವೆ. ವಿದೇಶಿ ದೇಣಿಗೆ (ನಿಯಂತ್ರಣ) ನಿಯಮಗಳು, 2011ರ ನಿಯಮ 12 ರ ಪ್ರಕಾರ ಪ್ರಮಾಣಪತ್ರಗಳ ಅವಧಿ ಮುಗಿಯುವ ಮೊದಲು ಎಫ್‌ಸಿಆರ್‌ಎ ಪೋರ್ಟಲ್‌ನಲ್ಲಿ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿರುವ ಎನ್‌ಜಿಒಗಳು ಈ ಪ್ರಯೋಜನ ಪಡೆಯಲು ಅರ್ಹವಾಗಿರುತ್ತವೆ.

ಎಫ್‌ಸಿಆರ್‌ಎ ಅಡಿಯಲ್ಲಿ ಒಟ್ಟು 22,762 ಎನ್‌ಜಿಒಗಳನ್ನು ನೋಂದಾಯಿಸಲಾಗಿದೆ ಮತ್ತು ಇದುವರೆಗೆ ಸುಮಾರು 6,500 ನವೀಕರಣ ಅರ್ಜಿಗಳನ್ನು ಪ್ರಕ್ರಿಯೆಗೆ ಒಳಪಡಿಸಲಾಗಿದೆ ಎಂದು ಗೃಹ ಸಚಿವಾಲಯವು ಮಾಹಿತಿ ನೀಡಿದೆ.

ದ್ವೇಷ ಭಾಷಣ: ತನಿಖೆ ಕೋರಿ 'ಸುಪ್ರೀಂ'ಗೆ ಅರ್ಜಿ


ನವದೆಹಲಿ (ಪಿಟಿಐ): ದೇಶದ ವಿವಿಧೆಡೆ ಪ್ರವಾದಿ ಮೊಹಮ್ಮದ್ ಅವರನ್ನು ನಿರಂತರ ಅವಹೇಳನ ಮಾಡುವವರ ವಿರುದ್ಧ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು ಎಂದು ಕೋರಿ ಜಮಿಯತ್ ಉಲಮಾ-ಇ-ಹಿಂದ್ ಸಂಘಟನೆಯು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.



ದೇಶದ ವಿವಿಧೆಡೆ ಪ್ರವಾದಿ ಮೊಹಮ್ಮದ್ ಅವರನ್ನು ಅವಹೇಳನ ಮಾಡಿರುವ ಮತ್ತು ದ್ವೇಷ ಭಾಷಣ ಮಾಡಿರುವವರ ವಿರುದ್ಧ ಕೈಗೊಂಡಿರುವ ಕ್ರಮಗಳ ಕುರಿತು ವರದಿ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದೂ ಸಂಘಟನೆಯ ಅಧ್ಯಕ್ಷ ಮೌಲಾನ ಸಯ್ಯದ್ ಮಹಮೂದ್ ಅಸದ್ ಮದನಿ ಅರ್ಜಿಯಲ್ಲಿ ಕೋರಿದ್ದಾರೆ. ದ್ವೇಷ ಅಪರಾಧ ಪ್ರಕರಣಗಳ ತನಿಖೆಗೆ ಸ್ವತಂತ್ರ ಸಮಿತಿಯೊಂದನ್ನು ರಚಿಸಲು ನಿರ್ದೇಶನ ನೀಡಬೇಕು ಎಂದೂ ಮನವಿ ಮಾಡಲಾಗಿದೆ.



ತರಗೆಲೆಗಳ ತೂರುತ್ತ, ಹಸಿರೆಲೆಗಳ ಹೊದೆಯುತ್ತ...



ಲಹರಿ

ಹಿಮದ್ವತಿ

ಈ ಬೆಳಗಿನಲ್ಲೊಂದು ಹೊಸತನವಿದೆ.. ವರ್ಷದ ಕೊನೆಯ ನಿಶೆಯ ನಶೆಯಿನ್ನೂ ಆರುವಾಗಲೇ.. ತೇಲುಗಣ್ಣುಗಳು ಬೆಳ್ಳನೆಯ ಸವಿಬೆಳಗನ್ನು ಕಣ್ಣುಕಿರಿದಾಗಿಸಿ, ಕಣ್ತುಂಬಿಕೊಳ್ಳುತ್ತವೆ.

ಅದೇನು ನಿರುಕಿಸುತವೆ ಈ ಕಂಗಳು.. ಆ ಸೊಬಗಿನ ಬೆಳಗಿನಿಂದ..
ಅದೇನು ಕನಸು ಕಂಡವು ಈ ಕಂಬನಿ ಸುರಿದ ಕಂಗಳು, ಸೊಗದಿರುಳಿನಿಂದ...
ಅದ್ಯಾವ ಸಗ್ಗ ನಮ್ಮೊಳಗಿಲ್ಲದೆ, ಕಾಲನಿಂದ ಬರಲಿಯೆಂದು ಕಾಯುತ್ತದೆ ಈ ಮನವು..?

ಅವೆಷ್ಟು ಪ್ರಶ್ನೆಗಳು.. ಉತ್ತರಗಳನ್ನು ಹುಡುಕುವಾಗ ಅದ್ಯಾಕೋ ಮೋಡಗಳೆಲ್ಲ ಹೋಗಿ, ಬೆಟ್ಟದ ತುದಿಗೆ ತಲೆ ಚಚ್ಚಿಕೊಂಡಂತೆ... ಈ ಚಳಿಗಾಲವೇ ಹಾಗೆ. ಹಸಿರು ಹೊದ್ದ ಮರಗಳೆಲ್ಲ ಹಣ್ಣಾಗುವ ಹೊಸಿಲಲ್ಲಿರುವಾಗ, ಮೋಡದ ತೆರೆಯೊಂದು ಮುಚ್ಚುತ್ತದೆ. ಇರು.. ಇರು.. ಹೊಸತನ ಹೊಸಿಲಲ್ಲಿದೆ. ಕಳಚಿಕೊ.. ಎಲ್ಲ ಬಂಧಗಳ.. ಎಂಬ ಪಾಠ ಹೇಳಿದಂತೆ..

ಪಟ ಬದಲಿಸ ಬೇಕಿದೆ, ಎಲ್ಲ ಸಾಮಾಜಿಕ ಜಾಲತಾಣಗಳಲ್ಲಿ... ನಗೆಯೊಂದು ಮುಡಿಯಬೇಕಿದೆ. ಅರೆಬಿರಿದ ತುಟಿಗಳ ಮೇಲೆ, ಎಲ್ಲವೂ ಚಂದ. ನಾನಿನ್ನು ಪರಮಸುಖಿಯೆಂಬ ಭಾವ ಬೀಸಬೇಕಿದೆ.. ಹೌದೌದು ನಮಗದು ಗೊತ್ತಿದೆ. ನಾವೇನು ಬಯಸುತ್ತೇವೆಯೋ ಅಂತೆಯೇ ನಮ್ಮ ನಗೆ ಸೂಸೂತ್ತದೆಯೆಂದು.

ಆಪ್ತೇಷ್ಟರಿಗೆಲ್ಲ ಶುಭಹಾರೈಸಬೇಕಿದೆ. ಶುಭಕೋರಬೇಕಿದೆ, ಹುಸಿಮುನಿಸು ತೋರಬೇಕಿದೆ, ನಕ್ಕು ಜೀವನಪ್ರೀತಿ ಹುಟ್ಟಿಸಬೇಕಿದೆ, ಈ ಕಂಗಳಲಿ ನಗೆ ಹುಟ್ಟಿದ್ದು, ನಿನಗಾಗಿಯೇ ಎಂಬ ಭಾವ ಸ್ಫುರಿಸಬೇಕಿದೆ. ಈ ಚಳಿಗಾಲದಲ್ಲಿ ಇಂಥ ಎಲ್ಲ ಬೆಚ್ಚನೆಯ ಭಾವಗಳಿರುವಾಗಲೇ.. ಎಲೆಯುದುರುತ್ತವೆ.

ನಾವೂ.. ನಮ್ಮ ಮನಸಮುದ್ರದಲೆಗಳಿಂದ ಇಂಥ ಎಲೆಗಳನ್ನು ಬಿಡಿಸಿಕೊಳ್ಳಬೇಕಿದೆ. ಕಳೆದ ವರ್ಷದಲ್ಲಿ ಕಳೆದುಕೊಂಡವರಿಗೆ ಗೌರವದ ವಿದಾಯ ಹೇಳಬೇಕಿದೆ.

ಇರುವಿಕೆ, ಇಲ್ಲದಿರುವಿಕೆಯ ನಡುವಣ ಗೆರೆ, ನಮ್ಮ ಪ್ರಜ್ಞೆ. ಅದನ್ನೊಂಚೂರು ಪಳಗಿಸಿ, ಆತ್ಮೀಯರು ನಮಗೆ ಬಯಸುವಂಥ ಬದುಕನ್ನು ಎದಿರುಗೊಳ್ಳಬೇಕಿದೆ. ಕಳೆದುಕೊಳ್ಳಬೇಕಿವೆ ಆ ಶುಷ್ಕ ಎಲೆಗಳನ್ನು, ಹೀಗಳೆಯುವಿಕೆಯಲ್ಲಿ, ನಿಮ್ಮನ್ನು ಕುಗ್ಗಿಸಿದ ಮಾತುಗಳು ಮನಕೆ ಜೋತು ಬೀಳದಂತೆ ಉದುರುಸಿಕೊಳ್ಳಬೇಕಿದೆ.

ಹಾರಿ ಹೋಗಲಿ ಆ ತರಗೆಲೆಗಳು, ನಿಮ್ಮ ವ್ಯಕ್ತಿತ್ವಕ್ಕೆ ಮೆರುಗನ್ನು ನೀಡದ, ನಿಮ್ಮ ಇರುವಿಕೆಗೆ ಸಂಭ್ರಮವನ್ನೀಯದ... ತರಗೆಲೆಯ ಮೇಲಿನ ಚೊರಚೊರ ಸದ್ದು ಮಾಡಿದಂತೆ ಕಾಲ ಸರಿದುಹೋಗಲಿ...

ಇದೊಂದು ಮನ್ವಂತರ. ಹೊಸ ಎಲೆಗಳು ಹುಟ್ಟುತ್ತವೆ. ಹೃದಯ ಹಸಿರಾಗುತ್ತದೆ. ಮಣ್ಣು ಹದವಾಗುವಂತೆ ದೇಹವೆಂಬ ಗುಡಿಯೊಳು ಮನಸು ಮೆದುವಾಗುತ್ತದೆ. ಆ ಬೇಸಿಗೆಯೆಂಬ ಬಿಸುಪಿನ, ಕಾವಿನ ಮೋಡಿಯದು. ಒಣಮಣ್ಣಿನಲ್ಲೊಂದು ನೆನಪುಗಳು ಝುರಿಯುಕ್ಕುವಂತೆ, ಮನದಾಳಕ್ಕಿಳಿಯುತ್ತದೆ ಜೀವನಪ್ರೀತಿಯೆಂಬ ಝುರಿ.

ಅದ್ಯಾಕೋ ಮೊದಲ ಮಳೆಯ ಒಣಮಣ್ಣಿನ ವಾಸನೆ, ಈ ನೆನಪುಗಳ ನೆನೆಯುವಂತೆ, ಮಳೆಯಲ್ಲಿ ತೆರೆದ ಬಾಹುಗಳ ಅಗಲಿಸಿ, ಕಣ್ಣಮೇಲೊಂದು ಹನಿಯುದುರಲಿ ಎಂದು ಗಗನಮುಖಿಯಾಗಿಸುತ್ತದೆ. ಮತ್ತದೇ ಆ ಒಣ ನೆಲದಲ್ಲಿ ಸಂಭ್ರಮ, ಸಂಕಟ, ಸಂತೋಷಗಳೆಲ್ಲವೂ ಮೊಳಕೆಯೊಡೆಯುತ್ತವೆ.

ಅದೇ ಆ ಬೇಸಿಗೆಯ ನೆಲವೆಂಬ ಮನದ ಭಿತ್ತಿಯಲಿ, ನಾವುಬಿತ್ತಿದ ಬೀಜಗಳೆಲ್ಲವೂ ತೆನೆಗಟ್ಟುವ ಕಾಲವಿದು. ಕಣ್ಣೀರಿನಂಥ ಇಬ್ಬನಿಯೇ ಹರಳುಗಟ್ಟಿ ಸವಿಸಕ್ಕರೆಯಾಗುವಾಗ, ನಾವು ಯಾವ ದೂರು, ದುಮ್ಮಾನಗಳಿರಿಸಿಕೊಂಡು ಬೇಯಬೇಕು? ಇಂಥವನ್ನೇ, ಇಂಥ ನಿರಾಸಕ್ತಿಯನ್ನೇ ಮಳೆ ಬಂದು ತೊಳೆದು ಹೋಗುತ್ತದೆ. ಮತ್ತೇನಿದ್ದರೂ ಕಡುಕತ್ತಲೆಯ, ಬಿಡುಬೀಸು ಗಾಳಿಯ ಚಳಿಗಾಲ. ಮೈಮೇಲೆ ಗುಳ್ಳೆಗಳೇಳಿಸುತ, ರೋಮಾಂಚನವಾಗುವಂತೆ ಮಾಡಿ, ನಮ್ಮ ದೇಹವನ್ನು ನಾವೇ ಸವರುವಂತೆ ಹೋಗುವ ಆ ಗಾಳಿ ಪ್ರತಿಸಲವೂ ಹೊಸತನ್ನೇ ತಂದು ನೀಡಲಿ.

ಬದುಕಿದು ಒಂದೇ ಒಂದು ಅವಕಾಶ. ಬಂದು ಹೋಗುವ ವರ್ಷಗಳೆಲ್ಲವೂ ಈ ಯಾನದೊಳಗಿನ ಬುತ್ತಿಯೂಟ ಇದ್ದಂತೆ. ಪುಟ್ಟ ಚಿಕ್ಕಿಯಿಂದ ಹಿಡಿದು, ಕಹಿಹಾಗಲದವರೆಗೂ ಎಲ್ಲ ಖಾದ್ಯಗಳಿವೆ ಈ ಬುತ್ತಿಯ ಬುಟ್ಟಿಯಲ್ಲಿ. ಎಲ್ಲವನ್ನೂ ಸವಿಯುತ್ತಲೇ ದಿನ ಸವೆಸುವ ಕಾಲನ ಈ ಚಲನೆಗೆ, ಹೊಸವರ್ಷವೊಂದು ಮೈಲಿಗಲ್ಲಷ್ಟೆ. ಎಲ್ಲವನ್ನೂ ಹಣೆಗೊತ್ತಿ, ಎದೆಗಿಳಿಸಿಕೊಂಡು ಮುನ್ನಡೆಯುವ, ಬರುವ ಪ್ರತಿವರ್ಷವೂ ಪ್ರತಿ ಅನುಭವದ ಮೂಸೆಯೂ ಭಾವಸಿರಿವಂತಿಕೆಯ ಬೆಳೆಸಲಿ ಎಂದು ಆಶಿಸೋಣ. ❖



> ಕೆಲವು ಪುಟ್ಟ ಪುಟ್ಟ ನಡೆಗಳಿಂದ ನಮ್ಮೊಳಗಿನ ಸಮಾಧಾನವೊಂದು, ಸಂಭ್ರಮವಾಗಿ ಬದಲಾಗುತ್ತದೆ. ಹೊಸ ವರ್ಷದ ಆರಂಭದಿಂದಲೇ ಈ ಸಂಭ್ರಮದ ಬದಲಾವಣೆಯ ಹಾದಿಯಲ್ಲಿ ಹೆಜ್ಜೆ ಹಾಕೋಣ.

ಹೊಸ ವರ್ಷದ ಸೂತ್ರಗಳು.. ಸಂತಸದ ಮಂತ್ರಗಳು..

ರಶ್ಮಿ ಎಸ್.

ಈ ಸಹಸ್ರಮಾನ ಶುರುವಾದಾಗ ಹೊಸತನವೆಂಬುದು ಇನ್ನೀಗ ಆರಂಭ ಅನ್ನುವ ಭಾವ ನನ್ನೊಳಗೆ ತುಂಬಿತ್ತು. ನನಗೂ ಆಗ 20ರ ಹರೆಯ. ಹಾಗಾಗಿ ಸಹಸ್ರಮಾನವೆಂದರೆ ಇನ್ನೇನು.. ಜಾತಿ, ವರ್ಗ ಇವೆಲ್ಲ ಇನ್ನು ಇತಿಹಾಸಕ್ಕೆ ಸೇರುತ್ತವೆ. ಹೊಸ ಸಹಸ್ರಮಾನವೊಂದು ಶತಮಾನಗಳ ಸಂಘರ್ಷದಿಂದ ನವನೀತ ತಂದು ಕೊಡುತ್ತದೆ...


ಹೀಗೆ ಏನೆಲ್ಲ ಯೋಚನೆಗಳು ಆಗ..? ಆರ್ಚೀಸ್‌ನ ಗ್ಯಾಲರಿಯಲ್ಲಿ ಪದಸಿರಿಯೊಳು ಮೊಳಕೆಯೊಡೆದ ಪ್ರೀತಿಯೆಲ್ಲ ಬೆಳೆಗಳಾಗಿ ತೆನೆದೂಗುತ್ತವೆ. ಸಹಸ್ರಮಾನದ ಮಕ್ಕಳೆಲ್ಲ ಚಂದನೆಯ ಜಗತ್ತಿನೊಳಗ ಕಣ್ಬಿಡ್ತಾರ.. ಬಯಕೆಗಳೆಷ್ಟವು ಈ ಮನಕೆ? ಎಣಿಸಿದವರು ಯಾರು... ಹೀಗೆ ಸಹಸ್ರಮಾನದ ಎರಡು ದಶಕಗಳು ಕಳೆದು, ವರ್ಷವೂ ಉರುಳಿ ಹೋಯಿತು.

ಕ್ಯಾಲೆಂಡರ್‌ಗಳನ್ನು ಬದಲಿಸುತ್ತಲೇ ಇದ್ದೆವು. ಲಿಂಗ, ಜಾತಿ, ವರ್ಗ ಇವೆಲ್ಲವೋ ಗೋಡೆಯ ಮೇಲಿನ ಮೊಳೆಗಳಾಗಿಯೇ ಶಾಶ್ವತವಾಗಿದ್ದವು. ಜಗಬದಲಿಸುವ ಉಮೇದಿನೊಂದಿಗೆ ನಾನ್ಹೇಗೆ ಬದಲಾಗಬಹುದು ಎಂದು ಪ್ರಶ್ನಿಸಿಕೊಳ್ಳಬೇಕು. ಬದುಕು ತದುಕಿ ತದುಕಿ ಕಲಿಸಿದ ಪಾಠಗಳು ಹಲವು. ಅವುಗಳನ್ನು ಅಪ್ಪಿಕೊಂಡರೆ ಬಂದು ಹೋಗುವ ವರುಷಗಳೆಲ್ಲವೂ ಹರುಷವನ್ನೇ ತರುವವು. ಅದಕ್ಕಾಗಿ ಈ ಒಂದಿಷ್ಟು ಸೂತ್ರಗಳು, ಸಂತಸದ ಮಂತ್ರಗಳು:

- **ಇಲ್ಲವೆನ್ನಿ:** ನಿರಾಕರಿಸುವುದು ಕಷ್ಟ. ದಾಕ್ಷಿಣ್ಯಕ್ಕೆ ಬಿದ್ದಾದರೂ ಆ ಭಾರವನ್ನು ಹೊರುತ್ತೇವೆ. ಸ್ಪಷ್ಟವಾಗಿ ನಿರಾಕರಿಸಿ. ಯಾವುದೇ ಅಪರಾಧಿ ಭಾವವಿಲ್ಲದೆ. ನಮ್ಮ ಪರಿಸ್ಥಿತಿ, ಸಮಸ್ಯೆ, ಸನ್ನಿವೇಶಗಳಲ್ಲಿ ಇಲ್ಲವೆನ್ನುವುದು ಅನಿವಾರ್ಯವಾದರೆ, ನಮಗಿಷ್ಟವಿಲ್ಲದಿದ್ದಲ್ಲಿ ಇಲ್ಲವೆಂದೇ ಹೇಳಿ. ಯಾವ ದಾಕ್ಷಿಣ್ಯವೂ ಬೇಡ.
- **ಸ್ವಪ್ರೀತಿ:** ಆತ್ಮರತಿಯಲ್ಲದ ಸ್ವಪ್ರೀತಿ ಕಲಿಯಿರಿ. ನನ್ನನ್ನು ನಾನು ಅಕ್ಕರೆಯಿಂದ ಕಾಣುವ, ಆರೈಕೆ ಮಾಡಿಕೊಳ್ಳುವ, ನಿಮಗಾಗಿ ಚೂರು ಖರ್ಚು ಮಾಡುವ, ಅದಕ್ಕೆ ಯಾವುದೇ ಸಮರ್ಥನೆಗಳನ್ನು ಕೊಡದೆ, ಸಂಭ್ರಮಿಸುವುದನ್ನು ಕಲಿಯಿರಿ.
- **ನಾ ಮೊದಲು:** ಸ್ವಾರ್ಥಿಯಾಗಬೇಕೆ ಎಂದು ಹಣೆಗಂಟಿಕ್ಕಬೇಡಿ. ಮನೆ, ಕುಟುಂಬ, ಮಕ್ಕಳು ಇವೆಲ್ಲ ಆದ್ಯತೆಪಟ್ಟಿಯಲ್ಲಿದ್ದೇ ಇರುತ್ತವೆ. ಈ ಪಟ್ಟಿಯಲ್ಲಿ ನಿಮ್ಮ ಅನುಕೂಲ, ಆರಾಮಗಳು, ಖುಷಿ, ಸಂತೋಷಗಳೂ ಮೊದಲಿಗೆ ಇರಲಿ. ನಿಮ್ಮೊಳಗಿನ ಖುಷಿ, ನಿಮ್ಮ ಸುತ್ತಲೂ ಹರಡುವುದೆಂದು ಈ 'ಮೊದಲು' ಎಂಬ ತತ್ವಕ್ಕೆ ಅಂಟಿಕೊಳ್ಳಿ
- **ಸಮಜಾಯಿಷಿಗಳೇಕೆ:** ನೀವು, ನಿಮ್ಮ ನಿರ್ಧಾರಗಳು, ತೀರ್ಮಾನಗಳು ಸರಿ ಇವೆ ಎಂದು ಎನಿಸಿದಾಗ, ಯಾರಿಗೂ ಯಾವ ಕಾರಣಕ್ಕೂ ಸಮಜಾಯಿಷಿಗಳನ್ನು ನೀಡಬೇಡಿ. ಸಮಜಾಯಿಷಿಗಳಿಂದ ಸನ್ನಿವೇಶದ ಓರೆಕೋರೆಗಳನ್ನು ನಾವೇ ಪರರೆದುರು ತೆರೆದಿಟ್ಟಂತಾಗುತ್ತದೆ. ನಮ್ಮವರೆನಿಸಿಕೊಂಡವರಲ್ಲಿ, ಏನಾದರೂ ಬದಲಾವಣೆಗಳಾಗುವ ನಿರೀಕ್ಷೆ ಇದ್ದಲ್ಲಿ ಮಾತ್ರ ಸಮಜಾಯಿಷಿಗಳಿರಲಿ. ಪುರಾವೆ ಒದಗಿಸುವ ಮಟ್ಟಕ್ಕಿಳಿಯಬೇಡಿ
- **ಪರನಿಂದೆಗೆ ಕುಗ್ಗದಿರಿ:** ಪರನಿಂದೆಗೆ ಅಳಕುವ ಜೀವಕೆ ತಿಳಿಹೇಳಿ, ಆ ನಿಂದೆಗೆ ಕಾರಣ ನೀವಲ್ಲ, ಅವರ ಯೋಚನಾಸರಣಿಯೆಂದು. ನಿಂದನೆಗೆ ಅಳಕುವ, ಅಳುವ, ಸಮಜಾಯಿಷಿ ನೀಡುವ ಅಗತ್ಯವಿಲ್ಲ, ಇನ್ನೊಬ್ಬರು ನಿಮ್ಮನ್ನು ಹಳಿಯಲು ಅವರಿಗೆ ಅವರದ್ದೇ ಆದ ಕಾರಣ ಮತ್ತು ನಿರೀಕ್ಷೆಗಳಿರುತ್ತವೆ.
- **ಸಂತಸಕೆ ನಾವೇ ಕಾರಣರು:** ನಮ್ಮ ಖುಷಿಗೆ ನಾವು ಮಾತ್ರ ಜವಾಬ್ದಾರರಾಗಿರುತ್ತೇವೆ. ಖುಷಿಯೆಂಬುದು ಮನದಾಳದ ಲಹರಿ. ಅದು ನರನಾಡಿಗಳಲ್ಲಿ ಹರಡಿ, ಕಣ್ಣಲ್ಲಿ ಮಿಂಚು, ತುಟಿಯಂಚಿಗೆ ನಗು ತಂದೊಡ್ಡುತ್ತದೆ. ಅಂಥ ಸಂತಸ, ಸಂಭ್ರಮಗಳು ನಮ್ಮ ನಿಲುವಿನಲ್ಲಿರುತ್ತವೆಯೇ ಹೊರತು ಬಾಹ್ಯ ಪ್ರಪಂಚದೊಳಗಲ್ಲ. ಎಂಥದ್ದೇ ಪರಿಸ್ಥಿತಿಯಿದ್ದರೂ ನಾನು ಖುಷಿಯಾಗಿರುವೆ ಎಂಬುದನ್ನು ನಿರ್ಧರಿಸಿದರೆ ಮುಂದಿನದೆಲ್ಲವೂ ಆನಂದಮಯವೇ.
- **ಬೆಚ್ಚಿಗಿಡಲು ಕಿಚ್ಚಿರಬೇಕಿಲ್ಲ:** ನಮ್ಮವರನ್ನು ಬೆಚ್ಚಗಿಡಲೆಂದೇ ನಮ್ಮ ಮಡಿಲೊಳಗ ಕಿಚ್ಚಿಡಬೇಕಾಗಿಲ್ಲ. ನಮ್ಮ ಆತ್ಮಗೌರವಕ್ಕೆ ಕುಂದು ಬಂದಲ್ಲಿ, ಚಾರಿತ್ರ್ಯದ ಬಗ್ಗೆ ಹೀನಾಯವಾದ ಮಾತುಗಳಿಂದ ಹೀಗಳೆದಲ್ಲಿ, ಅವನ್ನೆಲ್ಲ ಸಹಿಸಬೇಕಾಗಿಲ್ಲ. ಕೌಟುಂಬಿಕ ಕ್ರೌರ್ಯಕ್ಕೆ ಸುಮ್ಮನಿದ್ದು, ಆ ಕೆಂಡವನ್ನು ಸೆರಗಿನಂಚಿಗೆ ಕಟ್ಟಿಕೊಳ್ಳಬೇಕಿಲ್ಲ. ಮನೆ, ಮನೆಯವರನ್ನು ಬೆಚ್ಚಗಿಡಲು ನಾವು ದಹಿಸಿಕೊಳ್ಳಬೇಕಿಲ್ಲ. ಇಂಥ ಸಂದರ್ಭಗಳು ಬಂದಾಗ ಧ್ವನಿಯೆತ್ತಿ.
- **ಮುಂದೂಡಬೇಡಿ:** ನಾಳೆಗೆ ನೋಡಿದರಾಯಿತು, ಇನ್ನೊಮ್ಮೆ ಹೇಳಿದರಾಯಿತು, ಮತ್ತೊಮ್ಮೆ ಕೊಂಡುಕೊಂಡರಾಯಿತು... ಇಂಥ ನೆಪಗಳಿಂದ, ನಿಮ್ಮ ಸಂತಸದ ಗಳಿಗೆಗಳನ್ನು ಮುಂದೂಡಬೇಡಿ. ಒಂದು ಮಾತು, ಕೃತಿಯಿಂದ ಆ ಕ್ಷಣಕ್ಕೆ ಸಂತಸವಾಗುವಂತಿದ್ದರೆ ಅಂಥ ಕೆಲಸಗಳನ್ನು ಆ ಕ್ಷಣದಲ್ಲೇ ಮಾಡಿ. ನಂತರದ ಪಶ್ಚಾತ್ತಾಪಕ್ಕಿಂತಲೂ ಆ ಕ್ಷಣಕ್ಕೆ ಹೇಳಿ ಹಗುರುವಾಗುವುದು ಉತ್ತಮ.
- **ನೆನಪಿರಲಿ ಎಲ್ಲ ಬದಲಾಗುತ್ತಾರೆ:** ಕೆಲವೊಮ್ಮೆ ಕುಟುಂಬದವರೂ ಬದಲಾಗುತ್ತಾರೆ. ಆ ಬದಲಾವಣೆಗೆ ಅವರ ಆದ್ಯತೆ ಹಾಗೂ ಆಯ್ಕೆಗಳು ಕಾರಣವಾಗಿರುತ್ತವೆಯೇ ಹೊರತು, ನಿಮ್ಮೊಳಗಿನ ಕುಂದುಕೊರತೆಗಳಲ್ಲ. ಬದಲಾಗುವ ಪ್ರತಿ ವ್ಯಕ್ತಿಗೂ ಆ ಹಕ್ಕಿದೆ. ಆ ಬದಲಾವಣೆಯನ್ನು ಸ್ವೀಕರಿಸಿ. ಅದರಿಂದ ನಿಮಗೆ ನೋವಾದರೆ ಆ ಬಗ್ಗೆ ಚರ್ಚಿಸಿ. ನಿಮ್ಮ ತೀರ್ಮಾನ ಕೈಗೊಳ್ಳಿರಿ. ನಿಮ್ಮ ತೀರ್ಮಾನದಲ್ಲಿ ನಿಮ್ಮ ಖುಷಿಗೆ ಮೊದಲ ಆದ್ಯತೆ ಇರಲಿ
- **ನಕಾರಾತ್ಮಕ ವ್ಯಕ್ತಿತ್ವಗಳಿಂದ ದೂರ ಸರಿಯಿರಿ:** ನಿಮ್ಮೊಳಗಿನ ಸಾಮರ್ಥ್ಯವನ್ನು ಅಲ್ಲಗಳೆಯುವಂಥ, ನಿಮ್ಮನ್ನು ಕೀಳಾಗಿ ಕಾಣುವ, ನಿಮ್ಮನ್ನು ಹೀಗಳೆಯುವ, ವಿನಾಕಾರಣ ದೂಷಿಸುವ ಯಾರೇ ಆದರೂ.. ಅವರಿಂದ ದೂರ ಸರಿಯಿರಿ. ಹೀಗೆ ದೂರ ಆಗುವುದು, ನಿಮ್ಮೊಳಗಿನ ಶಾಂತಿ ಸಮಾಧಾನಕ್ಕೆ ಎಂಬುದು ಮನವರಿಕೆ ಮಾಡಿಕೊಳ್ಳಿ.

ನಮ್ಮೊಳಗಿನ ಸಮಾಧಾನವೊಂದು, ಸಂಭ್ರಮವಾಗಿ ಬದಲಾಗುವುದು ಈ ಕೆಲವು ಪುಟ್ಟ ನಡೆಗಳಿಂದ. ಕಾಲಪಲ್ಲಟವಾಗಲಿ ಎಂದು ಕಾಯುವ ಬದಲು, ನಮ್ಮೊಳಗಿನ ಖುಷಿಗಾಗಿ ನಾವು ಬದಲಾಗಬೇಕು. ಕ್ಯಾಲೆಂಡರ್ ಜೊತೆಗೆ ನಮ್ಮ ಸಂತಸದ ಸ್ಕೇಲ್ ಮೇಲೇರುತ್ತಿರಬೇಕು.

ಹೊಸತನದ, ಹೊಸವರ್ಷದ ಶುಭಾಶಯಗಳು! ❖



ನಳಪಾಕ

ಬ್ಯಾಚುಲರ್ಸ್ ಫ್ರೆಂಡ್ಲಿ ಖಾದ್ಯಗಳು

ಇಬ್ಬನಿ



ಶಿಕ್ಷಣ, ಉದ್ಯೋಗದ ಸಲುವಾಗಿ ಯುವಕ-ಯುವತಿಯರು ಸ್ವಂತ ಊರು ಬಿಟ್ಟು ನಗರ ಸೇರುತ್ತಿರುವುದು ಸಾಮಾನ್ಯ. ಹೀಗೆ ಬಂದವರಿಗೆ ಮನೆಯಲ್ಲಿ ಸಿಗುತ್ತಿದ್ದ ಸ್ವಾದಿಷ್ಟವಾದ ಆಹಾರದ ಕೊರತೆ ಕಾಡುವುದು ಸಾಮಾನ್ಯ. ಅನ್ನ ಮಾಡುವುದನ್ನು ಕಲಿತಿದ್ದರೂ, ಅನ್ನಕ್ಕೆ ಬೇಕಾದ ಸಾಂಬಾರ್, ಗೊಜ್ಜು, ಗ್ರೇವಿ, ಪಲ್ಯಗಳಂತಹ ಖಾದ್ಯಗಳನ್ನು ತಯಾರಿಸುವುದು ತುಸು ಕಷ್ಟವೇ. 'ರುಚಿ ರುಚಿಯಾದ ಅಡುಗೆ ಬೇಕು. ಆದರೆ ಅಂಥದ್ದೆಲ್ಲ ಮಾಡುವುದಕ್ಕೆ ಬರುವುದಿಲ್ಲವಲ್ಲ' ಎಂದು ಪರದಾಡುವ ಬ್ಯಾಚುಲರ್‌ಗಳಿಗೆ ಸುಲಭವಾಗಿ, ಸರಳವಾಗಿ, ರುಚಿಕರವಾಗಿ ಮಾಡಿಕೊಳ್ಳಬಹುದಾದ ಖಾದ್ಯಗಳು ಇಲ್ಲಿವೆ.

ಸಿಂಪಲ್ಲಾಗಿ ಎಗ್ ಬುರ್ಜಿ

ಬೇಕಾಗುವ ಸಾಮಗ್ರಿಗಳು: ಮೊಟ್ಟೆ – 2, ಅಡುಗೆ ಎಣ್ಣೆ – ಕಾಲು ಟೇಬಲ್ ಚಮಚ, ಕರಿಬೇವು – ಸ್ವಲ್ಪ, ಈರುಳ್ಳಿ – 1, ಸಾಸಿವೆ – ಕಾಲು ಟೀ ಚಮಚ, ಜೀರಿಗೆ – ಕಾಲು ಟೀ ಚಮಚ, ಗರಂ ಮಸಾಲ – ಅರ್ಧ ಟೀ ಚಮಚ, ಉಪ್ಪು – ರುಚಿಗೆ ತಕ್ಕಷ್ಟು, ಹಸಿಮೆಣಸು – 2, ಸ್ವಲ್ಪ ಕೊತ್ತಂಬರಿ ಸೊಪ್ಪು.

ತಯಾರಿಸುವ ವಿಧಾನ: ಬಾಣಲೆಗೆ ಎಣ್ಣೆ ಹಾಕಿ, ಕರಿಬೇವು, ಸಾಸಿವೆ, ಜೀರಿಗೆ, ಸಣ್ಣಗೆ ಹೆಚ್ಚಿದ ಹಸಿಮೆಣಸು ಹಾಗೂ ಈರುಳ್ಳಿಯನ್ನು ಚೆನ್ನಾಗಿ ಹುರಿಯಬೇಕು. ಸ್ಟೌವ್ ಉರಿಯನ್ನು ಸಣ್ಣಗೆ ಮಾಡಿ. ಒಂದು ಪಾತ್ರೆಗೆ ಮೊಟ್ಟೆಗಳನ್ನು ಒಡೆದು ಹಾಕಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಬೇಕು. ಅದಕ್ಕೆ ಉಪ್ಪು ಮತ್ತು ಗರಂ ಮಸಾಲೆ ಸೇರಿಸಿ, ಪಾತ್ರೆಗೆ ಅಂಟದಂತೆ ಸೌಟಿನಲ್ಲಿ ನಿರಂತರವಾಗಿ ತಿರುವುತ್ತಿರಬೇಕು. ಕೊನೆಗೆ ಕೊತ್ತಂಬರಿ ಸೊಪ್ಪನ್ನು ಉದುರಿಸಬೇಕು.

ಚಿಕನ್ ಸುಕ್ಕ



ಬೇಕಾಗುವ ಸಾಮಗ್ರಿಗಳು: ಚಿಕನ್- 1 ಕೆ.ಜಿ, ಈರುಳ್ಳಿ- 2, ಉಪ್ಪು- 2 ಟೀ ಚಮಚದಷ್ಟು, ಅಡುಗೆ ಎಣ್ಣೆ- 1 ಟೇಬಲ್ ಚಮಚ, ತೆಂಗಿನತುರಿ- ಅರ್ಧ ಕಪ್, ಕೊತ್ತಂಬರಿ- 2 ಟೇಬಲ್ ಚಮಚ, ಜೀರಿಗೆ- ಅರ್ಧ ಟೀ ಚಮಚ, ಸಾಸಿವೆ- ಅರ್ಧ ಟೀ ಚಮಚ, ಕಾಳುಮೆಣಸು- ಅರ್ಧ ಟೀ ಚಮಚ, ಅರಿಸಿನ- ಅರ್ಧ ಟೀ ಚಮಚ, ಬೆಳ್ಳುಳ್ಳಿ- 4/5 ಎಸಳು, ಶುಂಠಿ- ಸಣ್ಣ 1 ತುಂಡು, ಲವಂಗ- 4-5, ಚಕ್ಕೆ- ಸಣ್ಣ 1 ತುಂಡು/ಎಲೆಯಾದರೆ ಪೂರ್ತಿ ಒಂದು, ಬ್ಯಾಡಗಿ ಮೆಣಸಿನಕಾಯಿ- 10, ಗುಂಟೂರು ಮೆಣಸಿನಕಾಯಿ- 10, ಹುಣಸೆಹಣ್ಣು- 1 ಸಣ್ಣ ತುಂಡು, ಸ್ವಲ್ಪ ಕೊತ್ತಂಬರಿ ಸೊಪ್ಪು, ಸ್ವಲ್ಪ ಕರಿಬೇವಿನ ಸೊಪ್ಪು.

ತಯಾರಿಸುವ ವಿಧಾನ: ಕೋಳಿ ಮಾಂಸ ಬೇಯಿಸುವುದು ಮತ್ತು ಮಸಾಲೆಯನ್ನು ಸಿದ್ಧಪಡಿಸಿಕೊಳ್ಳುವುದು ಎಂಬ ಎರಡು ಪ್ರತ್ಯೇಕ ವಿಭಾಗಗಳನ್ನು ಮಾಡಿಕೊಳ್ಳಬೇಕು.

ಮಾಂಸ ಬೇಯಿಸುವುದು: ಒಂದು ಅಗಲವಾದ ಪಾತ್ರೆಗೆ ಸ್ವಲ್ಪ ಎಣ್ಣೆ ಹಾಕಿ, ಉದ್ದುದ್ದು ಹೆಚ್ಚಿದ ಅರ್ಧ ಈರುಳ್ಳಿ, ಸ್ವಲ್ಪ ಕರಿಬೇವಿನ ಸೊಪ್ಪು, ಕಾಲು ಚಮಚ ಸಾಸಿವೆ ಹಾಕಿ. ಈರುಳ್ಳಿ ಬೆಂದು ಕೆಂಪಾದ ಮೇಲೆ ಚಿಕನ್ ಹಾಕಿ. ಕಾಲು ಟೀ ಚಮಚ ಅರಿಸಿನ, 2 ಟೀ ಚಮಚದಷ್ಟು ಉಪ್ಪು ಹಾಕಿ. ಚೆನ್ನಾಗಿ ಮಿಶ್ರಣ ಮಾಡಿ. ಬೇಯಲು ಬಿಡಿ.

ಮಸಾಲೆ ಸಿದ್ಧಪಡಿಸಿಕೊಳ್ಳಿ: ಚಿಕನ್ ಬೇಯುವವರೆಗೆ ಮಸಾಲೆ ಸಿದ್ಧಪಡಿಸಿಕೊಳ್ಳಿ. ಮೊದಲು ಬಾಣಲೆಗೆ ಸ್ವಲ್ಪ ಎಣ್ಣೆ ಹಾಕಿ, ಸ್ಟೌವ್ ಸಣ್ಣ ಉರಿಯಲ್ಲಿರಲಿ. ಸ್ವಲ್ಪ ಕರಿಬೇವು, ಸಾಸಿವೆ, ಜೀರಿಗೆ, ಕೊತ್ತಂಬರಿ, ಚಕ್ಕೆ, ಲವಂಗ, ಈರುಳ್ಳಿ, ಬೆಳ್ಳುಳ್ಳಿ, ಶುಂಠಿ ಎಲ್ಲವನ್ನು ಹುರಿದುಕೊಳ್ಳಿ. ಮಿಕ್ಸಿ ಜಾರಿಗೆ ಹಾಕಿ. ಹುಣಸೆಹಣ್ಣಿನ ತುಂಡನ್ನು ಅದಕ್ಕೆ ಸೇರಿಸಿ, ಸ್ವಲ್ಪ ನೀರು ಹಾಕಿಕೊಂಡು ರುಬ್ಬಿಕೊಳ್ಳಿ. ಇಷ್ಟು ಹೊತ್ತಿಗೆ ಚಿಕನ್ ಬೆಂದಿರುತ್ತದೆ. ಬೆಂದಿರುವ ಚಿಕನ್‌ಗೆ ರುಬ್ಬಿದ ಮಸಾಲೆಯನ್ನು ಹಾಕಿ, ಕುದಿಯಲು ಬಿಡಿ. ನಂತರ ತೆಂಗಿನಕಾಯಿ ತುರಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಕೊನೆಯಲ್ಲಿ ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ಉದುರಿಸಿ. ಘಮ ಘಮ ಚಿಕನ್ ಸುಕ್ಕ ರೆಡಿ.

ಪಿಜ್ಜಾ ಎಗ್ ಆಮ್ಲೆಟ್



ಬೇಕಾಗುವ ಸಾಮಗ್ರಿಗಳು: ಮೊಟ್ಟೆ – 2, ಸ್ವಲ್ಪ ಅಡುಗೆ ಎಣ್ಣೆ, ಸಾಸಿವೆ – ಕಾಲು ಟೀ ಚಮಚ, ಸ್ವಲ್ಪ ಕರಿಬೇವು, 1 ಈರುಳ್ಳಿ, 1 ಸಣ್ಣ ಟೊಮೆಟೊ, ಹಸಿಮೆಣಸು, ಅರ್ಧ ಟೀ ಚಮಚ ಗರಂ ಮಸಾಲ, ಅರ್ಧ ಟೀ ಚಮಚದಷ್ಟು ಉಪ್ಪು.

ತಯಾರಿಸುವ ವಿಧಾನ: ಕರಿಬೇವಿನ ಎಲೆ, ಈರುಳ್ಳಿ, ಟೊಮೆಟೊ, ಹಸಿಮೆಣಸುಗಳನ್ನು ಎಷ್ಟು ಸಾಧ್ಯವೋ ಅಷ್ಟು ಸಣ್ಣಗೆ ಹೆಚ್ಚಿಕೊಳ್ಳಿ. ಒಂದು ಲೋಟದೊಳಗೆ ಮೊಟ್ಟೆಯನ್ನು ಒಡೆದು ಹಾಕಿ. ಹೆಚ್ಚಿಕೊಂಡ ಎಲ್ಲವನ್ನು ಲೋಟದೊಳಗೆ ಹಾಕಿ. ಉಪ್ಪು ಮತ್ತು ಗರಂ ಮಸಾಲೆಯನ್ನು ಸೇರಿಸಿ. ಚಮಚದಿಂದ ಚೆನ್ನಾಗಿ ಕದಡಿಕೊಳ್ಳಿ. ಕಾವಲಿಗೆ ಸುತ್ತಲೂ ಎಣ್ಣೆ ಸಿಂಪಡಿಸಿ. ಸಾಸಿವೆ ಕಾಳುಗಳನ್ನು ಉದುರಿಸಿ. ಕಾವಲಿ ಚೆನ್ನಾಗಿ ಬಿಸಿಯಾದಂತೆ ಮಿಶ್ರಣ ಮಾಡಿಕೊಂಡ ಪದಾರ್ಥವನ್ನು ಪೂರ್ತಿ ಕಾವಲಿಯನ್ನು ಆವರಿಸುವಂತೆ ಸುರಿಯಿರಿ. ಕಾವಲಿ ಮೇಲೆ ತಟ್ಟೆ ಮುಚ್ಚಿ. 2 ರಿಂದ 3 ನಿಮಿಷಕ್ಕೆ ಮುಚ್ಚಳವನ್ನು ತೆಗೆದು, ದೋಸೆ ಕಡ್ಡಿ(ಮಗುಚೊ ಕೈ) ಸಹಾಯದಿಂದ ಮಗುಚಿ ಹಾಕಿ. ಸ್ವಲ್ಪ ಹೊತ್ತು ಬೇಯಿಸಿದರೆ, ದಪ್ಪಗೆ ಪಿಜ್ಜಾದಂತೆ ಊದಿಕೊಂಡ ಆಮ್ಲೆಟ್ ರೆಡಿ.

ಬಿಳಿಮುಟ್ಟಾದರೆ ಮಕ್ಕಳಾಗುವುದಿಲ್ಲವೇ?

ಸ್ಪಂದನ



ಡಾ. ವೀಣಾ ಎಸ್. ಭಟ್

- **ನನಗೆ 22ವರ್ಷ. ಆಗಾಗ ಬಿಳಿಮುಟ್ಟು ಆಗುತ್ತಿರುತ್ತದೆ. ಇದರಿಂದ ಮಕ್ಕಳಾಗುವುದಿಲ್ಲ ಎನ್ನುತ್ತಾರೆ, ಅದು ಹೌದೇ? ಯಾವ ವೈದ್ಯರ ಬಳಿಯೂ ತೋರಿಸಿಲ್ಲ. ಏನು ಮಾಡಲಿ?**

ಹೆಸರಿಲ್ಲ, ಊರು ಬೇಡ

ಪ್ರತಿ ಹೆಣ್ಣಿನಲ್ಲೂ ಹದಿವಯಸ್ಸಿನಿಂದ ಹಿಡಿದು ಮುಟ್ಟು ನಿಲ್ಲುವವರೆಗೂ ಯೋನಿಮಾರ್ಗ ತೇವವಾಗಿಡಲು ಯೋನಿದ್ರವ ಸ್ವಲ್ಪ ಪ್ರಮಾಣದಲ್ಲಿ ಸ್ರವಿಸಲ್ಪಡುತ್ತದೆ. ಇದಕ್ಕೆ ಯಾವುದೇ ಬಣ್ಣ ಅಥವಾ ವಾಸನೆ ಇರುವುದಿಲ್ಲ. ಇದರಿಂದ ಜನನಾಂಗದ ಭಾಗದಲ್ಲಿ ಯಾವುದೇ ರೀತಿಯ ಕೆರೆತ ಕೂಡಾ ಆಗುವುದಿಲ್ಲ. ಕೆಲವು ಸಹಜ ಪ್ರಕ್ರಿಯೆಗಳಲ್ಲಿ ಅಂದರೆ ಅಂಡಾಶಯದಿಂದ ಅಂಡಾಣು ಬಿಡುಗಡೆಯಾಗುವ ಸಮಯದಲ್ಲೂ ಸಹಜವಾಗಿ ಒಂದೆರಡು ದಿನ ಬಿಳಿಮುಟ್ಟು ಆಗಬಹುದು. ಮುಟ್ಟು ಬರುವ ಮುನ್ನಾದಿನಗಳಲ್ಲಿ, ಗರ್ಭಧಾರಣೆಯಾದಾಗ, ಲೈಂಗಿಕವಾಗಿ ಉದ್ರೇಕಗೊಂಡ ಸಂದರ್ಭಗಳಲ್ಲೂ ಬಿಳಿಮುಟ್ಟು ಆಗುವುದು ಸಹಜ. ಈ ತರಹ ಬಿಳಿಮುಟ್ಟಿಗೆ ಯಾವುದೇ ಚಿಕಿತ್ಸೆ ಅಗತ್ಯವಿಲ್ಲ. ಕೆಲವೊಮ್ಮೆ ಅನಾರೋಗ್ಯ, ಅಪೌಷ್ಟಿಕತೆ, ಗರ್ಭದ್ವಾರ ಹಾಗೂ ಯೋನಿ ಮಾರ್ಗಕ್ಕೆ ಸೋಂಕು ಉಂಟಾದಾಗ, ದೀರ್ಘಕಾಲ ಆ್ಯಂಟಿಬಯೋಟಿಕ್ ಅಥವಾ ಸ್ಟಿರಾಯ್ಡ್ ಮಾತ್ರೆ ತೆಗೆದುಕೊಳ್ಳುವಂತಹ ಸಂದರ್ಭಗಳಲ್ಲಿ ಹೆಚ್ಚು ಬಿಳಿಮುಟ್ಟು ಹೋಗುವುದು, ವಾಸನೆ ಹಾಗೂ ತುರಿಕೆಯಿಂದ ಕೂಡಿರುವುದು, ಒಳ ಉಡುಪೆಲ್ಲಾ ಕಲೆಯಾಗುವುದು.. ಇಂಥವೆಲ್ಲ ಆಗುತ್ತದೆ. ಅಂತಹ ಸಂದರ್ಭದಲ್ಲಿ ಅದು ಅಸಹಜ ಬಿಳಿಮುಟ್ಟು ಎಂದೆನಿಸಿಕೊಳ್ಳುತ್ತದೆ. ಆಗ ತಜ್ಞವೈದ್ಯರ ತಪಾಸಣೆ ಹಾಗೂ ಚಿಕಿತ್ಸೆ ಅಗತ್ಯವಿದೆ. ನಿಮಗಾಗುತ್ತಿರುವ ಬಿಳಿಮುಟ್ಟು ಅಸಹಜವೆನಿಸಿದರೆ, ಸಂಕೋಚಪಡದೆ ತಕ್ಷಣವೇ ವೈದ್ಯರ ಸಲಹೆ ಪಡೆದುಕೊಳ್ಳಿ.

- **ನನಗೆ 39 ವರ್ಷ. ಎರಡು ಬಾರಿ ಸಿಸೇರಿಯನ್ ಆಗಿದೆ. ನನಗೆ 8 ತಿಂಗಳು 15 ದಿನ ತುಂಬಿದ್ದಾಗ ಮೊದಲನೇ ಡೆಲಿವರಿಯಾಗಿ ಜನಿಸಿದ ಮಗು 25 ದಿನ ಐಸಿಯುನಲ್ಲಿತ್ತು. ಆಮೇಲೆ ತೀರಿಕೊಂಡಿತು. ಮತ್ತೆ 2 ವರ್ಷ 6 ತಿಂಗಳು ಬಿಟ್ಟು ಗರ್ಭಿಣಿಯಾದೆ. ಆಗಲೂ ಪ್ರಸವ ಅವಧಿಗಿಂತ 20 ದಿನ ಮುಂಚೆಯೇ ಡೆಲಿವರಿಯಾಯಿತು. ಮಗುವಿಗೆ ಈಗ 10 ತಿಂಗಳು. ಆರಾಮಾಗಿದೆ. ಮನೆಯಲ್ಲಿ ಮತ್ತೆ ಮಗು ಬೇಕು ಎಂದು ಹೇಳುತ್ತಿದ್ದಾರೆ. ನನಗೆ ಬೇಡ ಎನ್ನಿಸುತ್ತಿದೆ. ಏಕೆಂದರೆ ಇದೆ ಪ್ರತಿ ಸಲ ತೊಂದರೆಯಾಗಿ ಮಗು ಪಡೆಯುವುದಕ್ಕೆ ಕಷ್ಟ. ಹೊಟ್ಟೆಯಲ್ಲಿ ನೀರು ಬತ್ತಿ ಹೋಗಿ ಮಗುವಿನ ಬೆಳವಣಿಗೆ ಕಡಿಮೆಯಾಗುತ್ತದೆ. ನಾವು ಬಡವರಾಗಿರುವುದರಿಂದ ಕೆಲಸಕ್ಕೆ ಹೋಗಲೇ ಬೇಕಾಗಿರುವ ಪರಿಸ್ಥಿತಿ. ನಾನೇನು ಮಾಡಲೀ?**


ಹೆಸರಿಲ್ಲ, ಊರು ಬೇಡ

ನಿಮಗೆ ಈಗಾಗಲೇ 39 ವರ್ಷವಾಗಿದೆ ಎನ್ನುತ್ತೀರಿ. ಎರಡು ಸಿಸೇರಿಯನ್ ಆಗಿದೆ ಮತ್ತು ಆರ್ಥಿಕವಾಗಿಯೂ ಸಾಕಷ್ಟು ತೊಂದರೆ ಇದೆ ಎಂದು ಹೇಳಿದ್ದೀರಿ. ಇಂಥ ಸಂದರ್ಭದಲ್ಲಿ ಮತ್ತೊಂದು ಮಗು ಪಡೆಯಲು ಮನೆಯವರ ಒತ್ತಾಯವಿದ್ದರೂ ನಿಮಗೆ ವೈಯಕ್ತಿಕವಾಗಿ ಇನ್ನೊಂದು ಮಗುವನ್ನು ಹೆತ್ತು ಸಾಕುವ ಸಾಮರ್ಥ್ಯ, ಆಸೆ ಇದ್ದರೆ ಮಾತ್ರ ಮಗು ಮಾಡಿಕೊಳ್ಳಿ.

ತಜ್ಞವೈದ್ಯರ ಮೇಲ್ವಿಚಾರಣೆಯಲ್ಲಿ ಚಿಕಿತ್ಸೆ ಪಡೆದರೆ ಇನ್ನೊಂದು ಸಿಸೇರಿಯನ್ ಮಾಡಿಸಿಕೊಳ್ಳಲು ಏನು ತೊಂದರೆ ಇಲ್ಲ. ಆದರೆ ವೈದ್ಯಕೀಯವಾಗಿ ನಾನು ಇನ್ನೊಂದು ಮಗು ಪಡೆಯಲು ಸಲಹೆ ಕೊಡಬಹುದೇ ಹೊರತು ಅದರಿಂದ ಎದುರಿಸಬೇಕಾದ ನಿಮ್ಮ ಕೌಟುಂಬಿಕ ಹಾಗೂ ಆರ್ಥಿಕ ಸಮಸ್ಯೆಗಳ ಬಗ್ಗೆ ನೀವೇ ನಿರ್ಣಯಿಸಬೇಕು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.



ಸುಭಾಷಿತ

ನಿನ್ನೆಯಿಂದ ಕಲಿಯಿರಿ, ಇವತ್ತಿಗಾಗಿ ಬದುಕಿರಿ, ನಾಳೆಗಾಗಿ ಎದುರು ನೋಡಿರಿ.

-ಆಲ್ಬರ್ಟ್ ಐನ್‌ಸ್ಟೀನ್

ನೇಪಥ್ಯಕ್ಕೆ ಸರಿದ ಕಹಿ ವರ್ಷ ತೆರಿಗೆ ತಗ್ಗಿಸಲು ಒಂದು ಅವಕಾಶ

ಕೋವಿಡ್‌ನ ಎರಡನೆಯ ಅಲೆಯು ತಂದಿತ್ತ ಆರೋಗ್ಯ ಬಿಕ್ಕಟ್ಟನ್ನು ಉಲ್ಲೇಖಿಸಿ ಹೇಳುವುದಾದಲ್ಲಿ 2021ನೇ ಇಸವಿಯು ಇಂದಿನ ತಲೆಮಾರಿನ ಪಾಲಿಗೆ ಅತ್ಯಂತ ಕೆಟ್ಟ ವರ್ಷವೂ ಹೌದು. ಕೋವಿಡ್‌ನಿಂದಾಗಿ ಜನರ ಜೀವ ನಷ್ಟವಾಗಿದ್ದಷ್ಟೇ ಅಲ್ಲದೆ, ಹಲವರು ಉದ್ಯೋಗ ನಷ್ಟಕ್ಕೂ ಗುರಿಯಾದರು. ಇನ್ನೊಂದಿಷ್ಟು ಜನರ ಆದಾಯ ನಷ್ಟವಾಯಿತು. 2021ರಲ್ಲಿ ಜನಸಾಮಾನ್ಯರ ಪಾಲಿಗೆ ಬವಣೆಗಳು ಒಂದಾದ ನಂತರ ಒಂದರಂತೆ ಎರಗಿದವು. ಕೆಟ್ಟ ಕಾರಣಗಳಿಗಾಗಿ ಸದಾ ನೆನಪಿನಲ್ಲಿ ಉಳಿಯುವ ವರ್ಷವೊಂದು ಹಿಂದಕ್ಕೆ ಸರಿದು ಈಗ ಹೊಸ ವರ್ಷ ಬಂದಿದೆ. ಹತ್ತು ಹಲವು ಕೇಡುಗಳ ನಡುವೆಯೇ 2021ರ ಕೊನೆಯಲ್ಲಿ ಒಳ್ಳೆಯ ಸುದ್ದಿಯೊಂದು ಬಂದಿದೆ. ಕೇಂದ್ರ ಸರ್ಕಾರದ ತೆರಿಗೆ ವರಮಾನವು ಮಾರ್ಚ್ 31ಕ್ಕೆ ಕೊನೆಗೊಳ್ಳಲಿರುವ 2021–22ನೇ ಹಣಕಾಸು ವರ್ಷದಲ್ಲಿ ಗುರಿಯನ್ನು ಮೀರಿ ಸಂಗ್ರಹ ಆಗಬಹುದು, ದೇಶದ ವಿತ್ತೀಯ ಕೊರತೆಯು ಅಂದಾಜಿಗಿಂತ ತುಸು ಕಡಿಮೆ ಆಗಬಹುದು ಎಂಬ ಸುದ್ದಿ ಇದು. ಕೋವಿಡ್‌ನ ಪ್ರಭಾವ ಇನ್ನೂ ಇರುವ ಈ ಸಂದರ್ಭದಲ್ಲಿ, ಆಡಳಿತದ ಚುಕ್ಕಾಣಿ ಹಿಡಿದಿರುವವರಿಗೆ ಖಂಡಿತವಾಗಿಯೂ ಸಮಾಧಾನ ತರುವ ಸುದ್ದಿ ಇದು. ಆದರೆ, ಇದನ್ನು ಇನ್ನೊಂದು ವಿಷಯದ ಜೊತೆಗೆ ಇರಿಸಿ ನೋಡಿದಾಗ, ಜನರ ಬವಣೆ ತಪ್ಪಿಸಲು ಕೆಲವು ಅತ್ಯಗತ್ಯ ಉತ್ಪನ್ನಗಳ ಮೇಲಿನ ತೆರಿಗೆ ಪ್ರಮಾಣವನ್ನು ಇನ್ನೂ ತಗ್ಗಿಸಬೇಕಾದ ಅಗತ್ಯ ಇದೆ ಎನ್ನಬೇಕಾಗುತ್ತದೆ. ನವೆಂಬರ್ ತಿಂಗಳಿನಲ್ಲಿ ದೇಶದ ಸಗಟು ಹಣದುಬ್ಬರ ದರವು ಶೇಕಡ 14.23ರ ಮಟ್ಟಕ್ಕೆ ತಲುಪಿದೆ. ದಶಕದ ಅವಧಿಯ ದಾಖಲೆಯ ಮಟ್ಟ ಇದು. ಇಂಧನ ಮತ್ತು ವಿದ್ಯುತ್ ವಿಭಾಗದಲ್ಲಿನ ಸಗಟು ಹಣದುಬ್ಬರ ಪ್ರಮಾಣವು ನವೆಂಬರ್‌ನಲ್ಲಿ ಶೇ 39.81ಕ್ಕೆ ತಲುಪಿದೆ. ಇದು ಅಕ್ಟೋಬರ್‌ನಲ್ಲಿ ಶೇ 37.18ರಷ್ಟು ಇತ್ತು. ಆಹಾರ ವಸ್ತುಗಳ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ 3.06ರಷ್ಟು ಇದ್ದಿದ್ದು ನವೆಂಬರ್‌ನಲ್ಲಿ ಶೇ 6.7ಕ್ಕೆ ಏರಿಕೆ ಆಗಿದೆ. ಹಣದುಬ್ಬರ ಹೆಚ್ಚಳ ಆಗಲು ಮುಖ್ಯ ಕಾರಣ ಇಂಧನ ಮತ್ತು ವಿದ್ಯುತ್ ವಿಭಾಗದಲ್ಲಿ ಆದ ಬೆಲೆ ಏರಿಕೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಹೇಳಿರುವುದಾಗಿ ವರದಿಯಾಗಿದೆ.



ಯಾವೆಲ್ಲ ಅಗತ್ಯ ವಸ್ತುಗಳ ತೆರಿಗೆ ಮಟ್ಟವನ್ನು ಇನ್ನಷ್ಟು ತಗ್ಗಿಸಲು ಸಾಧ್ಯ ಎಂಬುದನ್ನು ಪರಿಶೀಲಿಸಿ, ಆ ದಿಕ್ಕಿನಲ್ಲಿ ಮುಂದಡಿ ಇರಿಸಬೇಕಾಗಿದೆ

ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕೇಂದ್ರ ಸರ್ಕಾರ, ಮೌಲ್ಯವರ್ಧಿತ ತೆರಿಗೆಯನ್ನು ಕರ್ನಾಟಕ ಸೇರಿದಂತೆ ಬಹುತೇಕ ರಾಜ್ಯ ಸರ್ಕಾರಗಳು ನವೆಂಬರ್ ಮೊದಲ ವಾರದಲ್ಲಿ ಕಡಿಮೆ ಮಾಡಿವೆ ಎನ್ನುವುದು ನಿಜ. ಹೀಗಿದ್ದರೂ, 2020ರ ನವೆಂಬರ್ ಮಟ್ಟಕ್ಕೆ ಹೋಲಿಸಿದರೆ ಪೆಟ್ರೋಲ್ ಹಾಗೂ ಡೀಸೆಲ್‌ನ ದೇಶಿ ಮಾರುಕಟ್ಟೆ ದರವು 2021ರಲ್ಲಿ ಜಾಸ್ತಿಯಾಗಿಯೇ ಇತ್ತು. ಅವುಗಳ ದರವು 2021ರ ಜನವರಿಯ ಮಟ್ಟಕ್ಕೆ ಹೋಲಿಸಿದರೆ ಹೆಚ್ಚಿನ ಮಟ್ಟದಲ್ಲಿಯೇ ಇದೆ. ಇದನ್ನೇ, ಸಗಟು ಹಣದುಬ್ಬರ ಸೂಚ್ಯಂಕವು ಪ್ರತಿಫಲಿಸಿದೆ. ಓಮೈಕ್ರಾನ್ ಕಾರಣದಿಂದಾಗಿ ದೇಶದ ಪ್ರಮುಖ ರಾಜ್ಯಗಳು ಸ್ಥಳೀಯ ಮಟ್ಟದಲ್ಲಿ ಬಗೆಬಗೆಯ ನಿರ್ಬಂಧಗಳನ್ನು ಜಾರಿಗೆ ತರುತ್ತಿವೆ. ಆರೋಗ್ಯ ರಕ್ಷಣೆಗೆ ಇಂತಹ ಕ್ರಮಗಳು ಅಗತ್ಯ ಎಂದು ನೀತಿ ನಿರೂಪಕರು ಸಮರ್ಥನೆ ಮಾಡಿಕೊಳ್ಳಬಹುದಾದರೂ, ಇಂತಹ ನಿರ್ಬಂಧಗಳು ಆರ್ಥಿಕ ಚಟುವಟಿಕೆಗಳಿಗೆ ಅಡ್ಡಿಯಾಗಿ ಪರಿಣಮಿಸುತ್ತಿವೆ ಎಂಬುದರಲ್ಲಿ ಅನುಮಾನವೇ ಇಲ್ಲ. ಆಗ ಒಂದಿಷ್ಟು ಜನರ ಜೀವನೋಪಾಯಕ್ಕೆ ಪೆಟ್ಟು ಬೀಳುವ ಸಾಧ್ಯತೆ ಇಲ್ಲದಿಲ್ಲ. ನಿರ್ಬಂಧಗಳು ಜಾರಿಗೆ ಬಂದಾಗ ಸರಕು ಮತ್ತು ಸೇವೆಗಳ ಪೂರೈಕೆ ವ್ಯವಸ್ಥೆಯ ಮೇಲೆ ಏಟು ಬಿದ್ದು, ಒಂದಿಷ್ಟು ಉತ್ಪನ್ನಗಳ ಬೆಲೆ ಹೆಚ್ಚಳ ಆದ ನಿದರ್ಶನಗಳು ಇವೆ. ಹೀಗಾಗಿ, ದೈನಂದಿನ ಬದುಕಿನ ಅತ್ಯಂತ ಅವಶ್ಯಕವಾಗಿರುವ ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆಯಲ್ಲಿ ಇನ್ನೊಂದಿಷ್ಟು ತಗ್ಗಿಸಬೇಕು ಎಂಬ ಬೇಡಿಕೆಯನ್ನು ಸರ್ಕಾರಗಳು ಸಹೃದಯ ಮನಃಸ್ಥಿತಿಯಿಂದ, ಗಂಭೀರವಾಗಿ ಪರಿಶೀಲಿಸಬೇಕಾದ ಸಂದರ್ಭ ಇದು. ₹ 1,000ವರೆಗಿನ ಬೆಲೆಯ ಉಡುಪುಗಳ ಮೇಲಿನ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪ್ರಮಾಣವನ್ನು ಶೇ 5ರಿಂದ ಶೇ 12ಕ್ಕೆ ಹೆಚ್ಚಿಸುವ ತೀರ್ಮಾನದ ಅನುಷ್ಠಾನವನ್ನು ವಸ್ತ್ರೋದ್ಯಮದ ಆಗ್ರಹಕ್ಕೆ ಮಣಿದು, ಜಿಎಸ್‌ಟಿ ಮಂಡಳಿಯು ಸದ್ಯಕ್ಕೆ ತಡೆಹಿಡಿದಿದೆ. ಇದು ಸ್ವಾಗತಾರ್ಹ. ಈ ಹೆಚ್ಚಳದ ಸಾಧಕ–ಬಾಧಕ ಕುರಿತು ಇನ್ನಷ್ಟು ವಿಸ್ತೃತವಾಗಿ ಚರ್ಚೆ ನಡೆಸಿ, ನಂತರ ಸಮನ್ವಯದ ತೀರ್ಮಾನವೊಂದನ್ನು ಮಂಡಳಿ ಕೈಗೊಳ್ಳಬಹುದು. ಆದರೆ, ಪಾದರಕ್ಷೆ ಮೇಲಿನ ತೆರಿಗೆ ಹೆಚ್ಚಳದ ತೀರ್ಮಾನವನ್ನು ಹಿಂದಕ್ಕೆ ಪಡೆಯಲು ಜಿಎಸ್‌ಟಿ ಮಂಡಳಿ ನಿರಾಕರಿಸಿದೆ.

ಸರ್ಕಾರಗಳಿಗೆ ತೆರಿಗೆಯೇ ವರಮಾನದ ಪ್ರಮುಖ ಮೂಲ. ಅದರಲ್ಲಿ ಎರಡನೆಯ ಮಾತೇ ಇಲ್ಲ. ಆದರೆ, ಆದಾಯ ತಗ್ಗಿರುವ ಹಾಗೂ ಜೀವನೋಪಾಯಕ್ಕೆ ಅಪಾಯ ಎದುರಾಗಿರುವ ಸಂದರ್ಭದಲ್ಲಿ ಸರ್ಕಾರ ವಿಧಿಸಿರುವ ತೆರಿಗೆಗಳು ಜನಸಾಮಾನ್ಯರಿಗೆ ಹೊರೆಯಾಗಿ ಪರಿಣಮಿಸಬಾರದು. ತೆರಿಗೆಯು ಶಿಕ್ಷೆಯಂತೆ ಕಾಣಿಸದೆ, ಸರ್ಕಾರವು ಸಾರ್ವಜನಿಕರಿಗೆ ಒದಗಿಸುವ ಸೇವೆಗಳಿಗೆ ನ್ಯಾಯೋಚಿತ ಶುಲ್ಕದ ಮಾದರಿಯಲ್ಲಷ್ಟೇ ಇರಬೇಕು. ಓಮೈಕ್ರಾನ್ ಪ್ರಕರಣಗಳು ವರದಿಯಾಗುತ್ತಿರುವ ಪ್ರಮಾಣವು ಮುಂದಿನ ದಿನಗಳಲ್ಲಿ ಯಾವ ಮಟ್ಟ ತಲುಪಲಿದೆ ಎಂಬುದನ್ನು ಈಗಲೇ ಖಚಿತವಾಗಿ ಹೇಳಲಾಗದು. ಓಮೈಕ್ರಾನ್ ಹರಡುವುದನ್ನು ತಡೆಯಲು ಸ್ಥಳೀಯ ಮಟ್ಟದಲ್ಲಿ ಮುಂದಿನ ದಿನಗಳಲ್ಲಿ ಇನ್ನೂ ಯಾವೆಲ್ಲ ಬಗೆಯ ನಿರ್ಬಂಧಗಳು ಜಾರಿಯಾಗಬಹುದು ಎನ್ನುವುದನ್ನೂ ಊಹಿಸುವುದು ಕಷ್ಟ. ಆದರೆ, ಸಾಂಕ್ರಾಮಿಕವನ್ನು ನಿಗ್ರಹಿಸಲು ಅತ್ಯಂತ ಕಠಿಣ ಕ್ರಮಗಳು ಜಾರಿಗೆ ಬಂದರೆ, ಅದರಿಂದ ಸಾರ್ವಜನಿಕರ ಬದುಕಿಗೆ ಆಗುವ ತೊಂದರೆಯನ್ನು ಕನಿಷ್ಠ ಮಟ್ಟದಲ್ಲಿ ಇರಿಸಲು ಏನೆಲ್ಲ ಕ್ರಮಗಳನ್ನು ಕೈಗೊಳ್ಳಬಹುದು ಎಂಬ ಬಗ್ಗೆ ಆಡಳಿತಾರೂಢರಿಗೆ ಅರಿವಿರಬೇಕು. ಯಾವೆಲ್ಲ ಅಗತ್ಯ ವಸ್ತುಗಳ ತೆರಿಗೆ ಮಟ್ಟವನ್ನು ಇನ್ನಷ್ಟು ತಗ್ಗಿಸಲು ಸಾಧ್ಯ ಎಂಬುದನ್ನು ಪರಿಶೀಲಿಸಿ, ಆ ದಿಕ್ಕಿನಲ್ಲಿ ಮುಂದಡಿ ಇರಿಸಬೇಕು. ತೆರಿಗೆ ವರಮಾನವು ಈ ಬಾರಿ ಭಾರಿ ಹೆಚ್ಚಳವನ್ನು ಕಾಣುವ ಸಾಧ್ಯತೆ ನಿಚ್ಚಳವಾಗಿರುವ ಕಾರಣ, ಕೆಲವು ವಸ್ತುಗಳ ಮೇಲಿನ ತೆರಿಗೆ ತಗ್ಗಿಸುವ ಅವಕಾಶ ಸರ್ಕಾರಕ್ಕೆ ಖಂಡಿತ ಇದೆ.

ದಿನದ ಟ್ವೀಟ್




ಹೆಸರು ಬದಲಾವಣೆಯ ಆಟ!

ಭಾರತವು ತನ್ನ ಸ್ವಂತ ನಗರಗಳ ಹೆಸರು ಬದಲಾಯಿಸುವ ಕಾರ್ಯದಲ್ಲಿ ಮುಳುಗಿಹೋಗಿದ್ದರೆ, ಚೀನಾವು ಭಾರತದ ನಗರಗಳ ಹೆಸರನ್ನು ಬದಲಾಯಿಸುತ್ತಿದೆ!

ಅಶೋಕ್ ಸ್ವೈಯ್ನ್, ಪ್ರಾಧ್ಯಾಪಕ

ಕಿಡಿನುಡಿ



ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಪರಂಪರೆಯನ್ನು ಸರ್ಕಾರ ಬುಡಮೇಲು ಮಾಡಲು ಹೊರಟಿದೆ. ಕೆಲವು ದೇವಾಲಯಗಳನ್ನು ಬಿಟ್ಟರೆ ಉಳಿದೆಲ್ಲವೂ ಸರ್ಕಾರದ ನಿಯಂತ್ರಣದಲ್ಲಿವೆ. ಎಲ್ಲ ದೇವಾಲಯಗಳಲ್ಲಿ ಜನರು ಕೋಟ್ಯಂತರ ರೂಪಾಯಿಯನ್ನು ಹುಂಡಿಗೆ ಹಾಕುತ್ತಾರೆ. ದೇವಾಲಯ ಇವತ್ತಿನದ್ದಲ್ಲ, ನೂರಾರು ವರ್ಷಗಳ ಆಸ್ತಿ. ಇದನ್ನು ತಮ್ಮ ಕಾರ್ಯಕರ್ತರಿಗೆ ಹಂಚಲು ಬಿಜೆಪಿ ನೇತೃತ್ವದ ಸರ್ಕಾರ ಹೊರಟಿದೆ.

ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

25 ವರ್ಷಗಳ ಹಿಂದೆ

ಬುಧವಾರ, 1-1-1997

● ಕರ್ನಾಟಕ ಸೇರಿ 9 ರಾಜ್ಯಗಳಲ್ಲಿ ಅರಣ್ಯ ಪ್ರದೇಶ ಹೆಚ್ಚಳ

ಲಖನೌ, ಡಿ. 31 (ಯುಎನ್‌ಐ)– ಅರಣ್ಯ ನಾಶದ ಕೂಗಿನ ಮಧ್ಯೆ, ಕರ್ನಾಟಕ ಸೇರಿ ರಾಷ್ಟ್ರದ ಒಟ್ಟು ಒಂಬತ್ತು ರಾಜ್ಯಗಳ ಅರಣ್ಯ ಪ್ರದೇಶದಲ್ಲಿ ಹೆಚ್ಚಳವಾಗಿದೆ ಎಂದು ಭಾರತ ಅರಣ್ಯ ಸಮೀಕ್ಷೆ ವರದಿ ತಿಳಿಸಿದೆ.

ಗುಜರಾತ್ 276 ಚದರ ಕಿಲೊ ಮೀಟರ್, ರಾಜಸ್ಥಾನ 181, ಪಶ್ಚಿಮ ಬಂಗಾಳ 90, ಹರಿಯಾಣ 90, ತಮಿಳು ನಾಡು 40, ಕರ್ನಾಟಕ 39, ಉತ್ತರ ಪ್ರದೇಶ 25, ಸಿಕ್ಕಿಂ 8 ಮತ್ತು ದೆಹಲಿಯಲ್ಲಿ 4 ಚದರ ಕಿಲೊಮೀಟರ್‌ನಷ್ಟು ಅರಣ್ಯಭೂಮಿ ಹೆಚ್ಚಳವಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 1-1-1972

● ಶಾಂತಿ ಸ್ಥಾಪನೆಗೆ ಪಾಕ್ ಜತೆ ಚರ್ಚೆಗೆ ಸಿದ್ಧ: ಇಂದಿರಾ

ನವದೆಹಲಿ, ಡಿ. 31– ಪಾಕಿಸ್ತಾನದಲ್ಲಿ ಪರಿಸ್ಥಿತಿ ಒಂದು ಹದಕ್ಕೆ ಬಂದನಂತರ, ಇತ್ತೀಚಿನ ಸಮರದಿಂದ ಉದ್ಭವಿಸಿರುವ ಸಮಸ್ಯೆಗಳನ್ನು ವಿಂಗಡಿಸಲು ಉಭಯಪಕ್ಷೀಯ ಮಾತುಕತೆಗಳನ್ನು ನಡೆಸಬಹುದೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಇಂದು ಇಲ್ಲಿ ಸೂಚನೆಯಿತ್ತರು.

ಉಪಖಂಡದಲ್ಲಿ ಶಾಂತ ಪರಿಸ್ಥಿತಿಯ ಪುನರ್ ಸ್ಥಾಪನೆಗೆ ಪಾಕಿಸ್ತಾನದ ಜತೆ ಮಾತುಕತೆಯನ್ನು ನಡೆಸಲು ಭಾರತ ಸಿದ್ಧವೆಂದು ಅವರು ಹೇಳಿದರು.

ಭಾರತ– ಪಾಕಿಸ್ತಾನ ಸಮರದ ನಂತರ ಮೊತ್ತಮೊದಲ ಬಾರಿಗೆ ಹೊಸವರ್ಷದ ಹಿಂದಿನ ದಿನವಾದ ಈ ದಿನ ಕಿಕ್ಕಿರಿದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮಾತುಕತೆಯು ಮೂರನೇ ರಾಷ್ಟ್ರದ ಮಧ್ಯಪ್ರವೇಶವಿಲ್ಲದೆ ಪರಸ್ಪರ ನಡೆಯಬೇಕು ಎಂದು ಸ್ಪಷ್ಟಪಡಿಸಿದರು.

● ಇಂದಿನಿಂದ ರಾಜಧನ ರದ್ದು ರಾಷ್ಟ್ರಪತಿ ಒಪ್ಪಿಗೆ

ನವದೆಹಲಿ, ಡಿ. 31– ರಾಜಧನ ರದ್ದು ಮತ್ತು ಮಾಜಿ ರಾಜರುಗಳ ವಿಶೇಷ ಸವಲತ್ತುಗಳನ್ನು ರದ್ದುಪಡಿಸುವ ಸಂವಿಧಾನದ 28ನೇ ತಿದ್ದುಪಡಿ ಮಸೂದೆಗೆ ರಾಷ್ಟ್ರಪತಿ ಇಂದು ತಮ್ಮ ಅಂಗೀಕಾರ ಮುದ್ರೆ ಒತ್ತಿದರು.

ಈ ಕ್ರಮದಂತೆ ರಾಷ್ಟ್ರದಲ್ಲಿ ಮಾಜಿ ರಾಜರಿಗೆ ಶನಿವಾರದಿಂದ ಯಾವುದೇ ರಾಜಧನವನ್ನೂ ನೀಡುವುದಿಲ್ಲ.

ಶ್ರೇಷ್ಠ ಪುಸ್ತಕಗಳ ಒಡನಾಟವಿದ್ದರೆ ನಮ್ಮ ನಾಯಕರ ನಡೆ ನುಡಿಗಳು ಕೊಂಚ ನೆಟ್ಟಗಾಗಬಲ್ಲವು

ಹೊಸ ವರ್ಷಕ್ಕೆ ಹೊಸ ಪುಸ್ತಕದ ಸಖ್ಯ



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಕಳೆದ ಹೊಸ ವರ್ಷದ ಮೊದಲ ದಿನ 'ಪ್ರಜಾವಾಣಿ'ಯ ಇದೇ ಅಂಕಣದಲ್ಲಿ, ದೆಹಲಿ ಗಡಿಯಲ್ಲಿ ನಡೆಯುತ್ತಿದ್ದ ರೈತ ಚಳವಳಿಯ ಗೆಲುವಿನ ಬಗ್ಗೆ ಆಶಾವಾದದಿಂದ ಬರೆದಿದ್ದು ನೆನಪಾಗುತ್ತಿದೆ. ಆ ಆಶಾವಾದ ಅಷ್ಟಿಷ್ಟು ನಿಜವಾಗಿ, ರೈತರು ಒಂದು ಹಂತದಲ್ಲಾದರೂ ಗೆದ್ದಿದ್ದಾರೆ. ಈ ಗೆಲುವಿನ ಹುಮ್ಮಸ್ಸು ರೈತ ಸಂಘಟನೆಗಳ ಒಕ್ಕೂಟವನ್ನು ಪಂಜಾಬ್ ಚುನಾವಣೆಯತ್ತಲೂ ಒಯ್ದಿದೆ.

ಚಳವಳಿಗಳಂತೆ ಮಾನವಜೀವಿಗಳಿಗೂ ಕಾಲಕಾಲದ ಗೆಲುವುಗಳು ಹೊಸ ಎನರ್ಜಿ ಉಕ್ಕಿಸುತ್ತಿರುತ್ತವೆ. ಇಂಥ ಗೆಲುವಿನ ಕಾತರ ಹೊಸ ವರ್ಷದಲ್ಲಿ ಹೊಸ ದಿಕ್ಕಿಗಾಗಿ ಹಂಬಲಿಸುವವರಲ್ಲೂ ಕಾಣುತ್ತಿರುತ್ತದೆ. ಪ್ರತಿವರ್ಷದ ಶುರುವಿನಲ್ಲಿ, ಆರೋಗ್ಯಕರ ಮನಃಸ್ಥಿತಿಯುಳ್ಳ ಯಾರನ್ನೇ ಕೇಳಿ ನೋಡಿ: ಹೊಸತೇನನ್ನೋ ಮಾಡುವ ಕನಸು, ತುಡಿತ ಚಿಮ್ಮುತ್ತಿರುತ್ತದೆ. ಬರೆಯುವವರು, ಕಲಾವಿದರು, ನಾಟಕದವರು, ಸಿನಿಮಾದವರು... ಮುಂತಾದವರೆಲ್ಲ ಹೊಸ ಕೃತಿ, ಹೊಸ ಯೋಜನೆಗಳ ಬಗ್ಗೆ ಮಾತಾಡುತ್ತಿರುತ್ತಾರೆ. ಇಂಥ ಉತ್ಸಾಹ ಕಂಡು ಕರುಬುತ್ತಾ, 'ಇದು ಪಶ್ಚಿಮದ ಹೊಸ ವರ್ಷ, ನಮ್ಮದಲ್ಲ' ಎಂದು ಗೊಣಗುವವರೂ ಇದ್ದಾರೆ. ಆದರೆ ಮುಕ್ತ ಮನಸ್ಸಿನ ಆಶಾವಾದ ಉಕ್ಕಿಸುವ ಆರೋಗ್ಯವನ್ನು ಯಾರೂ ಕೊಲ್ಲಲಾರರು. ರಾಜಕೀಯ ಸಭೆಗಳಿಗೊಂದು, ಜನರಿಗೊಂದು ಕಾನೂನು ಮಾಡಿ ಹೊಸ ವರ್ಷಾಚರಣೆಗಳ ಸಂಭ್ರಮವನ್ನು ಕೊಲ್ಲುವ ಸರ್ಕಾರಗಳು ಜನರಿಗೆ ಕಿರಿಕಿರಿ ಉಂಟು ಮಾಡಬಲ್ಲವೇ ವಿನಾ ಅವರ ಹುಮ್ಮಸ್ಸನ್ನು ಕೊಲ್ಲಲಾರವು.

ಇಲ್ಲೊಂದು ವೈರುಧ್ಯಮಯ ಸತ್ಯ ಕಾಣುತ್ತದೆ: ಕೊಂಚ ಮುಕ್ತ ಮನಸ್ಸಿನ ಯಾರನ್ನು ಕೇಳಿದರೂ ಏನಾದರೂ ಒಳಿತನ್ನು ಮಾಡುವ ಮಾತಾಡುತ್ತಲೇ ಇರುತ್ತಾರೆ. ಆದರೂ ನಮ್ಮ ಸುತ್ತಮುತ್ತಲ ಸಮಾಜದಲ್ಲಿ ಇಷ್ಟೊಂದು ಕೆಡುಕಿದೆ ಎಂದು ಯಾಕೆ ಎಲ್ಲ ಸೂಕ್ಷ್ಮಜೀವಿಗಳಿಗೂ ಅನ್ನಿಸುತ್ತಿರುತ್ತದೆ? ರಾಜಕಾರಣಿಗಳು, ಧಾರ್ಮಿಕ ನಾಯಕರು, ಸಾಂಸ್ಕೃತಿಕ ವಾಚಾಳಿಗಳು ಸದಾ ಯಾರನ್ನಾದರೂ ಹೊಡೆಯಲು ಹೊರಟವರಂತೆ ಮಾತಾಡುವುದು ಕೂಡ ಜನರ ಕಿರಿಕಿರಿಯನ್ನು ಹೆಚ್ಚಿಸುತ್ತಿರುತ್ತದೆ. ಜನರನ್ನು ಒಳಿತಿನ ಹಾದಿಗೆ ತರುವ ಒಳ್ಳೆಯ ಭಾಷೆಯನ್ನೇ ಬಹುತೇಕ ಸಾರ್ವಜನಿಕ ಮಾತುಗಾರರು ಕಳೆದುಕೊಂಡಿದ್ದಾರೆ. ಸರ್ಕಾರಗಳು ಸಾಂಸ್ಕೃತಿಕ ಸಂಸ್ಥೆಗಳಿಗೆ ನೇಮಿಸುವ ಅರೆಬೆಂದ ವಾಚಾಳಿಗಳಂತೂ ತಮ್ಮ ನಾಯಕರಿಗಿಂತ ವಿಕಾರವಾಗಿ ಕೂಗುತ್ತಿರುತ್ತಾರೆ.

ನಮ್ಮ ಕಣ್ಣೆದುರೇ ದೇವರಾಜ ಅರಸು, ರಾಮಕೃಷ್ಣ ಹೆಗಡೆ, ಕೆ.ಎಚ್.ರಂಗನಾಥ್ ಥರದವರು ಎಷ್ಟು ಬಿಡುಬೀಸಾಗಿ, ಜನರ ತಿಳಿವಳಿಕೆ ಬೆಳೆಸುವಂತೆ ಮಾತಾಡುತ್ತಿದ್ದರೆಂಬುದು ರಾಜಕಾರಣಿಗಳಿಗೇ ಮರೆತುಹೋಗಿದೆ. ಶಾಂತವೇರಿ ಗೋಪಾಲಗೌಡ, ಜೆ.ಎಚ್.ಪಟೇಲ್ ಥರದವರು ಸಹಜ ಹಾಸ್ಯ ಬಳಸಿ ಒಳ್ಳೆಯ ಬದಲಾವಣೆಗಳತ್ತ ಜನರನ್ನು ತಿರುಗಿಸುತ್ತಿದ್ದ ಸಾಧ್ಯತೆಯೂ ಕಣ್ಮರೆಯಾಗಿದೆ. ಚಾನೆಲ್ಲುಗಳ ಶೂರರಂತೂ ಮಹಾಯುದ್ಧಕ್ಕೆಂದೇ ಹಾಜರಾದವರಂತೆ ಚೀರಿ ಚೀರಿ ಸಂಜೆಗಳೇ ಮಲಿನಗೊಳ್ಳುತ್ತಿವೆ.

ಸಾರ್ವಜನಿಕ ವಲಯದಲ್ಲಿ ಎದ್ದು ಕಾಣುತ್ತಿರುವ ಅಸೂಕ್ಷ್ಮತೆಗೆ ಮತ್ತೊಂದು ಮುಖ್ಯ ಕಾರಣ: ರಾಜಕಾರಣಿಗಳು ಹಾಗೂ ಸಾರ್ವಜನಿಕ ಭಾಷೆಯನ್ನು ಬಳಸುವವರು ಪುಸ್ತಕಗಳನ್ನು ಓದುವುದಿರಲಿ, ಮುಟ್ಟುವುದನ್ನು ಕೂಡ ಬಿಟ್ಟಿರುವುದು. ಎಷ್ಟೋ ವರ್ಷಗಳಿಂದ ಕೆಲವರನ್ನು ಬಿಟ್ಟರೆ ಕರ್ನಾಟಕದ ರಾಜಕಾರಣಿಗಳ ಕೈಯಲ್ಲಿ ಯಾವುದಾದರೂ ಪುಸ್ತಕ ಕಂಡಿದೆಯೇ? ಒಳ್ಳೆಯ ಪುಸ್ತಕಗಳ ಬಗ್ಗೆ ಮಾತಾಡಿದ್ದು ನೆನಪಿದೆಯೇ? ಇನ್ನು ಹೊಸ ವರ್ಷದ ಶುರುವಿನಲ್ಲಿ ಜಗತ್ತಿನುದ್ದಕ್ಕೂ ಹೆಣ್ಣು, ಗಂಡುಗಳು ಈ ವರ್ಷ ತಾವು ಓದಲೇಬೇಕಾದ ಪುಸ್ತಕಗಳ ಪಟ್ಟಿ ಹಂಚಿಕೊಳ್ಳುತ್ತಿರುವುದು ಈ ಜಡಜೀವಿಗಳ ಕಣ್ಣಿಗೆ ಬೀಳುವ ಸಾಧ್ಯತೆ ದೂರವೇ ಉಳಿಯಿತು.

ವರ್ಷದಲ್ಲಿ ಕೆಲವಾದರೂ ಮುಖ್ಯ ಪುಸ್ತಕಗಳನ್ನು ಓದದಿದ್ದರೆ ರಾಜಕಾರಣಿಗಳಿಗೆ, ಸಾರ್ವಜನಿಕ ಮಾತುಗಾರರಿಗೆ ಒಳ್ಳೆಯ ಐಡಿಯಾಗಳು ಎಲ್ಲಿಂದ ಬರುತ್ತವೆ? ಒಳ್ಳೆಯ ಪುಸ್ತಕಗಳನ್ನು ಓದದ ತಲೆ ತುಂಬ ಮನೆಹಾಳು ಐಡಿಯಾಗಳಷ್ಟೇ ತುಂಬಿರುತ್ತವೆ. ಮಹಿಳಾ ರಾಜಕಾರಣಿಗಳಿಗೆ ಸ್ತ್ರೀವಾದಿ ಚಿಂತನೆಗಳ ಪರಿಚಯವೇ ಇಲ್ಲದಿದ್ದರೆ, ಪುರುಷರ ರಾಜಕೀಯ ಅಬ್ಬರವನ್ನು ಎದುರಿಸಬಲ್ಲ ಸಿದ್ಧಾಂತ, ಭಾಷೆ, ನೋಟ, ನಿಲುವುಗಳು ಎಲ್ಲಿಂದ ಸಿಗುತ್ತವೆ? ಬಹಳಷ್ಟು ಶಾಸಕರು ಈ ಹಿಂದೆ ವಿಧಾನಸಭೆ, ವಿಧಾನ ಪರಿಷತ್ತುಗಳಲ್ಲೇ ಮಾತಾಡಿರುವ ಜ್ಞಾನಿಗಳ ಭಾಷಣಗಳ ಕಡತಗಳ ಮೇಲೆ ಕಣ್ಣಾಡಿಸಿರುವ ಸೂಚನೆ ಕೂಡ ಅವರ ಶಾಸನಸಭೆಯ ಮಾತುಗಳಲ್ಲಿ ಕಾಣುತ್ತಿಲ್ಲ. ಪುಸ್ತಕಗಳ ಸಂಗದಲ್ಲಿರುವ ಕಿಮ್ಮನೆ ರತ್ನಾಕರ್ ಥರದ ನಾಯಕರು ಕರ್ನಾಟಕದ ಎಲ್ಲ ಬಜೆಟ್ಟುಗಳನ್ನೂ ಅಧ್ಯಯನ ಮಾಡಿರುವ ರೀತಿ ಕೂಡ ಈ ಶಾಸಕರುಗಳಿಗೆ ಪ್ರೇರಣೆ ನೀಡಿದಂತಿಲ್ಲ. ಶಾಸನಸಭೆಯಲ್ಲೇ ವಿಕಾಸಗೊಂಡ ಚಿಂತನೆಗಳನ್ನಾದರೂ ಓದದ ನಾಯಕರು ಬಾಯಿಗೆ ಬಂದ ಭಾಷೆ ಬಳಸುತ್ತಿರುವ ಚಾಳಿ ಪುರಸಭೆ, ಪಂಚಾಯಿತಿಗಳಿಗೂ ಹಬ್ಬುತ್ತಿದೆ.

ಇದೆಲ್ಲವನ್ನೂ ಹೊಸ ವರ್ಷದ ಶುರುವಿನಲ್ಲಿ ನೆನಪಿಸಲು ಕಾರಣವಿದೆ: ಜಗತ್ತಿನೆಲ್ಲೆಡೆ ವರ್ಷಾರಂಭದಲ್ಲಿ ಸಿಗರೇಟು, ಮದ್ಯಪಾನ ಬಿಡುವುದು, ತೂಕ ಇಳಿಸುವುದು, ಜಗಳಗಂಟತನ ಬಿಡುವುದು ಮುಂತಾದ ಪ್ರತಿಜ್ಞೆ ಮಾಡುವುದು ಸಾಮಾನ್ಯ. ಆದರೆ ವರ್ಷಾರಂಭದಲ್ಲಿ ಪುಸ್ತಕಗಳನ್ನು ಓದುವುದರ ಕುರಿತ ಪ್ರತಿಜ್ಞೆಗಳನ್ನು ಪ್ರಜ್ಞಾವಂತರೆಲ್ಲರೂ ಅತ್ಯಗತ್ಯವಾಗಿ ಗಮನಿಸಬೇಕು. ಕಳೆದ ವರ್ಷ ಆರಿಸಿದ್ದ ಪುಸ್ತಕಗಳಲ್ಲಿ ಹತ್ತನ್ನಷ್ಟೇ ಓದಿದೆ ಎಂದು ಒಬ್ಬಳಿಗೆ ಬೇಸರ; ಮತ್ತೊಬ್ಬಳಿಗೆ ಕಳೆದ ವರ್ಷ ಓದದ ಪುಸ್ತಕಗಳ ಜೊತೆಗೆ ಹೊಸ ಪುಸ್ತಕಗಳ ಪಟ್ಟಿ ರೂಪಿಸುವ ಉತ್ಸಾಹ.



ಇವುಗಳ ನಡುವೆ ಕುತೂಹಲಕ್ಕೆ, ನನ್ನ ನೆಚ್ಚಿನ ಮಹಿಳಾ ಲೀಡರ್, ನ್ಯೂಜಿಲೆಂಡಿನ ಜನಪ್ರಿಯ ಪ್ರಧಾನಿ, ಜೆಸಿಂಡಾ ಆರ್ಡರ್ನ್ ಯಾವ ಪುಸ್ತಕಗಳನ್ನು ಓದುತ್ತಿದ್ದಾರೆ ಎಂದು ನೋಡಿದೆ. ಜೆಸಿಂಡಾ, ಕೊರೊನಾ ಬಿಕ್ಕಟ್ಟಿನಲ್ಲಿ ನ್ಯೂಜಿಲೆಂಡಿಗೆ ಅದ್ಭುತ ಸ್ಥೈರ್ಯ, ಮುನ್ನೋಟ ಕೊಟ್ಟ ನಾಯಕಿ. ಕೊರೊನಾದ ಆರಂಭದಲ್ಲೇ ಕ್ರಮ ತೆಗೆದುಕೊಳ್ಳಲು ಸಲಹೆ ಕೊಟ್ಟ ರಾಹುಲ್ ಗಾಂಧಿಯವರ ಮಾತನ್ನು ಗಂಭೀರವಾಗಿ ಪರಿಗಣಿಸದೆ ಭಾರತ ಆಹ್ವಾನಿಸಿಕೊಂಡ ದುರಂತದ ಕಾಲದಲ್ಲಿ ಜೆಸಿಂಡಾ ಎಚ್ಚರವಾಗಿದ್ದರು. ನ್ಯೂಜಿಲೆಂಡ್‌ನಲ್ಲಿ ವಿಮಾನ ನಿಲ್ದಾಣಗಳಿಗೆ ಬಂದಿಳಿಯುತ್ತಿದ್ದ ಪ್ರಯಾಣಿಕರ ಬಗ್ಗೆ ಸರ್ಕಾರದ ಕಟ್ಟುನಿಟ್ಟಾದ ಮುನ್ನೆಚ್ಚರಿಕೆಯಿಂದ ಅಲ್ಲಿ ಸಾವಿನ ಪ್ರಮಾಣ ಅತ್ಯಂತ ಕಡಿಮೆಯಾಯಿತು.

ಪುಸ್ತಕಗಳ ಸಂಗ ಬಿಡದ ಡೈನಮಿಕ್ ನಾಯಕಿ ಜೆಸಿಂಡಾ ಕಳೆದ ವರ್ಷ ತಾವು ಮೆಚ್ಚಿದ ಪುಸ್ತಕಗಳ ಪಟ್ಟಿ ಕೊಟ್ಟರು. ನ್ಯೂಜಿಲೆಂಡಿನಲ್ಲಿ ರಾಜಕಾರಣಿಗಳಿಗೆ ಒಳ್ಳೆಯ ಪುಸ್ತಕಗಳನ್ನು ಕೊಡುವ ಸಂಸ್ಥೆಗಳೇ ಇವೆ. ಜೆಸಿಂಡಾ ಪಟ್ಟಿಯ ಜೊತೆಗೇ ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಕಾಲಕಾಲಕ್ಕೆ ಕೊಟ್ಟ ನೂರು ಪುಸ್ತಕಗಳ ಪಟ್ಟಿ ಗಮನಿಸಿದೆ. ಜೆಸಿಂಡಾರಂತೆ ಒಬಾಮ ಕೂಡ ತಮ್ಮ ಆಯ್ಕೆಯ ಪುಸ್ತಕಗಳನ್ನು ಓದಿದ್ದಾರೆ. ಕೊರೊನಾ ಕಾಲದಲ್ಲಿ ಪುಸ್ತಕ, ಸಂಗೀತ ತಮ್ಮನ್ನು ಪೊರೆದಿದ್ದನ್ನು ನೆನೆದಿದ್ದಾರೆ. ಒಬಾಮರ ಪ್ರಿಯ ಪುಸ್ತಕಗಳ ಪಟ್ಟಿಯಲ್ಲಿ ಚಿನುವ ಅಚಿಬೆ, ಟೋನಿ ಮಾರಿಸನ್, ಅಡಿಚಿಯರ ಕಾದಂಬರಿಗಳು, ಆರ್ಥಿಕ, ರಾಜಕೀಯ ಲೋಕದ ಪುಸ್ತಕಗಳಿವೆ. ಪುಸ್ತಕ ಓದಿ ಹುಟ್ಟಿದ ಸೂಕ್ಷ್ಮತೆ ಜೆಸಿಂಡಾ, ಒಬಾಮರ ಮಾತು, ನಡವಳಿಕೆಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಲಿಂಕನ್, ಫಿಡೆಲ್ ಕ್ಯಾಸ್ಟ್ರೊ, ನೆಹರೂ ಸೇರಿದಂತೆ ಪುಸ್ತಕಗಳ ಸಖ್ಯದಲ್ಲಿದ್ದ ದೊಡ್ಡ ನಾಯಕರುಗಳ ಎದುರು ಯಾವ ಪುಸ್ತಕಗಳನ್ನೂ ಓದದೆ ಪಶುಗಳಂತೆ ವರ್ತಿಸುವ ಲೀಡರುಗಳನ್ನು ಹೋಲಿಸಿ: ಒಳ್ಳೆಯ ಪುಸ್ತಕಗಳ ಸಂಗದಲ್ಲಿರುವ ರಾಜಕಾರಣಿಗಳು ದೇಶದ ಆರೋಗ್ಯಕ್ಕೆ ಎಷ್ಟು ಅತ್ಯಗತ್ಯ ಎನ್ನುವುದು ತಂತಾನೇ ಹೊಳೆಯುತ್ತದೆ.

ರಾಜಕಾರಣಿಗಳಿರಲಿ, ಲಕ್ಷಗಟ್ಟಲೆ ಸಂಬಳ ಪಡೆಯುವ ಅಧ್ಯಾಪಕರು ಕೂಡ ತಂತಮ್ಮ ವಿಷಯಗಳಿಗೆ ಸಂಬಂಧಿಸಿದ ಒಂದೆರಡು ಹೊಸ ಪುಸ್ತಕಗಳನ್ನಾದರೂ ಪ್ರತೀ ತಿಂಗಳು ಕೊಳ್ಳದಿರುವ ಬೇಜವಾಬ್ದಾರಿತನ ಕೂಡ ಇಲ್ಲಿದೆ. ಡಿಜಿಟಲ್ ಮಂದಿ ಕಿಂಡಲ್, ಇ-ಪುಸ್ತಕ, ಕೇಳು ಪುಸ್ತಕಗಳಲ್ಲಿ ಮುಳುಗಿದ್ದಾರೆ. ಆದರೂ ಕೈಯಲ್ಲಿ ಪುಸ್ತಕ ಹಿಡಿಯುವ ಪುಳಕ, ಪುಸ್ತಕಗಳೊಡನೆ ಗಂಟೆಗಟ್ಟಲೆ ಬದುಕುವ ಸುಖ ಇತರ ಬಗೆಯ ಓದಿನಲ್ಲಿರುವಂತಿಲ್ಲ. ಶ್ರೇಷ್ಠ ಪುಸ್ತಕಗಳ ಒಡನಾಟದಲ್ಲಿರುವುದೆಂದರೆ ನಮ್ಮೊಳಗಿನ ವಿಕಾರಗಳನ್ನು ಮೀರಿ ಇತರರನ್ನು, ಲೋಕದ ಕಷ್ಟಗಳನ್ನು ಅರಿಯುವುದು.

ಹೊಸ ವರ್ಷದಲ್ಲಾದರೂ ಈ ಸರಳ ಸುಂದರ ದಿನಚರಿ ಎಲ್ಲರ ಬದುಕಿನ ಭಾಗವಾಗಲಿ. ಒಳ್ಳೆಯ ಪುಸ್ತಕಗಳ ಪಟ್ಟಿ ಸಿದ್ಧವಾಗಲಿ! ಚಿಯರ್ಸ್!

ಚುರುಮುರಿ



ಹೊಸ ಭವಿಷ್ಯ!

● ಬಿ.ಎನ್.ಮಲ್ಲೇಶ್

'ಟರ್ ಟಕಟಕ... ಲಕ್ಷ್ಮೀ ಇಚಾರ, ಧನಲಕ್ಷ್ಮೀ ಇಚಾರ... ಶುಭವಾಗುತ್ತೈತೆ, ಟರ್ ಟಕಟಕ...' ಬುಡುಬುಡಿಕೆಯ ಸದ್ದು ಕೇಳಿ ಮುಖ್ಯಮಂತ್ರಿ ಮನೆಯಿಂದ ಹೊರಬಂದರು.

'ಸ್ವಾಮಿ, ಹೋದ ವರ್ಸ ನಿನ್ನ ಹಣೆಬರ-ಹಣೆಬರ ಅಂದ್ರೆ ಟೇಮು- ಟೇಮು ಅಂದ್ರೆ ಗ್ರಾಚಾರ ನೆಟ್ಟಗಿತ್ತು. ಇಟ್ಟ ಹೆಜ್ಜೆ ಪಟ್ಟವಾಯ್ತು, ಮುಟ್ಟಿದ್ದೆಲ್ಲ ಚಿನ್ನವಾಯ್ತು. ನೀ ಬೇಡಿದ್ದು ಬಯಸಿದ್ದು ಎದ್ದು ಬಿದ್ದು ಓಡಿ ಬಂತು, ನಿಜವೋ?'

'ಇರಬಹುದು, ಆದ್ರೆ ನಾನು ಜ್ಯೋತಿಷ್ಯ ಕೇಳಲ್ಲ'.

'ಸ್ವಾಮಿ... ಇದು ಹೊಸ ವರ್ಸ, ಹೊಸ ದಿಕ್ಕು. ನಿನ್ನ ಗ್ರಾಚಾರದಲ್ಲಿ ಸ್ವಲ್ಪ ಮಿಸ್ಟೀಕ್ ಕಾಣತೈತೆ. ಒಂದು ರಾಜ್ಯ ಕಟ್ಟಬೇಕು, ಒಂದು ದೇಶ ಕಟ್ಟಬೇಕು, ಜನರ ಕಲ್ಯಾಣ ಮಾಡಬೇಕು ಅಂತ ಆಸೆ ಇಟ್ಕಂಡಿದ್ದೆ. ಸ್ವಾಮಿ ನೀನು ನಿಂತ ಜಾಗ, ಕುಂತ ಕುರ್ಚಿ ಮ್ಯಾಲೆ ನಿಮ್ಮವರದೇ ಕಣ್ಣು ಬಿದ್ದೈತೆ. ನಿಜ ಅಂದ್ರೆ ನಿಜಾನ್ನು, ಸುಳ್ಳಂದ್ರೆ ಸುಳ್ಳನ್ನು...'

'ನಿಜ' ಎಂದರು ಮುಖ್ಯಮಂತ್ರಿ.

'ಸ್ವಾಮಿ, ಯಾವುದೋ ನೋವು ನಿನ್ನ ಕಾಡ್ತಾ ಐತೆ. ನಿಂತ ಕಾಲ ಬಲ ಕುಸಿದೋಗ್ತಾ ಐತೆ. ಒಂದು ಗಟ್ಟಿಯಂತ್ರ ಮಾಡಿ ನಿನ್ನ ರಟ್ಟೆಗೆ ಕಟ್ಟಿಬಿಡ್ತೀನಿ. ಕಾಲ ಬಲ ನೆಟ್ಟಗಾಗಿ ಗ್ರಹಬಲ ನೀ ಹೇಳಿದಂಗೆ ಕೇಳದಿದ್ರೆ, ಥತ್... ನಿನ್ನ ಮುಖ ತೋರಿಸಬೇಡ ಅಂದುಬಿಡು ಆಯ್ತಾ?'

'ಅದೆಲ್ಲ ಸರಿ, ನನ್ಮೇಲೆ ಯಾರ ಕಣ್ಣೂ ಬೀಳದಂಗೆ ಮಾಡೋಕೆ ಸಾಧ್ಯಾನಾ?'

'ಸ್ವಾಮಿ, ನಿಮಗೆ ಆಗದೋರು ನಡೆದಾಡೋ ಮಣ್ಣು, ಅವರ ತಲೆ ಮ್ಯಾಗಿನ ಕೂದಲು ತಂದುಕೊಟ್ಟುಬಿಡು, ಮಟಮಟ ಮಧ್ಯಾನ ಪಕಪಕಾಂತ ಯಾರೂ ನಿನ್ನ ತಂಟೆಗೆ ಬರದಂಗೆ ಮಾಡಿಕೊಡ್ತೀನಿ. ನಂಗೆ ನಿಂದೊಂದು ಹಳೆ ಶರ್ಟು ಕೊಡ್ತೀಯ?'

'ಶರ್ಟ್ ಬೇಕಾದ್ರೆ ಕೊಡ್ತೀನಿ, ಆದ್ರೆ ಅವರ ಕೂದಲು, ಮಣ್ಣು ಎಲ್ಲಿಂದ ತಂದುಕೊಡ್ಲಿ, ಹೋಗಪ್ಪ ಮಾರಾಯ' ಮುಖ್ಯಮಂತ್ರಿ ತಲೆ ಕೊಡವಿ ಒಳನಡೆದರು.

ಸಂಗತ

ಮಹಿಳಾ ಧೀಮಂತಿಕೆಯ ದ್ಯೋತಕ

ಸಂಪೂರ್ಣ ಸಮಾನತೆ ಸಾಧಿಸುವ ಭಾರತೀಯ ಮಹಿಳೆಯರ ಆಶಯಕ್ಕೆ ಗಟ್ಟಿಯಾದ ತಳಹದಿ ಹಾಕಿದ ಸಾವಿತ್ರಿಬಾಯಿ ಫುಲೆ ಅವರನ್ನು ಕೃತಜ್ಞತೆಯಿಂದ ನೆನೆಯಬೇಕಾದ ಹೊತ್ತು ಇದು

● ಡಾ. ಜ್ಯೋತಿ

ಇಂದಿನ ಭಾರತೀಯ ಮಹಿಳೆ ಸ್ಮರಿಸಬೇಕಾದ ಎರಡು ಮುಖ್ಯ ದಿನಾಚರಣೆಗಳೆಂದರೆ, ಮಾರ್ಚ್ 8 ಮತ್ತು ಜನವರಿ 3. ಅಂತರರಾಷ್ಟ್ರೀಯ ಮಟ್ಟದಲ್ಲಿ, ಮಹಿಳಾ ಹಕ್ಕು ಮತ್ತು ಸ್ವಅರಿವಿನ ಜಾಗೃತಿ ಹುಟ್ಟಿಸಿದ ಚಳವಳಿಯ ದ್ಯೋತಕವಾಗಿ ಮಾರ್ಚ್ 8 ವಿಶ್ವ ಮಹಿಳಾ ದಿನವಾಗಿ ಆಚರಿಸಲ್ಪಟ್ಟರೆ, ದೇಶದ ಅನಕ್ಷರಸ್ಥ ಮಹಿಳೆಯರಿಗೆ ಅಕ್ಷರದ ದಾರಿದೀಪ ತೋರಿಸಿದ 'ಭಾರತದ ಮೊದಲ ಶಿಕ್ಷಕಿ' ಸಾವಿತ್ರಿಬಾಯಿ ಫುಲೆಯವರ ಜನ್ಮದಿನವಾದ ಜನವರಿ 3, ಅಷ್ಟೇ ಆತ್ಮೀಯವಾಗಿ ನೆನಪಿಸಿಕೊಳ್ಳಬೇಕಾದ ದಿನ.

1831ರ ಜನವರಿ 3ರಂದು ಮಹಾರಾಷ್ಟ್ರದ ನಾಯಗಾಂವ್‌ನಲ್ಲಿ ಹಿಂದುಳಿದ ಮಾಲಿ ಸಮುದಾಯದ ರೈತ ಕುಟುಂಬದಲ್ಲಿ ಜನಿಸಿದ ಸಾವಿತ್ರಿಬಾಯಿ, ಇಂದು ದೇಶದಾದ್ಯಂತ ಪರಿಚಿತ ಹೆಸರಾಗಲು ಅವರ ಪತಿ, ಧೀಮಂತ ಸಮಾಜ ಸುಧಾರಕ, ಜ್ಯೋತಿರಾವ್ ಫುಲೆ ಅವರ ಕೊಡುಗೆ ವಿಶಿಷ್ಟವಾದುದು. ಶಿಕ್ಷಣದ ಮೂಲಕ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಬಹುದೆಂಬ ತಮ್ಮ ನಂಬಿಕೆಯನ್ನು ಜ್ಯೋತಿಬಾ, ಅನಕ್ಷರಸ್ಥೆಯಾಗಿದ್ದ ಪತ್ನಿಗೆ ಮನೆಯವರ ವಿರೋಧದ ನಡುವೆಯೂ ಅಕ್ಷರಾಭ್ಯಾಸ ಮಾಡಿಸುವುದರ ಮೂಲಕ ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದರು.

ಜ್ಯೋತಿಬಾ ಬೆಂಬಲದೊಂದಿಗೆ ಪುಣೆಯ ಶಿಕ್ಷಕ ತರಬೇತಿ ಸಂಸ್ಥೆ ಸೇರಿದ ಸಾವಿತ್ರಿಬಾಯಿ, ಅನಂತರ ತಮ್ಮ ಮನೆಯಿಂದಲೇ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲಾರಂಭಿಸಿದರು. ಬಳಿಕ ದಂಪತಿ 1848ರಲ್ಲಿ ಭಿಡೆವಾಡದಲ್ಲಿ 'ಭಾರತದ ಪ್ರಥಮ ಬಾಲಕಿಯರ ಶಾಲೆ'ಯನ್ನು ಸ್ಥಾಪಿಸಿದರು. ಶಾಲೆಗೆ ಮಕ್ಕಳನ್ನು ಸೆಳೆಯುವ ವಿನೂತನ ಯೋಜನೆಯಾಗಿ ವಿದ್ಯಾರ್ಥಿ ವೇತನ ನೀಡಲಾರಂಭಿಸಿದರು. ಹೆಣ್ಣು ಮಕ್ಕಳು ಮತ್ತು ಕೆಳಜಾತಿಯ ಮಕ್ಕಳಿಗೆ ಜ್ಞಾನ ನೀಡುವ ಇವರ ಶ್ರಮ, ಸಾಂಪ್ರದಾಯಿಕ ಮನಃಸ್ಥಿತಿಯ ಜನರ ಕೆಂಗಣ್ಣಿಗೆ ಗುರಿಯಾಯಿತು. ಶಾಲೆಗೆ ತೆರಳುವಾಗ ಸಾವಿತ್ರಿಬಾಯಿಯ ಮೇಲೆ ಸೆಗಣಿ ಎಸೆದು ಅಪಹಾಸ್ಯ ಮಾಡುತ್ತಿದ್ದರು. ಇದರಿಂದ ಮನಃಸ್ಥೈರ್ಯ ಕಳೆದುಕೊಳ್ಳದ ಸಾವಿತ್ರಿಬಾಯಿ, ಗಂಡನ ಸಲಹೆಯಂತೆ, ಶಾಲೆಯಲ್ಲಿ ಸೀರೆ ಬದಲಿಸಿಕೊಂಡು ಪಾಠ ಮಾಡುತ್ತಿದ್ದರು.

ಆದರೆ, ಸಾಮಾಜಿಕ ಪ್ರತಿರೋಧಕ್ಕೆ ಮಣಿದ ಜ್ಯೋತಿಬಾ ಮನೆಯವರು, ಈ ದಂಪತಿಯನ್ನು ಹೊರಗೆ ಹಾಕಿದ ನಂತರ ಇವರಿಗೆ ಆಶ್ರಯ ನೀಡಿ ಬೆಂಬಲಕ್ಕೆ ನಿಂತವರು, ಸ್ನೇಹಿತ ಉಸ್ಮಾನ್ ಶೇಖ್ ಕುಟುಂಬ. ಅವರ ತಂಗಿ ಫಾತಿಮಾ ಬೇಗಂ, ಸಾವಿತ್ರಿಬಾಯಿಯೊಂದಿಗೆ ಶಿಕ್ಷಕ ತರಬೇತಿ ಪಡೆದು, 'ಭಾರತದ ಮೊದಲ ಮುಸ್ಲಿಂ ಶಿಕ್ಷಕಿ' ಯೆಂಬ ಹೆಗ್ಗಳಿಕೆ ಪಡೆದರು. ಅನಂತರ, ಇಬ್ಬರೂ ಸೇರಿಕೊಂಡು ಉಸ್ಮಾನ್ ಶೇಖ್ ಮನೆಯಿಂದಲೇ ಶಾಲೆ ಆರಂಭಿಸಿದರು. ಹೀಗೆ ಪ್ರಾರಂಭವಾದ ಅವರ ಶಿಕ್ಷಣ ಸೇವೆ, ಮುಂದೆ 15 ಶಾಲೆಗಳನ್ನು ತೆರೆಯುವುದಕ್ಕೆ ಪ್ರೇರಣೆ ನೀಡಿತು. ಅವರ ಶಿಕ್ಷಣ ಸೇವೆಯನ್ನು ಗುರುತಿಸಿದ ಆಗಿನ ಬ್ರಿಟಿಷ್ ಸರ್ಕಾರವು ಸಾವಿತ್ರಿಬಾಯಿ ಅವರನ್ನು 1852ರಲ್ಲಿ 'ಅತ್ಯುತ್ತಮ ಶಿಕ್ಷಕಿ'ಯೆಂದು ಗೌರವಿಸಿತು. ಅನಂತರ ಫುಲೆ ದಂಪತಿ, ಕೃಷಿ ಮತ್ತು ಕಾರ್ಮಿಕ ವರ್ಗದವರಿಗಾಗಿ ರಾತ್ರಿ ಶಾಲೆಯನ್ನು ಆರಂಭಿಸಿದರು. ವಿದ್ಯಾರ್ಜನೆಗೆ ಆರ್ಥಿಕ ಸಮಸ್ಯೆ ಅಡ್ಡಿಯಾಗಬಾರದೆಂದು, ಮಹಾರಾಷ್ಟ್ರದಾದ್ಯಂತ 52 ಉಚಿತ ವಸತಿ ನಿಲಯಗಳನ್ನು ಸ್ಥಾಪಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಮಾತ್ರವಲ್ಲ, ಸಾಮಾಜಿಕ ಅನಿಷ್ಟಗಳನ್ನು ನಿರ್ಮೂಲನ ಮಾಡುವಲ್ಲಿಯೂ ಫುಲೆ ದಂಪತಿ ಬಹಳಷ್ಟು ಕೆಲಸ ಮಾಡಿದ್ದಾರೆ. 'ಸತ್ಯಶೋಧಕ ಸಮಾಜ'ವೆಂಬ ಸಂಸ್ಥೆಯನ್ನು ಆರಂಭಿಸಿ, ಶಿಕ್ಷಣ ಮತ್ತು ಸಮಾನತೆಯ ಅರಿವು, ವರದಕ್ಷಿಣೆ ವಿರೋಧಿ ಸರಳ ವಿವಾಹ, ಅಸ್ಪೃಶ್ಯರಿಗೆ ಕುಡಿಯುವ ನೀರಿನ ವ್ಯವಸ್ಥೆಯಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದರು. ಮಹಿಳಾ ಸೇವಾ ಮಂಡಳಿಗಳನ್ನು ಸ್ಥಾಪಿಸಿದ ಸಾವಿತ್ರಿಬಾಯಿ, ಬಾಲ್ಯವಿವಾಹ, ಹೆಣ್ಣುಭ್ರೂಣ ಹತ್ಯೆ ಹಾಗೂ ಸತಿ ಪದ್ಧತಿ ವಿರುದ್ಧ ಜಾಗೃತಿ ಅಭಿಯಾನ ಸಂಘಟಿಸಿದರು. 'ಬಾಲ್ಯತಾ ಪ್ರತಿಬಂಧಕ್ ಗೃಹ್' ಎಂಬ ಕೇಂದ್ರವನ್ನು ವಿಧವೆಯರು, ಅತ್ಯಾಚಾರಕ್ಕೆ ಒಳಗಾದವರು ಹಾಗೂ ಅವರ ಮಕ್ಕಳ ಸುರಕ್ಷತೆಗಾಗಿ ಸ್ಥಾಪಿಸಿದರು. ವಿಧವೆಯರ ಪುನರ್‌ವಿವಾಹಕ್ಕೆ ಬೆಂಬಲ ಕೊಟ್ಟರು.



ಸಾವಿತ್ರಿಬಾಯಿ ತಮ್ಮ ಸಭೆಗಳಲ್ಲಿ ಎಲ್ಲ ಜಾತಿಯ ಮಹಿಳೆಯರನ್ನು ಒಟ್ಟಿಗೆ ಕೂರಲು ಪ್ರೇರೇಪಿಸುತ್ತಿದ್ದರು. ಮಕ್ಕಳಿಲ್ಲದ ಜ್ಯೋತಿಬಾ ದಂಪತಿ, ಯಶವಂತ ರಾವ್ ಎಂಬ ಬಾಲಕನನ್ನು ದತ್ತು ಪಡೆದು, ಓದಿಸಿ ವೈದ್ಯನನ್ನಾಗಿಸಿದರು.

1890ರಲ್ಲಿ ಜ್ಯೋತಿಬಾ ನಿಧನರಾದಾಗ, ವಿರೋಧದ ನಡುವೆ ಗಂಡನ ಚಿತೆಗೆ ತಾವೇ ಅಗ್ನಿಸ್ಪರ್ಶ ಮಾಡಿ ಹೊಸ ಮುನ್ನುಡಿ ಬರೆದರು. ಗಂಡನ ಮರಣಾನಂತರ, ಅವರ ಸಾಮಾಜಿಕ ಚಟುವಟಿಕೆಗಳ ಸಂಪೂರ್ಣ ಮೇಲ್ವಿಚಾರಣೆಯನ್ನು ಸಾವಿತ್ರಿಬಾಯಿ ಯಶಸ್ವಿಯಾಗಿ ಮುನ್ನಡೆಸಿದರು. ಕವಯಿತ್ರಿಯಾಗಿದ್ದ ಸಾವಿತ್ರಿಬಾಯಿ ಎರಡು ಕಾವ್ಯಸಂಗ್ರಹವನ್ನು ಪ್ರಕಟಿಸಿದ್ದಲ್ಲದೆ, ಜ್ಯೋತಿಬಾ ಅವರ ಭಾಷಣಗಳ ಸಂಗ್ರಹವನ್ನು ಸಂಪಾದಿಸಿ ಪ್ರಕಟಿಸಿದರು. ಮಹಾರಾಷ್ಟ್ರವು ಪ್ಲೇಗ್‌ನಿಂದ ತತ್ತರಿಸಿದಾಗ, ಮಗನೊಂದಿಗೆ ಉಚಿತ ಆಸ್ಪತ್ರೆ ಪ್ರಾರಂಭಿಸಿ, ರೋಗಿಗಳ ಆರೈಕೆಯಲ್ಲಿ ತೊಡಗಿಕೊಂಡರು.

ಪ್ರಸಕ್ತ, ಭಾರತೀಯ ಮಹಿಳೆ ನಾನಾ ಕಾರಣಗಳಿಂದ ಸಂಪೂರ್ಣ ಸಮಾನತೆ ಸಾಧಿಸಿಲ್ಲದಿರಬಹುದು. ಆದರೆ, ಇದಕ್ಕೆ ಗಟ್ಟಿಯಾದ ತಳಹದಿ ಹಾಕಿ, ರೂಪುರೇಷೆಗಳನ್ನು ಸಿದ್ಧಪಡಿಸಿ, ದೇಶದ ಮಹಿಳೆಯರು ಇಷ್ಟು ದೂರ ಮುನ್ನಡೆಯಲು ಕಾಲುಗಳಿಗೆ ಶಕ್ತಿ ತುಂಬಿದ ಸಾವಿತ್ರಿಬಾಯಿ ಕೊಡುಗೆ ಸ್ಮರಣೀಯ. ಈ ದಿಸೆಯಲ್ಲಿ, ಅವರ ಜನ್ಮದಿನವನ್ನು 'ರಾಷ್ಟ್ರೀಯ ಮಹಿಳಾ ದಿನ'ವೆಂದು ಘೋಷಿಸಿ, ಅವರಿಗೆ ಕೃತಜ್ಞತೆ ಸಲ್ಲಿಸುವುದು ಸೂಕ್ತ.

ವಾಚಕರ ವಾಣಿ

ಹೊಸ ಸಂಕಲ್ಪ: ಬೇಕು ಆತ್ಮಾವಲೋಕನ

ಹೊಸ ವರ್ಷ ಬಂತೆಂದರೆ ಸಾಕು, ಕೆಲವರು 'ಜೀವನವನ್ನೇ ಸಂಪೂರ್ಣವಾಗಿ ಬದಲಾಯಿಸಿಕೊಂಡುಬಿಡುವೆ' ಎಂಬಂತೆ ಮಾತನಾಡುತ್ತಾರೆ. ಇದು ವಾಸ್ತವದಲ್ಲಿ ಎಂದಿಗೂ ಸಾಧ್ಯವಿಲ್ಲ. ಪ್ರತಿದಿನದ ನಿಶ್ಚಿತ ದೃಢಸಂಕಲ್ಪದ ಕಾರ್ಯ ಮಾತ್ರ ನಮ್ಮ ಜೀವನವನ್ನು ಬದಲಾಯಿಸಬಲ್ಲದು.

ಹೀಗಾಗಿ ಈ ಹೊಸ ವರ್ಷದಂದು ಹೊಸ ಸಂಕಲ್ಪಗಳನ್ನು ಮಾಡುವುದಕ್ಕಿಂತ, ಹಿಂದೆ ನಾವು ಮಾಡಿದ ಸಂಕಲ್ಪಗಳನ್ನು ಎಷ್ಟರಮಟ್ಟಿಗೆ ಪಾಲಿಸಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳುವುದು ಒಳ್ಳೆಯದು. ಬದಲಾಗುತ್ತಿರುವುದು ಕ್ಯಾಲೆಂಡರ್ ವಿನಾ ಜೀವನವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳೋಣ. ಮಾಡುವ ಕೆಲಸವನ್ನು ಇಚ್ಛಾಪೂರ್ವಕವಾಗಿ ಮಾಡಿದರೆ ಯಶಸ್ಸು ತಾನಾಗಿಯೇ ಸಿಗುತ್ತದೆ.

ಶರಣಬಸವ ಆರ್. ಪತ್ತಾರ, ಯಡ್ರಾಮಿ

ಯಾವ ಜೋಳಿಗೆಗಿದೆ ನೈತಿಕ ಅಧಿಕಾರ?

'ಗುರು' ಲಘುವಾದರೆ ಹೇಗೆ ಸ್ವಾಮಿ?' ಎಂಬ ರವೀಂದ್ರ ಭಟ್ಟ ಅವರ ಲೇಖನ (ಪ್ರ.ವಾ., ಡಿ. 30) ಸಕಾಲಿಕ ಹಾಗೂ ಸಮರ್ಥವಾಗಿದೆ. ಮಠಗಳ ಸ್ವಾಮಿಗಳು ರಾಜಕೀಯ ಮಾಡುತ್ತಿರುವುದರ ಬಗ್ಗೆ ಹಾಗೂ ಕೆಪಿಎಸ್‌ಸಿಯು ಭ್ರಷ್ಟ ತಿರಸ್ಕೃತ ಪಟ್ಟಿಯ ಅಭ್ಯರ್ಥಿಗಳ ಪರವಾಗಿ ಲಾಬಿಗೆ ತೊಡಗಿರುವ ಬಗ್ಗೆ ಮಾತನಾಡಿರುವುದು ಸಮಂಜಸವಿದೆ.

ಆದರೆ, ಮುಖ್ಯಮಂತ್ರಿಯೊಬ್ಬರು ಬಜೆಟ್‌ನ ಸಾರ್ವಜನಿಕ ಅಭಿವೃದ್ಧಿಯ ಹಣವನ್ನು ಮಠಗಳಿಗೆ ಅನುದಾನವಾಗಿ ನೀಡಿದಾಗ, ಆ ಹಣಕ್ಕೆ ಜೋಳಿಗೆಯೊಡ್ಡಿದಂತೆ ಜೋಳಿಗೆಯ ಪಾವಿತ್ರ್ಯದ ಜೊತೆಗೆ ಬಜೆಟ್ಟಿನ ಪಾವಿತ್ರ್ಯವನ್ನೂ ನಾಶ ಮಾಡಿರುವಾಗ, ಭ್ರಷ್ಟಾಚಾರವನ್ನೂ ಲಂಚಗುಳಿತನವನ್ನೂ ಸ್ವಜನಪಕ್ಷಪಾತವನ್ನೂ ಜೋಳಿಗೆಗೆ ಹಾಕಿಸಿಕೊಳ್ಳುವ ನೈತಿಕ ಅಧಿಕಾರವನ್ನು ಯಾವ ಜೋಳಿಗೆ ಉಳಿಸಿಕೊಂಡಿದೆ? ಹುಡುಕಬೇಕಿದೆ.

ಎಸ್.ಜಿ.ಸಿದ್ಧರಾಮಯ್ಯ, ಬೆಂಗಳೂರು

ಮೌಢ್ಯ ತೊಲಗಲಿ, ವೈಚಾರಿಕ ಪ್ರಜ್ಞೆ ಮೂಡಲಿ

ಗೂಬೆಗಳ ಸಂತತಿ ವಿನಾಶದತ್ತ ಸಾಗಿರುವುದರ ಕುರಿತು ಅಖಿಲೇಶ್ ಚಿಪ್ಪಳಿ ಬರೆದಿದ್ದಾರೆ (ಸಂಗತ, ಡಿ. 31). ಗೂಬೆಗಳ ಬಗ್ಗೆ ನಮ್ಮಲ್ಲಿರುವ ಅಜ್ಞಾನವೇ ಅವುಗಳ ಸಂತತಿ ಕ್ಷೀಣಿಸಲು ಪ್ರಮುಖ ಕಾರಣ ಎಂದು ಊಹಿಸಬಹುದು. ಬಹುತೇಕ ಎಲ್ಲ ಜೀವಿಗಳ ಬಗ್ಗೆ ಒಂದಿಲ್ಲೊಂದು ರೀತಿಯ ಅಜ್ಞಾನ ನಮ್ಮಲ್ಲಿದೆ. ಊಸರವಳ್ಳಿಯ ವಿಷವಾಯುವಿನಿಂದ ಸಾವುಂಟಾಗುತ್ತದೆ, ರತ್ನಪಕ್ಷಿಯ ಹಸಿರಕ್ತ ವಿವಿಧ ರೋಗಗಳಿಗೆ ರಾಮಬಾಣ, ಮುಂಜಾನೆ ನರಿ ಮುಖ ನೋಡಿದರೆ ಶುಭಶಕುನ, ಕಾಗೆಗಳ ಗುಂಪು ಒಟ್ಟಾಗಿ ಸೇರಿ ಕೂಗಿದರೆ ಸಾವಿನ ಸೂಚನೆ... ಹೀಗೆ ಬರೆಯುತ್ತಾ ಹೋದರೆ ಚಿತ್ರ ವಿಚಿತ್ರ ಮೌಢ್ಯಗಳ ಕೋಶ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಮನುಷ್ಯ ತನ್ನನ್ನು ಹೊರತುಪಡಿಸಿ ಉಳಿದ ಎಲ್ಲ ಜೀವಿಗಳಲ್ಲೂ ಒಂದಿಲ್ಲೊಂದು ಲೋಪವನ್ನು ಹುಡುಕಿ, ಆ ಮೂಲಕ ಅವುಗಳ ಸಂತತಿಗೆ ಅಪಾಯವನ್ನು ಉಂಟುಮಾಡುತ್ತಿದ್ದಾನೆ. ಈ ಮೌಢ್ಯಕ್ಕೆ ಲೆಕ್ಕವಿಲ್ಲದಷ್ಟು ಜೀವಿಗಳು ಪ್ರತಿದಿನವೂ ಬಲಿಯಾಗುತ್ತಿವೆ.

ಕಾನೂನು ಕಟ್ಟಳೆಗಳಿಂದ ತಕ್ಕಮಟ್ಟಿಗೆ ಇವುಗಳನ್ನು ತಡೆಯಬಹುದು. ಆದರೆ ನಿರೀಕ್ಷಿತ ಮಟ್ಟದಲ್ಲಿ ಇವುಗಳನ್ನು ತೊಡೆದುಹಾಕಲು ಜನರಲ್ಲಿ ವೈಚಾರಿಕ ಪ್ರಜ್ಞೆ ಮೂಡಬೇಕು ಮತ್ತು ಈ ಕೆಲಸವನ್ನು ಸಾಮಾಜಿಕ ಜಾಲತಾಣಗಳು, ಮಾಧ್ಯಮಗಳು, ಶಾಲೆಗಳು ಮಾಡಬೇಕು. ಜೊತೆಗೆ ಜನರಲ್ಲಿ ವೈಚಾರಿಕತೆಯನ್ನು ಬೆಳೆಸಬೇಕಿರುವುದು ಸಮಾಜದ ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಆ ದಿಸೆಯಲ್ಲಿ ಸಾಗಿದಾಗ ಮಾತ್ರ ಇಂತಹ ಮುಗ್ಧ ಜೀವಿಗಳು ಬದುಕಲು ಸಾಧ್ಯ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಒಂದೇ ಮನವಿ

ಓ... 2022
ನಿನ್ನ ಹತ್ತಿರ ನಾನು
ಕೇಳಿಕೊಳ್ಳುವುದು
ಒಂದೇ ಒಂದು.
ಅದೆಂದರೆ....
2021 ಪರವಾಗಿಲ್ಲವಾಗಿತ್ತು
ಅಂತ ಮಾತ್ರ ಅನ್ನಿಸಬೇಡ...!

ವಿ.ವಿಜಯೇಂದ್ರ ರಾವ್
ಬೆಂಗಳೂರು

ಕನ್ನಡ: ಕಳಚಬೇಕಿದೆ ಶುದ್ಧತೆಯ ಬಂಧನ

ಸೃಜನಶೀಲ ಭಾಷೆಗಳು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಉಚ್ಚಾರಣೆ ಮತ್ತು ಪದ ಪ್ರಯೋಗಗಳಲ್ಲಿ ಬದಲಾಗುವುದು ಸ್ವಾಭಾವಿಕವೆಂಬ ಅರಿವು ಇಂದು ಸಾಮಾನ್ಯವಾಗಿದೆ. ಕನ್ನಡದಲ್ಲಿ, ಆಡುವ ಭಾಷೆ ಶುದ್ಧವಾಗಿರಬೇಕೆಂಬ ಅಭಿಪ್ರಾಯ ಇಂದು ಬಲಗೊಳ್ಳುತ್ತಿದೆ. ಆದರೆ ಶುದ್ಧ ಭಾಷೆಯೆಂದರೆ ಯಾವುದು? ಬರವಣಿಗೆಯ ಕನ್ನಡವೇ? ಪಾಣಿನಿ, ಪಿಂಗಳ ಮತ್ತಿತರ ವ್ಯಾಕರಣಕಾರರು ಸಂಸ್ಕೃತವನ್ನು ಹಲವು ಸೂತ್ರಗಳಲ್ಲಿ ಬಂಧಿಸಿ ಅದನ್ನು ಬರೀ ಕಲಿತವರಿಗೆ ಸೀಮಿತಗೊಳಿಸಿದ್ದು ಭಾರತದಲ್ಲಿ ಶುದ್ಧ ಭಾಷೆಯೆನ್ನುವ ಭ್ರಮೆ ಮೂಡಲು ಕಾರಣ. ಭಾಷೆ ಎಲ್ಲರಿಗೂ ಸುಲಭವಾಗಿ ದಕ್ಕದೆನ್ನುವ ಕಲಿತವರ ಅಹಂಕಾರ ಮತ್ತು ಕಲಿಯದವರ ಕಡೆಗಿನ ಪೂರ್ವಗ್ರಹಗಳು ಈ ಭ್ರಮೆಯನ್ನು ಜೀವಂತವಾಗಿಟ್ಟಿವೆ. ಇಂತಹ ಶುದ್ಧತೆಯ ಅವಶ್ಯಕತೆಯಿಂದಲೇ ಆರಂಭಿಕ ಕನ್ನಡದ ಬರವಣಿಗೆಗಳು ಜನಸಾಮಾನ್ಯರನ್ನು ದೂರವಿಟ್ಟವು.


19ನೇ ಶತಮಾನದ ಉತ್ತರ ಭಾಗದಿಂದ ಕನ್ನಡ ಬರವಣಿಗೆ ಸರಳಗೊಂಡು ಜನಸಾಮಾನ್ಯರಿಗೆ ಹತ್ತಿರವಾದರೂ ಅದು ಹೆಚ್ಚಾಗಿ ಪುಸ್ತಕ ಮತ್ತು ಮಾಧ್ಯಮಗಳಿಗೆ ಸೀಮಿತವಾಗಿದೆ. ಮೌಖಿಕ ಸಂವಹನೆಯಲ್ಲಿ ಹೆಚ್ಚಾಗಿ ಬಳಸದ ಈ ಭಾಷೆಯನ್ನೇ ಪ್ರಮಾಣಿತ ಕನ್ನಡವಾಗಿ ಏಕೆ ಬಳಸಬೇಕು? ಶುದ್ಧತೆಯ ಭರದಲ್ಲಿ ನಾವು ಆಡುಭಾಷೆಗಳನ್ನು ನಿರ್ಲಕ್ಷಿಸಿದ ಪರಿಣಾಮ, ಇಂದು ಕೆಲವು ಗ್ರಾಮ್ಯ ಕನ್ನಡಗಳನ್ನು ಕೇಳಿದಾಗ 'ಇವು ಕನ್ನಡವೇ' ಎಂದು ಅನುಮಾನ ಹುಟ್ಟುವಂತಾಗಿದೆ. ಉಪಭಾಷೆಗಳ ವಿಭಿನ್ನ ಉಚ್ಚಾರ ಮತ್ತು ಪದ ಪ್ರಯೋಗಗಳು ನಮ್ಮಲ್ಲಿ ಕುತೂಹಲ ಮೂಡಿಸಬೇಕೇ ವಿನಾ ತಿರಸ್ಕಾರವನ್ನಲ್ಲ. ಆಡುಭಾಷೆಗಳು ಶುದ್ಧವಾಗುವ ಬದಲು ಕನ್ನಡವೇ ಶುದ್ಧತೆಯ ಬಂಧನ ಕಳಚಿಕೊಂಡರೆ ಒಳಿತು.

ಸುನೀಲ ನಾಯಕ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪದವಿಪೂರ್ವ ಕಾಲೇಜುಗಳಲ್ಲಿ ಸೂರ್ಯ ನಮಸ್ಕಾರ ಆಚರಣೆ ಸರಿಯಾದ ನಿರ್ಧಾರವೇ?

ಏಕಾಗ್ರತೆ ಹೆಚ್ಚಿಸಲು ಸೂರ್ಯ ನಮಸ್ಕಾರ



ವಯೋಸಹಜ ಚಂಚಲತೆಯಿಂದ ಪಠ್ಯಕ್ರಮದ ಮೇಲೆ ಗಮನ ಕೇಂದ್ರೀಕರಿಸಲಾಗದ ಮಕ್ಕಳಿಗೆ, ಸೂರ್ಯ ನಮಸ್ಕಾರ ಅಭ್ಯಾಸ ಮಾಡಿಸುವುದರಿಂದ ಅವರ ಏಕಾಗ್ರತೆ, ಮನೋಬಲ ಹೆಚ್ಚುತ್ತದೆ. ದೇಹಾರೋಗ್ಯವನ್ನು ಸದೃಢಗೊಳಿಸುವುದು, ಏಕಾಗ್ರತೆ ಹೆಚ್ಚಿಸುವ ಉದ್ದೇಶದಿಂದ ಕಾಲೇಜು ವಿದ್ಯಾರ್ಥಿಗಳಿಗೆ ಸೂರ್ಯ ನಮಸ್ಕಾರ ಅಭ್ಯಸಿಸಲು ಶಿಕ್ಷಣ ಇಲಾಖೆಯಿಂದ ಆದೇಶ ಹೊರಡಿಸಲಾಗಿದೆ

• ಬಿ.ಸಿ. ನಾಗೇಶ್



ಉಜ್ವಲ ಭಾರತ ನಿರ್ಮಿಸುವ ಭವಿಷ್ಯದ ಕಟ್ಟಾಳುಗಳಾದ ವಿದ್ಯಾರ್ಥಿಗಳ ದೈಹಿಕ, ಮಾನಸಿಕ ಆರೋಗ್ಯವನ್ನು ಸದೃಢಗೊಳಿಸಿ, ಉತ್ತಮ ನಾಗರಿಕರಾಗಿ ರೂಪಿಸುವ ಸದುದ್ದೇಶದಿಂದ ಜಾರಿಗೆ ತಂದಿರುವ 'ಸೂರ್ಯ ನಮಸ್ಕಾರ' ಕಾರ್ಯಕ್ರಮವನ್ನು ರಾಜಕೀಯ ಕಾರಣಕ್ಕೆ ವಿರೋಧಿಸುವುದು ಸಲ್ಲದು. ಇವತ್ತಿನ ದಿನಮಾನಗಳಲ್ಲಿ ಭಾರತ ಮಾತ್ರವಲ್ಲದೇ, ಹೊರಜಗತ್ತಿನ ನಾನಾ ದೇಶಗಳ ಜನರು ಯೋಗವನ್ನು ಜೀವನದ ಅವಿಭಾಜ್ಯ ಅಂಗವಾಗಿಸಿಕೊಂಡಿದ್ದಾರೆ. ಅಂತಹ ಯೋಗ ಪ್ರಮುಖ ಆಸನವೇ ಸೂರ್ಯನಮಸ್ಕಾರ. ಮೌಢ್ಯವನ್ನು ತುಂಬುವ ಅಥವಾ ವಿದ್ಯಾರ್ಥಿಗಳಲ್ಲಿ ಅವೈಚಾರಿಕತೆಯನ್ನು ಬೆಳೆಸುವ ಉದ್ದೇಶ ಇದರ ಹಿಂದಿಲ್ಲ. ಸಶಕ್ತ ಯುವಜನ– ಸದೃಢ ಭಾರತ ಎಂಬ ಸಂಕಲ್ಪ ಬಲದಲ್ಲಿ ಇದನ್ನು ಅನುಷ್ಠಾನಕ್ಕೆ ತರಲು ಸರ್ಕಾರ ಮುಂದಾಗಿದೆ.

ಹಿಂದಿನ ಕಾಲದಲ್ಲಿ ಜನರು ಚಟುವಟಿಕೆಯಿಂದ ಇರುತ್ತಿದ್ದರು. ದೈನಂದಿನ ಕೆಲಸ ಕಾರ್ಯಗಳಿಂದ ದೈಹಿಕ ಶ್ರಮ, ವ್ಯಾಯಾಮ ಆಗುತ್ತಿತ್ತು. ಆರೋಗ್ಯಕರ ಜೀವನ ಶೈಲಿ, ವಿಷ ರಹಿತ ಆಹಾರ, ಅಗತ್ಯದಷ್ಟು ಶ್ರಮ ಕೂಡಿದ ಬದುಕಿನಿಂದಾಗಿ ಯಾವುದೇ ಕಾಯಿಲೆ ಹತ್ತಿರ ಸುಳಿಯುತ್ತಿರಲಿಲ್ಲ. ಕಾಯಿಲೆಗಳು ಬಂದರೂ ರೋಗ ನಿರೋಧಕ ಶಕ್ತಿಯಿಂದ ವಾಸಿಯಾಗುತ್ತಿದ್ದವು. ಆದರೆ, ನಾಗರಿಕತೆ ಬೆಳೆದಂತೆ ದೈಹಿಕ ಶ್ರಮ ಕಡಿಮೆಯಾಯಿತು.

ಕೈಗಾರಿಕಾ ಕ್ರಾಂತಿ, ಯಂತ್ರೋಪಕರಣಗಳ ಬಳಕೆ ಹಾಗೂ ಅವಲಂಬನೆ ಆರಂಭವಾಗುತ್ತಿದ್ದಂತೆ ಮನುಷ್ಯನ ದೈಹಿಕ, ಮಾನಸಿಕ ಕಾಯಿಲೆಗಳು ಹೆಚ್ಚಾದವು. ಅದರಲ್ಲೂ 21ನೇ ಶತಮಾನದಲ್ಲಿ ಯಂತ್ರಜ್ಞಾನ, ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನದ ಸಾರ್ವತ್ರಿಕ ಲಭ್ಯತೆಯಿಂದ ದೈಹಿಕ ಶ್ರಮವೆಂಬುದೇ ಇಲ್ಲದಂತಾಗಿದೆ. ಹೀಗಾಗಿ ಬೊಜ್ಜು ಹಾಗೂ ಇನ್ನಿತರ ಕಾಯಿಲೆಗಳು ಮನುಕುಲದ ಭಾಗವಾಗಿವೆ. ಬೆಳೆಯುವ ವಯಸ್ಸಿನಲ್ಲೇ ಸಕ್ಕರೆ ಕಾಯಿಲೆ, ಹೃದ್ರೋಗ, ಮಾನಸಿಕ ಖಿನ್ನತೆಯಂತಹ ಸಮಸ್ಯೆಗಳು ಮಕ್ಕಳನ್ನು ಬಾಧಿಸುತ್ತಿವೆ. ಮಕ್ಕಳ ಆರೋಗ್ಯ, ಶೈಕ್ಷಣಿಕ ಬೆಳವಣಿಗೆ ದೃಷ್ಟಿಯಿಂದ ಗಹನವಾಗಿ ಯೋಚನೆ ಮಾಡಿರುವ ಕೇಂದ್ರ ಶಿಕ್ಷಣ ಇಲಾಖೆ, ವಿದ್ಯಾರ್ಥಿಗಳಿಗೆ 'ಸೂರ್ಯ ನಮಸ್ಕಾರ' ಅಭ್ಯಾಸ ಮಾಡಿಸುವ ಪ್ರಯತ್ನಕ್ಕೆ ಮುಂದಾಗಿದೆ.

ಸೂರ್ಯ ನಮಸ್ಕಾರ ಯೋಗದ ಭಾಗ: ಹನ್ನೆರೆಡು ಪ್ರಮುಖ ಯೋಗ ಆಸನಗಳನ್ನು ಒಳಗೊಂಡಿರುವ 'ಸೂರ್ಯ ನಮಸ್ಕಾರ'ವನ್ನು ನಿಯಮಿತವಾಗಿ ಮಾಡುವುದರಿಂದ ಹೃದಯ ಹೆಚ್ಚು ಸಕ್ರಿಯಗೊಂಡು, ದೇಹಕ್ಕೆ ಚೈತನ್ಯ ತುಂಬಿ ಆರೋಗ್ಯ ಉತ್ತಮಗೊಳ್ಳುತ್ತದೆ. ಸೂರ್ಯ ನಮಸ್ಕಾರ ಬರೀ ದೈಹಿಕ ಆರೋಗ್ಯ ಮಾತ್ರವಲ್ಲದೇ ಮನಸ್ಸು ಮತ್ತು ಮೆದುಳು ಆಹ್ಲಾದಗೊಳ್ಳುತ್ತವೆ. ಇದರಿಂದ ದೈನಂದಿನ ಕೆಲಸ ಕಾರ್ಯಗಳಲ್ಲಿ ಲವಲವಿಕೆಯಿಂದ ತೊಡಗಿಸಿಕೊಳ್ಳಲು ಮತ್ತು ಪೂರ್ಣ ಪ್ರಮಾಣದಲ್ಲಿ ಮಗ್ನರಾಗಲು ಸಾಧ್ಯವಾಗುತ್ತದೆ.

ಸೂರ್ಯ ನಮಸ್ಕಾರವನ್ನು ಪ್ರತಿನಿತ್ಯ ಬೆಳಗ್ಗೆ ಮಾಡುವುದರಿಂದ ಎಲ್ಲ ರೀತಿಯ ಆರೋಗ್ಯ ಸಮಸ್ಯೆಗಳಿಂದ ದೂರವಿರಬಹುದು ಎನ್ನುತ್ತಾರೆ ಯೋಗ ತಜ್ಞರು. ಯೋಗಾಸನದ ಅಗಣಿತ ಪ್ರಯೋಜನಗಳ ಕುರಿತು ಸಂಶೋಧನೆ, ಅಧ್ಯಯನ ನಡೆಸಲು ದೆಹಲಿಯ 'ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ' ಕಾರ್ಯ ನಿರ್ವಹಿಸುತ್ತಿದೆ.

ಸಾವಿರಾರು ವರ್ಷಗಳಿಂದ ಯೋಗಾಸನವು ಭಾರತೀಯರ ಜೀವನ ಶೈಲಿಯ ಭಾಗವಾಗಿದೆ. ಪ್ರತಿದಿನ ಬೆಳಗ್ಗೆ ಸೂರ್ಯನಿಗೆ ಅಭಿಮುಖವಾಗಿ ಮಾಡುವ ಸೂರ್ಯ ನಮಸ್ಕಾರದಿಂದ ದೇಹಾರೋಗ್ಯಕ್ಕೆ ನೂರಾರು ಪ್ರಯೋಜನಗಳಿವೆ. ಸಕಲ ಜೀವರಾಶಿಗೆ ಮೂಲವಾಗಿರುವ ಸೂರ್ಯನ ಕಡೆ ಮುಖ ಮಾಡಿ ಎಳೆ ಬಿಸಿಲಿಗೆ ಮೈ ಒಡ್ಡಿ ಸೂರ್ಯ ನಮಸ್ಕಾರ ಮಾಡುವ ಪದ್ಧತಿ ಭಾರತೀಯ ಪರಂಪರೆಯಲ್ಲಿದೆ. ಮೈ ಮೇಲೆ ಬೀಳುವ ಎಳೆಬಿಸಿಲು ಚರ್ಮ ರೋಗಗಳು ಬಾರದಂತೆ ತಡೆಯುತ್ತದೆ ಎನ್ನುತ್ತವೆ ಅನೇಕ ಸಂಶೋಧನೆಗಳು.

ಸೂರ್ಯ ನಮಸ್ಕಾರ ಧಾರ್ಮಿಕ ಕ್ರಿಯೆ ಅಲ್ಲ; ಅದೊಂದು ಸೌಖ್ಯ ನೀಡುವ ಅತ್ಯುತ್ತಮ ಆಸನ. ಅದರ ಅಭ್ಯಾಸಕ್ಕೆ ಯಾವುದೇ ಗಡಿ, ಧರ್ಮದ ಬೇಲಿ ಇಲ್ಲ. ಧರ್ಮದ ಹೇರುವಿಕೆಯೂ ಅಲ್ಲ. ಹೀಗಿರುವಾಗ, ವಿನಾಕಾರಣ ಸೂರ್ಯ ನಮಸ್ಕಾರವನ್ನು ವಿರೋಧಿಸುವುದು ಭವಿಷ್ಯದ ಪ್ರಜೆಗಳು ಸಾಗಲೇಬೇಕಾದ ಆರೋಗ್ಯಕರ ದಾರಿಗೆ ಅಡ್ಡಗೋಡೆ ಕಟ್ಟಿದಂತೆ.

ಇಡೀ ಜಗತ್ತನ್ನೆ ಕಂಗೆಡಿಸುತ್ತಿರುವ ಕೋವಿಡ್‌ನಿಂದ ರಕ್ಷಿತವಾಗಿರಲು ಆಯುರ್ವೇದ, ಅಲೋಪತಿ ಮತ್ತು ಇನ್ನಿತರ ಎಲ್ಲ ವೈದ್ಯಕೀಯ ಸಮುದಾಯವರು ಯೋಗಾಸನ ಮಾಡಲು ಸಲಹೆ ನೀಡುತ್ತಿದ್ದಾರೆ. ಅದರಲ್ಲೂ ಬೆಳಗ್ಗೆ 'ಸೂರ್ಯ ನಮಸ್ಕಾರ' ಮಾಡಿದರೂ ಸಾಕು ಎಂದೂ ಸಲಹೆ ನೀಡಿದ್ದಾರೆ. ಕೋವಿಡ್ ತೀವ್ರವಾಗಿ ಕಾಣಿಸಿಕೊಂಡವರಿಗೆ ಉಸಿರಾಟ ಸಮಸ್ಯೆ ಎದುರಾಗುತ್ತದೆ. ಅಂತಹವರಿಗೆ ಉಸಿರಾಟದ ವ್ಯಾಯಾಮಗಳನ್ನು ಮಾಡಿಸಲಾಗುತ್ತದೆ. ಸೂರ್ಯ ನಮಸ್ಕಾರ ಮಾಡುವುದರಿಂದ ಶ್ವಾಸಕೋಶಗಳಿಗೆ ವ್ಯಾಯಾಮವಾಗಿ ಉಸಿರಾಟ ಪ್ರಕ್ರಿಯೆ ಉತ್ತಮಗೊಳ್ಳುತ್ತದೆ. ದೇಹದ ಎಲ್ಲ ಅಂಗಾಂಗಳಿಗೆ ಆಮ್ಲಜನಕ ಪೂರೈಕೆ ಹೆಚ್ಚಳವಾಗುತ್ತದೆ.

ವಯೋಸಹಜ ಚಂಚಲತೆಯಿಂದ ಪಠ್ಯಕ್ರಮದ ಮೇಲೆ ಗಮನ ಕೇಂದ್ರೀಕರಿಸಲಾಗದ ಮಕ್ಕಳಿಗೆ, ಸೂರ್ಯ ನಮಸ್ಕಾರ ಅಭ್ಯಾಸ ಮಾಡಿಸುವುದರಿಂದ ಅವರ ಏಕಾಗ್ರತೆ, ಮನೋಬಲ ಹೆಚ್ಚುತ್ತದೆ. ದೇಹಾರೋಗ್ಯವನ್ನು ಸದೃಢಗೊಳಿಸುವುದು, ಏಕಾಗ್ರತೆ ಹೆಚ್ಚಿಸುವ ಉದ್ದೇಶದಿಂದ ಕಾಲೇಜು ವಿದ್ಯಾರ್ಥಿಗಳಿಗೆ ಸೂರ್ಯ ನಮಸ್ಕಾರ ಅಭ್ಯಸಿಸಲು ಶಿಕ್ಷಣ ಇಲಾಖೆಯಿಂದ ಆದೇಶ ಹೊರಡಿಸಲಾಗಿದೆ. ಈ ಉತ್ತಮ ಕಾರ್ಯಕ್ಕೆ ಧರ್ಮ ಮತ್ತು ರಾಜಕೀಯವನ್ನು ಬೆರೆಸಲು ಕೆಲ ವ್ಯಕ್ತಿಗಳು ಯತ್ನಿಸುತ್ತಿರುವುದು ದುರಾದೃಷ್ಟಕರ.

ಭಾರತೀಯ ಸಂಸ್ಕೃತಿ ಪರಂಪರೆಯ ಭಾಗವಾಗಿರುವ ಸೂರ್ಯ ನಮಸ್ಕಾರ/ಯೋಗಾಸನ ಸಾರ್ವತ್ರಿಕಗೊಳಿಸುವುದಕ್ಕೆ ವಿರೋಧ ವ್ಯಕ್ತವಾಗಿತ್ತು. ವಿರೋಧಿಸುವ ವ್ಯಕ್ತಿಗಳು, ಗುಂಪುಗಳಿಗೆ ಸೂರ್ಯ ನಮಸ್ಕಾರದ ಪ್ರಯೋಜನಗಳು ತಿಳಿದಿದ್ದರೂ, ಕೇವಲ ವಿರೋಧಿಸಬೇಕು ಎಂಬ ಕಾರಣಕ್ಕೆ ಅಡ್ಡಮಾತುಗಳನ್ನು ಆಡಿದ್ದರು. ವಿಶ್ವ ಆರೋಗ್ಯ ಸಂಸ್ಥೆ ಸೇರಿದಂತೆ ಜಗತ್ತಿನ ಅನೇಕ ತಜ್ಞರು ಯೋಗಾಸನಕ್ಕೆ ಜೈ ಎಂದಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಯೋಗಾಸನವನ್ನು ಆಧುನಿಕ ಜಗತ್ತಿಗೆ ವ್ಯಾಪಕ ಪ್ರಮಾಣದಲ್ಲಿ ಪಸರಿಸಲು ಕಾರಣರಾಗಿದ್ದಾರೆ. ಯೋಗಕ್ಕೆ ಜಾಗತಿಕ ಮನ್ನಣೆ ದೊರಕಿ, ಆರೋಗ್ಯದ ಪ್ರಯೋಜನಗಳ ತಿಳಿವಳಿಕೆಯ ಪರಿಣಾಮ 'ವಿಶ್ವ ಸಂಸ್ಥೆ' ಪ್ರತಿ ವರ್ಷ ಜೂನ್ 21ರಂದು ವಿಶ್ವ ಯೋಗ ದಿನವಾಗಿ ಘೋಷಿಸಿದೆ.

ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಈಗ ಪ್ರಧಾನಿ ಮೋದಿಯವರು ಯೋಗದ ಮಹತ್ವವನ್ನು ಜಗತ್ತಿಗೆ ಸಾರುತ್ತಿದ್ದಾರೆ.

ಇಂದಿನ ಮಕ್ಕಳಿಗೆ ಯೋಗಾಸನ ಮತ್ತು ಸೂರ್ಯ ನಮಸ್ಕಾರದ ಅಗತ್ಯತೆ ಇದೆ. ಮಕ್ಕಳು ಬಹಳಷ್ಟು ಸಮಯವನ್ನು ಮೊಬೈಲ್‌ಫೋನ್, ಟಿವಿ, ಕಂಪ್ಯೂಟರ್ ನೋಡುವುದರಲ್ಲಿ ಕಳೆಯುತ್ತಿದ್ದಾರೆ. ದಿನದಿಂದ ದಿನಕ್ಕೆ ವಿದ್ಯಾರ್ಥಿಗಳು ಪುಸ್ತಕ ಹಿಡಿದು ಓದುವುದು, ಬರೆಯುವುದನ್ನು ಕಡಿಮೆ ಮಾಡುತ್ತಿದ್ದಾರೆ. ತರಗತಿ ಹೊರತಾದ ಸಂದರ್ಭಗಳಲ್ಲಿ ಮಕ್ಕಳಿಂದ ಮೊಬೈಲ್ ಬಳಕೆ ಅತಿಯಾಗಿದೆ. ಇದರಿಂದ ಮನೆಯಲ್ಲಿ ಕಿತ್ತಾಟಗಳು, ಅಶಾಂತಿಯ ವಾತಾವರಣ ಸೃಷ್ಟಿಯಾಗುತ್ತಿದೆ. ಅತಿಯಾಗಿ ಮೊಬೈಲ್ ಬಳಸುವುದರಿಂದ ಸಾಕಷ್ಟು ಮಕ್ಕಳಲ್ಲಿ ಕೈ, ಕತ್ತು, ಬೆನ್ನು ನೋವು, ತಲೆ ನೋವು, ಕಣ್ಣು ನೋವು, ಕಣ್ಣು ಉರಿ, ಕಣ್ಣಲ್ಲಿ ನೀರು ಬರುವುದು ಮುಂತಾದ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಇಂತಹ ಸಮಸ್ಯೆಗಳಿಗೆ ಸೂರ್ಯನಮಸ್ಕಾರ ಪರಿಹಾರೋಪಾಯ ಎಂದು ಯೋಗತಜ್ಞರೇ ಸಲಹೆ ನೀಡುತ್ತಾರೆ.

ಮೊಬೈಲ್ ವ್ಯಸನದಿಂದ ಕಳೆದುಕೊಂಡಿದ್ದ ಏಕಾಗ್ರತೆಯನ್ನು ಪುನಃ ಸಾಧಿಸಲು ಸೂರ್ಯ ನಮಸ್ಕಾರ ಬಹುದೊಡ್ಡ ಪಾತ್ರವನ್ನು ವಹಿಸಲಿದೆ. ಈ ಹವ್ಯಾಸವನ್ನು ಮುಂದುವರೆಸುವುದರಿಂದ ದೀರ್ಘಾವಧಿಯಲ್ಲಿ ಆರೋಗ್ಯದ ಅನುಕೂಲಗಳು ಇವೆ. ಇದು ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೂ ನೆರವಾಗುತ್ತದೆ.

ಪರೀಕ್ಷೆಗಳನ್ನು ಬರೆಯುವ ಜೊತೆಗೆ, ನಿಯೋಜಿತ ಕಾರ್ಯಗಳು, ಪ್ರಾಜೆಕ್ಟ್‌ಗಳನ್ನು ವಿದ್ಯಾರ್ಥಿಗಳು ಮಾಡಬೇಕಾಗುತ್ತದೆ. ಶೈಕ್ಷಣಿಕ ಜೀವನದ ಭಾಗವಾಗಿ ಈ ಎಲ್ಲ ಚಟುವಟಿಕೆಗಳನ್ನು ಪೂರ್ಣಗೊಳಿಸಬೇಕೆಂದರೆ ನೆನಪಿನ ಶಕ್ತಿಯು ಉತ್ತಮವಾಗಿ ಇರಲೇಬೇಕು. ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಬೇಕೆಂದರೆ ಎಲ್ಲದರಲ್ಲೂ ಪರಿಪೂರ್ಣತೆಯನ್ನು ಸಾಧಿಸುವ ಛಲ ಇರಬೇಕು. ಆದರೆ, ಬಹಳಷ್ಟು ಮಕ್ಕಳಿಗೆ ನೆನಪಿನ ಶಕ್ತಿಯ ಕೊರತೆ ಕಾಡುತ್ತದೆ. ಓದಿದ್ದು ಅಥವಾ ಬರೆದಿದ್ದು ದೀರ್ಘಾವಧಿ ನೆನಪಿನಲ್ಲಿ ಉಳಿಯುವುದಿಲ್ಲ ಎಂದು ದೂರುತ್ತಾರೆ. ಸಾಕಷ್ಟು ಓದಿಕೊಂಡು, ಅರಿತುಕೊಂಡಿದ್ದರೂ ಪರೀಕ್ಷಾ ಕೊಠಡಿಗೆ ತೆರಳುತ್ತಿದ್ದಂತೆ ಗಾಬರಿ, ಭಯದಿಂದ ಪರೀಕ್ಷೆಯನ್ನು ಸರಿಯಾಗಿ ಬರೆಯಲು ಆಗುವುದಿಲ್ಲ. ಈ ಎಲ್ಲ ಸಮಸ್ಯೆಗಳಿಗೆ ಸೂರ್ಯ ನಮಸ್ಕಾರ, ಯೋಗಾಸನದಿಂದ ಪರಿಹಾರವಿದೆ ಎನ್ನುತ್ತಾರೆ ಯೋಗ ತಜ್ಞರು.

ಸರ್ಕಾರದ ಕಾರ್ಯಕ್ರಮವನ್ನು ವಿರೋಧಿಸಲೇಬೇಕೆಂಬ ಹಟಕ್ಕೆ ಬಿದ್ದವರು ತಮ್ಮ ಮನೆಯ ಮಕ್ಕಳು, ಮೊಮ್ಮಕ್ಕಳ ಆರೋಗ್ಯದ ಹಿತವನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿದರೆ ಅಂತಹವರ ಕುಟುಂಬ, ಪರೋಕ್ಷವಾಗಿ ನಾಡು, ದೇಶ ಎಲ್ಲವೂ ಆರೋಗ್ಯಕರವಾದೀತು.

ಲೇಖಕರು: ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು



ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಹೊಸ ವರ್ಷ: ಬದುಕಿನ ಮೌಲ್ಯಮಾಪನ ದಿನ

ಭೂಮಿಯ ಕಾಲಗತಿಯ ಜೊತೆಜೊತೆಯಲ್ಲೇ ಪ್ರತಿಯೊಂದು ಜೀವಿಯ ವೈಯಕ್ತಿಕ ಕಾಲಗಣನೆಯೂ ನಡೆಯುತ್ತಿರುತ್ತದೆ. ದಿನಗಳು ಉರುಳಿದಂತೆ ನಮ್ಮ ಜೀವಿತದ ಅವಧಿಗಳು ಮುಗಿಯುತ್ತಹೋಗುತ್ತವೆ. ಭೂಮಿ ತಿರುಗಿದಂತೆ ನಮ್ಮ ಬದುಕು ಸಹ ಸಾಗಲೇ ಬೇಕು. ನಮಗಿಷ್ಟವಿರಲಿ, ಇಲ್ಲದಿರಲಿ, ಪ್ರತಿಕ್ಷಣ ಪ್ರಕೃತಿಯೊಂದಿಗೆ ನಾವು ಹೆಜ್ಜೆ ಹಾಕುತ್ತಲೇ ಇರಬೇಕು. ಕೊನೆಗೊಂದು ದಿನ ಕಾಲಗತಿಯೊಂದಿಗೆ ಹೆಜ್ಜೆ ಹಾಕಲು ಸಾಧ್ಯವಾಗದೇ ಇದ್ದಾಗ ನಮ್ಮ ಜೀವನಪಯಣ ಮುಕ್ತಾಯಗೊಳ್ಳುತ್ತೆ. ಇದು ಜೀವಕಾಯಕ್ಕೆ ಮಾತ್ರವಲ್ಲ, ಭೂಮಿ-ಸೂರ್ಯರಂಥ ಗ್ರಹ-ನಕ್ಷತ್ರಕಾಯಗಳಿಗೆಲ್ಲಾ ಕಾಲನಿಯಮ ಅನ್ವಯಿಸುತ್ತೆ. ಈ ಪ್ರಕೃತಿಯ ನಿಯಮ ಮೀರಿ ಯಾರೂ, ಯಾವುದೂ ಅನಂತವಾಗಿರಲು ಸಾಧ್ಯವಿಲ್ಲ.


ನಮ್ಮ ಹುಟ್ಟು ಎಷ್ಟು ನಿಜವೋ, ನಮ್ಮ ಅಂತ್ಯವೂ ಅಷ್ಟೇ ನಿಜ. ನಾವು ಯಾರೂ ಇಲ್ಲಿ ಶಾಶ್ವತವಾಗಿ ಇರಲು ಬಂದವರಲ್ಲ. ತಾತ್ಕಾಲಿಕವಾಗಿ ಈ ಭೂಮಿಗೆ ಬಂದ ಪ್ರವಾಸಿಗರು. ಈ ಗ್ರಹದಿಂದ ಮತ್ತೊಂದು ಗ್ರಹಕ್ಕೆ, ಒಂದು ದೇಹದಿಂದ ಮತ್ತೊಂದು ದೇಹಕ್ಕೆ ನಮ್ಮ ಆತ್ಮಗಳು ಸಂಚರಿಸುತ್ತಲೇ ಇರುತ್ತವೆ. ಪ್ರತಿ ಯಾನವೂ ಯಾತನಾದಾಯಕವೇ ಆದರೂ, ಅದರಲ್ಲೊಂದು ಸೊಗಡಿರುತ್ತೆ. ಬದುಕಿನ ಸೊಬಗು ಇರುತ್ತೆ. ನಾವು ಇರುವಷ್ಟು ಕಾಲ ನಾಲ್ಕು ಜನಕ್ಕೆ ಒಳ್ಳೆಯದು ಮಾಡಿ ಈ ಜಗತ್ತಿನ ವಾಸ್ತವ್ಯಕ್ಕೆ ವಿದಾಯ ಹೇಳುವುದರಲ್ಲಿ ಸೊಗಸಿದೆ. ಇದನ್ನೇ ನಮ್ಮ ಧರ್ಮದಲ್ಲಿ ಕಾಮ-ಅರ್ಥ-ಮೋಕ್ಷ ಅಂತ ಸರಳವಾಗಿ ಬದುಕಿನ ಸೂತ್ರ ಬಿಡಿಸಲಾಗಿದೆ.

ಕೆಲವರು ಹುಟ್ಟು ಆಕಸ್ಮಿಕ ಅನ್ನುತ್ತಾರೆ. ದೇವರ ದೃಷ್ಟಿಯಲ್ಲಿ ಯಾವುದೂ ಆಕಸ್ಮಿಕವಲ್ಲ. ಪೂರ್ವನಿರ್ಧಾರದಂತೆ ನಮ್ಮ ಹುಟ್ಟು-ಸಾವು ನಡೆಯುತ್ತೆ. ಭಗವಂತನ ಇಚ್ಛೆಯಂತೆ ನಡೆವ ಈ ಜಗದ ಚಲನೆಯಲ್ಲಿ ನಾವೆಲ್ಲಾ ಪೂರಕ-ಸಾಧನಗಳಷ್ಟೆ. ಜಗದ ಚಕ್ರಕ್ಕೆ ಕಡಾಣಿಯಾಗಿ, ತೈಲವಾಗಿ, ನೊಗವಾಗಿ ಸಹಕರಿಸುತ್ತಿರುತ್ತೇವೆ. ಚಕ್ರದ ಕಡಾಣಿ ಸವೆದಂತೆ ಮತ್ತೊಂದು ಕಡಾಣಿ ಹುಟ್ಟುತ್ತದೆ, ತೈಲ ಖಾಲಿಯಾದಂತೆ ಮತ್ತೆ ಹೊಸ ತೈಲ ಉತ್ಪತ್ತಿ ಆಗುತ್ತಿರುತ್ತದೆ. ಹೀಗೆ ಜಗದ ಚಕ್ರ ಹೊಸ ಜೀವ ತಳಿಗಳಿಂದ ಮುನ್ನಡೆಯುತ್ತಲೇ ಇರುತ್ತೆ. ಆ ಸೃಷ್ಟಿಚಕ್ರ ಚಲನೆ ನಿಲ್ಲಿಸಿದಾಗ ಪ್ರಳಯವಾಗಿ ಜಗತ್ತು ಕತ್ತಲೆಯಲ್ಲಿ ಮುಳುಗುತ್ತದೆ. ಸಾವಿರಾರು ವರ್ಷಗಳ ನಂತರ ಬ್ರಹ್ಮ ನಿದ್ರೆಯಿಂದ ಎದ್ದಾಗ ಮತ್ತೊಂದು ಸೃಷ್ಟಿ ಚಕ್ರಕ್ಕೆ ಚಾಲನೆ ನೀಡುತ್ತಾನೆ. ಆಗ ಕಾಣುವ ಸೂರ್ಯನ ಹೊಸ ಬೆಳಕು ಹೊಸವರ್ಷವಾಗುತ್ತದೆ.

ಸೂರ್ಯನಿಂದ ಭೂಮಿಗೆ ಬಿದ್ದ ಮೊದಲ ಕಿರಣವೇ ವರ್ಷದ ಮೊದಲ ದಿನ. ಆ ದಿನ ಯಾವುದೂ ಅಂತ ನಮಗೆ ಗೊತ್ತಿಲ್ಲ. ಸೂರ್ಯನ ಚಲನೆಯನ್ನಾಧರಿಸಿ ಭಾರತೀಯರು ಚೈತ್ರಮಾಸದ ಮೊದಲ ದಿನವನ್ನು ಹೊಸ ವರ್ಷವೆಂದು 'ಯುಗಾದಿ' ಆಚರಿಸುತ್ತಾರೆ. ಯುಗದ ಆದಿಯನ್ನು ಬಲ್ಲವರಿಲ್ಲ. ಹೀಗಿದ್ದರೂ ನಮ್ಮ ಮಸ್ತಿಷ್ಕಕ್ಕೆ ಹೊಳೆದಂತೆ, ನಮ್ಮ ಐತಿಹ್ಯಕ್ಕೆ ಮತ್ತು ಭೌಗೋಳಿಕತೆಗೆ ತಕ್ಕಂತೆ ಹೊಸ ವರ್ಷವನ್ನು ಆಚರಿಸುತ್ತೇವೆ. ಜಗತ್ತಿನೆಲ್ಲೆಡೆ ಮಾನವರು ತಮ್ಮ ಧರ್ಮ-ಸಂಸ್ಕೃತಿಗೆ ಅನುಗುಣವಾಗಿ ವಿವಿಧ ದಿನ ಹೊಸ ವರ್ಷ ಆಚರಿಸುತ್ತಾರೆ. ಈ ಹೊಸ ವರ್ಷ ಆಚರಣೆ ಸಾಮಾನ್ಯವಾಗಿ ಮೋಜಿನ ಮತ್ತಿನಲ್ಲಿ ನಡೆಯುತ್ತಿರುವುದು ಸರಿಯಲ್ಲ. ಹೊಸ ವರ್ಷದ ದಿನ ಎಂದರೆ, ಅದು ನಮ್ಮ ಬದುಕಿನ ಮೌಲ್ಯಮಾಪನ ದಿನ. ನಮ್ಮ ಹಿಂದಿನ ಬದುಕನ್ನೊಮ್ಮೆ ತಿರುವಿ ಹಾಕಿ, ಮುಂದಿನ ಬದುಕನ್ನು ಸರಿಯಾದ ರೀತಿಯಲ್ಲಿ ರೂಪಿಸಿಕೊಳ್ಳುವ ಪರ್ವಕಾಲ. ನಾವು ಕಳೆದ ವರ್ಷ ಎಲ್ಲಿ ತಪ್ಪು ಮಾಡಿದ್ದೇವೆ? ಮುಂದೆ ಆ ತಪ್ಪನ್ನ ಸರಿಪಡಿಸಿಕೊಂಡು ಹೇಗೆ ಜೀವನ ರೂಪಿಸಿಕೊಳ್ಳಬೇಕು ಎಂಬ ಬಗ್ಗೆ ಸ್ವಯಂ ಆತ್ಮಾವಲೋಕನ ಮಾಡುವ ದಿನ. ಪ್ರತಿಯೊಬ್ಬರು ಹೊಸ ವರ್ಷಕ್ಕೆ ಮುನ್ನಾ, ಕಳೆದ ಬದುಕನ್ನೊಮ್ಮೆ ನೋಡಿ ಮುನ್ನಡೆದರೆ 'ಸಚ್ಚಿದಾನಂದ'ದ ಸಾರ್ಥಕ ಬದುಕು ಪ್ರಾಪ್ತವಾಗುವುದರಲ್ಲಿ ಸಂದೇಹವಿಲ್ಲ. •

ಸರ್ಕಾರದ ಜನ ವಿರೋಧಿ ನಡೆ

• ಡಾ. ರವಿಕುಮಾರ್ ಬಾಗಿ



ಸ್ವಾತಂತ್ರ್ಯದ ಹೋರಾಟಕ್ಕೆ ಕಿಂಚಿತ್ತೂ ಸಂಬಂಧವಿಲ್ಲದ ಈ ಆಚರಣೆಯನ್ನು ಜಾರಿಗೆ ತರಲು ಹೊರಟಿರುವುದು ಖಂಡನಾರ್ಹ. ಮತ್ತು ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಪಡದೇ ಇರುವ ಧಾರ್ಮಿಕ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ ತನ್ನ ಮೂಲಭೂತವಾದಿ ಅಜೆಂಡಾವನ್ನು ಸರ್ಕಾರವೇ ಜಾರಿಗೆ ತರಲು ಮುಂದಾಗಿರುವುದು ಈ ದೇಶದ ಭವಿಷ್ಯದ ಮೇಲೆ ಕಾರ್ಮೋಡ ಕವಿದಿರುವುದನ್ನು ಸೂಚಿಸುತ್ತಿದೆ.

ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ರಾಜ್ಯ ಸರ್ಕಾರವು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಸೂರ್ಯ ನಮಸ್ಕಾರ ಕಾರ್ಯಕ್ರಮವನ್ನು ಆಯೋಜಿಸಿದೆ. ಇದನ್ನು, ರಾಜ್ಯದ ಎಲ್ಲ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಜನವರಿ 1ರಿಂದ ಫೆಬ್ರವರಿ 7ರವರೆಗೆ 'ಸೂರ್ಯ ನಮಸ್ಕಾರ' ಮಾಡುವುದರ ಮೂಲಕ ಆಚರಿಸಲು ಮುಂದಾಗಿದೆ. ಇದು ಅಜ್ಞಾನದ ಪ್ರದರ್ಶನದಂತೆ ಗೋಚರಿಸುತ್ತಿದೆ. ಯಾಕೆಂದರೆ ಸೂರ್ಯ ನಮಸ್ಕಾರ, ಯೋಗ ಇತ್ಯಾದಿಗಳು ದೈಹಿಕ ಚಟುವಟಿಕೆಯ ಅಭ್ಯಾಸಗಳು. ಇವು ವೈಯಕ್ತಿಕವಾದವು. ಇವುಗಳನ್ನು ವ್ಯಕ್ತಿಗತ ಸಾಧನೆಗೆ ಯಾರು ಬೇಕಾದರೂ ಬಳಸಬಹುದಾಗಿದೆ. ಆದರೆ ಸರ್ಕಾರ ಇವುಗಳನ್ನು ಕಡ್ಡಾಯಗೊಳಿಸಿ ವಿದ್ಯಾರ್ಥಿಗಳ ಮೇಲೆ ಹೇರುತ್ತಿರುವುದು ಸರಿಯಾದುದಲ್ಲ. ಇವು ಒಂದು ನಿರ್ದಿಷ್ಟ ವರ್ಗದ ಆಚರಣೆಗಳು. ಇವುಗಳನ್ನು ಹಿಂದುತ್ವವಾದದ ವಿಸ್ತರಣೆಯ ಸಲಕರಣೆಗಳಾಗಿ ಬಳಸಲು ಇಂತಹ ಕೆಲಸಕ್ಕೆ ಮುಂದಾಗಿದೆ. ಇದು ವಿದ್ಯಾರ್ಥಿಗಳ ವೈಯಕ್ತಿಕ ಆಯ್ಕೆಯನ್ನು ನಿರಾಕರಿಸುತ್ತ ಪ್ರಜಾತಾಂತ್ರಿಕ ವಿರೋಧಿ ಕೆಲಸವನ್ನು ಮಾಡುತ್ತಿದೆ.

ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲ ಜಾತಿಯ, ಧರ್ಮಗಳ ಮಕ್ಕಳಿರುತ್ತಾರೆ. ಅವರಲ್ಲಿ ಕೆಲವರಿಗೆ ಸೂರ್ಯನಮಸ್ಕಾರದಲ್ಲಿ ನಂಬಿಕೆಯಿರುವುದಿಲ್ಲ. ಅವರು ಇದನ್ನು ಮಾಡಲು ಒಪ್ಪದಿದ್ದರೆ ಅವರ ಆಯ್ಕೆಯ ಸ್ವಾತಂತ್ರಕ್ಕೆ ಅವಕಾಶವಿದೆಯೆ? ಎಂಬ ಪ್ರಶ್ನೆ ಏಳುತ್ತದೆ. ಅಲ್ಲದೆ ಕಾಲೇಜುಗಳಲ್ಲಿ ಬೇರೆ ಧರ್ಮಗಳ ಆಚರಣೆಗಳನ್ನು ಸೂರ್ಯ ನಮಸ್ಕಾರದಂತೆ ಆಚರಿಸಲು ಅವಕಾಶ ನೀಡಲಾಗುವುದೇ? ಮುಸ್ಲಿಂ ಅಥವಾ ಕ್ರಿಶ್ಚಿಯನ್ ಶಿಕ್ಷಣ ಸಂಸ್ಥೆಗಳು ತಮಗೆ ಇಷ್ಟವಾದ ಆಚರಣೆಗಳನ್ನು ಎಲ್ಲರೂ ಮಾಡಬೇಕು ಎಂದು ಒತ್ತಾಯಿಸಿದರೆ, ಅದಕ್ಕೆ ಸರ್ಕಾರ ಒಪ್ಪುತ್ತದೆಯೇ? ಸರ್ಕಾರ ಯಾವುದೇ ಯೋಜನೆಯನ್ನು ಜಾರಿಗೆ ತಂದರೂ ಅದು ಪ್ರಜಾಸತ್ತಾತ್ಮಕವಾಗಿರಬೇಕಲ್ಲವೇ? ಸರ್ಕಾರದ ಈ ನಡೆಯು, ದೇಶವು ಇಲ್ಲಿಯವರೆಗೆ ಕಾಪಾಡಿಕೊಂಡು ಬಂದಿದ್ದ 'ಧರ್ಮ ನಿರಪೇಕ್ಷತೆ' ಮತ್ತು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ.

ಅಲ್ಲದೆ ಸರ್ಕಾರ ಈ ರೀತಿಯ ಆಚರಣೆಗಳನ್ನು ಮಕ್ಕಳ ಮೇಲೆ ಹೇರುವುದು ಅದರ ಬೌದ್ಧಿಕ ದಿವಾಳಿತನವನ್ನು ಎತ್ತಿತೋರಿಸುತ್ತದೆ. ಯಾವುದೇ ಸರ್ಕಾರವು ಸಂವಿಧಾನದ ಆಶಯಗಳಿಗೆ ಪೂರಕವಾಗಿ ಕಲ್ಯಾಣ ರಾಷ್ಟ್ರದ ಕಲ್ಪನೆಯನ್ನು ಸಾಕಾರಗೊಳಿಸಲು ಕೆಲಸ ಮಾಡಬೇಕು. ಮುಖ್ಯವಾಗಿ ಅದು ಶಿಕ್ಷಣ, ಆರೋಗ್ಯ, ವಸತಿ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ ಪ್ರತಿಯೊಬ್ಬರೂ ಘನತೆಯಿಂದ ಬದುಕುವ ವಾತಾವರಣವನ್ನು ನಿರ್ಮಿಸಬೇಕು. ಆ ಮೂಲಕ ಕಲ್ಯಾಣ ರಾಜ್ಯವನ್ನು ನಿರ್ಮಾಣ ಮಾಡಬೇಕು. ಅದನ್ನು ಬಿಟ್ಟು ದೇಶದ ಸ್ವಾತಂತ್ರ್ಯದ ಅಮೃತಮಹೋತ್ಸವದ ಹೊತ್ತಿನಲ್ಲಿ ಈ ರೀತಿಯ ಆಚರಣೆಗಳನ್ನು ಬಲವಂತವಾಗಿ ಹೇರುವುದು ದುರಂತವೇ ಸರಿ. ಈ ಸಂದರ್ಭದಲ್ಲಿ ದೇಶದ ಸ್ವಾತಂತ್ರ್ಯ ಹೋರಾಟದ ನೆನಪುಗಳ ಬಗೆಗೆ, ಅದನ್ನು ಸಾಧಿಸಲು ಶ್ರಮಿಸಿದ ವರ ಬಗೆಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಬೇಕು. ಅದನ್ನು ಮಾಡದೇ ಸೂರ್ಯ ನಮಸ್ಕಾರ ಮಾಡಿಸುವುದು ಈಗಿನ ಸರ್ಕಾರಕ್ಕೆ ಸ್ವಾತಂತ್ರ್ಯ ಚಳವಳಿ ಮತ್ತು ಅದಕ್ಕಾಗಿ ಹೋರಾಡಿದವರ ಬಗೆಗೆ ಗೌರವ ಇಲ್ಲದಿರುವುದು ಗೊತ್ತಾಗುತ್ತದೆ. ಶಿಕ್ಷಣ ವ್ಯವಸ್ಥೆ ನಾಶ ಮಾಡಲು ಅನುಸರಿಸುತ್ತಿರುವ ಕ್ರಮಗಳ ನಗ್ನ ಪರಿಚಯವೂ ಆಗುತ್ತದೆ.

ದೇಶವು ಸ್ವಾತಂತ್ರ್ಯಗೊಳ್ಳುವ ಸಂದರ್ಭದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ಇಡೀ ದೇಶವೇ ಒಂದು ಸಮುದಾಯವಾಗಿ ಹೋರಾಡಿದ ಚಾರಿತ್ರಿಕ ವಿದ್ಯಮಾನವನ್ನು ಯಾರೂ ಅಲ್ಲಗಳೆಯಲಾಗದು. ಜಾತಿ-ಧರ್ಮಗಳ ಎಲ್ಲೆ ಮೀರಿ ಜನರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರು. ಭಾರತವೆನ್ನುವುದು 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ಭಾವಿಸಿದ್ದರು. ಮತ್ತು ಅದನ್ನು ಹಾಳುಗೆಡವಲು ಬಿಡಬಾರದು ಎಂದು ನಂಬಿದ್ದರು. ಇಂದಿಗೂ ಸಾಮಾಜಿಕ ಪಿಡುಗುಗಳಾಗಿ ದೇಶವನ್ನು ಬಾಧಿಸುತ್ತಿರುವ ಜಾತಿಯತೆ, ಅಸ್ಪೃಶ್ಯತೆ, ಧಾರ್ಮಿಕ ಅಂಧಶ್ರದ್ಧೆ ಇವುಗಳಿಂದ ದೇಶವನ್ನು ಬಿಡುಗಡೆಗೊಳಿಸುವುದು ಅವರ ಕನಸಾಗಿತ್ತು. ಸಮಾನತೆ, ಸೋದರತೆ, ಸೌಹಾರ್ದತೆ, ಭ್ರಾತೃತ್ವಗಳ ಆಧಾರದ ಮೇಲೆ ದೇಶ ಕಟ್ಟಬೇಕೆಂದು ಬಯಸಿದ್ದರು. ಅವರ ಈ ಆಶಯಗಳನ್ನು, ಕನಸುಗಳನ್ನು ಮಕ್ಕಳ ಎದೆಗಳಲ್ಲಿ ಬೀಜವಾಗಿ ಬಿತ್ತುವ ಕೆಲಸ ಮಾಡಬೇಕಿತ್ತು. ಆ ಮೂಲಕ ಮತೀಯ ದ್ವೇಷ, ಹಿಂಸೆ, ದೌರ್ಜನ್ಯಗಳನ್ನು ಮೀರಿ ಸಹಬಾಳ್ವೆಯ ದೇಶ-ನಾಡನ್ನು ಕಟ್ಟುವ ಬಗೆಗಳನ್ನು ಇಂದಿನ ವಿದ್ಯಾರ್ಥಿಗಳಿಗೆ ಕಲಿಸಿಕೊಡಬೇಕಿತ್ತು. ನಕಲಿ ಶಿಕ್ಷಣವನ್ನು ಕಲಿಯುತ್ತ ಬಾಳನ್ನು ನಾಶ ಮಾಡಿಕೊಳ್ಳುತ್ತಿರುವ ವಿದ್ಯಾರ್ಥಿಗಳನ್ನು ರಕ್ಷಿಸಲು ಸೂಕ್ತ ಶೈಕ್ಷಣಿಕ ಯೋಜನೆಗಳನ್ನು ಜಾರಿಗೆ ತರಬೇಕಿತ್ತು.

ಆದರೆ ಇದನ್ನು ಮಾಡದೆ 'ಸೂರ್ಯ ನಮಸ್ಕಾರ' ಮಾಡಿಸಲು ಹೊರಟಿರುವುದು ದೇಶದ ಸ್ವಾತಂತ್ರ್ಯ ಹೋರಾಟದ ಆಶಯಕ್ಕೆ ವಿರುದ್ಧವಾದುದು. ಸ್ವಾತಂತ್ರ್ಯದ ಹೋರಾಟಕ್ಕೆ ಕಿಂಚಿತ್ತೂ ಸಂಬಂಧವಿಲ್ಲದ ಈ ಆಚರಣೆಯನ್ನು ಜಾರಿಗೆ ತರಲು ಹೊರಟಿರುವುದು ಖಂಡನಾರ್ಹ. ಮತ್ತು ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಪಡದೇ ಇರುವ ಧಾರ್ಮಿಕ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ ತನ್ನ ಮೂಲಭೂತವಾದಿ ಅಜೆಂಡಾವನ್ನು ಸರ್ಕಾರವೇ ಜಾರಿಗೆ ತರಲು ಮುಂದಾಗಿರುವುದು ಈ ದೇಶದ ಭವಿಷ್ಯದ ಮೇಲೆ ಕಾರ್ಮೋಡ ಕವಿದಿರುವುದನ್ನು ಸೂಚಿಸುತ್ತಿದೆ.

ಹಾಗಾಗಿ ಜನರಿಂದ ಚುನಾಯಿತಗೊಂಡ ಸರ್ಕಾರ ಯಾವುದೋ ಒಂದು ತತ್ವದ, ಒಂದು ವರ್ಗದ, ಜಾತಿಯ ಹಿತಾಸಕ್ತಿಗಳಿಗಾಗಿ ಶಿಕ್ಷಣ ವ್ಯವಸ್ಥೆಯನ್ನು ಬಲಿಕೊಡಬಾರದು. ಇಂದು ರಾಷ್ಟ್ರೀಯತೆ, ಧರ್ಮ, ದೇವರುಗಳನ್ನು ಭಾವನಾತ್ಮಕಗೊಳಿಸಿ ಮತೀಯವಾದಿ ವಿಚಾರಗಳನ್ನು ಬೆಳೆಸಲಾಗುತ್ತಿದೆ. ಅವುಗಳ ಸಾಲಿಗೆ ಈಗ ಸೂರ್ಯ ನಮಸ್ಕಾರ ಹೊಸದಾಗಿ ಸೇರಿಕೊಂಡಿದೆ. ಯೋಗ ಈ ಮೊದಲೇ ಸೇರಿಕೊಂಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಇದರ ಮೂಲಕ ಶೈಕ್ಷಣಿಕ ಪರಿಸರವನ್ನು ಕೋಮು ಧ್ರುವೀಕರಣಕ್ಕೆ ಬಳಸಿಕೊಳ್ಳುವುದು ಸರಿಯಲ್ಲ. ಇಂತಹ ಮತೀಯವಾದಿ ಆಚರಣೆಗಳನ್ನು ಜಾರಿಗೆ ತರುವುದರ ಮೂಲಕ ದೇಶದ ಸಮಗ್ರತೆಗೆ ಕೇಡು ತರುವ ಕೆಲಸ ಮಾಡಲಾಗುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರದ ಈ 75 ವರ್ಷಗಳ ಈ ಅಮೃತ ಮಹೋತ್ಸವದ ಸಂದರ್ಭ ಸರ್ಕಾರಗಳಿಗೆ ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಿದೆ. ಈ 75 ವರ್ಷಗಳಲ್ಲಿ ಏನನ್ನು ಸಾಧಿಸಲಾಗಿದೆ? ಮುಂದೆ ಸಾಧಿಸಬೇಕಾಗಿರುವುದೇನು? ಈ ನಿಟ್ಟಿನಲ್ಲಿಡಬೇಕಾದ ಹೆಜ್ಜೆಗಳು ಯಾವುವು? ಎಂಬುದರ ಬಗೆಗೆ ಒಂದು ನೀಲಿ ನಕಾಶೆ ಬಿಡುಗಡೆ ಮಾಡುವ ಅಗತ್ಯವಿದೆ. ರಚನಾತ್ಮಕ ಕಾರ್ಯಕ್ರಮಗಳ ಮೂಲಕ ದೇಶವನ್ನು ಮುಂದೆ ಕೊಂಡೊಯ್ಯಬೇಕಿದೆ. ಆದರೆ ಅದನ್ನು ಬಿಟ್ಟು ಹುಸಿ ಭಾವನಾತ್ಮಕತೆಯನ್ನು ಉದ್ದೀಪಿಸುವಂತಹ ಆಚರಣೆಗಳನ್ನು ಜಾರಿಗೆ ತರುವುದು ದೇಶದ ಜನರನ್ನು ಅಣಕಿಸುವುದೇ ಆಗಿದೆ. ಮತ್ತು ಬದಲಾವಣೆಯ ರಥಚಕ್ರವನ್ನು ಹಿಂದಕ್ಕೆ ಎಳೆದು ದೇಶವನ್ನು ಗತಕಾಲದ ಅಂಧಕಾರದಲ್ಲಿ ಹೂತು ಹಾಕಲು ಯೋಜಿಸಲಾಗುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಕಲ್ಪಿಸಿಕೊಟ್ಟ ಅವಕಾಶಗಳನ್ನು ಬಳಸಿಕೊಂಡು ಅದರ ವಿರುದ್ಧದ ಮೌಲ್ಯಗಳನ್ನು ಸಂಗೋಪಿಸಲಾಗುತ್ತಿದೆ.

ಇಡೀ ಜಗತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಗಂಭೀರ ಅಧ್ಯಯನಗಳಲ್ಲಿ ತೊಡಗಿದೆ. ಆದರೆ ನಮ್ಮ ದೇಶದಲ್ಲಿ ಜಾತಿ, ಧರ್ಮ ದೇವರುಗಳಿಗೆ ಗಂಟುಬಿದ್ದು ಮೌಢ್ಯತೆಯ ಮಾರಿಗೆ ಜನರನ್ನು ಬಲಿ ಕೊಡಲಾಗುತ್ತಿದೆ. ಆದ್ದರಿಂದ ಜನವಿರೋಧಿಯಾದ ಇಂತಹ ಕೆಲಸಗಳನ್ನು ನಾಗರಿಕ ಸಮಾಜ ಖಂಡಿಸಬೇಕು. ಯಾಕೆಂದರೆ ಪ್ರಜಾಪ್ರಭುತ್ವ ಮತ್ತು ದೇಶದ ಅಖಂಡತೆ ಉಳಿದಿರುವುದು ಈ ದೇಶದ ಪ್ರತಿಯೊಬ್ಬರ ವ್ಯಕ್ತಿ ಸ್ವಾತಂತ್ರ್ಯ ಮತ್ತು ಅವರು ಘನತೆಯಿಂದ ಬದುಕುವುದರಲ್ಲಿ. ಅದಕ್ಕೆ ಊರುಗೋಲಾಗಿರುವುದು ಶಿಕ್ಷಣ ವ್ಯವಸ್ಥೆ. ಅದು ಕೋಮುವಾದೀಕರಣಗೊಂಡರೆ ಇಡೀ ಸಮಾಜವೇ ಕೇಡಿಗೆ ಬಲಿಯಾಗುತ್ತದೆ. ಈಗಾಗಲೇ ನಮ್ಮ ದೇಶವು ಅಸ್ಪೃಶ್ಯತೆ ಮತ್ತು ಮೂಲಭೂತವಾದಿ ಚಿಂತನೆಗಳಿಂದ ಕಲುಶಿತಗೊಂಡು ದೇಶದ ಐಕ್ಯತೆಗೆ ಗಂಡಾಂತರ ಎದುರಾಗಿದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಇವುಗಳಿಂದ ಬಿಡುಗಡೆಗೊಳಿಸಿ ಅವರನ್ನು ಜಾತ್ಯತೀತ, ಧರ್ಮನಿರಪೇಕ್ಷ ತತ್ವಗಳಿಂದ ಪೋಷಿಸಬೇಕಿದೆ. ಆ ಮೂಲಕ ಅವರನ್ನು ನಿಜವಾದ ಮನುಷ್ಯರನ್ನಾಗಿ ರೂಪಿಸಬೇಕಾಗಿದೆ. ಆ ದಿಕ್ಕಿನಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ ಸ್ವಾತಂತ್ರ್ಯದ ಅಮೃತ ಮಹೋತ್ಸವ ಅರ್ಥಪೂರ್ಣವಾಗುತ್ತದೆ.

ಲೇಖಕರು: ಕನ್ನಡ ಪ್ರಾಧ್ಯಾಪಕ, ನ್ಯಾಷನಲ್ ಕಾಲೇಜು, ಬೆಂಗಳೂರು

ಪದಬಂಧ 4825

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸುಖದುಃಖಾದಿಗಳ ಅನುಭವ (4)
3.ಇದು ಎಳೆಯ ಮಗು (4)
5.ಅಜ್ಞಾನ ಇಲ್ಲಿದೆ (3)
7.ಮಾವನ ಮರ್ಯಾದೆ! (2)
8.ಇಂದ್ರಿಯಗೋಚರವಾದ ಪದಾರ್ಥ (2)
11.ಪಗಡೆಯಾಟದಲ್ಲಿ ದಾಳದಿಂದ ಸೂಚಿತವಾಗುವ ಸಂಖ್ಯೆ (2)
13.ಹೆರಿಗೆಯ ಸತ್ತೆ (2)
14.ಖೋತ ಎಂದು ಹೀಗೆ ಹೇಳಿ (3)
16.ಮೃತರಾದವರಿಗೆ ಮಾಡತಕ್ಕ ಅಪರ ಕ್ರಿಯೆ (4)
17.ಮರದೊಳಗಿರುವ ಭ್ರಮರ (4)

ಮೇಲಿಂದ ಕೆಳಕ್ಕೆ
1.ಇಂದ್ರಿಯಗಳ ಮೂಲಕ ಬರುವ ಜ್ಞಾನ (4)
2.ಗರತಿಯ ನಡಗೆ! (2)
3.ಹತ್ತಿರದಲ್ಲೇ ಪ್ರತ್ಯಕ್ಷನಾದ ಶಿವ! (2)
4.ಇದು ಒಳ್ಳೆಯ ದಿನ (3)
6.ಮಸ್ತಿಷ್ಕ ಇಲ್ಲಿದೆ (3)
7.ಈತ ಆನೆ ನಡೆಸುವವನು (4)
9.ಈ ರೀತಿ ಹೊಗಳು (4)
10.ತೂಕ ಮಾಡುವ ಸಾಧನ ಇಲ್ಲಿದೆ (3)
12.ರತ್ನಗಳ ಆಶ್ರಯ ಸ್ಥಾನ (4)
13.ಅಮಲೇರಿಸುವಂಥದ್ದು (3)
14.ಕೈ ಇಲ್ಲಿ ಕಾಣುತ್ತಿದೆ (2)
15.ಕತ್ತಲೆ ಇಲ್ಲಿ ಆವರಿಸಿದೆ (2)

1			2	■	3			4
	■	■	5	6		■	■	
	■	■	■		■	■	7	
8	9	■	■		■	■		■
■		■	■	■	■	■		■
■		■	■	10	■	■	11	12
13		■	■		■	■	■	
	■	■	14		15	■	■	
16				■	17			

4824ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಪ್ರಜ್ಞೆ
5.ಅಂಗನೆ6.ಲಾಡಿ
7.ಸೆರಗು9.ಗಡಿಬಿಡಿ
10.ಜವಾಬುದಾರಿ
11.ಕತ್ತರಿ12.ಗೆಳತಿ
15.ವಾದ್ಯ16.ಕುಲಾವಿ
17.ಕಂದ

ಮೇಲಿಂದ ಕೆಳಕ್ಕೆ:
1.ಸ್ವಪ್ರಶಂಸೆ2.ಸ್ವಗತ
3.ಗಡಿಬಿಡಿ8.ಗುಜರಿ
9.ನೆರಿಗೆ11.ಕಡಿವಾಣ
13.ತಿಲೋದಕ14.ಪಿಲಾಲು

ಸುಡೊಕು 5211

3		2	1		4		6	7
				8				
7	9		6		2	5		4
2					3			5
				4		2	9	
			9					1
	4	1	2				8	
9				7	8			
	6			5		4		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5210 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ — ಶನಿವಾರ ಜನವರಿ 1, 2022

ಶ್ರೀ ಪ್ಲವನಾಮ ಸಂವತ್ಸರ ದಕ್ಷಿಣಾಯಣ–ಹೇಮಂತ ಋತು ಧನುರ್ಮಾಸದ 16 ನೇ ದಿನ
ತಿಥಿ: (ಮಾರ್ಗಶಿರ ಕೃಷ್ಣ) ತ್ರಯೋದಶಿ ಗಂ. 07-18 ಉಪರಿ ಚತುರ್ದಶಿ ಗಂ. 27-42 ನಕ್ಷತ್ರ: ಜ್ಯೇಷ್ಠ ಗಂ. 19-17 ಯೋಗ: ಗಂಡ ಗಂ. 13-55 ಕರಣ: ವಣಿಜ ಗಂ. 07-18, ವಿಷ್ಟಿ ಗಂ. 17-31. ರಾಹುಕಾಲ : ಬೆಳಿಗ್ಗೆ 09:00–10:30 ಸೂರ್ಯೋದಯ : 06-57 ಸೂರ್ಯಾಸ್ತ : 06-11 ಮುಸ್ಲಿಂ ದಿನಾಂಕ: 27 ಜುಮಾದುಲ್ಲಾವಲ್ ದಿನ ವಿಶೇಷ: ಕ್ರಿಶ್ಚಿಯನ್ (ಇಂಗ್ಲಿಷ್) ಹೊಸವರ್ಷದ ದಿನ (ಕ್ರಿ.ಶಕ 2022 ಪ್ರಾರಂಭ) ಅದೃಷ್ಟ ಸಂಖ್ಯೆ: 3, 11

ಮೇಷ: ಈ ದಿನ ವ್ಯಕ್ತಿ ಗೌರವ ಕಾಪಾಡಿಕೊಳ್ಳಲು ಸುತ್ತಲಿನ ವಾತಾವರಣಕ್ಕೆ ಹೊಂದಿಕೊಳ್ಳಲೇಬೇಕಾದ ಅನಿವಾರ್ಯತೆ ಬರಲಿದೆ. ಪುತ್ರ ಮುಖಾಂತರ ಹೆಚ್ಚುವರಿ ಆದಾಯ ಹಾಗೂ ಗೌರವ ಸಿಗಲಿದೆ. ಆರೋಗ್ಯದ ಕಡೆ ಗಮನವಿರಲಿ.

ವೃಷಭ: ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಉತ್ತಮ ಅವಕಾಶಗಳು ಬರಲಿವೆ. ಮನೆ ಬದಲಾವಣೆಯ ಬಗ್ಗೆ ಮನೆಯವರ ಅಭಿಪ್ರಾಯವನ್ನು ತಿಳಿದುಕೊಳ್ಳುವಿರಿ. ಗೆಳೆಯರೊಂದಿಗೆ ಸಂತೋಷ ಕೂಟದಲ್ಲಿ ಭಾಗವಹಿಸುವಿರಿ.

ಮಿಥುನ: ಉನ್ನತ ವಾಣಿಜ್ಯ ಶಿಕ್ಷಣ ವಿದ್ಯಾರ್ಥಿಗಳಿಗೆ ಪರಿಶ್ರಮದಿಂದ ಯಶಸ್ಸು. ದೀರ್ಘಕಾಲೀನ ಯೋಜನೆಗಳು ಫಲದಾಯಕವಾಗಿ ವೃತ್ತಿಪರರಿಗೆ ಕಾರ್ಯರಂಗದಲ್ಲಿ ಪ್ರಗತಿ. ಗುರಿ ಸಾಧಿಸುವ ನಿಟ್ಟಿನಲ್ಲಿ ಕೆಲಸಗಳನ್ನು ಪೂರ್ಣಗೊಳಿಸುವಿರಿ.

ಕರ್ಕಾಟಕ: ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ಈ ದಿನ ನಿಮ್ಮ ಸಾಂಸಾರಿಕ ವಿಚಾರದಲ್ಲಿ ಬೇರೆಯವರ ಸಲಹೆಗಳನ್ನು ಕಡೆಗಣಿಸಿ. ಬೇರೆಯವರ ಕುಟುಂಬದ ಹೋಲಿಕೆಯನ್ನು ನಿಮ್ಮ ಕುಟುಂಬಕ್ಕೆ ತೆಗೆದುಕೊಳ್ಳದಿರಿ.

ಸಿಂಹ: ವ್ಯಾಪಾರ ಹಾಗೂ ವಾಣಿಜ್ಯೋದ್ಯಮ ವ್ಯವಹಾರಗಳಿಗೆ ಉತ್ತಮ ದಿನ. ಅವಕಾಶಗಳನ್ನು ಉತ್ತಮವಾಗಿ ಉಪಯೋಗಿಸಿಕೊಳ್ಳಿ. ಪ್ರೀತಿಪಾತ್ರರೊಂದಿಗೆ ದಿನ ಕಳೆಯುವ ಕಾರಣ ಹಿಂದಿನ ಲವಲವಿಕೆಯನ್ನು ಪುನಃ ಮೂಡಲಿದೆ.

ಕನ್ಯಾ: ಉದ್ಯೋಗ, ವ್ಯವಹಾರಗಳಲ್ಲಿ ಸಿಂಹಾವಲೋಕನದ ಅಗತ್ಯ. ಮುಂದಾಲೋಚನೆ ಇಲ್ಲದೇ ನೀವು ಭರವಸೆಯನ್ನೂ ನೀಡಬೇಡಿ. ಗಮನವಿಟ್ಟು ಕೆಲಸ ಮಾಡಿದರೆ ಯಶಸ್ಸನ್ನು ಸಾಧಿಸುವಿರಿ. ಆರೋಗ್ಯವು ಚೆನ್ನಾಗಿರುವುದು.

ತುಲಾ: ಗುರಿ ತಲುಪುವಲ್ಲಿ ನಿಮ್ಮ ಪರಿಶ್ರಮದ ಕೊರತೆ ಮತ್ತು ಅದೃಷ್ಟ ಹೀನತೆಯು ಸಮಬಲ ಸಾಧಿಸುವುದು. ಇಂದು ದೂರದ ಊರಿನಲ್ಲಿರುವ ಆಪ್ತರನ್ನು ಭೇಟಿ ಮಾಡುವ ಸಲುವಾಗಿ ಪ್ರಯಾಣವನ್ನು ಕೈಗೊಳ್ಳುವಿರಿ.

ವೃಶ್ಚಿಕ: ಈ ದಿನದ ಸಂದಿಗ್ಧ ಪರಿಸ್ಥಿತಿಯನ್ನು ನೀವು ನಿಧಾನವಾಗಿ ಎಚ್ಚರಿಕೆಯಿಂದ ಹಾಗು ಮಾರ್ಗದರ್ಶಕರ ಮಾತಿನಂತೆ ಬಗ್ಗೆಹರಿಸಿಕೊಳ್ಳಿ. ರಾಜಕೀಯ ವಲಯದಲ್ಲಿ ಗೌಪ್ಯತೆಯಿಂದ ಮಾತುಕತೆ ನಡೆಸಬೇಕಾಗುವುದು.


ಧನು: ಗೌರವ ಮತ್ತು ಸ್ಥಾನಲಾಭ. ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಿ. ಸರ್ಕಾರಿ ನೌಕರರಿಗೆ ಈ ದಿನ ಉತ್ತಮವಾಗಿರುತ್ತದೆ. ಆರೋಗ್ಯದ ಬಗ್ಗೆ ಎಚ್ಚರ ವಹಿಸಿ. ವೈದ್ಯರ ಸಲಹೆ ಪಡೆದುಕೊಳ್ಳಿ.

ಮಕರ: ಇಂದು ಭೂ ವ್ಯವಹಾರದಲ್ಲಿ ಲಾಭ. ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೂ ಆಯ-ವ್ಯಯದಲ್ಲಿ ಗಮನವಿರಲಿ. ಅವಶ್ಯಕ ವಸ್ತುಗಳ ಗಳಿಕೆಯಿಂದ ಸಂತೋಷ. ಅವಿವಾಹಿತರಿಗೆ ವಿವಾಹ ಯೋಗ. ಸಂಗೀತಗಾರರಿಗೆ ಇಂದು ವಿಶೇಷ ದಿನ.

ಕುಂಭ: ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಒತ್ತಡ ತೋರಿಬಂದರೂ ಅಭಿವೃದ್ಧಿದಾಯಕ ಬೆಳವಣಿಗೆ ಹರ್ಷ ತರವುದು. ನೀರಿಕ್ಷೇಗೂ ಮೀರಿ ಸಹಾಯ ಸೌಹಾರ್ದಗಳು ದೊರೆಯುವುದು. ಧಾರ್ವಿಕ ವ್ಯಕ್ತಿಗಳನ್ನು ಭೇಟಿ ಮಾಡುವಿರಿ.

ಮೀನ: ಇಂದು ನೀವು ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಮನೆಯಲ್ಲಿ ಸಂತಸದ ಸೃಷ್ಟಿಯಾಗಲಿದೆ. ರಾಸಾಯನಿಕ ವಸ್ತುಗಳ ಮಾರಾಟಗಾರರಿಗೆ ಹೆಚ್ಚಿನ ಲಾಭ.

ಷೇರುಪೇಟೆ ವಹಿವಾಟು 459



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,203
ಇಂದಿನ ಅಂತ್ಯ	17,354
▲	150
ದಿನದ ಗರಿಷ್ಠ	17,400

ವಿನಿಮಯ ದರ

$ ಡಾಲರ್	74.29
£ ಪೌಂಡ್	100.44
€ ಯುರೊ	84.22
¥ ಯೆನ್ (100ಕ್ಕೆ)	64.68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100 ಮೊಟ್ಟೆಗೆ ₹515
12 ಮೊಟ್ಟೆಗೆ ₹68
ಮೈಸೂರು
100 ಮೊಟ್ಟೆಗೆ -

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1310)
ಸೋಯಾ (ರಿಫೈನ್ಡ್)	₹1190 (1192)
ಸೂರ್ಯಕಾಂತಿ (ರಿಫೈನ್ಡ್)	₹1250 (1260)
ಪಾಮೋಲಿನ್	₹1144 (1145)

ಕೊಬ್ಬರಿ ಧಾರಣೆ



ಪುತ್ತೂರು	₹4500-11500
ತುರುವೇಕೆರೆ	₹18200-18200

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹20000-27000
2ನೇ ದರ್ಜೆ ₹10000-18000

ಮುಂಬೈ ಧಾರಣೆ

ಶೇಂಗಾ
31-12-2021

ಜಾವಾ 70/80(ಹೊಸ)	10500-10500
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8950-9000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1140 (1145)
ಪಾಮ್ ವಾರದ ಡೆಲಿವರಿ	1142 (1143)
ಸೂರ್ಯಕಾಂತಿ ಎಣ್ಣೆ ಕಚ್ಚಾ	1175 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,000 (47,550)
ಬೆಳ್ಳಿ ಕೆ.ಜಿ	62,000 (61,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

2021ರಲ್ಲಿ ಹೂಡಿಕೆದಾರರ ಸಂಪತ್ತು ₹ 78 ಲಕ್ಷ ಕೋಟಿ ಹೆಚ್ಚಳ

ನವದೆಹಲಿ (ಪಿಟಿಐ): ಈಕ್ವಿಟಿ ಹೂಡಿಕೆದಾರರು 2021ರಲ್ಲಿ ಕೈತುಂಬ ಗಳಿಸಿದರು. ಕೋವಿಡ್ ಸಾಂಕ್ರಾಮಿಕದ ಪ್ರಭಾವ ವರ್ಷವಿಡೀ ಇದ್ದರೂ, ಷೇರು ಮಾರುಕಟ್ಟೆಗಳಲ್ಲಿ ಕಂಡುಬಂದ ಏರುಮುಖದ ಚಲನೆಯ ಕಾರಣದಿಂದಾಗಿ ಹೂಡಿಕೆದಾರರ ಸಂಪತ್ತಿನ ಮೌಲ್ಯವು ಈ ವರ್ಷದಲ್ಲಿ ಒಟ್ಟು ₹ 78 ಲಕ್ಷ ಕೋಟಿಯಷ್ಟು ಹೆಚ್ಚಾಯಿತು.

2021ನೆಯ ಇಸವಿಯು ದೇಶದ ಷೇರು ಮಾರುಕಟ್ಟೆಗಳ ಪಾಲಿಗೆ ಐತಿಹಾಸಿಕವಾಗಿತ್ತು. ಷೇರು ಮಾರುಕಟ್ಟೆ ಸಂವೇದಿ ಸೂಚ್ಯಂಕಗಳು ಹಲವು ಮೈಲಿಗಲ್ಲುಗಳನ್ನು ದಾಟಿದವು. ವರ್ಷದ ಕೊನೆಯ ದಿನವಾದ ಶುಕ್ರವಾರದ (ಡಿಸೆಂಬರ್ 31) ವೇಳೆಗೆ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 10,502 ಅಂಶದಷ್ಟು ವಾರ್ಷಿಕ ಏರಿಕೆ ದಾಖಲಿಸಿತು.

ಸೆನ್ಸೆಕ್ಸ್ ಈ ವರ್ಷದಲ್ಲಿ 50 ಸಾವಿರ ಹಾಗೂ 62 ಸಾವಿರದ ಮಟ್ಟಗಳನ್ನು ದಾಟಿತು. ಅಕ್ಟೋಬರ್ 19ರಂದು ಸೂಚ್ಯಂಕವು ಸಾರ್ವಕಾಲಿಕ ಗರಿಷ್ಠ ಮಟ್ಟವಾದ 62,245 ಅಂಶಗಳಿಗೆ ತಲುಪಿತ್ತು.

ಹಿಂದೂ ಧಾರ್ಮಿಕ ಮುಖಂಡ ಕಾಳಿಚರಣ್ ಬಿಡುಗಡೆಗೆ ಒತ್ತಾಯ

ಗುರುಗ್ರಾಮ್: ಹಿಂದೂ ಧಾರ್ಮಿಕ ಮುಖಂಡ ಕಾಳಿಚರಣ್ ಮಹಾರಾಜ್ ಅವರ ಬಿಡುಗಡೆಗೆ ಒತ್ತಾಯಿಸಿ ಬಲಪಂಥೀಯ ಸಂಘಟನೆಗಳ ಕಾರ್ಯಕರ್ತರು ಶುಕ್ರವಾರ ಗುರುಗ್ರಾಮ್‌ದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಮಾತನಾಡಿದ ಹಿಂದೂ ಮುಖಂಡ ಮತ್ತು ವಕೀಲ ಕುಲಭೂಷಣ್ ಭಾರದ್ವಾಜ್, 'ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿದೆ. ಸಂತ ಕಾಳಿಚರಣ್ ಅವರನ್ನು ನಿರ್ದಿಷ್ಟ ಕಾರ್ಯಸೂಚಿಯ ಕಾರಣಕ್ಕಾಗಿ ಬಂಧಿಸಲಾಯಿತು. ಪೊಲೀಸರು ಮತ್ತು ಸರ್ಕಾರ ಓವೈಸಿಯನ್ನು ಏಕೆ ಬಂಧಿಸಿಲ್ಲ? ಓವೈಸಿಯನ್ನು ಬಂಧಿಸುವ ಪೊಲೀಸ್ ಅಧಿಕಾರಿಗೆ ₹ 22 ಲಕ್ಷ ನಗದು ಬಹುಮಾನ ನೀಡಲಾಗುವುದು' ಎಂದು ಘೋಷಿಸಿದ್ದಾರೆ. 'ಇತ್ತೀಚೆಗೆ, ಹೈದರಾಬಾದ್ ಸಂಸದ ಓವೈಸಿ ಅವರ ಭಾಷಣದ ದಿನಾಂಕವಿಲ್ಲದ ವಿಡಿಯೊ ಕ್ಲಿಪ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಭಾಷಣದ ವೇಳೆ ಅವರು ಹಿಂದೂಗಳಿಗೆ ಬೆದರಿಕೆ ಹಾಕಿದ್ದಾರೆ' ಎಂದೂ ಹಲವು ಬಲಪಂಥೀಯ ಕಾರ್ಯಕರ್ತರು ಆರೋಪಿಸಿದ್ದಾರೆ. ಇಲ್ಲಿನ ಜಿಲ್ಲಾಧಿಕಾರಿ ನಿವಾಸದ ಎದುರಿನ ಟ್ಯಾಂಕ್ ಪಾರ್ಕ್‌ನಲ್ಲಿ ಜಮಾಯಿಸಿದ ಪ್ರತಿಭಟನನಿರತರು, ಬಿಡುಗಡೆ ಒತ್ತಾಯಿಸಿದರು.

ಆ್ಯಪಲ್ ವಿರುದ್ಧ ತನಿಖೆಗೆ ಸಿಸಿಐ ಆದೇಶ

ನವದೆಹಲಿ (ಪಿಟಿಐ): ಆ್ಯಪಲ್ ಕಂಪನಿಯು ತನ್ನ 'ಐಸ್ಟೋರ್' ಮೂಲಕ ನ್ಯಾಯಸಮ್ಮತವಲ್ಲದ ರೀತಿಯಲ್ಲಿ ವಾಣಿಜ್ಯ ವಹಿವಾಟು ನಡೆಸುತ್ತಿದೆ ಎಂಬ ಆರೋಪದ ಕುರಿತು ವಿಸ್ತೃತ ತನಿಖೆ ನಡೆಸುವಂತೆ ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ಶುಕ್ರವಾರ ಆದೇಶಿಸಿದೆ.

ಐಒಎಸ್ ಕಾರ್ಯಾಚರಣೆ ವ್ಯವಸ್ಥೆಗೆ ಆ್ಯಪ್ ಅಭಿವೃದ್ಧಿಪಡಿಸುವವರು, ಅವುಗಳನ್ನು ಐಒಎಸ್ ಗ್ರಾಹಕರಿಗೆ ತಲುಪಿಸುವ ಮಾರ್ಗ ಆಪಲ್‌ನ ಆ್ಯಪ್ ಸ್ಟೋರ್ ಮಾತ್ರ. ಆದರೆ ಇತರ ಆ್ಯಪ್ ಸ್ಟೋರ್‌ಗಳು ತಮ್ಮನ್ನು 'ಆ್ಯಪಲ್ ಆ್ಯಪ್ ಸ್ಟೋರ್'ನಲ್ಲಿ ನೋಂದಾಯಿಸಿಕೊಳ್ಳಲು ಅವಕಾಶವಿಲ್ಲ. ಆ್ಯಪಲ್‌ನ ಈ ಮಾರ್ಗಸೂಚಿಯು ಐಒಎಸ್ ಆ್ಯಪ್ ಅಭಿವೃದ್ಧಿಪಡಿಸುವ ಶಕ್ತಿ ಇರುವವರಿಗೆ ಮಾರುಕಟ್ಟೆಯ ಅವಕಾಶವನ್ನು ನಿರಾಕರಿಸುವುದಕ್ಕೆ ಸಮ ಎಂದು ಮೇಲ್ನೋಟಕ್ಕೆ ಅನಿಸುತ್ತಿದೆ ಎಂದು 20 ಪುಟಗಳ ಆದೇಶದಲ್ಲಿ ಸಿಸಿಐ ಹೇಳಿದೆ.

ಆ್ಯಪ್ ಅಭಿವೃದ್ಧಿಪಡಿಸುವವರಿಗೆ ಹೀಗೆ ಮಾರುಕಟ್ಟೆಯ ಲಭ್ಯತೆಯನ್ನು ನಿರಾಕರಿಸುವುದು ಸ್ಪರ್ಧಾ ನಿಯಮಗಳ ಉಲ್ಲಂಘನೆ ಎಂದು ಸಿಸಿಐ ಹೇಳಿದೆ.

ಐಟಿ ದಾಳಿ: ₹6,500 ಕೋಟಿ ಮೌಲ್ಯದ ವಂಚನೆ ಪತ್ತೆ

ನವದೆಹಲಿ: ವಿದೇಶಿ ನಿಯಂತ್ರಿತ ಮೊಬೈಲ್ ಕಂಪನಿಗಳ ಮೇಲೆ ಈಚೆಗೆ ಆದಾಯ ತೆರಿಗೆ ಇಲಾಖೆ ನಡೆಸಿದ ದಾಳಿಯಲ್ಲಿ ಕೋಟಿಗಟ್ಟಲೆ ರೂಪಾಯಿ ಮೌಲ್ಯದ ವಂಚನೆ ನಡೆದಿರುವುದನ್ನು ಪತ್ತೆ ಹಚ್ಚಲಾಗಿದೆ ಎಂದು ಕೇಂದ್ರ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ಶುಕ್ರವಾರ ತಿಳಿಸಿದೆ.

ಮೊಬೈಲ್ ಕಮ್ಯುನಿಕೇಷನ್ ಮತ್ತು ನಿರ್ಮಾಣ ಕಂಪನಿಗಳ ಮೇಲೆ ಕರ್ನಾಟಕ ಸೇರಿದಂತೆ ದೇಶದ ಇತರೆ ರಾಜ್ಯಗಳಲ್ಲಿ ನಡೆಸಿದ ಐಟಿ ದಾಳಿಯಲ್ಲಿ ₹6,500 ಕೋಟಿಗೂ ಹೆಚ್ಚು ಮೌಲ್ಯದ ಲೆಕ್ಕವಿಲ್ಲದ ಆದಾಯವನ್ನು ಪತ್ತೆ ಹಚ್ಚಲಾಗಿದೆ ಎಂದು ಸಿಬಿಡಿಟಿ ತಿಳಿಸಿದೆ.

ಡಿಸೆಂಬರ್ 21ರಂದು ಕರ್ನಾಟಕ ಸೇರಿದಂತೆ ತಮಿಳುನಾಡು, ಅಸ್ಸಾಂ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ, ಬಿಹಾರ, ರಾಜಸ್ಥಾನ ಮತ್ತು ದೆಹಲಿಯಲ್ಲಿ ಶೋಧ ಕಾರ್ಯಾಚರಣೆ ನಡೆಸಿತ್ತು. ಎರಡು ಪ್ರಮುಖ ಕಂಪನಿಗಳು ರಾಯಲ್ಟಿ ಸ್ವರೂಪದಲ್ಲಿ ವಿದೇಶದಲ್ಲಿರುವ ತನ್ನ ಗ್ರೂಪ್ ಕಂಪನಿಗಳ ಪರವಾಗಿ ₹5,500 ಕೋಟಿಗೂ ಹೆಚ್ಚು ಹಣ ಸಂದಾಯ ಮಾಡಿದೆ ಎಂದು ಬಹಿರಂಗವಾಗಿದೆ.

ಶೋಧನಾ ಕಾರ್ಯಾಚರಣೆಯಲ್ಲಿ ಪತ್ತೆ ಹಚ್ಚಲಾದ ಹೆಚ್ಚಿನ ಆದಾಯಗಳಿಗೆ ಸೂಕ್ತ ದಾಖಲೆಗಳಿಲ್ಲ ಎಂದು ಸಿಬಿಡಿಟಿ ಪ್ರಕಟಣೆ ತಿಳಿಸಿದೆ.

ಜ 12 ರಂದು ತಮಿಳುನಾಡಿಗೆ ಪ್ರಧಾನಿ ಭೇಟಿ, ಸುಗ್ಗಿ ಹಬ್ಬದಲ್ಲಿ ಭಾಗಿ

ಚೆನ್ನೈ: ತಮಿಳುನಾಡಿನ ಬಿಜೆಪಿ ಘಟಕವು ಮದುರೈನಲ್ಲಿ ಜನವರಿ 12 ರಂದು ಹಮ್ಮಿಕೊಂಡಿರುವ ಕಾರ್ಯಕ್ರಮವೊಂದರಲ್ಲಿ ಭಾಗವಹಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಇಲ್ಲಿಯ ಸುಗ್ಗಿ ಹಬ್ಬ ಪೊಂಗಲ್ ಅನ್ನು ಆಚರಿಸಲಿದ್ದಾರೆ.

ಈ ಕಾರ್ಯಕ್ರಮಕ್ಕೆ 'ಮೋದಿ ಪೊಂಗಲ್' ಎಂದೇ ಹೆಸರಿಡಲಾಗಿದೆ. ಈ ಕಾರ್ಯಕ್ರಮದಲ್ಲಿ ಇತರ ಚಟುವಟಿಕೆಗಳ ಜೊತೆಗೆ ಹಬ್ಬದಲ್ಲಿ ಪ್ರಮುಖವಾಗಿ ತಮಿಳು ಸಂಸ್ಕೃತಿಯ ಭಾಗವಾದ ಪೊಂಗಲ್ ಖಾದ್ಯವನ್ನು ಮಾಡಲಾಗುತ್ತದೆ ಎಂದು ಮೂಲಗಳು ಹೇಳಿವೆ.

ತಮಿಳುನಾಡಿನ ವಿವಿಧೆಡೆ ನಿರ್ಮಿಸಿರುವ11 ವೈದ್ಯಕೀಯ ಕಾಲೇಜುಗಳನ್ನು ಮೋದಿ ಅವರು ಉದ್ಘಾಟಿಸಲಿದ್ದಾರೆ. ಕಳೆದ ಏಪ್ರಿಲ್ 6ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆಗಿನ ಮೈತ್ರಿಯೊಂದಿಗೆ ಡಿಎಂಕೆ ಪಕ್ಷ ಜಯಗಳಿಸಿದ ನಂತರ ತಮಿಳುನಾಡಿಗೆ ಪ್ರಧಾನಿ ಅವರ ಮೊದಲ ಭೇಟಿ ಇದಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಸಕಲೇಶಪುರ;
ಕೂಳೆ 500- 550
ನಡುಗೋಲು 600-650
ರಾಶಿ 700-800
ರಾಶಿ ಉತ್ತಮ 800-900
ಜರಡಿ 1000 -1050
ಹೆರಕಿದ್ದು 1200-1300
ಹಸಿರು ಸಾಧಾರಣ 750-850
ಹಸಿರು ಉತ್ತಮ 900-1000
ಹಸಿರು ಅತಿ ಉತ್ತಮ 1300-1400
ಕಾಳು ಮೆಣಸು - 500

ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-53000
ಭದ್ರಾವತಿ
ರಾಶಿ 45669-47299
ಚಿತ್ರದುರ್ಗ
ಆಪಿ 46629-47079
ಬೆಟ್ಟೆ 39419-39889
ಕೆಂಪುಗೋಟು 32900-33300
ರಾಶಿ 46139-46569
ದಾವಣಗೆರೆ
ರಾಶಿ 43509-46499
ಹೊನ್ನಾಳಿ
ರಾಶಿ 47599-47599
ಕುಮಟಾ
ಚಿಪ್ಪು 25089-38019
ಕೋಕ 21019-29999
ಫ್ಯಾಕ್ಟರಿ 13509-18969
ಹಳೆಚಾಲಿ 46899-49899
ಹೊಸಚಾಲಿ 36509-41589
ಮಂಗಳೂರು
ಕೋಕ 24000-48000
ಪುತ್ತೂರು
ಕೋಕ 11000-26000
ಹೊಸತು 27500-45000
ಶಿಕಾರಿಪುರ
ಆಪಿ 43600-46400
ಶಿವಮೊಗ್ಗ
ಬೆಟ್ಟೆ 49710-53999
ಗೊರಬಲು 17400-36720
ರಾಶಿ 44199-47359
ಸರಕು 49000-74269
ಸಿದ್ದಾಪುರ
ಬಿಳಿಗೋಟು 28799-38812
ಚಾಲಿ 46509-48509
ಕೋಕ 25199-34999
ಹೊಸಚಾಲಿ 33099-40599
ಕೆಂಪುಗೋಟು 23899-34689
ರಾಶಿ 43599-48639
ತಟ್ಟಿಬೆಟ್ಟೆ 31689-43099
ಶಿರಸಿ
ಬೆಟ್ಟೆ 29899-47418
ಬಿಳಿಗೋಟು 21099-44113
ಚಾಲಿ 33669-49299
ರಾಶಿ 42899-48749
ಯಲ್ಲಾಪುರ
ಬಿಳಿಗೋಟು 28826-39069
ಚಾಲಿ 40000-49501
ಕೋಕ 22619-32199
ಕೆಂಪುಗೋಟು 28642-36016
ರಾಶಿ 44589-53219
ತಟ್ಟಿಬೆಟ್ಟೆ 38509-44100

ರಾಮನಗರ ರೇಷ್ಮೆ
ಮಿಶ್ರತಳಿ 325-657
ದ್ವಿತಳಿ 470-803

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,450	15400	15450	228.85ಸೆಂಟ್ಸ್
ಎಸಿ	7000	6800	6700	
ಆರ್‌ಪಿ	6500	6500	6,400	ಲಂಡನ್
ಆರ್‌ಸಿ	3900	4000	3,900	2490 ಡಾಲರ್ಸ್

ಚೆನ್ನೈ: ಸರ್ಕಾರಿ ಕಚೇರಿ, ಶೈಕ್ಷಣಿಕ ಸಂಸ್ಥೆಗಳಿಗೆ ರಜೆ

ಚೆನ್ನೈ: ತಮಿಳುನಾಡಿನ ಹಲವೆಡೆ ಶುಕ್ರವಾರ ಭಾರಿ ಮಳೆಯಾಗಿದೆ. ಚೆನ್ನೈ, ಕಾಂಚೀಪುರಂ, ತಿರುವಳ್ಳೂರುಗಳಲ್ಲಿ ಭಾರಿ ಮಳೆಯ ಕಾರಣ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಶಾಲೆ, ಕಾಲೇಜು ಹಾಗೂ ಸರ್ಕಾರಿ ಕಚೇರಿಗಳಿಗೆ ಶುಕ್ರವಾರ ರಜೆ ಘೋಷಿಸಿದ್ದಾರೆ.

ಜಲಾವೃತಗೊಂಡಿರುವ ಕಾರಣ ನಾಲ್ಕು ಸುರಂಗ ಮಾರ್ಗಗಳನ್ನು ಮುಚ್ಚಲಾಗಿದೆ. ಸ್ಟಾಲಿನ್ ಅವರು ಚೆನ್ನೈ ನಗರಪಾಲಿಕೆ ಆಯುಕ್ತ ಗಗನ್ ಸಿಂಗ್ ಬೇಡಿ ಹಾಗೂ ಇತರ ಅಧಿಕಾರಿಗಳ ಜತೆಗೆ ಚೆನ್ನೈಯ ಜಲಾವೃತ ಪ್ರದೇಶಗಳಿಗೆ ಭೇಟಿ ನೀಡಿ ಪರಾಮರ್ಶೆ ನಡೆಸಿದ್ದಾರೆ.



ಹೊಸ ವರುಷಕ್ಕೆ... ಕಾಶ್ಮೀರದ ಗುಲ್ಮಾರ್ಗ್‌ನ ಸ್ಕೀ ರೆಸಾರ್ಟ್‌ನ ಬಳಿ ಶುಕ್ರವಾರ ಪ್ರವಾಸಿಗರು ಹಿಮದ ಮೇಲೆ 'ಹ್ಯಾಪಿ ನ್ಯೂ ಇಯರ್ 2022' ಸಂದೇಶ ಬರೆದು ಖುಷಿಪಟ್ಟರು– ಪಿಟಿಐ ಚಿತ್ರ

ದೆಹಲಿ: ಮುಷ್ಕರ ಹಿಂಪಡೆದ ವೈದ್ಯರು

ಪ್ರಜಾವಾಣಿ ವಾರ್ತೆ

ನವದೆಹಲಿ: 'ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದ ಕೌನ್ಸೆಲಿಂಗ್ (ನೀಟ್–ಪಿಜಿ ಕೌನ್ಸೆಲಿಂಗ್) ವಿಳಂಬವಾಗುತ್ತಿರುವುದನ್ನು ಖಂಡಿಸಿ ಎರಡು ವಾರಗಳಿಂದ ಮುಷ್ಕರ ನಡೆಸುತ್ತಿದ್ದ ದೆಹಲಿಯ ವೈದ್ಯರು ಸರ್ಕಾರವು ಬೇಡಿಕೆಗಳನ್ನು ಈಡೇರಿಸುವ ಭರವಸೆ ಮೇರೆಗೆ ಶುಕ್ರವಾರ ಮುಷ್ಕರ ವಾಪಸ್ ಪಡೆದಿದ್ದಾರೆ' ಎಂದು ಸ್ಥಾನಿಕ ವೈದ್ಯರ ಸಂಘಗಳ ಒಕ್ಕೂಟ (ಎಫ್‌ಒಆರ್‌ಡಿಎ) ತಿಳಿಸಿದೆ.

'ಗುರುವಾರ ಸಂಜೆ ಸ್ಥಾನಿಕ ವೈದ್ಯರ ಸಂಘದ ಪ್ರತಿನಿಧಿಗಳೊಂದಿಗೆ ನಡೆದ ವರ್ಚುವಲ್ ಸಭೆಯಲ್ಲಿ ಡಿ. 31ರಂದು ಮುಷ್ಕರ ವಾಪಸ್ ಪಡೆಯುವ ಕುರಿತು ವಿವರವಾಗಿ ಚರ್ಚಿಸಲಾಯಿತು. ಶುಕ್ರವಾರ ಮಧ್ಯಾಹ್ನ 12ರ ವೇಳೆಗೆ ಮುಷ್ಕರವನ್ನು ಹಿಂಪಡೆಯಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು' ಎಂದು ಎಫ್‌ಒಆರ್‌ಡಿಎ ಮಾಹಿತಿ ನೀಡಿದೆ.

ಒಕ್ಕೂಟದ ಪ್ರತಿನಿಧಿಗಳು ಮತ್ತು ಪೊಲೀಸರ ಜತೆಗೆ ಗುರುವಾರ ಸರಣಿ ಸಭೆಗಳೂ ನಡೆದಿದ್ದವು. ಮುಷ್ಕರದ ವೇಳೆ ಪೊಲೀಸರು ಮತ್ತು ವೈದ್ಯರು ಮುಖಾಮುಖಿಯಾದ ಸಂದರ್ಭದಲ್ಲಿ ಸಹೋದ್ಯೋಗಿ ವೈದ್ಯರ ವಿರುದ್ಧ ದಾಖಲಿಸಲಾದ ಪೊಲೀಸ್ ಪ್ರಕರಣಗಳನ್ನು ಹಿಂಪಡೆಯುವಂತೆ ಎಫ್‌ಒಆರ್‌ಡಿಎ ಕೋರಿತ್ತು.

ಜ. 6ರಂದು ಎಲ್ಲಾ ನಿವಾಸಿ ವೈದ್ಯರ ಸಂಘಗಳ ಪ್ರತಿನಿಧಿಗಳ ರಾಷ್ಟ್ರೀಯ ಸಭೆಯನ್ನು ಕರೆಯಲಾಗುವುದು ಎಂದೂ ಒಕ್ಕೂಟ ತಿಳಿಸಿದೆ.

ಬೆಲೆ ಏರಿಕೆಯ ಹೊರೆ

ಒಂದನೇ ಪುಟದಿಂದ

'ಬ್ಯಾಂಕ್‌ಗಳ ವೆಚ್ಚಗಳು ಹೆಚ್ಚಾಗಿರುವ ಕಾರಣ, ಡೆಬಿಟ್ ಕಾರ್ಡ್ ನೀಡಿರುವ ಬ್ಯಾಂಕ್‌ನಿಂದ ಎಟಿಎಂ ನಿರ್ವಹಿಸುವ ಬ್ಯಾಂಕ್‌ಗೆ ನೀಡಬೇಕಿರುವ ಶುಲ್ಕ ಕೂಡ ಜಾಸ್ತಿ ಇರುವುದರಿಂದ ಗ್ರಾಹಕರಿಂದ ಪಡೆಯುವ ಸೇವಾ ಶುಲ್ಕ ಹೆಚ್ಚಿಸಲು ಅನುಮತಿ ನೀಡಲಾಗಿದೆ' ಎಂದು ಆರ್‌ಬಿಐ 2021ರ ಜೂನ್‌ನಲ್ಲಿ ಹೇಳಿತ್ತು.

₹ 1,000ಕ್ಕಿಂತ ಕಡಿಮೆ ಬೆಲೆಯ ಪಾದರಕ್ಷೆಗಳಿಗೆ ವಿಧಿಸುವ ಜಿಎಸ್‌ಟಿ ಪ್ರಮಾಣವು ಜ. 1ರಿಂದ ಶೇ 12ಕ್ಕೆ ಏರಿಕೆಯಾಗಲಿದೆ. ಹೀಗಾಗಿ, ಈ ಪಾದರಕ್ಷೆಗಳ ಬೆಲೆಯೂ ಹೆಚ್ಚಳ ಆಗಲಿದೆ. ಇದುವರೆಗೆ ಈ ಮೌಲ್ಯದ ಪಾದರಕ್ಷೆಗಳಿಗೆ ಶೇ 5ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿತ್ತು. ₹ 1,000ಕ್ಕಿಂತ ಹೆಚ್ಚಿನ ಮೌಲ್ಯದ ಪಾದರಕ್ಷೆಗಳ ಜಿಎಸ್‌ಟಿ ಪ್ರಮಾಣದಲ್ಲಿ ಹೆಚ್ಚಳ ಆಗಿಲ್ಲ. ಹಾಗಾಗಿ, ಅವುಗಳ ಬೆಲೆಯಲ್ಲಿ ಬದಲಾವಣೆ ಆಗುವ ಸಾಧ್ಯತೆ ಇಲ್ಲ.

ದ್ವಿಚಕ್ರ ವಾಹನ ಹಾಗೂ ಕಾರುಗಳ ಬೆಲೆಯಲ್ಲಿ ಕೂಡ ಜನವರಿಯಲ್ಲಿ ಹೆಚ್ಚಳ ಆಗಲಿದೆ. ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿರುವ ಕಾರಣ ಹೀರೊ ಮೋಟೊಕಾರ್ಪ್ ಕಂಪನಿಯ ದ್ವಿಚಕ್ರ ವಾಹನಗಳ ಬೆಲೆಯು ಜನವರಿ 4ರಿಂದ ಕನಿಷ್ಠ ₹ 2,000ದಷ್ಟು ಹೆಚ್ಚಾಗಲಿದೆ. ದೇಶದ ಪ್ರಮುಖ ಕಾರು ತಯಾರಿಕಾ ಕಂಪನಿಗಳಾದ ಮಾರುತಿ ಸುಜುಕಿ, ಟಾಟಾ ಮೋಟರ್ಸ್, ಟೊಯೋಟ ಕಿರ್ಲೋಸ್ಕರ್ ಮೋಟರ್ಸ್, ಸ್ಕೋಡಾ ಇಂಡಿಯಾ ಉತ್ಪಾದನಾ ವೆಚ್ಚ ಹೆಚ್ಚಳದ ಕಾರಣ ತಮ್ಮ ಕಾರು ಮಾದರಿಗಳ ಬೆಲೆಯನ್ನು ಜನವರಿಯಿಂದ ಅನ್ವಯವಾಗುವಂತೆ ಹೆಚ್ಚಿಸುವುದಾಗಿ ಹೇಳಿವೆ.

ಬ್ಯಾಂಕ್ ಲಾಕರ್‌ಗಳಿಗೆ ಹೊಸ ನಿಯಮ

ಬ್ಯಾಂಕ್ ಲಾಕರ್‌ಗಳ ವಿಚಾರವಾಗಿ ಆರ್‌ಬಿಐ ಪರಿಷ್ಕರಿಸಿರುವ ನಿಯಮಗಳು ಜ. 1ರಿಂದ ಜಾರಿಗೆ ಬರಲಿವೆ. ಯಾವುದೇ ಪ್ರಾಕೃತಿಕ ವಿಕೋಪದಿಂದಾಗಿ, ಭೂಕಂಪ, ಪ್ರವಾಹ, ಸಿಡಿಲು ಅಥವಾ ಮನುಷ್ಯನ ನಿಯಂತ್ರಣಕ್ಕೆ ಮೀರಿದ ಸಂಗತಿಗಳಿಂದಾಗಿ, ಗ್ರಾಹಕನ ಪೂರ್ಣ ಅಜಾರೂಕತೆಯಿಂದಾಗಿ ಲಾಕರ್‌ನಲ್ಲಿ ಇರಿಸಿದ ವಸ್ತುವಿಗೆ ಹಾನಿಯಾದರೆ ಬ್ಯಾಂಕ್ ಹೊಣೆಗಾರ ಅಲ್ಲ. ಆದರೆ, ಲಾಕರ್ ಇರುವ ಸ್ಥಳದ ಸುರಕ್ಷತೆಯ ಮೇಲೆ ನಿಗಾ ಇಡಬೇಕಾಗಿರುವುದು ಬ್ಯಾಂಕ್‌ನ ಹೊಣೆ ಎಂದು ನಿಯಮಗಳಲ್ಲಿ ಹೇಳಲಾಗಿದೆ. ಲಾಕರ್ ಹಂಚಿಕೆಯಲ್ಲಿ ಪಾರದರ್ಶಕತೆ ಇರಬೇಕು ಎಂದು ಆರ್‌ಬಿಐ ತಾಕೀತು ಮಾಡಿದೆ.

'ಅಗ್ನಿ ಅನಾಹುತ, ಕಳ್ಳತನ ಅಥವಾ ಬ್ಯಾಂಕ್ ಸಿಬ್ಬಂದಿಯಿಂದ ವಂಚನೆ ನಡೆದಲ್ಲಿ ಬ್ಯಾಂಕ್ ಹೊಣೆ ಹೊರಬೇಕಾಗುತ್ತದೆ. ಆ ಹೊಣೆಯು ಲಾಕರ್‌ನ ಅಂದಿನ ವಾರ್ಷಿಕ ಬಾಡಿಗೆ ಮೊತ್ತದ ನೂರುಪಟ್ಟಿಗೆ ಸೀಮಿತ ಆಗಿರುತ್ತದೆ' ಎಂದು ನಿಯಮಗಳು ಹೇಳುತ್ತವೆ. ಸರ್ಕಾರಿ ಸ್ವಾಮ್ಯದ ದೊಡ್ಡ ಬ್ಯಾಂಕೊಂದು ಸಣ್ಣ ಗಾತ್ರದ ಲಾಕರ್ ಸೌಲಭ್ಯಕ್ಕೆ ವಾರ್ಷಿಕ ₹ 2,000, ಮಧ್ಯಮ ಗಾತ್ರದ ಲಾಕರ್‌ಗೆ ₹ 4,000 (ನಗರ ಮತ್ತು ಮಹಾನಗರಗಳಲ್ಲಿ) ಹಾಗೂ ದೊಡ್ಡ ಪ್ರಮಾಣದ ಲಾಕರ್‌ಗೆ ₹ 8,000 ಬಾಡಿಗೆ ಪಡೆಯುತ್ತದೆ. ಈ ಮೊತ್ತದಲ್ಲಿ ಜಿಎಸ್‌ಟಿ ಸೇರಿಲ್ಲ.


ರಾಜ್ಯದ 10 ಪೊಲೀಸರಿಗೆ ಕೇಂದ್ರದ ಪದಕ

ಬೆಂಗಳೂರು: ತರಬೇತಿ ಅವಧಿಯಲ್ಲಿ ಉತ್ತಮ ಸಾಧನೆ ಮಾಡಿರುವ ರಾಜ್ಯದ 10 ಪೊಲೀಸರಿಗೆ ಕೇಂದ್ರ ಗೃಹ ಸಚಿವಾಲಯದ 2020–21ನೇ ಸಾಲಿನ ಪದಕ ಲಭಿಸಿದೆ.

'ಪೊಲೀಸರ ಸಾಧನೆ ಪರಿಗಣಿಸಿ ಪದಕಕ್ಕೆ ಆಯ್ಕೆ ಮಾಡಲಾಗಿದೆ' ಎಂದು ಕೇಂದ್ರ ಗೃಹ ಸಚಿವಾಲಯ ಶುಕ್ರವಾರ ಆದೇಶ ಹೊರಡಿಸಿದೆ.



ಶ್ರೀಶೈಲ ಪಿ.ಚೌಗುಲಾ




ತಮ್ಮಣ್ಣ ರಾಮಪ್ಪ



ಶ್ರೀಕಾಂತ್ ನಾಯ್ಕ್



ಜ್ಞಾನದೇವ ನಾವಳ



ರುದ್ರಯ್ಯ ಮಹಾಂತಯ್ಯ ಗಂಜಿಗಟ್ಟಿ

ಪದಕ ಪಡೆದವರು: ರುದ್ರಯ್ಯ ಮಹಾಂತಯ್ಯ ಗಂಜಿಗಟ್ಟಿ (ಕಾನೂನು ಅಧಿಕಾರಿ), ಶ್ರೀಕಾಂತ್ ನಾಯ್ಕ್ (ಸ್ಪೆಷಲ್ ರಿಸರ್ವ್ ಪೊಲೀಸ್ ಇನ್‌ಸ್ಪೆಕ್ಟರ್), ಶ್ರೀಶೈಲ ಪಿ.ಚೌಗುಲಾ (ಸ್ಪೆಷಲ್ ರಿಸರ್ವ್ ಪೊಲೀಸ್ ಇನ್‌ಸ್ಪೆಕ್ಟರ್), ವನಮಾಲಾ ಶರೀಫ್ ಶಿವಯೋಗಿ ದಾನಣ್ಣವರ್ (ಪೊಲೀಸ್ ಸಬ್ ಇನ್‌ಸ್ಪೆಕ್ಟರ್), ಸಪ್ನಾ ಶಿವಾನಂದ ಹಾವನೂರ (ಪೊಲೀಸ್ ಸಬ್ ಇನ್‌ಸ್ಪೆಕ್ಟರ್), ಕಾಶಿರಾಯ ಫಕೀರಪ್ಪ ಗೊಂಗಡೆ (ಸಶಸ್ತ್ರ ಪಡೆಯ ಹೆಡ್ ಕಾನ್‌ಸ್ಟೆಬಲ್), ಜ್ಞಾನದೇವ ನಾವಳ (ಸ್ಪೆಷಲ್ ರಿಸರ್ವ್ ಹೆಡ್ ಕಾನ್‌ಸ್ಟೆಬಲ್), ತಮ್ಮಣ್ಣ ರಾಮಪ್ಪ ಗೊರಬಾಳ (ಸ್ಪೆಷಲ್ ರಿಸರ್ವ್ ಹೆಡ್ ಕಾನ್‌ಸ್ಟೆಬಲ್), ಎಂ.ಸುಬ್ರಹ್ಮಣ್ಯ ಶರ್ಮಾ (ಮೊದಲ ದರ್ಜೆ ಸಹಾಯಕ), ಟಿ.ಪಿ.ಶ್ವೇತಾ (ಮೊದಲ ದರ್ಜೆ ಸಹಾಯಕಿ).

ಲಂಚದ ಆರೋಪ: ಎನ್‌ಎಚ್‌ಎಐ ಅಧಿಕಾರಿ, ಗುತ್ತಿಗೆದಾರರನ್ನು ಬಂಧಿಸಿದ ಸಿಬಿಐ

ನವದೆಹಲಿ: ₹ 20 ಲಕ್ಷ ಲಂಚ ಪಡೆದ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಪ್ರಾದೇಶಿಕ ಅಧಿಕಾರಿ, ಭೋಪಾಲ್ ಮೂಲದ ನಿರ್ಮಾಣ ಸಂಸ್ಥೆ ದಿಲೀಪ್ ಬಿಲ್ಡ್‌ಕಾನ್ ಉನ್ನತ ಅಧಿಕಾರಿಗಳು ಸೇರಿದಂತೆ ಐದು ಮಂದಿಯನ್ನು ಸಿಬಿಐ ಶುಕ್ರವಾರ ಬಂಧಿಸಿದೆ.

ಬಂಧಿತರಲ್ಲಿ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಪ್ರಾದೇಶಿಕ ಅಧಿಕಾರಿ ಅಖಿಲ್ ಅಹ್ಮದ್ (ಬೆಂಗಳೂರಿನಲ್ಲಿ ನಿಯೋಜನೆಗೊಂಡಿರುವವರು), ದಿಲೀಪ್ ಬಿಲ್ಡ್‌ಕಾನ್ ನಿರ್ಮಾಣ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ರತನ್‌ಕರಣ್ ಸಜ್ಜಿಲಾಲ್, ಕಾರ್ಯಕಾರಿ ನಿರ್ದೇಶಕ ದೇವೇಂದ್ರ ಜೈನ್, ಉನ್ನತ ಅಧಿಕಾರಿ ಸುನೀಲ್ ಕುಮಾರ್ ವರ್ಮಾ ಸೇರಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಅನುಜ್ ಗುಪ್ತಾ ಎಂಬುವರನ್ನೂ ಬಂಧಿಸಲಾಗಿದೆ ಎಂದು ಸಿಬಿಐ ಮಾಹಿತಿ ಮಾಡಿದೆ.

ಎನ್‌ಎಚ್‌ಎಐ ಗುತ್ತಿಗೆದಾರರು ತಮ್ಮ ಬಾಕಿ ಇರುವ ಬಿಲ್‌ಗಳನ್ನು ತೆರವುಗೊಳಿಸಲು ಮತ್ತು ಪೂರ್ಣಗೊಂಡ ಯೋಜನೆಗಳಿಗೆ ತಾತ್ಕಾಲಿಕ ವಾಣಿಜ್ಯ ಕಾರ್ಯಾಚರಣೆ ದಿನಾಂಕವನ್ನು (ಪಿಸಿಒಡಿ) ನೀಡಲು ಅಹ್ಮದ್ ಅವರು ಲಂಚ ಪಡೆಯುತ್ತಿದ್ದರು ಎಂದು ಸಿಬಿಐ ಆರೋಪಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಷ್ಟೇ ಅಲ್ಲದೆ, ಅಹ್ಮದ್ ಅವರು ಬೆಂಗಳೂರು– ಚೆನ್ನೈ ಎಕ್ಸ್‌ಪ್ರೆಸ್‌ವೇ ಪ್ಯಾಕೇಜ್ 1 ಮತ್ತು 2ರ ಅಡಿಯಲ್ಲಿ ಕರ್ನಾಟಕದ ಖಾಸಗಿ ಕಂಪನಿಯು ಕಾರ್ಯಗತಗೊಳಿಸಿದ ಯೋಜನೆಗೆ ಸಂಬಂಧಿಸಿದಂತೆ ಬೆಂಗಳೂರು ಖಾಸಗಿ ಕಂಪನಿ, ಸೈಟ್ ಆಫೀಸ್, ಬೆಂಗಳೂರಿನ ಜನರಲ್ ಮ್ಯಾನೇಜರ್‌ವೊಬ್ಬರಿಂದ 'ಪ್ರತಿಫಲಾಪೇಕ್ಷೆ' ಬಯಸಿದ್ದರು ಎಂದು ಆರೋಪಿಸಲಾಗಿದೆ ಎಂದು ಸಿಬಿಐ ವಕ್ತಾರ ಆರ್.ಸಿ. ಜೋಶಿ ಹೇಳಿದ್ದಾರೆ.

ನಂತರ, ಸಿಬಿಐ ಶುಕ್ರವಾರ ನವದೆಹಲಿ, ಬೆಂಗಳೂರು, ಕೊಚ್ಚಿನ್, ಗುರ್‌ಗಾಂವ್ ಮತ್ತು ಭೋಪಾಲ್‌ನ ಅನೇಕ ಸ್ಥಳಗಳಲ್ಲಿ ಶೋಧ ನಡೆಸಿತು.

'ಅರುಣಾಚಲ ಪ್ರದೇಶವು ಚೀನಾದ ಅಂತರ್ಗತ ಭಾಗ'

ಬೀಜಿಂಗ್: ಭಾರತದ ಈಶಾನ್ಯ ರಾಜ್ಯ ಅರುಣಾಚಲ ಪ್ರದೇಶದ 15 ಸ್ಥಳಗಳ ಹೆಸರುಗಳ ಮರುನಾಮಕರಣವನ್ನು ಶುಕ್ರವಾರ ಸಮರ್ಥಿಸಿಕೊಂಡಿರುವ ಚೀನಾ, ಟಿಬೆಟ್‌ನ ದಕ್ಷಿಣ ಭಾಗವು (ಅರುಣಾಚಲ ಪ್ರದೇಶ) ತನ್ನ ಭೂಪ್ರದೇಶದ 'ಅಂತರ್ಗತ ಭಾಗ' ಎಂದು ಪ್ರತಿಪಾದಿಸಿದೆ. ಅರುಣಾಚಲಪ್ರದೇಶದ 15 ಸ್ಥಳಗಳನ್ನು ಮರುನಾಮಕರಣ ಮಾಡಿರುವ ಚೀನಾದ ಕ್ರಮವನ್ನು ಗುರುವಾರ ಬಲವಾಗಿ ತಿರಸ್ಕರಿಸಿದ್ದ ಭಾರತ, 'ಅರುಣಾಚಲಪ್ರದೇಶ ರಾಜ್ಯವು ಯಾವಾಗಲೂ ಭಾರತದೊಂದಿಗೆ ಇತ್ತು, ಅದು ಭಾರತದ ಅವಿಭಾಜ್ಯ ಅಂಗವಾಗಿದೆ. ಹೆಸರುಗಳನ್ನು ಮರುನಾಮಕಾರಣ ಮಾಡಿದ ಮಾತ್ರಕ್ಕೆ ಸತ್ಯವನ್ನು ಬದಲಾಯಿಸಲಾಗದು' ಎಂದೂ ಪ್ರತಿಪಾದಿಸಿತ್ತು. ಭಾರತದ ಸಮರ್ಥನೆ ಮತ್ತು ಪ್ರತಿಪಾದನೆಯ ಕುರಿತು ಶುಕ್ರವಾರ ಪ್ರತಿಕ್ರಿಯಿಸಿರುವ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಜಾವೊ ಲಿಜಿಯಾನ್ ಅವರು, 'ಟಿಬೆಟ್‌ನ ದಕ್ಷಿಣ ಭಾಗವು ಅರ್ಥಾತ್ ಅರುಣಾಚಲಪ್ರದೇಶವು ಟಿಬೆಟ್ ಸ್ವಾಯತ್ತ ಪ್ರದೇಶವಾದ ಚೀನ್‌ಗೆ ಸೇರಿದೆ ಮತ್ತು ಚೀನಾದ ಅಂತರ್ಗತ ಪ್ರದೇಶವಾಗಿದೆ' ಎಂದಿದ್ದಾರೆ.



19 ವರ್ಷದೊಳಗಿನವರ ಏಷ್ಯಾಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ವಿಜೇತ ಭಾರತ ತಂಡದ ಆಟಗಾರರ ಸಂಭ್ರಮ– ಟ್ವಿಟರ್ ಚಿತ್ರ

19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್: ಶ್ರೀಲಂಕಾ ಮಣಿಸಿದ ಭಾರತ

ದಾಖಲೆಯ ಚಾಂಪಿಯನ್ ಪಟ್ಟ

ದುಬೈ (ಪಿಟಿಐ): ಶ್ರೀಲಂಕಾ ಬ್ಯಾಟಿಂಗ್ ಬಳಗವನ್ನು ದೂಳೀಪಟ ಮಾಡಿದ ಭಾರತ ತಂಡ 19 ವರ್ಷದೊಳಗಿನವರ ಏಷ್ಯಾಕಪ್ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆಯಿತು. ಈ ಮೂಲಕ ಎಂಟನೇ ಪ್ರಶಸ್ತಿ ಗೆದ್ದು ದಾಖಲೆ ಬರೆಯಿತು.

ಎದುರಾಳಿಗಳನ್ನು 106 ರನ್‌ಗಳಿಗೆ ನಿಯಂತ್ರಿಸಿದ ಭಾರತದ ಬೌಲರ್‌ಗಳು ಜಯದ ರೂವಾರಿಗಳಾದರು. 32 ಓವರ್‌ಗಳಲ್ಲಿ 102 ರನ್‌ಗಳ ಪರಿಷ್ಕೃತ ಗುರಿಯನ್ನು ಭಾರತ 21.3 ಓವರ್‌ಗಳಲ್ಲಿ ಯಶಸ್ವಿಯಾಗಿ ದಾಟಿತು.

ತಂಡದ ಮೊತ್ತ ಎಂಟು ರನ್ ಆಗಿದ್ದಾಗ ಹರ್ನೂರ್ ಸಿಂಗ್ ವಿಕೆಟ್ ಕಳೆದುಕೊಂಡರು. ಅವರು ಟೂರ್ನಿಯಲ್ಲಿ ಗರಿಷ್ಠ ರನ್ ಗಳಿಸಿದವರ ಪಟ್ಟಿಯ ಮೊದಲ ಸ್ಥಾನದಲ್ಲಿದ್ದಾರೆ. ಅವರು ಔಟಾದ ನಂತರ ಅಂಕೃಷ್ ರಘುವಂಶಿ ಮತ್ತು ಶೇಕ್ ರಶೀದ್ ಅವರ ಜೊತೆಯಾಟ ರಂಗೇರಿತು. 96 ರನ್‌ಗಳ ಜೊತೆಯಾಟವಾಡಿದ ಇವರಿಬ್ಬರು ಎದುರಾಳಿ ತಂಡದ ಬೌಲರ್‌ಗಳನ್ನು ಕಾಡಿದರು.

ಅಂಕೃಷ್ ತಾಳ್ಮೆಯ ಬ್ಯಾಟಿಂಗ್ ಮೂಲಕ 67 ಎಸೆತಗಳಲ್ಲಿ 56 ರನ್ ಗಳಿಸಿದರೆ ಶೇಕ್ 49 ಎಸೆತಗಳಲ್ಲಿ 31 ರನ್ ಗಳಿಸಿ ಸುಲಭ ಜಯಕ್ಕೆ ಕಾಣಿಕೆ ನೀಡಿದರು.

ಹಿಂದಿನ ಪಂದ್ಯಗಳಲ್ಲಿ ಮಿಂಚಲು ವಿಫಲರಾಗಿದ್ದ ಅಂಕೃಷ್ ಈ ಪಂದ್ಯದಲ್ಲಿ ಆತ್ಮವಿಶ್ವಾಸದಲ್ಲಿ ಆಡಿದರು. ಬ್ಯಾಕ್‌ಫುಟ್ ಪಂಚ್‌ಗಳ ಮೂಲಕ ಆರಂಭದಲ್ಲೇ ಸುಲಭವಾಗಿ ರನ್ ಕಲೆ ಹಾಕಿದ ಅವರು ವೇಗದ ಬೌಲರ್‌ಗಳನ್ನೂ ಸ್ಪಿನ್ನರ್‌ಗಳನ್ನೂ ದಿಟ್ಟವಾಗಿ ಎದುರಿಸಿದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಶ್ರೀಲಂಕಾ 19 ವರ್ಷದೊಳಗಿನ ತಂಡ 33 ಓವರ್‌ಗಳಲ್ಲಿ 74 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿದ್ದಾಗ ಮಳೆ ಸುರಿಯಿತು. ಎರಡು ತಾಸುಗಳಿಗೂ ಹೆಚ್ಚು ಸಮಯ ಪಂದ್ಯ ಸ್ಥಗಿತಗೊಳಿಸಲಾಯಿತು. ನಂತರ ಪಂದ್ಯವನ್ನು 38 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ರಾಜ್ಯವರ್ಧನ್ ಹಂಗರ್‌ಗೇಕರ್ ಮತ್ತು ರವಿ ಕುಮಾರ್ ಅವರು ಭಾರತದ ಬೌಲಿಂಗ್ ವಿಭಾಗದಲ್ಲಿ ಮಿಂಚಿದರು. ಓಸ್ತವಾಲ್ ಅವರು ಕೂಡ ಅತ್ಯುತ್ತಮ ಕಾಣಿಕೆ ನೀಡಿದರು.

ಟೂರ್ನಿಯುದ್ದಕ್ಕೂ ಭಾರತ ಪಾರಮ್ಯ ಮೆರೆದಿತ್ತು. ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನದ ಎದುರು ಮಾತ್ರ ತಂಡ ಸೋತಿತ್ತು. ಆದರೆ ಸೆಮಿಫೈನಲ್‌ನಲ್ಲಿ ಪಾಕಿಸ್ತಾನವನ್ನು ಶ್ರೀಲಂಕಾ ಮಣಿಸಿತ್ತು.

ಯಶ್ ಧೂಲ್ ನಾಯಕತ್ವದ ಭಾರತ ತಂಡ 19 ವರ್ಷದೊಳಗಿನವರ ವಿಶ್ವಕಪ್‌ಗೆ ಭರವಸೆಯಿಂದ ಸಾಗಲಿದೆ. ಟೂರ್ನಿಯು ಜನವರಿ 14ರಿಂದ ವೆಸ್ಟ್ ಇಂಡೀಸ್‌ನಲ್ಲಿ ನಡೆಯಲಿದೆ.

ಸ್ಕೋರ್ ಕಾರ್ಡ್

ಶ್ರೀಲಂಕಾ 9ಕ್ಕೆ 106 (38 ಓವರ್)

ಚಾಮಿಂದು ಸಿ ಬಾವಾ ಬಿ ರವಿ 2 (12 ಎ), ಶೆವಾನ್ ಸಿ ಆರಾಧ್ಯ ಬಿ ಬಾವಾ 6 (28 ಎ), ಅಂಜಲ ಎಲ್‌ಬಿಡಬ್ಲ್ಯು ಬಿ ತಾಂಬೆ 9 (33 ಎ, 4x1), ಸದೀಶ ಸಿ ರಶೀದ್ ಬಿ ಓಸ್ತವಾಲ್ 14 (36 ಎ, 4x1), ಪವನ್ ಬಿ ತಾಂಬೆ 4 (17 ಎ), ರಾಣುಡ ಎಲ್‌ಬಿಡಬ್ಲ್ಯು ಬಿ ಓಸ್ತವಾಲ್ 7 (18 ಎ, 4x1), ದುನಿತ್ ಸಿ ಬಾವಾ ಬಿ ಓಸ್ತವಾಲ್ 9 (15 ಎ, 4x1), ರವೀನ್ ರನೌಟ್ (ರಶೀದ್) 15 (29 ಎ, 4x1), ಯಾಸಿರು ಔಟಾಗದೆ 19 (26 ಎ, 4x2), ಮತೀಶ ಸಿ ರಘುವಂಶಿ ಬಿ ಹಂಗರ್‌ಗೇಕರ್ 14 (14 ಎ, 4x1)

ಇತರೆ (ಲೆಗ್‌ಬೈ 1, ವೈಡ್ 6) 7

ವಿಕೆಟ್ ಪತನ: 1-4 (ಚಾಮಿಂದು ವಿಕ್ರಮಸಿಂಘೆ, 3.4), 2-15 (ಶೆವಾನ್ ಡ್ಯಾನಿಯಲ್, 10.3), 3-31 (ಅಂಜಲ ಭಂಡಾರ, 15.3), 4-37 (ಪವನ್ ಪಥಿರಾಜ, 19.4), 5-47 (ಸದೀಶ ರಾಜಪಕ್ಸೆ, 22.3), 6-57 (ದುನಿತ್ ವೆಳ್ಳಲಗೆ, 26.1), 7-57 (ರಾಣುಡ ಸೋಮರತ್ನೆ, 26.3), 8-82 (ರವೀನ್ ಡಿ ಸಿಲ್ವಾ, 34.4), 9-106 (ಮತೀಶ ಪತಿರನ, 37.6)

ಬೌಲಿಂಗ್: ರಾಜವರ್ಧನ್ ಹಂಗರ್‌ಗೇಕರ್ 8–1–26–1, ರವಿ ಕುಮಾರ್ 8–1–17–1, ರಾಜ್ ಬಾವಾ 7–0–23–1, ಕೌಶಲ್ ತಾಂಬೆ 6–0–23–2, ವಿಕ್ಕಿ ಓಸ್ತವಾಲ್ 8–3–11–3, ನಿಶಾಂತ್ ಸಿಂಧು 1–0–5–0

ಭಾರತ 1 ವಿಕೆಟ್‌ಗೆ 104 (21.3 ಓವರ್)

ಅಂಕೃಷ್ ಔಟಾಗದೆ 56 (67 ಎ, 4x7), ಹರ್ನೂರ್ ಎಲ್‌ಬಿಡಬ್ಲ್ಯು ಬಿ ರಾಡ್ರಿಗೊ 5 (13 ಎ), ರಶೀದ್ ಔಟಾಗದೆ 31 (49 ಎ, 4x2)

ಇತರೆ (ಲೆಗ್‌ಬೈ 1, ವೈಡ್ 11) 12

ವಿಕೆಟ್ ಪತನ: 1-8 (ಹರ್ನೂರ್ ಸಿಂಗ್, 4.1)

ಬೌಲಿಂಗ್: ಯಾಸಿರು ರಾಡ್ರಿಗೊ 3–1–12–1, ಟ್ರೆವೀನ್ ಮ್ಯಾಥ್ಯೂ 2–1–2–0, ದುನಿತ್ ವೆಳ್ಳಲಗೆ 6–0–30–0, ಚಾಮಿಂದು ವಿಕ್ರಮಸಿಂಘೆ 2–0–11–0, ಮತೀಶ್ ಪತಿರನ 3.3–0–20–0, ರವೀನ್ ಡಿ ಸಿಲ್ವ 2–0–14–0, ಸದೀಶ್ ರಾಜಪಕ್ಸ 3–0–14–0

ಫಲಿತಾಂಶ: ಭಾರತ ತಂಡಕ್ಕೆ 9 ವಿಕೆಟ್‌ಗಳ ಜಯ; ಪ್ರಶಸ್ತಿ

ಆಸ್ಪತ್ರೆಯಿಂದ ಮನೆಗೆ ಮರಳಿದ ಗಂಗೂಲಿ




ಸೌರವ್ ಗಂಗೂಲಿ

ಕೋಲ್ಕತ್ತ (ಪಿಟಿಐ): ಕೋವಿಡ್–19ರಿಂದ ಬಳಲುತ್ತಿದ್ದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಅಧ್ಯಕ್ಷ ಸೌರವ್ ಗಂಗೂಲಿ ಅವರು ಶುಕ್ರವಾರ ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ. ಆದರೆ, ಮನೆಯಲ್ಲೇ ಪ್ರತ್ಯೇಕ ವಾಸಕ್ಕೆ ಒಳಗಾಗಲಿದ್ದಾರೆ.

ಗಂಗೂಲಿ ಅವರಿಗೆ ಕೊರೊನಾ ಸೋಂಕು ಇರುವುದು ಸೋಮವಾರ ಖಚಿತಪಟ್ಟಿತ್ತು. ಹೀಗಾಗಿ ಮುನ್ನೆಚ್ಚರಿಕಾ ಕ್ರಮವಾಗಿ ಅವರನ್ನು ಕೋಲ್ಕತ್ತದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗಂಗೂಲಿ ಆರೋಗ್ಯ ಸ್ಥಿರವಾಗಿರುವುದಾಗಿ ಆಸ್ಪತ್ರೆಯ ವೈದ್ಯರು ಬುಧವಾರ ತಿಳಿಸಿದ್ದರು. ಗಂಗೂಲಿ ಅವರು ಈ ವರ್ಷ ಮೂರನೇ ಬಾರಿಗೆ ಆಸ್ಪತ್ರೆಗೆ ದಾಖಲಾಗಿದ್ದರು. ಜನವರಿಯಲ್ಲಿ ಎದೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮೊದಲ ಬಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಮನೆಯಲ್ಲಿ ದೈಹಿಕ ಕಸರತ್ತು ನಡೆಸುತ್ತಿದ್ದಾಗ ಅವರಿಗೆ ಲಘು ಹೃದಯಾಘಾತವಾಗಿತ್ತು.

ಸ್ಕೇಟಿಂಗ್: ಮನೋಮಯ್‌ಗೆ ಬೆಳ್ಳಿ ಪದಕ



ಮನೋಮಯ್

ಬೆಂಗಳೂರು: ಕರ್ನಾಟಕದ ಮನೋಮಯ್ ಎಚ್‌. ಎಂ. ರಾಷ್ಟ್ರೀಯ ಸ್ಪೀಡ್ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.

ದೆಹಲಿಯಲ್ಲಿ ಇತ್ತೀಚೆಗೆ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಮನೋಮಯ್ 11 ರಿಂದ 14 ವರ್ಷದೊಳಗಿನವರ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಮನೋಮಯ್, ವಿದ್ಯಾರಣ್ಯಪುರದ ಬೃಂದಾವನ ಕ್ಲಬ್‌ನ ನಾಗೇಶ್ ಸಿ.ಎಂ. ಮತ್ತು ಮಧುಚಂದ್ರ ಸಿ.ಎಂ. ಅವರಿಂದ ತರಬೇತಿ ಪಡೆದಿದ್ದು ಯುರೋ ಶಾಲೆಯ 8ನೇ ತರಗತಿ ವಿದ್ಯಾರ್ಥಿಯಾಗಿದ್ದಾರೆ.

ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಸರಣಿ

ರಾಹುಲ್‌ಗೆ ನಾಯಕ ಪಟ್ಟ

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಭಾರತ ತಂಡವನ್ನು ಕನ್ನಡಿಗ ಕೆ.ಎಲ್. ರಾಹುಲ್ ಮುನ್ನಡೆಸುವರು. ವೇಗಿ ಜಸ್‌ಪ್ರೀತ್ ಬೂಮ್ರಾ ಉಪನಾಯಕನಾಗಿ ನೇಮಕಗೊಂಡಿದ್ದಾರೆ.

18 ಮಂದಿಯ ತಂಡವನ್ನು ಆಯ್ಕೆ ಸಮಿತಿ ಶುಕ್ರವಾರ ಪ್ರಕಟಿಸಿದ್ದು ನಾಯಕ ರೋಹಿತ್ ಶರ್ಮಾ ಅವರನ್ನು ಕೈಬಿಡಲಾಗಿದೆ. ಅವರು ಮಂಡಿರಜ್ಜು ಗಾಯದಿಂದ ಬಳಲುತ್ತಿದ್ದಾರೆ.

ಫಿಟ್‌ನೆಸ್ ಸಮಸ್ಯೆ ಕಾಡುತ್ತಿರುವ ಆಲ್‌ರೌಂಡರ್ ಅಕ್ಷರ್ ಪಟೇಲ್ ಮತ್ತು ರವೀಂದ್ರ ಜಡೇಜ ಅವರಿಗೂ ಸ್ಥಾನ ಸಿಗಲಿಲ್ಲ. ಟೆಸ್ಟ್ ಸರಣಿಯಲ್ಲಿ ಆಡುತ್ತಿರುವ ಅನುಭವಿ ವೇಗದ ಬೌಲರ್ ಮೊಹಮ್ಮದ್ ಶಮಿ ಅವರಿಗೆ ವಿಶ್ರಾಂತಿ ನೀಡಲಾಗಿದೆ.

3 ಪಂದ್ಯಗಳ ಏಕದಿನ ಸರಣಿ ಜನವರಿ 19ರಂದು ಆರಂಭವಾಗಲಿದೆ. 21 ಮತ್ತು 23ರಂದು ಎರಡು ಮತ್ತು ಮೂರನೇ ಪಂದ್ಯ ನಡೆಯಲಿದೆ.

ರೋಹಿತ್ ಶರ್ಮಾ ಮತ್ತು ಜಡೇಜ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಪುನಶ್ಚೇತನ ಶಿಬಿರದಲ್ಲಿದ್ದಾರೆ. ವಿಜಯ್ ಹಜಾರೆ ಟ್ರೋಫಿ ಟೂರ್ನಿ ಮುಕ್ತಾಯವಾದ ಕೂಡಲೇ ಆಯ್ಕೆ ಸಮಿತಿಯ ಸಭೆ ನಡೆಸಲು ನಿರ್ಧರಿಸಲಾಗಿತ್ತು. ಆದರೆ ರೋಹಿತ್ ಅವರಿಗೆ ಚೇತರಿಸಿಕೊಳ್ಳಲು ಅವಕಾಶ ನೀಡುವ ಉದ್ದೇಶದಿಂದ ಮುಂದೂಡಲಾಗಿತ್ತು.

ತಂಡ: ಕೆ.ಎಲ್.ರಾಹುಲ್ (ನಾಯಕ), ಜಸ್‌ಪ್ರೀತ್ ಬೂಮ್ರಾ (ಉಪನಾಯಕ), ಶಿಖರ್ ಧವನ್, ಋತುರಾಜ್ ಗಾಯಕವಾಡ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ವೆಂಕಟೇಶ್ ಅಯ್ಯರ್, ರಿಷಭ್ ಪಂತ್ (ವಿಕೆಟ್ ಕೀಪರ್), ಇಶಾನ್ ಕಿಶನ್ (ವಿಕೆಟ್ ಕೀಪರ್), ಯಜುವೇಂದ್ರ ಚಾಹಲ್, ಆರ್.ಅಶ್ವಿನ್, ವಾಷಿಂಗ್ಟನ್ ಸುಂದರ್, ಭುವನೇಶ್ವರ್ ಕುಮಾರ್, ದೀಪಕ್ ಚಾಹರ್, ಪ್ರಸಿದ್ಧ ಕೃಷ್ಣ, ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್.



ಕೆ.ಎಲ್. ರಾಹುಲ್ ಮತ್ತು ಜಸ್‌ಪ್ರೀತ್ ಬೂಮ್ರಾ –ಪಿಟಿಐ ಚಿತ್ರ

ಆಲ್‌ರೌಂಡ್ ಆಟದ ಹುಮ್ಮಸ್ಸು; ಸೆಂಚುರಿಯನ್ ಯಶಸ್ಸು

ಭಾರತ ಟೆಸ್ಟ್ ತಂಡದ ನಾಯಕ ಕೊಹ್ಲಿ ಅಭಿಮತ

ಸೆಂಚುರಿಯನ್ (ಪಿಟಿಐ): ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಯ ಮೊದಲ ಪಂದ್ಯದ ಗೆಲುವು ಭಾರತ ತಂಡದ ಆಲ್‌ರೌಂಡ್ ಆಟದ ಬಲವನ್ನು ಸಾಬೀತುಪಡಿಸಿದೆ ಎಂದು ನಾಯಕ ವಿರಾಟ್ ಕೊಹ್ಲಿ ಅವರು ಅಭಿಪ್ರಾಯಪಟ್ಟಿದ್ದಾರೆ.



ವಿರಾಟ್ ಕೊಹ್ಲಿ

ಸೂಪರ್ ಸ್ಪೋರ್ಟ್ ಪಾರ್ಕ್‌ನಲ್ಲಿ ಗುರುವಾರ ಮುಕ್ತಾಯಗೊಂಡ ಪಂದ್ಯದಲ್ಲಿ ಭಾರತ 113 ರನ್‌ಗಳಿಂದ ಜಯ ಗಳಿಸಿತ್ತು. ಈ ಮೂಲಕ ಭಾರತ ತಂಡ ಸೆಂಚುರಿಯನ್‌ನಲ್ಲಿ ಮೊದಲ ಪಂದ್ಯ ಗೆದ್ದ ಸಾಧನೆ ಮಾಡಿತ್ತು. ಇದು ಭಾರತಕ್ಕೆ ವರ್ಷಾಂತ್ಯದಲ್ಲಿ ಸಂಭ್ರಮ ತಂದಿತ್ತು.

‘ದಕ್ಷಿಣ ಆಫ್ರಿಕಾದಲ್ಲಿ ಟೆಸ್ಟ್ ಪಂದ್ಯ ಮತ್ತು ಸರಣಿ ಗೆಲ್ಲುವುದು ಸುಲಭವಲ್ಲ. ಸೆಂಚುರಿಯನ್ ಕ್ರೀಡಾಂಗಣವಂತೂ ಅತ್ಯಂತ ಕಠಿಣ ಸವಾಲಿನ ತಾಣ. ಮೊದಲ ಪಂದ್ಯದಲ್ಲಿ ಮಳೆಯಿಂದಾಗಿ ಒಂದು ದಿನದ ಆಟ ನಡೆದಿರಲಿಲ್ಲ. ಆದ್ದರಿಂದ ನಾವು ನಾಲ್ಕೇ ದಿನಗಳಲ್ಲಿ ಗೆಲುವು ಸಾಧಿಸಿದ್ದೇವೆ. ವೇಗದ ಬೌಲರ್‌ಗಳು ದಕ್ಷಿಣ ಆಫ್ರಿಕಾ ಬ್ಯಾಟಿಂಗ್ ವಿಭಾಗವನ್ನು ದೂಳೀಪಟ ಮಾಡಿದ್ದು ಒಟ್ಟು 18 ವಿಕೆಟ್‌ಗಳು ವೇಗಿಗಳ ಪಾಲಾಗಿವೆ’ ಎಂದು ಬಿಸಿಸಿಐ ಡಾಟ್ ಟಿವಿ ಜೊತೆ ಮಾತನಾಡಿದ ಕೊಹ್ಲಿ ಹೇಳಿದರು.

ಟೆಸ್ಟ್‌ನಲ್ಲಿ 40ಕ್ಕೂ ಹೆಚ್ಚು ಪಂದ್ಯ ಗೆದ್ದ ನಾಯಕರು

ನಾಯಕ	ದೇಶ	ಪಂದ್ಯ	ಜಯ	ಡ್ರಾ	ಸೋಲು
ಗ್ರೇಮ್ ಸ್ಮಿತ್	ದಕ್ಷಿಣ ಆಫ್ರಿಕಾ	109	53	27	29
ರಿಕಿ ಪಾಂಟಿಂಗ್	ಆಸ್ಟ್ರೇಲಿಯಾ	77	48	13	16
ಸ್ಟೀವ್ ವಾ	ಆಸ್ಟ್ರೇಲಿಯಾ	57	41	7	9
ವಿರಾಟ್ ಕೊಹ್ಲಿ	ಭಾರತ	67	40	11	16

(ಅಂಕಿ ಅಂಶ: ಕ್ರಿಕ್ ಇನ್ಫೊ)

ಕೊಹ್ಲಿ ‘ವಿಜಯ’ದಲ್ಲಿ ಮೈಲುಗಲ್ಲು

ಸೆಂಚುರಿಯನ್‌ನಲ್ಲಿ ಭಾರತಕ್ಕೆ ಮೊದಲ ಜಯ ಗಳಿಸಿಕೊಟ್ಟ ನಾಯಕ ಎಂಬ ಖ್ಯಾತಿಗೆ ಒಳಗಾಗಿರುವ ವಿರಾಟ್ ಕೊಹ್ಲಿ ಒಟ್ಟಾರೆ ಟೆಸ್ಟ್ ಗೆಲುವಿನಲ್ಲಿ ಅಪರೂಪದ ಮೈಲುಗಲ್ಲು ಸ್ಥಾಪಿಸಿದ್ದಾರೆ. ನಾಯಕನಾಗಿ 40ಕ್ಕೂ ಹೆಚ್ಚು ಪಂದ್ಯಗಳನ್ನು ಗೆದ್ದ 4ನೇ ಆಟಗಾರ ಆಗಿದ್ದಾರೆ. ದಕ್ಷಿಣ ಆಫ್ರಿಕಾದ ಗ್ರೇಮ್ ಸ್ಮಿತ್, ಆಸ್ಟ್ರೇಲಿಯಾದ ರಿಕಿ ಪಾಂಟಿಂಗ್ ಮತ್ತು ಸ್ಟೀವ್ ವಾ ಸಾಲಿಗೆ ಅವರು ಸೇರಿದ್ದಾರೆ. ಸೆಂಚುರಿಯನ್‌ನಲ್ಲಿ ಟೆಸ್ಟ್ ಪಂದ್ಯ ಗೆದ್ದ ಒಟ್ಟಾರೆ 3ನೇ ಹಾಗೂ ಏಷ್ಯಾದ ಮೊದಲ ನಾಯಕ ಎಂಬ ದಾಖಲೆಯೂ ಕೊಹ್ಲಿ ಮುಡಿಗೇರಿದೆ. ಇಂಗ್ಲೆಂಡ್‌ನ ನಾಸಿರ್ ಹುಸೇನ್ ಮತ್ತು ಆಸ್ಟ್ರೇಲಿಯಾದ ಮೈಕೆಲ್ ಕ್ಲಾರ್ಕ್ ಈ ಸಾಧನೆ ಮಾಡಿರುವ ಇತರ ನಾಯಕರು. 18 ಮಂದಿ ನಾಯಕರು ಈ ವರೆಗೆ 50ಕ್ಕೂ ಹೆಚ್ಚು ಪಂದ್ಯಗಳನ್ನು ಗೆದ್ದುಕೊಂಡಿದ್ದು ಈ ಪಟ್ಟಿಯಲ್ಲಿ ಕೊಹ್ಲಿ ಆರನೇ ಸ್ಥಾನದಲ್ಲಿದ್ದಾರೆ.

ಪ್ರೊ ಕಬಡ್ಡಿ ಲೀಗ್: ತಮಿಳ್ ತಲೈವಾಸ್‌ಗೆ ಮೊದಲ ಜಯ; ಅಜಿಂಕ್ಯ, ಮಣಿಂದರ್ ಮೋಹಕ ಆಟ

ಮೋನು ‘ಸೂಪರ್’ ಆಟ: ಪಟ್ನಾಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೋನು ಗೋಯತ್ ಮತ್ತು ಸಚಿನ್ ಅವರು ನಗರದ ವೈಟ್‌ಫೀಲ್ಡ್‌ನ ಹೋಟೆಲ್ ಶೆರಟಾನ್ ಗ್ರ್ಯಾಂಡ್‌ನ ‘ಮ್ಯಾಟ್’ನಲ್ಲಿ ಮಿಂಚು ಹರಿಸಿದರು. ಅಮೋಘ ರೇಡ್ ಮೂಲಕ ಎದುರಾಳಿ ಪಾಳಯದಲ್ಲಿ ಆತಂಕ ಮೂಡಿಸಿದರು. ಹೀಗಾಗಿ ಪಟ್ನಾ ಪೈರೇಟ್ಸ್ ಗೆಲುವಿನ ನಗೆ ಬೀರಿತು.

ಪ್ರೊ ಕಬಡ್ಡಿ ಲೀಗ್‌ನ ಶುಕ್ರವಾರದ ಪಂದ್ಯದಲ್ಲಿ ಮೋನು ಮತ್ತು ಸಚಿನ್ ಕ್ರಮವಾಗಿ ತಂದುಕೊಟ್ಟ ತಲಾ 15 ಮತ್ತು 9 ಪಾಯಿಂಟ್‌ಗಳ ನೆರವಿನಿಂದ ಪಟ್ನಾ 44–30ರಲ್ಲಿ ಬೆಂಗಾಲ್ ವಾರಿಯರ್ಸ್ ತಂಡವನ್ನು ಮಣಿಸಿತು.

ಆರಂಭದಲ್ಲಿ ಉಭಯ ತಂಡಗಳು ಸಮಬಲದ ಪೈಪೋಟಿ ನಡೆಸಿದವು. ಮೋನು ಮತ್ತು ಸಚಿನ್ ಪಟ್ನಾ ಪೈರೇಟ್ಸ್‌ಗೆ ಮತ್ತು ಮಣಿಂದರ್ ಸಿಂಗ್ ಬೆಂಗಾಲ್‌ಗೆ ಪಾಯಿಂಟ್‌ಗಳನ್ನು ಗಳಿಸಿಕೊಟ್ಟರು. ಕೊನೆಯಲ್ಲಿ ಮೋನು, ಸಚಿನ್ ಆಟ ಫಲ ಕಂಡಿತು.

ತಂಡಕ್ಕಾಗಿ ಸುನಿಲ್ 4 ಮತ್ತು ಪ್ರಶಾಂತ್ 3 ಪಾಯಿಂಟ್ ಗಳಿಸಿದರು. ಬೆಂಗಾಲ್ ಪರ ಮಣಿಂದರ್ ಸೂಪರ್ ಟೆನ್ (12 ಪಾಯಿಂಟ್) ಸಾಧನೆ ಮಾಡಿದರೆ ಅಮಿತ್ ನರ್ವಾಲ್ 5, ಸುಕೇಶ್ ಹೆಗ್ಡೆ ಮತ್ತು ಅಬೋಜರ್ ತಲಾ 3 ಪಾಯಿಂಟ್ ಗಳಿಸಿದರು.

ತಮಿಳ್ ತಲೈವಾಸ್‌ಗೆ ಮೊದಲ ಜಯ: ಪುಣೇರಿ ಪಲ್ಟನ್ ವಿರುದ್ಧ ಆಧಿಪತ್ಯ ಸ್ಥಾಪಿಸಿದ ತಮಿಳ್ ತಲೈವಾಸ್ ತಂಡ ಲೀಗ್‌ನಲ್ಲಿ ಮೊದಲ ಜಯದ ಸಂಭ್ರಮದಲ್ಲಿ ಮಿಂದೆದ್ದಿತು. ಶುಕ್ರವಾರದ ಮೊದಲ ಪಂದ್ಯದಲ್ಲಿ ತಂಡ 36–26ರಲ್ಲಿ ಗೆಲುವು ಸಾಧಿಸಿತು.



ತಮಿಳ್ ತಲೈವಾಸ್‌ನ ಅಜಿಂಕ್ಯ ಪವಾರ್ ಎದುರಾಳಿ ಪಾಳಯದಲ್ಲಿ ಪಾಯಿಂಟ್ ಗಳಿಸಿದರು

ಮುಖ್ಯಾಂಶಗಳು

- 15 ಪಾಯಿಂಟ್ಸ್ ಗಳಿಸಿದ ಮೋನು ಗೋಯತ್
- ಮಣಿಂದರ್ ಸಿಂಗ್ ಸೂಪರ್ 10 ಆಟ ವ್ಯರ್ಥ
- ತಮಿಳ್ ತಲೈವಾಸ್ ಕೈ ಹಿಡಿದ ಅಜಿಂಕ್ಯ ಪವಾರ್ ಆಟ

ಟ್ಯಾಕ್ಲಿಂಗ್‌ನಲ್ಲಿ ಎರಡೂ ತಂಡಗಳು ಸಮಬಲದ ಹೋರಾಟ ಪ್ರದರ್ಶಿಸಿದವು. ಆದರೆ ರೇಡಿಂಗ್‌ನಲ್ಲಿ ತಲೈವಾಸ್ ಆಟಗಾರರು ಮಿಂಚಿದರು. ಬದಲಿ ಆಟಗಾರನಾಗಿ ಕಣಕ್ಕೆ ಇಳಿದ ಅಜಿಂಕ್ಯ ಪವಾರ್ ಮಿಂಚಿನ ಆಟದ ದಾಳಿ ಮೂಲಕ ಸಂಚಲನ ಸೃಷ್ಟಿಸಿದರು. 9 ಟಚ್ ಪಾಯಿಂಟ್ ಸೇರಿದಂತೆ ಅವರು ಒಟ್ಟು 11 ಪಾಯಿಂಟ್ ಗಳಿಸಿದರೆ 5 ಟಚ್ ಪಾಯಿಂಟ್ ಒಳಗೊಂಡಂತೆ ಮಂಜಿತ್ ಒಟ್ಟು 8 ಪಾಯಿಂಟ್ ಗಳಿಸಿದರು. ನಾಯಕ ಸುರ್ಜಿತ್ ಸಿಂಗ್ 3 ಪಾಯಿಂಟ್‌ಗಳ ಕಾಣಿಕೆ ನೀಡಿದರು.

ಚುರುಕಿನ ದಾಳಿ ಮತ್ತು ಎದುರಾಳಿಗಳ ಕೈಯಿಂದ ತಪ್ಪಿಸಿಕೊಳ್ಳುವ ಚಾಕಚಕ್ಯತೆಯ ಮೂಲಕ ಅಜಿಂಕ್ಯ ತಲೈವಾಸ್‌ಗೆ ಅಜಿಂಕ್ಯ ಪಾಯಿಂಟ್‌ಗಳನ್ನು ಗಳಿಸಿಕೊಟ್ಟರು. ಪಂದ್ಯ ಮುಂದುವರಿದಂತೆ ಅವರು ತಂಡದ ‘ಮಾಡು ಮಡಿ ರೇಡ್’ನ ಸ್ಪೆಷಲಿಸ್ಟ್ ಆದರು.

ಪುಣೇರಿ ಪರವಾಗಿ ಪಂಕಜ್ ಮೋಹಿತೆ, ಅಬಿನೇಶ್, ಅಸ್ಲಾಂ ಮತ್ತು ನಾಯಕ ವಿಶಾಲ್ ಉತ್ತಮ ಆಟವಾಡಿದರು. ಪಂಕಜ್ 8 ಪಾಯಿಂಟ್ ಗಳಿಸಿದರೆ ಉಳಿದ ಮೂವರು ತಲಾ 4 ಪಾಯಿಂಟ್ ಕಲೆ ಹಾಕಿದರು.

ಇಂದಿನ ಪಂದ್ಯ (ರಾತ್ರಿ)

ಯು ಮುಂಬಾ Vs ಯುಪಿ ಯೋಧಾ	7.30
ಬೆಂಗಳೂರು ಬುಲ್ಸ್ – ತೆಲುಗು ಟೈಟನ್ಸ್	8.30
ದಬಂಗ್ ಡೆಲ್ಲಿ – ತಮಿಳ್ ತಲೈವಾಸ್	9.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	4	3	-	1	18
ಪಟ್ನಾ ಪೈರೇಟ್ಸ್	4	3	1	-	16
ಬೆಂಗಳೂರು ಬುಲ್ಸ್	4	3	1	-	15
ಯು ಮುಂಬಾ	4	2	1	1	14
ಗುಜರಾತ್ ಜೈಂಟ್ಸ್	4	1	1	2	12
ತಮಿಳ್ ತಲೈವಾಸ್	4	1	1	2	11
ಜೈಪುರ್ ಪಿಂಕ್ ಪ್ಯಾಂಥರ್ಸ್	4	2	2	-	11
ಬೆಂಗಾಲ್ ವಾರಿಯರ್ಸ್	5	2	3	-	11
ಯುಪಿ ಯೋಧಾ	4	1	2	1	10
ಹರಿಯಾಣ ಸ್ಟೀಲರ್ಸ್	4	1	3	-	7
ತೆಲುಗು ಟೈಟನ್ಸ್	3	-	2	1	5
ಪುಣೇರಿ ಪಲ್ಟನ್	4	1	3	-	5

(ಶುಕ್ರವಾರದ ಪಂದ್ಯಗಳ ಅಂತ್ಯಕ್ಕೆ)

ದಕ್ಷಿಣ ವಲಯ ಅಂತರ ವಿ.ವಿ ಹಾಕಿ ಟೂರ್ನಿಗೆ ತೆರೆ

ಮೈಸೂರು ವಿ.ವಿ ತಂಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಗೋಣಿಕೊಪ್ಪಲು (ಕೊಡಗು): ಮೈಸೂರು ವಿಶ್ವವಿದ್ಯಾಲಯ ತಂಡವು ಶುಕ್ರವಾರ ಇಲ್ಲಿ ಕೊನೆಗೊಂಡ ದಕ್ಷಿಣ ವಲಯ ಅಂತರ ವಿ.ವಿ ಮಹಿಳಾ ಹಾಕಿ ಟೂರ್ನಿಯಲ್ಲಿ ಚಾಂಪಿಯನ್ ಆಯಿತು.

ಮಂಗಳೂರು ವಿಶ್ವವಿದ್ಯಾಲಯ ಹಾಗೂ ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ನಡೆದ ಟೂರ್ನಿಯ ತನ್ನ ಕೊನೆಯ ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ಮೈಸೂರು ವಿ.ವಿ 3–1 ಗೋಲುಗಳಿಂದ ಭಾರತೀಯಾರ್ ವಿ.ವಿ ತಂಡವನ್ನು ಮಣಿಸಿತು. ಎರಡು ಗೋಲುಗಳನ್ನು ಗಳಿಸಿದ ಎಸ್.ಡಿ.ಸಂಧ್ಯಾ (5 ಮತ್ತು 21 ನೇ ನಿ.) ತಂಡದ ಜಯದ ರೂವಾರಿಯಾದರು. ಇನ್ನೊಂದು ಗೋಲನ್ನು ಮೇಕೇರಿಕ ಶಾಯಿನ ತಂಗಮ್ಮ (47ನೇ ನಿ.) ಗಳಿಸಿದರು.

ರೌಂಡ್ ರಾಬಿನ್ ಲೀಗ್‌ನ ಮೂರು ಪಂದ್ಯಗಳಲ್ಲಿ ಎರಡು ಗೆಲುವು ಹಾಗೂ ಒಂದು ಡ್ರಾ ಸಾಧಿಸಿದ ಮೈಸೂರು ವಿ.ವಿ 7 ಪಾಯಿಂಟ್ಸ್ ಸಂಗ್ರಹಿಸಿತು. ಎರಡು ಗೆಲುವು, ಒಂದು ಸೋಲಿನೊಂದಿಗೆ ಆರು ಅಂಕಗಳನ್ನು ಪಡೆದ ಭಾರತೀಯಾರ್ ವಿ.ವಿ ‘ರನ್ನರ್ ಅಪ್’ ಆಯಿತು. ಮಂಗಳೂರು ವಿ.ವಿ (4 ಪಾಯಿಂಟ್) ಮತ್ತು ಮದ್ರಾಸ್ ವಿ.ವಿ (3 ಪಾಯಿಂಟ್) ಕ್ರಮವಾಗಿ 3 ಹಾಗೂ 4ನೇ ಸ್ಥಾನ ಗಳಿಸಿದವು. ಈ ನಾಲ್ಕೂ ತಂಡಗಳು ಅಖಿಲ ಭಾರತ ಅಂತರ ವಿ.ವಿ ಟೂರ್ನಿಗೆ ಅರ್ಹತೆ ಪಡೆದುಕೊಂಡವು.

ಮೈಸೂರು ತಂಡದ ಸೌಮ್ಯಶ್ರೀ ‘ಸರಣಿ ಶ್ರೇಷ್ಠ’ ಪ್ರಶಸ್ತಿ ಪಡೆದುಕೊಂಡರು. ಭಾರತೀಯಾರ್ ತಂಡದ ಹರಿಪ್ರಿಯಾ ಉತ್ತಮ ಗೋಲ್ ಕೀಪರ್, ಮೈಸೂರು ವಿ.ವಿಯ ಆದಿರಾ ‘ಬೆಸ್ಟ್ ಡಿಫೆಂಡರ್’, ಮಂಗಳೂರು ವಿ.ವಿ ತಂಡದ ಪವಿತ್ರಾ ‘ಬೆಸ್ಟ್ ಫಾರ್ವರ್ಡ್’, ಮದ್ರಾಸ್ ತಂಡದ ನಿವೇತಾ ‘ಬೆಸ್ಟ್ ಮಿಡ್ ಫೀಲ್ಡರ್’ ಗೌರವಕ್ಕೆ ಪಾತ್ರರಾದರು.



ಬೆಂಗಳೂರು ವಿವಿ ಮತ್ತು ಬೆಂಗಳೂರು ನಗರ ವಿವಿ ತಂಡಗಳ ಆಟಗಾರರು ಚೆಂಡಿನ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದರು

ಬೆಂಗಳೂರು ನಗರ ವಿ.ವಿಗೆ ಪ್ರಶಸ್ತಿ

ಬೆಂಗಳೂರು: ಅಂತಿಮ ಪಂದ್ಯದಲ್ಲೂ ಅಮೋಘ ಆಟ ಮುಂದುವರಿಸಿದ ಬೆಂಗಳೂರು ನಗರ ವಿಶ್ವವಿದ್ಯಾಲಯ ತಂಡ ಶುಕ್ರವಾರ ಕೊನೆಗೊಂಡ ದಕ್ಷಿಣ ವಲಯ ಅಂತರ ವಿವಿ ಪುರುಷರ ಹಾಕಿ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡಿತು.

ಭಾರತೀಯ ವಿಶ್ವವಿದ್ಯಾಲಯಗಳ ಸಂಘ ಮತ್ತು ಬೆಂಗಳೂರು ವಿಶ್ವವಿದ್ಯಾಲಯ ಜಂಟಿಯಾಗಿ ಆಯೋಜಿಸಿದ್ದ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಸೂಪರ್ ಲೀಗ್ ಪಂದ್ಯದಲ್ಲಿ ಬೆಂಗಳೂರು ನಗರ ವಿವಿ 3–1ರಲ್ಲಿ ಬೆಂಗಳೂರು ವಿವಿಯನ್ನು ಸೋಲಿಸಿತು. ಈ ಮೂಲಕ ಪ್ರಶಸ್ತಿ ತನ್ನದಾಗಿಸಿಕೊಂಡಿತು. ಆತಿಥೇಯ ತಂಡ ರನ್ನರ್ ಅಪ್ ಪ್ರಶಸ್ತಿಗೆ ಸಮಾಧಾನಪಟ್ಟುಕೊಂಡಿತು.

ತಿರುನಲ್ವೇಲಿಯ ಮನೋನ್ಮಣಿಯಂ ಸುಂದರರ್ ವಿವಿ ಮೂರನೇ ಸ್ಥಾನ ಮತ್ತು ಚೆನ್ನೈನ ಎಸ್.ಆರ್.ಎಂ ವಿವಿ ನಾಲ್ಕನೇ ಸ್ಥಾನ ಗಳಿಸಿತು.

ಗೋವಾದಲ್ಲಿ ಪ್ರತಿಭಟನೆ; ಸ್ಥಳೀಯ ಕ್ರೀಡಾಪಟುಗಳ ಕಡೆಗಣನೆ ಆರೋಪ

ರೊನಾಲ್ಡೊ ಪ್ರತಿಮೆಗೆ ವಿರೋಧ

ಕಲಂಗೂಟ್, ಗೋವಾ (ಎಎಫ್‌ಪಿ): ಪೋರ್ಚುಗಲ್ ಫುಟ್‌ಬಾಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ ಅವರ ಪ್ರತಿಮೆಯನ್ನು ಇಲ್ಲಿ ಸ್ಥಾಪಿಸಿರುವುದಕ್ಕೆ ಸ್ಥಳೀಯರು ವಿರೋಧ ವ್ಯಕ್ತಪಡಿಸಿದ್ದಾರೆ.

ಪ್ರತಿಮೆಯ ಮುಂದೆ ಸೇರಿದ ಪ್ರತಿಭಟನಾಕಾರರು ಕಪ್ಪು ಧ್ವಜಗಳನ್ನು ಹಿಡಿದುಕೊಂಡು ಘೋಷಣೆ ಕೂಗಿದರು. ಗೋವಾದಲ್ಲಿ ಆಡಳಿತ ನಡೆಸಿದ್ದ ಪೋರ್ಚುಗೀಸರು 1961ರಲ್ಲಿ ಈ ಪ್ರದೇಶವನ್ನು ಸ್ವತಂತ್ರಗೊಳಿಸಿದ್ದರು. ಅಂಥ ದೇಶದ ಆಟಗಾರನೊಬ್ಬನ ಪ್ರತಿಮೆ ಸ್ಥಾಪಿಸಿರುವ ಅಧಿಕಾರಿಗಳು ಭಾರತದ ಕ್ರೀಡಾಪಟುಗಳನ್ನು ಕಡೆಗಣಿಸಿದ್ದಾರೆ ಎಂದು ಅವರು ಆರೋಪಿಸಿದರು.

’ಇದು ಅತ್ಯಂತ ಬೇಸರದ ಸಂಗತಿ. ಅಧಿಕಾರಿಗಳು ಇನ್ನು ಕೂಡ ಪೋರ್ಚುಗೀಸ್ ಆಡಳಿತದ ಗುಂಗಿನಲ್ಲೇ ಇದ್ದಾರೆ ಎಂಬುದಕ್ಕೆ ಇದು ಸಾಕ್ಷಿ. ರೊನಾಲ್ಡೊ ಜಗತ್ತಿನ ಅತ್ಯುತ್ತಮ ಆಟಗಾರ ನಿಜ. ಆದರೆ ಇಲ್ಲಿ ಗೋವಾದ ಆಟಗಾರನೊಬ್ಬನ ಪ್ರತಿಮೆ ಇರಿಸಿದ್ದರೆ ಚೆನ್ನಾಗಿತ್ತು’ ಎಂದು ಗೋವಾದ ಆಟಗಾರ ಮಿಕ್ಕಿ ಫೆರ್ನಾಂಡಿಸ್ ಅಭಿಪ್ರಾಯಪಟ್ಟರು.

ಗೋವಾವನ್ನು ಅತಿಕ್ರಮಿಸಿಕೊಂಡಿದ್ದ ಪೋರ್ಚುಗೀಸರ ವಿರುದ್ಧ 1961ರಲ್ಲಿ ಎರಡು ದಿನ ಯುದ್ಧ ಮಾಡಿ ಆ ಪ್ರದೇಶವನ್ನು ಭಾರತೀಯ ಸೇನೆ ಸ್ವತಂತ್ರಗೊಳಿಸಿತ್ತು. ಗೋವಾದಲ್ಲಿ ಈಗಲೂ ಪೋರ್ಚುಗೀಸರ ಪ್ರಭಾವ ಇದೆ. ಅಂದು ನಿರ್ಮಿಸಿದ ಕಟ್ಟಡಗಳು ಈಗಲೂ ಇದ್ದು ಪೋರ್ಚುಗಲ್ ಮೂಲದ ಅನೇಕ ಜನರು ವಾಸವಾಗಿದ್ದಾರೆ. 2017ರಲ್ಲಿ ಮಡೇರಾ ವಿಮಾನ ನಿಲ್ದಾಣದಲ್ಲಿ ರೊನಾಲ್ಡೊ ಅವರ ಪ್ರತಿಮೆ ಸ್ಥಾಪಿಸಿದಾಗಲೂ ವಿವಾದ ಆಗಿತ್ತು.



ಕ್ರಿಸ್ಟಿಯಾನೊ ರೊನಾಲ್ಡೊ ಪ್ರತಿಮೆ –ಎಎಫ್‌ಪಿ ಚಿತ್ರ

ಚೆಸ್: ಹಂಪಿಗೆ 5ನೇ ಸ್ಥಾನ

ವಾರ್ಸಾ (ಪಿಟಿಐ): ಭಾರತದ ಕೊನೇರು ಹಂಪಿ ಅವರು ವಿಶ್ವ ಬ್ಲಿಟ್ಜ್ ಚೆಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ ವಿಭಾಗದಲ್ಲಿ ಐದನೇ ಸ್ಥಾನ ಗಳಿಸಿದ್ದಾರೆ. ಒಂಬತ್ತು ಸುತ್ತುಗಳ ಬಳಿಕ ಎರಡನೇ ಸ್ಥಾನದಲ್ಲಿದ್ದ ಆರ್. ವೈಶಾಲಿ 14ನೇ ಸ್ಥಾನಕ್ಕೆ ಜಾರಿದರು.

ಹಂಪಿ ಅವರು 17 ಸುತ್ತುಗಳಿಂದ 11.5 ಪಾಯಿಂಟ್‌ಗಳನ್ನು ಗಳಿಸಿ ಇತರ ಇಬ್ಬರೊಂದಿಗೆ ಸಮಾನ ಅಂಕ ಪಡೆದರು. ಅಂತಿಮ ಸುತ್ತಿನಲ್ಲಿ ಪೋಲಿನಾ ಶುವಾಲೋವಾ (ರಷ್ಯಾ) ವಿರುದ್ಧ ಸೋಲನುಭವಿಸಿದ್ದು ಹಂಪಿ ಅವರ ಉತ್ತಮ ಸ್ಥಾನ ಗಳಿಕೆಗೆ ಅಡ್ಡಿಯಾಯಿತು. ವೈಶಾಲಿ ಕೂಡ ಕೊನೆಯ ಸುತ್ತಿನಲ್ಲಿ ಓಲ್ಗಾ ಗಿರಿಯಾ (ರಷ್ಯಾ) ಎದುರು ನಿರಾಸೆ ಅನುಭವಿಸಿದರು.

ಮುಕ್ತ ವಿಭಾಗದಲ್ಲಿ ವಿದಿತ್ ಸಂತೋಷ್ ಗುಜರಾತಿ 13 ಪಾಯಿಂಟ್‌ಗಳೊಂದಿಗೆ 18ನೇ ಸ್ಥಾನ ಗಳಿಸಿದರೆ,

ಫ್ರಾನ್ಸ್‌ನ ಮ್ಯಾಕ್ಸಿಮ್ ವಚಿರ್ ಲ್ಯಾಗ್ರೇವ್ ಅವರು ಮುಕ್ತ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಟೈಬ್ರೇಕ್‌ನಲ್ಲಿ ಅವರು ಪೋಲೆಂಡ್‌ನ ಜಾನ್ ಕ್ರಿಸ್ಟಾಫ್ ದುಡಾ ಅವರನ್ನು ಹಿಂದಿಕ್ಕಿದರು. ಮಹಿಳಾ ವಿಭಾಗದ ಚಾಂಪಿಯನ್ ಪಟ್ಟವು ಕಜಕಸ್ತಾನದ 17 ವರ್ಷದ ಬಿಬಿಸಾರ ಅಸ್ಸಾಬಯೆವಾ ಅವರ ಪಾಲಾಯಿತು.



ಕೊನೇರು ಹಂಪಿ

ಇನಿಯನ್‌ಗೆ 3ನೇ ಸ್ಥಾನ: ಭಾರತದ ಗ್ರ್ಯಾಂಡ್‌ಮಾಸ್ಟರ್ ಪಿ.ಇನಿಯನ್ ಅವರು ಸ್ಪೇನ್‌ನಲ್ಲಿ ನಡೆದ ಲೋಕಾ ಓಪನ್ ಚೆಸ್ ಟೂರ್ನಿಯಲ್ಲಿ ಮೂರನೇ ಸ್ಥಾನ ಗಳಿಸಿದರು.

ಇನಿಯನ್, 9 ಸುತ್ತುಗಳಿಂದ ಏಳು ಪಾಯಿಂಟ್ಸ್ ಕಲೆಹಾಕಿದರು. ಕಾರ್ತಿಕ್ ವೆಂಕಟರಾಮನ್ ಏಳು ಪಾಯಿಂಟ್ಸ್ ಗಳಿಸಿದರೂ, ಟೈಬ್ರೇಕ್‌ನಲ್ಲಿ ಹಿನ್ನಡೆ ಅನುಭವಿಸಿದ ಕಾರಣ 4ನೇ ಸ್ಥಾನ ಪಡೆದರು. ಬ್ರೆಜಿಲ್‌ನ ಅಲೆಕ್ಸಾಂಡರ್ ಫಿಯರ್ ಪ್ರಶಸ್ತಿ ಗೆದ್ದರು.

ಸಂಕ್ಷಿಪ್ತ ಸುದ್ದಿ

ಕೊಡಗು ಎಫ್‌ಸಿ ಜಯಭೇರಿ

ಬೆಂಗಳೂರು: ಸಂಘಟಿತ ಆಟವಾಡಿದ ಕೊಡಗು ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಕೊಡಗು 3-2ರಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡವನ್ನು ಸೋಲಿಸಿತು. ವಿಜೇತ ತಂಡದ ಶಶಿಕುಮಾರ್ (23ನೇ ನಿಮಿಷ), ಉತ್ತಮಾನಂದ (41ನೇ ನಿ.) ಮತ್ತು ಮೊಹಮ್ಮದ್ ಉಸಮತ್ತುದ್ದೀನ್ (86ನೇ ನಿ.) ಕಾಲ್ಚಳಕ ತೋರಿದರು. ಬೆಂಗಳೂರು ಡ್ರೀಮ್ ಯುನೈಟೆಡ್ ಪರ ಕೆ. ದಿನಿಲ್ (50ನೇ ನಿ.) ಮತ್ತು ಎನ್. ಎಸ್. ಶರೂನ್ (60ನೇ ನಿ.) ಗೋಲು ದಾಖಲಿಸಿದರು.

ಕಿಕ್‌ಸ್ಟಾರ್ಟ್ ಎಫ್‌ಸಿ 2–1ರಿಂದ ಥಾಂಕೊ ಸ್ಟೂಡೆಂಟ್ಸ್ ಯೂನಿಯನ್ ಎದುರು, ಎಫ್‌ಸಿ ಡೆಕ್ಕನ್ 1–0ಯಿಂದ ಬಿಎಫ್‌ಸಿ ವಿರುದ್ಧ ಜಯ ಸಾಧಿಸಿದವು. ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ 3–3ರಿಂದ ಬಿಯುಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು.ಶನಿವಾರ ಮತ್ತು ಭಾನುವಾರ ವಿರಾ ಮದ ದಿನಗಳಾಗಿವೆ. ಸೋಮವಾರ ನಡೆಯುವ ಪಂದ್ಯಗಳಲ್ಲಿ ಯಂಗ್ ಚಾಲೆಂಜರ್ಸ್ ಎಫ್‌ಸಿ– ಎಡಿಇ, ಬಿಎಫ್‌ಸಿ– ಕೊಡಗು ಎಫ್‌ಸಿ, ಕಿಕ್‌ಸ್ಟಾರ್ಟ್– ಡೆಕ್ಕನ್ ಮುಖಾಮುಖಿಯಾಗಲಿವೆ.

ಹೆಡ್‌ಗೆ ಕೋವಿಡ್

ಸಿಡ್ನಿ (ಪಿಟಿಐ): ಆಸ್ಟ್ರೇಲಿಯಾ ಆಟಗಾರ ಟ್ರಾವಿಸ್ ಹೆಡ್ ಅವರಿಗೆ ಕೋವಿಡ್ ಇರುವುದು ದೃಢಪಟ್ಟಿದೆ. ಇದರಿಂದಾಗಿ ಇಂಗ್ಲೆಂಡ್ ವಿರುದ್ಧದ ಆ್ಯಷಸ್ ಸರಣಿಯ ನಾಲ್ಕನೇ ಟೆಸ್ಟ್ ಪಂದ್ಯಕ್ಕೆ ಲಭ್ಯವಿರುವುದಿಲ್ಲ.

ವಿಕ್ಟೋರಿಯಾ ಸರ್ಕಾರದ ಆರೋಗ್ಯ ಮಾರ್ಗಸೂಚಿಯಂತೆ ಟ್ರಾವಿಸ್ ಹೆಡ್ ಹಾಗೂ ಅವರ ಜತೆಗಾರ್ತಿ ಏಳು ದಿನ ಮೆಲ್ಬರ್ನ್‌ನಲ್ಲೇ ಪ್ರತ್ಯೇಕ ವಾಸದಲ್ಲಿರಲಿದ್ದಾರೆ. ಸಿಡ್ನಿಯಲ್ಲಿ ನಾಲ್ಕನೇ ಟೆಸ್ಟ್ ಪಂದ್ಯ ಜನವರಿ 5ರಂದು ಆರಂಭವಾಗಲಿದೆ.